ಸಂಪುಟ ೬
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ
೧೯೭೩

ಧಾರವಾಡ
ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಬಯಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 580003** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ
೨. ರಾಜ್ಯೋದಯ ಸಂಚಿಕೆ
೩. ಸಂಕ್ರಮಣ ಸಂಚಿಕೆ
೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003 ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೬ ಸಂಚಿಕೆ : ೧

ಪ್ರಧಾನ ಸಂಪಾದಕರು
ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೬, ಸಂಚಿಕೆ : ೧
ಅಗಸ್ಟ ೧೯೭೩

ಸ್ವಾತಂತ್ರ್ಯೋತ್ಸವ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೩

ಮುದ್ರಕರು :

ಶ್ರೀ ಎಮ್. ಎಚ್. ಬೆಳಗಾಂವಕರ
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ - ೨೦

ಪರಿವಿಡಿ

ದೇವರೇ

ಹೊ. ಮ. ಪಂಡಿತಾರಾಧ್ಯ

ಮದ್ದಳೆ ಜಾಗಟೆ ಗಂಟೆ
ಬಾರಿಸಿದರೂ
ಸುಮ್ಮನೇ ಇರುವೆ
ನೀನಿರಬೇಕು ಕಿವುಡ.

ಹಗಲಿನಲ್ಲಿಯೂ ಮುಂದೆ
ಬೆಳಗಿಸುತ್ತಾರೆ ದೀಪ
ನೀನಿರಬೇಕು ಕುರುಡ.

ಕರ್ಪೂರ ಉರಿಸಿ
ಮಂತ್ರ ಪಠಿಸಿ
ಭಜನೆ ಮಾಡಿ
ದೇವ ದೇವನೆಂದರೂ
ಮಾತಿಲ್ಲ ಕತೆಯಿಲ್ಲ
ನೀನಿರಬೇಕು ಮೂಕ.

ಕಿವುಡ ಕುರುಡ ಮೂಕನ ಮಾಡಿ
ಗರ್ಭಗುಡಿಯಲಿಟ್ಟು ನಿನ್ನ
ಹಾಕುತ್ತಾರೆ ಬೀಗ–
ಬಿಟ್ಟು ಕದಲೀಯಂತ ಜಾಗ !
ಹೊಟ್ಟೆಗೆ ಹಾಕಿಹೋದೀಯಂತ ಕಲ್ಲ
ಪುಕ್ಕಟೆ ಪೂಜಾರಿಗೆ ಸಿಗುತ್ತದೆಯಲ್ಲ
ಕಾಣಿಕೆ ಹೂ ಹಣ್ಣು ಕಾಯಿ ಅಕ್ಕಿ ಬೆಲ್ಲ.

ಗೋಕುಲನಿರ್ಗಮನ

ಎ. ಎಸ್. ವೇಣುಗೋಪಾಲರಾವ

'ಸಂಸಾರವಿಷವೃಕ್ಷಸ್ಯ ದ್ವೇಫಲೇ ಅಮೃತೋಪಮೇ
ಕಾವ್ಯಾಮೃತ ರಸಾಸ್ವಾದಃ ಸಂಗಮಃ ಸಜ್ಜನೈಸ್ಸಹ॥

ದಿನೇದಿನೇ ಯಾಂತ್ರಿಕವೂ ನೀರಸವೂ ಆಗುತ್ತಿರುವ ಆಧುನಿಕ ಜಗತ್ತಿನಲ್ಲಿ ಸಜ್ಜನರ ಸಹವಾಸವೂ ದುರ್ಲಭವಾಗುತ್ತಿರುವಾಗ, ಸಹೃದಯರಿಗೆ ಕಾವ್ಯಾಮೃತ ರಸಾಸ್ವಾದನೆಗಿಂತಲೂ ಅಮೃತಮಯವಾದುದು ಯಾವುದುಂಟು ? "ಗೋಕುಲನಿರ್ಗಮನ"ದಂತಹ ಅಪರೂಪ ಕೃತಿಗಳ ನೆನಪೂ ಚೇತೋಹಾರಿಯಾದುದು.... ಅದೂ ಶ್ರೀಕೃಷ್ಣಜನ್ಮಾಷ್ಟಮಿಯ ಪರಮ ಪುಣ್ಯದಿನದಲ್ಲಿ.

ಕನ್ನಡ ಸಾಹಿತ್ಯದ ರಸಋಷಿ ಶ್ರೀಯುತ ಪು. ತಿ. ನ. ಅವರ "ಗೋಕುಲ ನಿರ್ಗಮನ"ವನ್ನು ಓದಿಮುಗಿಸಿದಾಗ ಕಾವ್ಯದ ಉಳಿದೆಲ್ಲ ಕಾವ್ಯೋದ್ದೇಶಗಳೂ ಮರೆಯಾದ ಉನ್ನತ ಕಾವ್ಯದ ಪರಮ ಉದ್ದೇಶವಾದ 'ಆನಂದ" ಒಂದೇ ಎದ್ದು ನಿಲ್ಲುತ್ತದೆ. ಕವಿಯೇ ಪ್ರಸ್ತಾವನೆಯಲ್ಲಿ ಹೇಳಿದಂತೆ "ಪದ್ಯಕಾವ್ಯದಿಂದ ಈ ಕಾಲದಲ್ಲಿ ಯಶಸ್ಸನ್ನಾಗಲೀ ಧನವನ್ನಾಗಲೀ ಅಪೇಕ್ಷಿಸುವಂತೆಯೇ ಇಲ್ಲ". ಇನ್ನು ದುರಿತಕ್ಷಯಕ್ಕಾಗಿ ದೈವಸ್ತುತಿಯಾಗಲೀ "ಕಾವ್ಯಮಧುಲಿಪ್ತವಾದರೂ ಕಹಿ"ಯಾದ ಉಪದೇಶವಾಗಲೀ ಈ ಕಾವ್ಯದ ಉದ್ದೇಶವಲ್ಲ. ಹಾಗಿರುವುದರಿಂದಲೇ "ಆತ್ಮವು ಆನಂದ ಪ್ರದೀಪ್ತಿಯನ್ನು ಪಡೆಯುವ ಈ ಕಾವ್ಯಶಿಶು ಸಹೃದಯರ ಮನಸ್ಸನ್ನು ಆರ್ದ್ರವಾಗಿ ಮಾಡುತ್ತದೆ, ಆನಂದದ ಯಕ್ಷನಗರಿಗೆ ಒಯ್ದು ಕಾವ್ಯದ ಉದ್ದೇಶವನ್ನು ಸಾರ್ಥಕಗೊಳಿಸುತ್ತದೆ.

ಹಾಗೆ ನೋಡಿದರೆ ಇದಕ್ಕಿಂತ ಉದಾತ್ತವಾದ ಕಾವ್ಯೋದ್ದೇಶ ಬೇರೇನು ಇದ್ದೀತು ? ಅಂತರಂಗದ ಕಗ್ಗಲ್ಲನ್ನು ನೀರ್ಗಲ್ಲಾಗಿ ಮಾಡಿ ರಸರೂಪಿಯಾಗಿಸುವ ಈ ಕಾವ್ಯದ ಆನಂದ ಬ್ರಹ್ಮಾನಂದಕ್ಕೆ ಅತಿ ಸಮೀಪವಾಗಿ ನಮ್ಮ ನಿತ್ಯ ಜೀವನದ ನೋವನ್ನೂ ಸಹ ಸಹ್ಯವಾಗಿಯೂ ಶಾಂತಿದಾಯಕವಾಗಿಯೂ ಮಾಡುತ್ತದೆ. 'ಬ್ರಹ್ಮಾನಂದಕ್ಕೆ ಸಮೀಪ'ವಾಗಿ ಎಂದುದು, ಕಾವ್ಯಾನಂದವು ಬ್ರಹ್ಮಾನಂದವೇ ಅಲ್ಲ ಎಂದು ಸೂಚಿಸುವುದಕ್ಕಾಗಿ ಮಾತ್ರ. ಕೇವಲ ಅನುಭವೈಕವೇದ್ಯವೂ ಮಾತಿಗೆ ಮೀರಿದುದೂ ಆದ ಬ್ರಹ್ಮಾನಂದದ ಚರ್ಚೆ ವೇದಜಡರ ಪಾಲಿಗಿರಲಿ! ಅದರ ವರ್ಣನೆ ಮಾತಿಗೂ ಮೀರಿದುದು "...ಯಥೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ"[ತೈ.ಉ.]. ಉಪನಿಷತ್ತಿನ ಮಾತನ್ನೇ ಬಳಸುವುದಾದರೆ, ನಮ್ಮ ಕಾವ್ಯವಾದರೋ ಮಾತನ್ನೇ

ಶರೀರವಾಗಿ ಉಳ್ಳದ್ದು. ಇಲ್ಲಿ ಕವಿಯೇ ಪೂರ್ವಪಕ್ಷ... ಸಹೃದಯ ಉತ್ತರ ಪಕ್ಷ, ಮನಸ್ಸೇ ಸಂಧಿ, ಮಾತೇ ಸಂಧಾನ! ಇಂತಹ ಘನವಾದ ಕಾವ್ಯೋದ್ದೇಶದಿಂದ ರಚಿತವಾದ ಈ ಕಿರುಕಾವ್ಯ ಪೂಜ್ಯ ಪು. ತಿ. ನರಸಿಂಹಾಚಾರ್ಯರ ಉಳಿದೆಲ್ಲ ಕೃತಿರತ್ನಗಳಂತೆ ಭಂಗಾರವಾಗಿರುವುದು ಸಹಜವೇ.

ಕಾವ್ಯ ಪ್ರಚೋದನೆ

ಇಂತಹ ಕಾವ್ಯಕ್ಕೆ ನಿಮಿತ್ತ ಯಾವುದಾದರೂ ಆಗಬಹುದು. ಒಂದು ಸಣ್ಣ ಮಾತು, ಒಂದು ಸವಿನೆನಪು. ಎಂದೋ ಎಲ್ಲೋ ಕೇಳಿದ ಗೊಲ್ಲ ಹುಡುಗನ ಅಶಿಕ್ಷಿತವೂ ಅಕುಶಲವೂ ಆದ ವೇಣುಗಾನ. ಅಂತಹ ಮುರಳೀನಾದದ ಕನಸು ಕವಿಯನ್ನು ಗೋಕುಲಕ್ಕೆ ಒಯ್ದಿತು. ಭಾವುಕನಾದ ಕವಿಯ ಅಂತರಂಗವನ್ನು ಕೆಣಕಿ, ಸಂಸ್ಕಾರವನ್ನು ಕೆದಕಿತು. ಆ ನಾದದ ಸೆರಗನ್ನೇ ಹಿಡಿದು ಕವಿ ಅತ್ತಿತ್ತ ಸುತ್ತುತ್ತಾ, ಸಾಸಿರ ವರ್ಷಗಳ ಹಿಂದಣ ಬೃಂದಾವನದ ಮುಂಗಳ ಅಂಗಳವನ್ನು ಸೇರಿದ. "ತಾಮಸಿಯ ಕಾಳಿದೆಯೊಳನು-ರಾಗ ಉದಿಸಿದಂತೆ" ಬೆಳದಿಂಗಳಾಯ್ತು. "ಕಾಲ ಹಿಮ್ಮೊಗ ಹರಿದು ಗೋಕುಲವೇ ಕಣ್ಣಿಗಾಯ್ತು."

ಆನಂದ ನಿಕೇತನ-ಬೃಂದಾವನ

ಬೃಂದಾವನವೆಲ್ಲ ಬೆಳದಿಂಗಳಲ್ಲಿ ತೊಯ್ದು ಹೋಗಿದೆ. ಮರಮರಗಳ ಎಲೆಎಲೆಗಳಲ್ಲಿ ಜೀವರಸವನ್ನು ತುಳುಕಿಸುತ್ತಾ, ಚೇತೋಹಾರಿಯಾದ ಮಧುರಗಾನ ಕೇಳಿ ಬರುತ್ತಿದೆ. ಇಳೆ ತನ್ನಯ ಭಾರವನೇ ಕಳೆದುಕೊಂಡಿದೆ. ಜನ ತನ್ನಯ ರೂಢಿಯನೆ ಕಳೆದುಕೊಂಡಿದೆ. ಇಂತಹ ನಾದ ಯಾರನ್ನು ತಾನೇ ಮೋಹಿಸದು! ಬೃಂದಾವನದ ಗೋಪಿಯರು ಹಿರಿಯರನ್ನು ನಿದ್ದೆಯಲ್ಲಿ ಬಿಟ್ಟು ಅಥವಾ ಹಾಗೆಂದು ಭಾವಿಸಿ ಈ ನಾದವನ್ನು ಅನುಸರಿಸಿ ನಡೆಯುತ್ತಿದ್ದಾರೆ. ಕೃಷ್ಣನ ಕೊಳಲಿನ ಕರೆ ಅವರನ್ನು ಮೋಹನ ಮುರಳಿ ಯಂತೆ ಸೆರೆ ಹಿಡಿದಾಗ ಅವರು ಮನೆಯಲ್ಲಿ ನಿಲ್ಲುವುದಾದರೂ ಹೇಗೆ? ತೊಟ್ಟಿಲ ಹಸುಗೂಸನ್ನಾದರೂ ಮರೆತಾರು–ಪಕ್ಕದ ಗಂಡನನ್ನಾದರೂ ತೊರೆದಾರು!

ಹೀಗೆ ಗೋಪಿಯರ ತಂಡ ಒಂದು ಕಡೆಗಾದರೆ, ಗೋಪಾಲಕರ ಗುಂಪು ಮತ್ತೊಂದೆಡೆ. ಅವರಿಗೋ ಹರೆಯದ ಹುಮ್ಮಸ್ಸು. "ಪಟದ ದಾರ ತುಯ್ವವೊಲು" ಈ ಕೊಳಲು ಅವರನ್ನು ಏಡಿಸುತ್ತಿದೆ. 'ಕೃಷ್ಣ ಕೊಳಲನೂದುತಿರೆ ನಿದ್ರೆ ಎಂತು ಬಹುದು?' ಅವರಿಗೆ.

ಈ ಮುರಳಿ ಗಾನ ಮನೆಯಲ್ಲಿ ಮಲಗಿದ ಮುದುಕರನ್ನೂ ಬಿಟ್ಟಿಲ್ಲ. ಅವರಿಗೂ ನಡುಹರೆಯದ ಹುಮ್ಮಸ್ಸನ್ನೇ ತಂದಿದೆ ಜೀವನಕ್ಕೇ ಹೊಸ ಅರ್ಥವನ್ನೂ ಉಳಿದ ಎಲ್ಲದರ ಅಸಾರ್ಥಕತೆಯನ್ನೂ ಎತ್ತಿ ತೋರುತ್ತಿದೆ. "ಏಗೈದೆವೋ ಏಗೈದೆವೊ ಕಜ್ಜ, ಇದುತನಕ ಇದ ಕೇಳದೆ ಅಜ್ಜ!" ಎಂದು ಅವರ ವಿಷಾದ.

ಗೋಪಾಲನ ಈ ವೇಣುಗಾನ ಈ ಮುಗ್ಧ ವಧೂ ನಿಕರವನ್ನೂ ಗ್ರಾಮದ ತರಳರನ್ನೂ ಸೆಳೆದುದು ಅಂತಿರಲಿ, ಅಂದು ರಾಜಕಾರ್ಯಕ್ಕಾಗಿ ಗೋಕುಲಕ್ಕೆ ಬಂದಿದ್ದ 'ಅಕ್ರೂರನ' ನಾಗರಿಕ ಮನಸ್ಸನ್ನೂ ಅದು ಸೆಳೆಯದೆ ಬಿಟ್ಟಿಲ್ಲ. 'ಇನಿಯಳ್ ಮುಟ್ಟಿ ಬಾ' ಎನ್ನುವಂತೆ, ನಂದಗೋಪನ ಮನೆಯಲ್ಲಿ ತೂಗು ಮಂಚದಲ್ಲಿದ್ದ ಅವನನ್ನು ಆ ನಿಶೀಥದಲ್ಲಿ ಹೊರಡಿಸಿದೆ. ಅವನ ಬಗೆಯೋ ಸುಸಂಸ್ಕೃತ ನಾಗರಿಕನ ಸಹಜ ವಾಣಿಯೇ ಆಗಿ ಒಂದು ಹೊಸ ನೋಟವನ್ನೇ ಒಳಗೊಂಡಿದೆ—

"ಸಕಲೇಂದ್ರಿಯಂಗಳಿಗು ನೇತ್ರವೇ ಮಿಗಿಲೆಂದು
ಲೋಕ ನುಡಿವುದಿರಲಿ.
ಆದೊಡೆ ಇಂದು ಈ ಹಳುವೊಳು ಈ ಗಾನವಾಲಿಸಲು ತೋರುವುದು
ಶ್ರೋತ್ರವೇ ಎಲ್ಲದಕು ಮಿಗಿಲು ಎಂದು"!

ಇಂತಹ ಸಹೃದಯ ಗಣದಲ್ಲಿ ಮುರಳಿಯ ಮಧುರ ಗಾನವು ರಸದೆರೆಗಳನ್ನು ಏಳಿಸುತ್ತಿದ್ದರೂ "ಹುಚ್ಚು ಹುಚ್ಚು ಜಗಕೆಲ್ಲಕು ಹುಚ್ಚು" ಎನ್ನುವ 'ಸುದಾಸ' ಅರಸಿಕ ಪ್ರಪಂಚದ ಸಂಕೇತವಷ್ಟೇ!

ಬೃಂದಾವನದಲ್ಲಿ ಶ್ರೀ ಚರಣ

ಹೀಗೆ ಆನಂದವು ತೊರೆಯಾಗಿ ಹರಿದು ಬರುತ್ತಿದ್ದರೂ ಆ ಆನಂದದ ದ್ಯೋತಕನಾದ ಮುರಳೀಧರ ಕಾಣಲೊಲ್ಲ. ಹಾಗೆ ಸುಲಭನಲ್ಲ ಶ್ರೀಹರಿ. ಮೊದಲು ಸೃಷ್ಟಿಗೋಚರ– ಸೃಷ್ಟಿಯ ಮೂಲಕವೇ ಹುಡುಕಿದರೆ, ಹುಡುಕಿ ದಣಿದರೆ, ಆರ್ತರಾಗಿ ಮೊರೆಯಿಟ್ಟರೆ, ಬಳಿಕವೇ ಅವನ ದೃಷ್ಟಿ. ಅಲ್ಲಿಯವರೆಗೂ "ಕೊಳಲುಲಿವಾಲಿಪೆವೆಲ್ಲ– ಆದರೆ ಮುರಳೀಧರ ಕಾಣಲೊಲ್ಲ. ತರುಗಿಡ ಬಳ್ಳಿ ವನವೆಲ್ಲ–ಪಿಸುಗುಟ್ಟುತ್ತಿವೆ ಗೋವಿಂದನ ಸೊಲ್ಲ!" ಅವನ ಗಾನವೋ "ಇರುಳ ದೀವಿಗೆಯಂತೆ ತನ್ನನ್ನೇ ಮರೆಸಿಕೊಂಡಿದೆ"

ಆದರೆ ಆರ್ತವೃಂದದ ಬಯಕೆ ಅವರನ್ನು ಮುರಳೀಧರನಲ್ಲಿಗೇ ಕರೆದೊಯ್ದಿತು. ಆಹಾ! ಅವನೇ ಗೋವಿಂದ– ಅವನ ರೂಪೋ ದಿವ್ಯ ಮನೋಹರ. "ಕನಸಿಗು ಇಂತಹ ಸುಳಿವೊಲ್ಲ ಊಹೆಗೂ ಮೀರಿಹನಲ್ಲ." ಮರೆಯಲ್ಲಿ ನಿಂತು ನೋಡುವ ಅಕ್ರೂರನಿಗೂ ಅಚ್ಚರಿ. ಭಾವ ತುಂಬಿ ಬಂದ ಆತ ಬಲರಾಮನೊಡಗೂಡಿರುವ ಕೃಷ್ಣನ ರೂಪ ಸೌರಭವನ್ನು ಹೃದಯದಲ್ಲಿ ತುಂಬಿಕೊಳ್ಳುತ್ತಿದ್ದಾನೆ.

ಈ ಎಲ್ಲರ ಭಾವಮೂಲನಾದ ಕೃಷ್ಣ! ಅವನ ಬಗೆಯೋ ಹೊಸದಾಗಿದೆ. ಇವನು ಯೋಗಿವಂದ್ಯನಾದ ನಿರಾಕಾರ ನಿರ್ಗುಣ ಪರಬ್ರಹ್ಮನಲ್ಲ. ಅವನ 'ಆ ರೀತಿ' ನಮ್ಮ ಕವಿಯ ರಸಿಕ ಹೃದಯಕ್ಕೆ ಒಪ್ಪದು. ಇವನು ನಂದ ನಂದನ ಕೇವಲ ಮುದ್ದಿನ ಕಣ್ಮಣಿಯಾದ ಬೆಣ್ಣೆಯ ಕಳ್ಳ ಜಾರ ಚೋರನೂ ಅಲ್ಲ. ಅವನ ಈ ಬಗೆ ನಮ್ಮ ಕವಿಯ ಭಾವದ ಎತ್ತರಕ್ಕೆ ಸಾಲದು. ಇವನು ತನ್ನ ಸುತ್ತಣ ಜಗತ್ತಿಗೆ ಆನಂದ

ವನ್ನು ಹಂಚುವದರಲ್ಲೇ ಆನಂದವನ್ನು ಕಾಣುವವನು. ಜಗದ ಮುಗ್ಧ ರೀತಿಗೆ ಹೃದಯ ವನ್ನು ತೆತ್ತವನು. ಅವರ ಸುಖದಲ್ಲಿ ಸುಖವನ್ನೂ ದುಃಖದಲ್ಲಿ ದುಃಖವನ್ನೂ ಅನು ಭವಿಸುವವನು. ಅವರೊಡನೆ ನಗುವವನು, ಅಳುವವನು, ಸೂಕ್ಷ್ಮಸಂವೇದಿಯಾದ ಮನಸುಳ್ಳ ವನು. ನಮ್ಮ ಕವಿಯಂತೆ ಅವನ ಹೃದಯಕ್ಕೆ ಅತಿ ಸಮೀಪವಾಗಿ ಅಂಟಿಕೊಂಡು ಸ್ನೇಹದಂತಿರುವ ಒಂದು ತೆರೆದ ಅಲೌಕಿಕ ವಿಷಾದದಿಂದ ಕೊಂಚ ಖಿನ್ನವಾಗಿರುವವನು.

ಅಂತೆಯೇ ಅವನ ಹೃದಯವು ಸಂತೋಷ ಸೂರ್ಯನ ಕಿರಣದಿಂದ ಅರಳುವುದು. ವಿಷಾದದ ಛಾಯೆಯಿಂದ ಬಳಲುವುದು. ಬೃಂದಾವನವನ್ನೇ ಅಚ್ಚರಿಗೊಳಿಸಿರುವ ಪುಟ್ಟ ಬಿದುರಿನ ಕೊಳಲನ್ನು ಕಂಡರೆ ಅವನಿಗೇ ಅಚ್ಚರಿ. ಅವನ ಇನಿತಾಸೆಗಳನ್ನೆಲ್ಲ ಅದರ ಮೂಲಕ ನಿವೇದಿಸುವನು. ಆದರೆ ಹಿಂದೆಯೇ ಒಂದು ಶಂಕೆ ಅವನಿಗೆ "ಕೇಶಿಯು- ನೆದುರಿಸೆ ಬಿದಿರಿದು ಸಾಕೆ ? ಕೇಡುಗರಿದಿರೊಳು ಹಾಡ ಪರಾಕೆ ?" ಕೊನೆಗೆ ಅವನ ತೀರ್ಮಾನ "ಒಲ್ಮೆಯ ನಲ್ಮೆಗೆ ಹಾಡಿನ ದಾನ.... ವೈರರುಂಜೆಗೆ ತೋಳ್ಬಲವನು ಪಾನ!"

ಇಂತಹ ಭಾವದಲ್ಲಿ ಬಲರಾಮಕೃಷ್ಣರು ತಮ್ಮ ಹಿಂದಿನ ಸಾಹಸಗಳನ್ನು ನೆನೆದರು. ಈ ಸಾಹಸಗಳು ಬಲರಾಮನ ಮುಗ್ಧಮನವನ್ನು ಉತ್ಸಾಹದಿಂದ ತುಂಬುತ್ತಿದ್ದರೆ ಕೃಷ್ಣನಿಗೆ ಇಲ್ಲಿಯೂ ಒಂದು ರೀತಿಯ ಅಲೌಕಿಕ ವಿಷಾದ — ನಲವಿನಲ್ಲೂ ನೋವು. "ವಿಷಾದ ಮಾಯ್ತ್ತಗ್ರಜ ಜೀಳೆ ರಕ್ಕಸು ಪ್ರತಾಪವಂತು ಕೆಳೆಗೀತ ತಕ್ಕವು" ಎಂಬ ಧೀರ ಗಂಭೀರ ಭಾವ ಅವನದು. "ಅಕಾರಣಂ ದ್ವೇಷಮದೇಕೆ ಲೋಕದೊಳ್.... ಅಕಾರಣಂ ನೇಹಮದೆಲ್ತೆ ಸೋಜಿಗಂ" ಎಂಬ ಜಿಜ್ಞಾಸೆ. ಮನದ ಹದನನ್ನು ಕುರಿತು ಅಚ್ಚರಿ. ಕವಿಯ ಮನೋಭೂಮಿಕೆಯಲ್ಲಿ ಅರಳಿದ ಈ ಕೃಷ್ಣ ಪುಷ್ಪ ಮನೋ ಹರವಾದುದು. ಅಪೂರ್ವವಾದುದು. ಅಕ್ರೂರನ ಮಾತಿನಲ್ಲಿ "ಸದ್ಭಾವ ಸಂಪುಷ್ಪ- ಮನಿಂದ್ಯ"ವಾದುದು!

ರಾಸೋಲ್ಲಾಸ

ಗೋಪಿಯರು ಕೃಷ್ಣನನ್ನು ಅರಸಿ ಬಂದರು. ಕೃಷ್ಣನ ಹೃದಯವನ್ನು ಗೆದ್ದ ಗೆಳತಿ ರಾಧೆ ಅಭಿಸಾರಿಕೆಯಾಗಿ ಬಂದಳು. "ಕಂಪಿನ ಬಳಿವಿಡಿದಲರನು ಸೇರುವ ದುಂಬಿಯಂತೆ" ಅವರು ಸೇರಿದರು. ರಾಧೆಯ ನಾಣನ್ನು ಕೃಷ್ಣನು ತನ್ನ ಜಾಣ್ನುಡಿ ಯಿಂದ ಪರಿಹರಿಸಿದನು. ಮುಗಿಲು–ಮಿಂಚಿನಂತೆ, ಶಿವ–ಶಿವೆಯರಂತೆ ಅವರು ಕೂಡಿ ದರು, ಕುಣಿದರು. ಕೃಷ್ಣವಶಳಾದ ರಾಧೆ ಮನದುಂಬಿ ಹಾಡಿದಳು– "ಚಿಮ್ಮಲಿ ಸೋಗಮಿಂ ಜಗಕ್ಕೆಲ್ಲ, ಬೆಳಗಲಿ ನಮ್ಮೊಲಮಿಂ ಮನಮೆಲ್ಲ ನಲಿದು ತಿರೆ, ಉಲಿಯುತಿರೆ" ರಾಧಾ–ಮಾಧವ ವಿಲಾಸವು ಅದ್ಭುತವಾಗಿ ತೊಡಗಿತು.

ಎಲ್ಲ ಗೋಪಿಯರೂ ಓಡಿ ಬಂದರು. "ನಾವೇ ರಾಧೆ–ಅವನೇ ಶ್ಯಾಮ" ಎಂಬ ಭಾವದಲ್ಲಿ ಬೆರೆತರು. "ಒಡಲೊಳಿಟ್ಟ ನೇಹದಂತೆ ಮಂಡಿದು ಮೀಸಲಾದ" ಮನವನ್ನು ಮಾಧವನಿಗೆ ಒಪ್ಪಿಸಿದರು. ಬೃಂದಾವನದಲ್ಲಿ ಮಂಗಳ ದರ್ಶನವಾಯಿತು.

ಈ ನಲ್ಮೆಯ ಬಗೆಯನ್ನು ಕಂಡು ಕೃಷ್ಣನ ಭಾವದ ಬುಗ್ಗೆ ಚಿಮ್ಮಿಹರಿಯಿತು. "ನಾನೆ ನಲ್ಲ–ನಾನೇ ಎಲ್ಲ– ನಾನು ನಾನಲ್ಲ" ಎಂದು ಪರಿಪರಿಯಾಗಿ ನುಡಿವ ಆ ಗೋಪಿಯರ ಅಕ್ಕರೆಯ ಹಾಲಿನಲ್ಲಿ ಅವನು ಕರಗಿಯೇ ಹೋದನು. ಅವರೊಡನೆ ಹಾಡಿ–ಕುಣಿದನು. ಹೀಗೆ ಆನಂದ ಸ್ವರೂಪಿಯೇ ಜಗದೆದುರು ನಿಂತು ನಾಟ್ಯವಾಡಿದಾಗ ಅಲ್ಲಿ ತಪ್ಪಸ್ಸಿಗೆ ಕುಳಿತ ಋಷಿಗಳೂ ಬೆರಗುಗೊಂಡು, ತಮ್ಮ ತಪಸ್ಸಿನ ಸಿದ್ಧಿಯಾದಂತೆ "ಇದು ಬೃಂದಾವನವೋ ಬಾನವರಾಡುವ ನಂದನವನವೋ !" ಎಂದು ಅಚ್ಚರಿವಡೆದರು. ಬಾಳಬಾಳಿಗೂ ಹಬ್ಬುವ ಕೃಷ್ಣನ ಹಸಾದವನ್ನು ಭಾವಿಸುತ್ತಾ 'ತನ್ನತನವರಿದು ಎಲ್ಲ ನಲವಾಗಲು' ಬಿಡುಗಡೆಯ ಹಾಡನ್ನು ಹಾಡುತ್ತಾ ಗುಂಪುಗೂಡಿ ಬಂದು ಕೃಷ್ಣನನ್ನು ಬಲವಂದು ಹೋದರು.

ಹೀಗೆ ರಾಸವೃಂದ ಕಲಕಿ ಹಿರಿಯರು ಒಬ್ಬೊಬ್ಬರಾಗಿ ಬಂದು ಸೇರುತ್ತಲೂ ಗೋಪಿಯರು ಬೆದರಿ ದಿಗ್ಭ್ರಮೆಯಿಂದ ಕೃಷ್ಣನನ್ನು ಬಿಟ್ಟು ಓಡಿಹೋದರು. ಬಂದ ಹಿರಿಯರಿಗಾದರೋ ಆನಂದದ ಕೊಳಲ ಗಾನದ ಬಯಕೆ: 'ಮೈಯ ಮುಪ್ಪು ಕಾರುವಂತೆ ಮನಕೆ ಚಿಂತೆ ಸೇರದಂತೆ, ಬಾಳೆಸನಿಯ ಸಾವುದೂರ ಎಂಬ ನಂಬುಗೆ ಮೂಳುವಂತೆ ನಿಂತಗಾನವನ್ನು ನುಡಿಸಲು ಕೋರಿದರು.

ಹಿರಿಯರೊಡನೆ ಆಟವಾಡುತ್ತ ಭರವಸೆಯ ಗಾನವನ್ನು ಕೃಷ್ಣ ಊದಿದನು. ಹಿರಿಯರ ಕಣ್ಣು ಮಂಜು ಹರಿಯಿತು. ಅವರ ಭೀತ ಹೃದಯದಲ್ಲಿ ನೆಚ್ಚು – ಕೆಚ್ಚನ್ನು ತುಂಬಿತು. ಬದುಕಿಗೆ ಹೊಸ ಅರ್ಥವೇ ಬಂದಿತು. "ಮುಪ್ಪೇ ನಮಗೆ ಒಪ್ಪು" ಎಂದು ಏಕಾಂತ ಯೋಗವನ್ನು "ಬೀಳುವ ಕಾಲಕೆ ಬೆದರದೆ ಅದನೇಳಿಗೆ ಎಂದೇ ಬಗೆಯುವ" ಬಾಳಕಲೆಯನ್ನು ಉಪದೇಶಿಸಿತು. ಈ ನಂಬುಗೆಯನ್ನು ಹೊತ್ತ ಹಿರಿಯರು ಮರಳಿದರು.

ಶ್ರೀಕೃಷ್ಣ ವಿಷಾದಯೋಗ

ಹೀಗೆ ಹಿರಿಯರ ಆಗಮನದಿಂದ ಚೆದುರಿ ಹೋಗಿದ್ದ ರಾಸವೃಂದವು ಪುನಃ ಬಂದು ಕೂಡಿತು. ಆದರೆ ಕೃಷ್ಣನ ಭಾವ ಭಾಗೀರತಿಯಾಗಿದ್ದ ರಾಧೆ ಮಾತ್ರ ಆ ಗುಂಪಿನಲ್ಲಿಲ್ಲ. ಕೃಷ್ಣನ ಬಗೆಯೇ ಬೇರೆಯಾಯಿತು. ಒಲುಮೆ ಹೂರಣವಂತಿದ್ದ ರಾಧೆಗಾಗಿ ಅವನ ಹೃದಯ ಕೂಗಿಟ್ಟಿತು. "ಎಲ್ಲವಳು... ಎಲ್ಲವಳು... ನಾನುಡಿಸುವ ಕೊಳಲಿನ ಸೊಲ್ಲವಳು ?" ಎಂದು ಅವನು ಹಂಬಲಿಸಿದನು. ರಾಸ ಸಮೂಹವೂ ಸಹ ಕೃಷ್ಣನ ಹೃದಯವನ್ನು ಬಲ್ಲ ರಾಧೆಯನ್ನು ಹುಡುಕುತ್ತಾ ಬನವೆಲ್ಲ ಅಲೆದು ಬಂದರು. ಕೃಷ್ಣನು ಕೊಳಲನ್ನು ಸೊಂಟದಲ್ಲಿರಿಸಿ ಖಿನ್ನನಾದನು. ಆನಂದ ಸ್ವರೂಪಿಯೇ ಹೀಗೆ ಮೌನವಾಂತರೆ ಗೋಪವೃಂದವು ಭೀತಗೊಂಡಿತು. "ನಿಲ್ಲಿಸದಿರೋ ವನಮಾಲಿ... ನಿಲ್ಲಿಸೆ ನೀ ಕಳೆವುದೆಂತೋ ಭವಭೀತಿಯ" ಎಂದು ಹಂಬಲಿಸಿತು. "ಭವದಮಾಯೆ ಅಡಗುವಂತೆ, ಅಹಂಕಾರ ಕರಗುವಂತೆ ಬದುಕ ತುಂಬಲನುಗಾಲವು ನಿನ್ನ ಗಾನದನು

ರಾಗವು" ಎಂದು ನೊಂದು ನುಡಿಯಿತು.

ಆದರೆ ಕೃಷ್ಣನ ವಿಷಾದವು ನೀಗುವುದೆಂತು ? ಮನದ ಕಳವಳ ಕರಗದಾಗಲು ಆವ ಅಶುಭವನ್ನೋ ಚಿಂತಿಸಿ ಅವನು ಖಿನ್ನನಾದನು. ಅವನು ಭಾವಶೂನ್ಯನಾಗಿ ಕುಳಿತು ಬಿಟ್ಟನು.

ಇಂತಹ ಖಿನ್ನತೆಯ ನಡುವೆ ದೂರದಿಂದ 'ಹೊಸ ಹಾಡು' ಉಲ್ಲಾಸದ ಅಬ್ಬರದಲ್ಲಿ ಕೇಳಬಂದಿತು. ಕ್ಷಣದಲ್ಲಿಯೇ ಬಲರಾಮನೂ ಅಕ್ರೂರಾದಿಗಳೂ ಬಂದು ಮಥುರೆಯಲ್ಲಿ ನಡೆವ ಬಿಲ್ಲಹಬ್ಬಕ್ಕೆ ಅವನನ್ನು ಆಮಂತ್ರಿಸಿದರು.

ಅನ್ವರ್ಥನಾಮ ಅಕ್ರೂರ

ಕಾವ್ಯದ ಮೊದಲಲ್ಲಿ ಕಾಲಿಟ್ಟ ಅಕ್ರೂರನ ಪಾತ್ರ ಧೀರ ಗಂಭೀರವಾದುದು. 'ಗೋಕುಲ ನಿರ್ಗಮನ' ಕ್ಕೂ ಅವನ ಪಾತ್ರ ಹಿರಿದಾದುದೇ. ಗೋಕುಲದ ಆಗಸದಲ್ಲಿ ಬೆಳದಿಂಗಳಂತೆ ಆವರಿಸಿದ್ದ ಕೃಷ್ಣನನ್ನು ಲೋಕವನ್ನು ಬೆಳಗುವುದಕ್ಕಾಗಿ ಕರೆದೊಯ್ಯಲು ಬಂದವನು ಅವನು. ಕೃಷ್ಣನ ಒಲುಮೆಗೂ ರೂಪ–ಗಾನ ಮಾಧುರ್ಯಕ್ಕೂ ಮನ ಸೋತವನು. ಗೋಕುಲಾನಂದ ಚಂದಿರನಾದ ಅವನು ಆ ಹಳುವಿನ ಬಾಳಿನಲ್ಲಿ ಬೆರೆತ ರೀತಿಯನ್ನು ಸಂಪೂರ್ಣವಾಗಿ ಬಲ್ಲವನು. ಅಷ್ಟೇ ಚೆನ್ನಾಗಿ ಈ ಕೃಷ್ಣ "ಲೋಕಕೆ ಬೆಳೆವನು" ಎಂದು ಅರಿತವನು. ಆ ವೇಣುಗೋಪಾಲನು ನಾಳೆ ಚಕ್ರಧಾರಿಯಾಗುವ. ಲೋಕ ಯುದ್ಧದಲ್ಲಿ ಪಾಲ್ಗೊಂಡು ಪಾಂಚಜನ್ಯವನ್ನು ಊದುವ ಪರಿಯನ್ನು ಭಾವಿಸಿದವನು. ಇಂತಹ ಕೃಷ್ಣನನ್ನು ಗೋಕುಲದಿಂದ ಸೆಳೆದುಕೊಳ್ಳಲು ಅಮಿತೋತ್ಸಾಹಿಯಾದ ಬಲರಾಮನನ್ನು ಬಿಲ್ಲ ಹಬ್ಬದ ಔತಣದಿಂದ ಗೆದ್ದು ಅವನ ಮೂಲಕ ಕೃಷ್ಣನನ್ನು "ಜಾನಿಂದ ಭಾಗೀರತಿ"ಯನ್ನೊಯ್ವಂತೆ ಕರೆದೊಯ್ದು, ಶಿವಮುಡಿಯಲ್ಲಿ ಬಂಧಿತಳಾಗಿದ್ದ ಆ ಮಂಗಳೆ, ಲೋಕಪಾವನೆಯಾಗಿ ಹರಿಯುವಂತೆ ಆ ಕೃಷ್ಣ ಸಂಪತ್ತನ್ನು ಜಗದುದ್ದ–ಅಗಲಗಳಿಗೆ ಹಂಚಲು ಬಂದವನು.

ಕೃಷ್ಣನ ಕೊನೆಯ ಕೊಳಲು

ಖಿನ್ನನಾಗಿ ಕುಳಿತ ಕೃಷ್ಣನಿಗೆ ಈ ಮಥುರೆಯ ಆಹ್ವಾನವೂ ಮುದವನ್ನು ತರಲಿಲ್ಲ. ಇತ್ತ ಬಲರಾಮನೋ ಉತ್ಸಾಹದಿಂದ ಕುಣಿಯುತ್ತಿದ್ದಾನೆ. "ಹಾಡು ಕುಣಿತಗಳಿಂದ ಮೆದುವಾದೆಯೋ ಕೃಷ್ಣ" ಎಂದು ಹಂಗಿಸುತ್ತಿದ್ದಾನೆ. "ಹೆಣ್ಣ ನಂಜು ಏರಿಹುದೆ?" ಎಂದು ಛೇಡಿಸುತ್ತಿದ್ದಾನೆ. ಆದರೆ ಈ ಗದ್ದಲೇ ಸೇರದು ಕೃಷ್ಣನಿಗೆ. ಅಲ್ಲದೆ "ಹೊರನಾಡಿನ ಕರೆ ಕೇಡಿನ ಕರೆ" ಎಂಬ ಶಂಕೆ. ಎಂದೂ ಇಲ್ಲದ ಕಂಸನ ಆಹ್ವಾನದಲ್ಲಿ ಅನುಮಾನ. ಇಂತಹವನ ಖೇದವನ್ನು ಕಳೆಯಲು ಅಕ್ರೂರನೇ ಮುಂದಾಗಬೇಕಾಯಿತು. "ಗೋಕುಲ ಪಾಲಕ ಸ್ವಜನ ಪಾಲಕ... ಮಥುರೆಗೆ ಬಾ. ಎಲ್ಲ ಕಂಗಳನು ತುಂಬ ಬಾ... ಎಲ್ಲರ ನಚ್ಚನು ಹೊತ್ತಿಸೆ ಬಾ" ಎಂದು ತನ್ನೆಲ್ಲ ಹಂಬಲವನ್ನೂ ಅವನು ತೋಡಿ

ಕೊಂಡನು. ಬಲರಾಮುನಿಗೋ ಆತುರ. ಅವನ ಸೆಣಸಾಟದಲ್ಲಿ ಕೃಷ್ಣ ಹೃದಯಕ್ಕೆ ಅತಿ ಸಮೀಪವಾಗಿದ್ದ ಅವನ ದೇಹದ ಒಂದು ಅಂಗವೋ ಎಂಬಂತೆ ಬೆರೆತಿದ್ದ ಕೊಳಲೇ ಕೆಳಗೆ ಬಿದ್ದು ಬಿಟ್ಟಿತು. ಎಲ್ಲರೂ 'ಹಾ–ಹಾ' ಎಂದರು. ಕೃಷ್ಣನು ಮುರಳಿಯನ್ನು ವಿಷಾದದಿಂದ ನೋಡುತ್ತಾ, ಕರುಳು ಹಿಂಡಿ ಬರುತ್ತಿರಲು "ಅಯ್ಯೋ! ಏಕಿಂತು ಮುಳಿಸಾಂತೆ ಬಡ ಕೊಳಲ ಮೇಲೆ... ನನ್ನ ಬಗೆ ನೆತ್ತರಿಡುತಿದೆ ಇಲ್ಲಿ" ಎಂದು ವಿಷಾದಿಸಿದನು. ಆದರೆ ಬಲರಾಮನಿಗೆ ಆ ಸಂವೇದನೆಯೇ ಅರ್ಥವಾಗಲೊಲ್ಲದು. "ಇಂತೇಕೆ ಅಳಲು ಮತ್ತೆ ಕೈಗೊಳ್ಳು" ಎಂದು ಅವನ ತರ್ಕ. ಆದರೆ ಕೃಷ್ಣ ಅದರ ಸವಿಯನ್ನು ಮಧುರೆ ಸವಿಯೆಂದು ಬಲ್ಲ. ತನ್ನೆಲ್ಲ ಮಧುರ ಭಾವವನ್ನೂ ನಲ್ಮೆ ಯನ್ನೂ ಕೊಳಲಲ್ಲಿ ನ್ಯಾಸವಾಗಿಟ್ಟು, ಬೃಂದಾವನದ ರಕ್ಷೆಯಲ್ಲಿ ಕೊಳಲನ್ನು ಬಿಟ್ಟು "ಬೃಂದಾವನ, ನಿರೀಕ್ಷಿಸಂತಿರು ನನ್ನೀ ಮೋಹನ ಮುರಳಿಯನು" ಎಂದು, ಅದರ ರಾಗಮಾಧುರ್ಯವನ್ನು ಆ ಬನದಲರಿಗೆ, ಅದರ ಲಯವನ್ನು ಯಮುನೆಯ ತೆರೆಗೆ, ಅದರ ಭಾವವನ್ನು ಚಂದ್ರತಾರೆಗಳಿಗೆ ಹಂಚಿ–

"ನಡೆ ಅಣ್ಣಾ ಮುರಳಿಯ ಬಿಟ್ಟೆ
ನಡೆಯಿರಿ ಮಧುರೆಗೆ ಇನ್ನಿದ ಮುಟ್ಟೆ"

ಎಂದು, "ಎನ್ನ ಅಂಶವೇ ಆತ್ಮದಂಶವೇ ನಿನ್ನ ಬನದಿ ಬಿಡುವೆ" ಎಂದು ಶಿವ ಕರೆಗೆ ಓಗೊಡಲು ನಿರ್ಧರಿಸಿ ಬಿಟ್ಟನು.

ಗೋಪಿಯ ಪಾಡು

ಆದರೆ ಗೋಪಿಯ ಪಾಡು ? ಕೃಷ್ಣನು ಮಧುರೆಯಿಂದ ಹಿಂತಿರುಗುವವರಲ್ಲೇ ಅವರಿಗೆ ಸಂದೇಹ ! ಆ ಮಾರಸುಂದರನನ್ನು ಪರಿಪರಿಯಾಗಿ ಕಾಡಿದರು-ಗೋಕುಲ ವನ್ನು ಬಿಟ್ಟು ಹೋಗದಂತೆ. ಆದರೆ ಕೃಷ್ಣ ಅವರನ್ನು ಸಂತೈಸಿ "ನ್ಯಾಸವಿಟ್ಟ ಮುರಳಿ ಯಾಣೆ ಮತ್ತೆ ಬರುವೆನು" ಎಂದು ಅವರನ್ನು ಒಪ್ಪಿಸಿ, ಕೊನೆಗೆ ಅವರ ಪ್ರಾರ್ಥನೆಯಂತೆ ಕೊನೆಯ ಕೊಳಲನ್ನು ಊದಿದನು. "ಅಭಯ ಗೀತ" ವನ್ನು ನುಡಿಸಿದನು. ಅದು ಎಲ್ಲರಿಗೂ ಹಿತವಾಯಿತು. ಅವರವರ ಭಾವಕ್ಕೆ ತಕ್ಕಂತೆ ಅರ್ಥವನ್ನು ಅದು ನುಡಿ ಯಿತು. ಗೋಪಾಲಕರಿಗೆ ತಾವು 'ಅವನ' ಆಟದ ಕೈದುಗಳೆಂದು ಎನಿಸಿದರೆ, ಬಲರಾಮ ನಿಗೆ ದೈವದ ಮೈಗೆ ತಾವು ನಿರ್ಭೀತರಾಗಿ ಅಂಟಿ ಕೊಂಡಂತೆ ಭಾಸವಾಯಿತು. ಅಕ್ರೂರ ನಿಗೆ "ಅರಿವೊಡೆ ಎಲ್ಲಾ ಶಿವವೊಂದೇ ಉಸಿರು" ಎಂಬ ದಿವ್ಯಭಾವವನ್ನು ತಂದರೆ ಉಳಿದವರಿಗೆ ಅವರವರ ಭಾವಕ್ಕೆ ತಕ್ಕ ಅರ್ಥವನ್ನು ಕೊಳಲು ನುಡಿಯಿತು. ಆದರೆ ಕೃಷ್ಣಾರ್ಪಿತ ಚಿತ್ತ ಹೃದಯರಾದ ಗೋಪಿಯರಿಗೆ ಮಾತ್ರ ದಾರುಣವಾದ ಶೋಕವು ಮುತ್ತಿತು. "ಶೂನ್ಯವಾಗಿರೆ ಎದೆ, ಶೋಕವಾಂತಿರೆ ಮನ, ತಾಪಗೊಂಡಿರೆ ತನು, ನೆನೆವ ಹಿಂದಿರೆ ನೀನು....ಅವುದೋ ಭಯ" ಎಂದು ಅವರ ವಿಲಾಪ ಆವುದೋ ವಿಷಾದ. ಅಂದಿನಿಂದ ಇಂದಿನ ವರೆಗೂ ಹರಿದು ಬಂದಿರುವ ನಿತ್ಯವಿರಹದ ದಿವ್ಯ ಯಾತನೆ !

ಕೃಷ್ಣನನ್ನು ರಾಧೆಯಾವರೂ ತಡೆವಳೇನೋ ಎಂದು ಆಗತಾನೆ ಅಲ್ಲಿಗೆ ಬಂದ ರಾಧೆ-ಯನ್ನು ಅವರು ಅಂಗಲಾಚಿದರು. ಆದರೆ ಕೃಷ್ಣ ಹೃದಯವನ್ನು ಬಲ್ಲ ರಾಧೆ ಅವನನ್ನು ತಡೆಯುವ ಅವಿವೇಕಕ್ಕೆ ಹೋಗದೆ, ತನ್ನಂತೆಯೇ ಕೃಷ್ಣವಿರಹದಿಂದ ಬಡವಾದ ಮುರಳಿಯನ್ನು ಮೋಹದಿಂದ ತುಟಿಗಿಟ್ಟು ಧನ್ಯವಾದಳು—

"ಇದ್ದುದೇ ದಿಟ ಅವನೆಂದುದು ದಿಟ
ನಾವು ನಲಿದುದು ದಿಟ ಬಹನೆಚ್ಚು ದಿಟ"

ಎಂಬ ಭರವಸೆಯನ್ನೇ ನೆಮ್ಮಿ ನಿಂತಳು. ಬೃಂದಾವನ ದೇವಿಯ ಸೆರಗಿನಲ್ಲಿ ಅಡಗಿದ್ದ ಮುರಳಿ ತನ್ನ ನಾದದ ನೆನಪನ್ನು ಗಿಡ-ಮರ-ಬಳ್ಳಿಗಳ ಉಲಿಯಲ್ಲೇ ಸಾರುತ್ತಾ ಕೈಯಿಂದ ಕೈಗೆ ನಡೆದು ಬಂದು, ಸಾವಿರ ವರ್ಷಗಳೂ ಉರುಳಿ ಕವಿಯ ಭಾವದ ತೆರೆ ಬೀಳುವಾಗ ಅಶಿಕ್ಷಿತ ಗೋವಳನ ಕೈಗೆ ಸಿಲುಕಿ ಮತ್ತೊಮ್ಮೆ ಮಧುರ ಭಾವವನ್ನು ನುಡಿಯಿತು. ಅವನ ತಪ್ತ ಮನವನ್ನು ಮೊದಲಿನಂತೆ ಕೆಣಕದೆ ತಣಿಸಿತು. 'ಗೋಕುಲ ನಿರ್ಗಮನ'ದಂತಹ ಅಪೂರ್ವ ಕಾವ್ಯ ಕೃತಿಗೆ ಕಾರಣವಾಯಿತು.

ಚೋೀರ್ ಮತ್ತು ವಯರ್‌ಗಳ ಹಿಂದೆ

ಮಲಯಾಳಂ ಮೂಲ: ಡಾ. ಕೆ. ಎಸ್. ಎಳುತ್ತಚ್ಛನ್
ಅನು: ಬಿ. ಕೆ. ತಿಮ್ಮಪ್ಪ

ಲೀಲಾತಿಲಕದಲ್ಲಿ "ಊಹನೀಯ ಸಂಸ್ಕೃತ ಪ್ರಕೃತಿ: ಸಂಸ್ಕೃತಭವಾ" (II-4) ಎಂಬ ಸೂತ್ರದ ವೃತ್ತಿಯಲ್ಲಿ 'ದೇವರ್' 'ವರ್ಗ' ಮೊದಲಾದ ಕೆಲವು ಶಬ್ದಗಳಿಗೆ ದೇವವರ್ಗಾದಿಗಳಾದ ಸಂಸ್ಕೃತ ಪ್ರಕೃತಿಗಳಿವೆ ಎಂದು ಹೇಳಲಾಗಿದೆಯಷ್ಟೆ ! ಹಾಗೆಯೇ ಎಲ್ಲ ಪದಗಳ ಪ್ರಕೃತಿಯನ್ನೂ ಊಹಿಸುವದಕ್ಕೆ ಸಾಧ್ಯವಿದೆ ಎನ್ನುವ ಒಂದು ಪೂರ್ವ ವಾದವಿದೆ. ದ್ರಾವಿಡ ಶಬ್ದಗಳಾದ 'ವಯರ್' 'ಚೋೀರ್', 'ಪಾಂಬ್'ಗಳನ್ನು ಕ್ರಮ ವಾಗಿ 'ವೈರಿ', 'ಚೋರ', 'ಪಾಪ'ವೆಂದು ಸಂಬಂಧ ಕಲ್ಪಿಸಿ ವಾದಿಸುವುದೂ ಉಂಟು. ಇದರ ಖಂಡನೆ ಮುಂದೆ ಬರಲಿದೆ. ಮೇಲೆ ಹೇಳಿದ ಕೃತಕ ವ್ಯುತ್ಪತ್ತಿಗೆ ಸಂಬಂಧಿಸಿದ ಅಂಶವನ್ನು ಕುಮಾರಿಲನ ತಂತ್ರವಾರ್ತಿಕದಿಂದ ಎತ್ತಿಕೊಂಡದ್ದು ಎನ್ನುವ ವಿಷಯ ಅನೇಕರಿಗೆ ಗೊತ್ತಿದೆ. ಕುಮಾರಿಲನ ಈ ಪ್ರಸ್ತಾವನೆಯಿಂದ ಆನುಷಂಗಿಕವಾಗಿ ದ್ರಾವಿಡದಲ್ಲಿ ಧ್ವನಿ-ಸಿದ್ಧಾಂತಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ತಿಳಿದು ಬರುತ್ತವೆ. ಇದನ್ನು ಅವಲಂಬಿಸಿಕೊಂಡು ಪಾಂಡಿತ್ಯ ಪ್ರಪಂಚದಲ್ಲಿ ಕೆಲವರು ಸ್ವಾರಸ್ಯವಾದ ಚರ್ಚೆ ಗಳನ್ನು ನಡೆಸಿದ್ದಾರೆ. ಆ ವಿಷಯವಾಗಿ ಸ್ವಲ್ಪ ಮಟ್ಟಿನ ವಿವರವನ್ನು ಒದಗಿಸುವುದೇ ಈ ಲೇಖನದ ಉದ್ದೇಶ. ಮೊತ್ತ ಮೊದಲಾಗಿ ಆ ಶಬ್ದಗಳ ಕಥೆಯನ್ನು ನೋಡೋಣ.

ಶಬರಭಾಷ್ಯದಲ್ಲಿ ಜೈಮಿನಿಯ "ಚೋದಿತಂತು ಪ್ರತೀಯೇತಾ ವಿರೋಧಾತ್ ಪ್ರಮಾಣೇನ" (I-III vi. 10) ಎನ್ನುವ ಸೂತ್ರವನ್ನು ವ್ಯಾಖ್ಯಾನಿಸುವ ಒಂದು ಭಾಗ ವಿದೆ. ಮ್ಲೇಚ್ಛರ ಭಾಷೆಯಲ್ಲಿ ಪ್ರಚಾರದಲ್ಲಿದ್ದ ಶಬ್ದಕ್ಕೆ ಅಧಿಕಾರಿತ್ವವುಂಟೆಂದು ಸಾಧಿಸು ವುದಕ್ಕಾಗಿ ಜೈಮಿನಿ ಹಾಗೆ ಹೇಳುವುದು. ವೇದ ಪ್ರಮಾಣಕ್ಕೆ ವಿರೋಧವಲ್ಲದಿದ್ದಲ್ಲಿ ಮ್ಲೇಚ್ಛ ಶಬ್ದವೂ ಅದರ ಸಾಧಾರಣ ಅರ್ಥದಲ್ಲಿ ಸ್ವೀಕರಿಸಲ್ಪಡುತ್ತದೆ. ಅದಕ್ಕೂ ವೇದ ಪ್ರಾಮಾಣ್ಯವಿದೆ ಎಂದು ಕಲ್ಪಿಸುವುದೇಕೆ ಎನ್ನುವುದು ಜೈಮಿನಿಯ ಪ್ರಶ್ನೆ. ಇದನ್ನು ವ್ಯಾಖ್ಯಾನಿಸುವಾಗ ಶಬರ ಮುನಿ ವೇದಗಳಲ್ಲಿರುವ ಪಿಕಂ. ನೇಮ. ಸತಂ ತಾಮರಸಂ— ಎನ್ನುವ ನಾಲ್ಕು ಶಬ್ದಗಳು ಮ್ಲೇಚ್ಛ ಭಾಷೆಯಿಂದ ಸ್ವೀಕರಿಸಲ್ಪಟ್ಟವು—ಎಂದು ತೋರಿ ಸಿದ್ದಾರೆ. *(ಪಿಕ=ಕೋಗಿಲೆ, ನೇಮ=ಅರ್ಧ, ಸತಂ=ನೂರು ಹಲಗೆ ತುಂಡು

*'ಪಿಕಂ' ವಾಜಸನೇಯಿ ಸಂಹಿತೆಯಲ್ಲಿ ದೊರೆಯುತ್ತದೆ. 'ನೇಮಂ' ಋಗ್ವೇದದಲ್ಲಿ ಕಾಣಸುತ್ತದೆ. (VI 16-18) ಪಾಣಿನಿಯೂ ಇದನ್ನು ಕುರಿತು (II 1-33) ಹೇಳಿದ್ದಾನೆ.

[ಮುಂದಿನಪುಟದಲ್ಲಿ]

ಗಳಿಂದ ಮಾಡಿದ ಒಂದು ಮರದ ಪಾತ್ರ, ತಾಮರಸಂ=ತಾವರೆ.) ಉತ್ತರ ಪದಗಳ ಅರ್ಥ ನಿರುಕ್ತವನ್ನು ವ್ಯಾಕರಣ ವ್ಯತ್ಯಾಸವನ್ನೂ ನೋಡಿ ನಿಶ್ಚಯಿಸುವುದೋ ಅಥವಾ ಮ್ಲೇಚ್ಛರು ಉಪಯೋಗಿಸುವ ಅರ್ಥದಲ್ಲೇ ಸ್ವೀಕರಿಸುವುದೋ ಎನ್ನುವ ಸಂಶಯ ವುಂಟಾಗುತ್ತದೆ. (ಅನಾರ್ಯರೆಲ್ಲ ಮ್ಲೇಚ್ಛರ ಗುಂಪಿನಲ್ಲಿ ಸೇರುತ್ತಾರೆ. ದ್ರಾವಿಡರೂ ವಿದೇಶಿಯರ ಹಾಗೆ ಮ್ಲೇಚ್ಛರು. ಅವರಿಗೂ ವೇದಗಳೇ ಮೊದಲಾದವುಗಳನ್ನು ಕೇಳ ಬಾರದು ಎನ್ನುವ ನಿಯಮವಿತ್ತು.) ಮೇಲೆ ಹೇಳಿದ ಜನರು ಅಸಂಸ್ಕೃತರಾದದ್ದರಿಂದ ಅರ್ಥವ ಕಡೆಗೆ ಅವರ ಶ್ರದ್ಧೆ ಕಡಿಮೆ. ಉಚ್ಚಾರಣೆಯಲ್ಲೂ ವ್ಯತ್ಯಾಸವಿರುತ್ತದೆ. ಸುಸಂಸ್ಕೃ-ತರ ಉಚ್ಚಾರಣೆಯಲ್ಲಿ ಪ್ರಾಮಾಣ್ಯವಿದೆ. ಈ ಕಾರಣಗಳಿಂದಾಗಿಯೇ ವ್ಯಾಕರಣ ಮೊದ ಲಾದವುಗಳ ಆಧಾರದ ಮೇಲೆ ಮಾತ್ರ ಪ್ರಸ್ತುತ ಶಬ್ದಗಳ ಶುದ್ಧಿಯನ್ನು ನಿರ್ಣಯಿಸು ವುದಕ್ಕೆ ಸಾಧ್ಯವೆಂದು ಪೂರ್ವಪಕ್ಷವಾದಿಸುತ್ತದೆ.

ಇದಕ್ಕೆ ಭಾಷ್ಯಕಾರರು ಹೇಳುವ ಉತ್ತರ ಇದು: "ಮ್ಲೇಚ್ಛನ ಮಾತೂ ಅರ್ಥ–ವತ್ತಾಗಿರುತ್ತದೆ. ಸಾಮಾನ್ಯವಾಗಿ ಅರ್ಥ ಹೊಳದೇ ಹೊಳೆಯುತ್ತದೆ. ಸುಸಂಸ್ಕೃತ ರಾದವರ ಮಾತಿನಲ್ಲಿ ಮಾತ್ರವೇ ಪ್ರಾಮಾಣ್ಯವಿರುತ್ತದೆ ಎಂದು ಹೇಳಲಾಗುವುದಿಲ್ಲ. ಇಂದ್ರಿಯಾತೀತಗಳಾದ ವಿಚಾರಗಳನ್ನು ಕುರಿತ ಆ ವಾದದಲ್ಲಿ ಸಮಂಜಸತೆಯಿದೆ. ಸಂಸ್ಕೃತ ವಿದ್ವಾಂಸರು ಮಾತ್ರವೇ ಎಚ್ಚರಿಕೆಯಿಂದ ಶಬ್ದಗಳನ್ನು ಪ್ರಯೋಗಿಸಿದ್ದಾರೆ ಎಂದು ತೀರ್ಮಾನಿಸಲಾಗುವುದಿಲ್ಲ. ಎಷ್ಟೋ ಕಡೆ ಮ್ಲೇಚ್ಛರೂ ಎಚ್ಚರಿಕೆಯಿಂದ ಪ್ರಯೋಗಿಸಿದ್ದಾರೆ. ಅವರ ಪ್ರಯೋಗಗಳನ್ನೂ ಒಪ್ಪಬಹುದು. ಉದಾಹರಣೆಗೆ ಹಕ್ಕಿಗಳನ್ನು ಹಿಡಿಯುವುದಕ್ಕೂ ಸಾಕುವುದಕ್ಕೂ ಅವರಿಗೇ ಹೆಚ್ಚು ಸಾಮರ್ಥ್ಯವಿರುವುದು.

[ಹಿಂದಿನ ಪುಟದಿಂದ]

'ಸತ್' ವಿಷಯವಾಗಿ ಹೇಳುವುದೇನೂ ಇಲ್ಲ. 'ತಾಮರಸಂ' ಮಹಾಭಾರತದಲ್ಲೂ (III. 11580) ರಾಮಾಯಣದಲ್ಲೂ ಮತ್ತಿತರ ಗ್ರಂಥಗಳಲ್ಲೂ ದೊರೆಯುತ್ತದೆ. ಅಷ್ಟೇನೂ ಪ್ರಾಚೀನ ಶಬ್ದವಲ್ಲ. ಇವುಗಳನ್ನು ಮ್ಲೇಚ್ಛ ಭಾಷೆಯಿಂದ ತೆಗೆದುಕೊಳ್ಳಲಾಗಿದೆ-ಎಂದು ಹೇಳುವುದಲ್ಲದೆ ಅದಕ್ಕೆ ಬೇರೆ ಏನನ್ನೂ ಹೇಳುವುದಿಲ್ಲ. 'ತಾಮರ'ದಿಂದ 'ತಾಮರಸ'ದ ವ್ಯುತ್ಪತ್ತಿ ಎಂದು ಹೇಳುವುದುಂಟು. ನೀರಿನಿಂದ ಹುಟ್ಟಿದುದನ್ನು 'ನೀರಜ' ಎಂದು ಸಂಸ್ಕೃತದಲ್ಲಿ ಹೇಳಿರುವುದನ್ನು ಗಮನಿಸಬೇಕು. ವೇದದಲ್ಲಿ ದ್ರಾವಿಡ ಶಬ್ದ ಗಳಿವೆ ಎಂದು ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ಛಾಂದೋಗ್ಯೋಪನಿಷತ್ತಿನಲ್ಲಿ (I. 10- 1) "ಮಟಚೀತೇಷು" ಎನ್ನುವ ಪ್ರಯೋಗದಲ್ಲಿ 'ಮಟಚಿ'ಗೆ ರಕ್ತವರ್ಣಾಃ ಕ್ಷುದ್ರ ಪಕ್ಷಿ ವಿಶೇಷಾಃ" ಎಂದು ಹಳೆಯ ವ್ಯಾಖ್ಯಾನವಿದೆ 'ಮಿಡಿಚೆ' ಎಂದು ಕನ್ನಡ ದಲ್ಲೂ 'ಮಿಡುತ್ತ' ಎಂದು ತೆಲುಗಿನಲ್ಲೂ ಕಾಣಿಸುವ 'ಮಿಡಚೆ' ಎನ್ನುವ ಅರ್ಥದ ಒಂದು ಶಬ್ದ ಅಷ್ಟೇ ಅಲ್ಲ. ಅಥರ್ವವೇದದಲ್ಲಿ (5. 13. 6–10) ತೈಮಾತ, ಅಲಗಿ-ಬಿಲಗಿ, ಉರುಗೂಲ, ತಾಬುವಂ ಎಂಬ ಶಬ್ದಗಳು ಬ್ಯಾಬಿಲೋನಿಯದಿಂದಲೂ ಋಗ್ವೇದದಲ್ಲಿ (VIII 78.2) 'ಮನಾ' (ಸ್ವರ್ಣಂ) ಎನ್ನುವ ಶಬ್ದ ಅಸ್ಸೀರಿಯದಿಂದಲೂ ಬಂದದ್ದೆಂದು ಊಹಿಸಲಾಗಿದೆ.

ಮ್ಲೇಚ್ಛರು ಕೂಡ ಅರ್ಥ ತಿಳಿಯದ ಶಬ್ದಗಳಿಗೆ, ಬಹುಶಃ ವ್ಯಾಕರಣಾದಿಗಳ ಸಹಾಯವನ್ನು ಪಡೆದುಕೊಳ್ಳಬೇಕಾಗಿ ಬಂದಿರಬಹುದು. ಅಂತು ಅದಾವುದನ್ನೂ ನಾವು ನಿರ್ಧರಿಸಲಾಗುವದಿಲ್ಲ. ಅಷ್ಟೇ ಅಲ್ಲ ಅವರ ನಿರುಕ್ತಗಳನ್ನು ನೋಡಿ ಶಬ್ದಗಳಿಗೆ ಅರ್ಥವನ್ನು ಕಲ್ಪಿಸುವದಾದರೆ ಆ ಅರ್ಥದಲ್ಲಿ ಯಾವ ಬಿಗಿಯೂ ಇರುವದಿಲ್ಲ. ಆದರಿಂದ ತೊಂದರೆಯೇ ಉಂಟಾಗುತ್ತದೆ. ಈ ರೀತಿಯ ಕಾರಣಗಳಿಂದಾಗಿ ಪಿಕಾದಿ ಶಬ್ದಗಳ ರೂಪ ನಿಷ್ಪತ್ತಿಗಳೇ ಮೊದಲಾದವುಗಳಿಗೆ ಸಮಯವನ್ನು ವಿನಿಯೋಗಿಸದೆ ಅದಕ್ಕೆ ಮ್ಲೇಚ್ಛರು ನೀಡಿರುವ ಅರ್ಥವನ್ನು ಸ್ವೀಕರಿಸುವುದೇ ಒಳ್ಳೆಯದು. ಹಾಗೆ ಸ್ವೀಕರಿಸುವುದಕ್ಕೆ ಆಧಾರಗಳು ಸಾಕಾಗುವಷ್ಟು ದೊರೆಯುತ್ತವೆ." ಈ ರೀತಿಯಲ್ಲಿ ಶಬರ ಮುನಿ ಜೈಮಿನಿ ಸೂತ್ರವನ್ನು ವ್ಯಾಖ್ಯಾನಿಸುವುದು.

ಕುಮಾರಿಲನು ತನ್ನ ತಂತ್ರವಾರ್ತಿಕದಲ್ಲಿ (I. iv. 9) ಮೇಲೆ ಹೇಳಿದ ಸೂತ್ರ ಭಾಷ್ಯಗಳನ್ನು ಇನ್ನೂ ಸ್ವಲ್ಪ ಮಟ್ಟಿಗೆ ವಿಷದೀಕರಿಸಲು ಪ್ರಯತ್ನಿಸುತ್ತಾನೆ.

> **"ಯೇ ಶಬ್ದಾಃ ಪ್ರಸಿದ್ಧಾಃ ಸ್ಯು-**
> **ರಾರ್ಯಾವರ್ತ ನಿವಾಸಿ ನಾಂ**
> **ತೇಷಾಂ ಮ್ಲೇಚ್ಛ ಪ್ರಸಿದ್ಧಾರ್ಥೋ**
> **ಗ್ರಾಹ್ಯೋನೇತಿ ವಿಚಿಂತ್ಯತೇ"**

ಎನ್ನುವ ಅವತರಿಣಿಕೆಯಿಂದೊಡಗೂಡಿ ಆ ಭಾಗ ಪ್ರಾರಂಭವಾಗುತ್ತದೆ. ಮ್ಲೇಚ್ಛರಿಗೆ ಧರ್ಮದಲ್ಲಿ ಆದರವಿಲ್ಲದ್ದರಿಂದ ಅವರ ಶಬ್ದಗಳಂತೆ ಅರ್ಥವೂ ವ್ಯತ್ಯಸ್ತ. ಯಾವ ಸಂಸ್ಕೃತ ಶಬ್ದವನ್ನೂ ಅವರು ರೂಪುಗೆಡಿಸಿಯೇ ಉಚ್ಚರಿಸುವುದು. ಅರ್ಥವೂ ವ್ಯತ್ಯಾಸ. ಅವರು ಹೇಳುವುದು ಸಂಸ್ಕೃತದ ಹಾಗೆ ತೋರುತ್ತದೆ ಅಷ್ಟೆ. ಸರಿಯಾದ ರೂಪವಲ್ಲಿರುವ ಶಬ್ದಗಳಿಗೆ ಮಾತ್ರ ಅರ್ಥವನ್ನು ಸ್ಪಷ್ಟಪಡಿಸುವ ಶಕ್ತಿಯಿರುವುದು. ಆರ್ಯರಲ್ಲೂ ಕೆಲವರು ಮ್ಲೇಚ್ಛಭಾಷೆಗಳಿಂದ ಸ್ವತಃ ಕೆಲವು ಶಬ್ದಗಳನ್ನು ಕಲ್ಪಿಸಿ ಸ್ವೀಕರಿಸುವವರಿದ್ದಾರೆ. ಅವರು ಕೆಲವು ಸಲ ಒಂದು ಶಬ್ದದಲ್ಲಿರುವ ಅಕ್ಷರವನ್ನು ಮತ್ತೊಂದು ಹೊಸ ಶಬ್ದಕ್ಕೆ ಹೊಂದಿಸಿ ಸೇರಿಸುತ್ತಾರೆ.[೧] ನ್ಯೂನಾಕ್ಷರಗಳಾದ ಕೆಲವು ಶಬ್ದಗಳಲ್ಲಿ ಅಕ್ಷರವನ್ನು ಹೆಚ್ಚಾಗಿ ಸೇರಿಸುವುದೂ ಉಂಟು. ಕೆಲವು ಸಲ ಇದ್ದ ಅಕ್ಷರಗಳನ್ನು ಕಡಿಮೆ ಮಾಡಿ ಸಂಸ್ಕೃತ ಛಾಯೆಯನ್ನುಂಟುಮಾಡುವುದೂ ಉಂಟು. ಇಷ್ಟನ್ನೂ ಹೇಳಿದ ಮೇಲೆ ಕುಮಾರಿಲ ಈ ಅಭಿಪ್ರಾಯದ ಸಾಧುತ್ವವನ್ನು ತೋರಿಸಿಕೊಡುವುದಕ್ಕಾಗಿಯೇ ತನ್ನ ದ್ರಾವಿಡ ಭಾಷಾಜ್ಞಾನದ ಸಹಾಯವನ್ನು ಪಡೆಯುತ್ತಾನೆ. ಆ ಗದ್ಯಭಾಗದಲ್ಲಿಯೇ 'ಚೋರು' 'ವಯರು'ಗಳೆಲ್ಲ ಬಂದಿರುವುದು.

ಅತ ಹೇಳುತ್ತಾನೆ: "ಉದಾಹರಣೆಯಾಗಿ ದ್ರಾವಿಡ ಭಾಷೆಯಿಂದಲೇ ವ್ಯಂಜನಾಂತಗಳಾದ ಶಬ್ದಗಳನ್ನೆತ್ತಿಕೊಂಡು ಸ್ವರಾಂತರಗಳಿಂದ ಅಂತ್ಯವಾಗುವ ವಿಭಕ್ತಿ

---

೧. ಇಂಗ್ಲೀಷಿನಲ್ಲಿ "a Custom" ಎನ್ನುವುದರಿಂದ 'ಏಕಂ' ಎನ್ನುವ ಸಂಸ್ಕೃತ ಪದವನ್ನು ಸೃಷ್ಟಿಸಿರುವಂತೆ ಗಂಗಾನಾಥರ್ಝಾ ಉದಾಹರಿಸುತ್ತಾರೆ.

ಪ್ರತ್ಯಯವನ್ನೋ ಅಥವಾ ಮತ್ತೊಂದನ್ನೋ ಸೇರಿಸಿ ಸಂಸ್ಕೃತ ಶಬ್ದವೆಂದು ಹೇಳಿ ಸಂಸ್ಕೃತವಲ್ಲಿರುವ ಶಬ್ದದ ಅರ್ಥಕ್ಕೆ ಹೊಂದಿಕೊಳ್ಳುವಂತೆ ಅರ್ಥವನ್ನು ಕಲ್ಪಿಸಿರುವ ಪ್ರಯತ್ನವನ್ನು ಕಾಣುತ್ತೇವೆಯಲ್ಲವೇ? ಅನ್ನ ಎನ್ನುವ ಅರ್ಥಕೊಡುವ 'ಚೋರ್' ದ್ರಾವಿಡ ಶಬ್ದವನ್ನು ಸಂಸ್ಕೃತವಲ್ಲಿ 'ಚೋರ' (ಕಳ್ಳ) ಎನ್ನುವ ಶಬ್ದವೇ ಎಂದು ಅವರು ಕಲ್ಪಿಸಿರುವುದು.೨ ದಾರಿ ಎನ್ನುವ ಅರ್ಥದಲ್ಲಿರುವ 'ಅತರ್' ಶಬ್ದವನ್ನು "ಅತರಃ" ಎಂದು ಕಲ್ಪಿಸಿ ಅವರು ಹೇಳುವುದು. ಯಾತ್ರೆಮಾಡಲು ಪ್ರಯಾಸವಾಗುವುದ ರಿಂದ ಅತರ ಶಬ್ದವನ್ನೇ ದಾರಿಗೆ ಕಲ್ಪಿಸಲಾಗಿದೆ–ಎಂದು. ಇದರ ಹಾಗೆಯೇ ಪಕಾರ ವಲ್ಲಿ ಅಂತ್ಯಗೊಳ್ಳುವ ಪಾಂಪ್ (ಪಾಂಬ್) ಎನ್ನುವ ಶಬ್ದ ಸರ್ಪ ಎನ್ನುವ ಅರ್ಥದಲ್ಲಿ ಅಕಾರಾಂತವಾದ 'ಪಾಪ' ಶಬ್ದವೆಂದು ಊಹಿಸಿದರು. "ಖಂಡಿತವಾಗಿಯೂ ಪಾಂಬ್ ಪಾಪ ಮಾಡುತ್ತದೆ." ಎಂದು ಹೇಳುತ್ತಾರೆ. ಇದೇರೀತಿ ಸ್ತ್ರೀ ಎನ್ನುವ ಅರ್ಥದ 'ಮಾಲ್' ದ್ರಾವಿಡ ಶಬ್ದವನ್ನು 'ಮಾಲಾ' ಎನ್ನುವ ಸಂಸ್ಕೃತ ಶಬ್ದವೇ ಎಂದು ಅವರು ಭಾವಿಸಿರು ವುದು. ರೇಫಾಂತ ವಾದ 'ವೈರ್' 'ವಯರ್' ಶಬ್ದ ವೈರಿ ಶಬ್ದವನ್ನು ಹೋಲುತ್ತದೆ ಎಂದು ಊಹಿಸಿ ಹೇಳಿರುವುದು. ಹಸಿವಿನ ಕಾರಣದಿಂದಾಗಿ ಮಾಡಬಾರದ ಕೆಲಸಗಳನ್ನು ಮಾಡುವುದಕ್ಕೆ ಪ್ರೇರೇಪಿಸಿರುವುದರಿಂದ 'ವಯರ್' ವೈರಿಯ ಹಾಗೆ ಪ್ರವರ್ತಿಸುವುದು ಎಂದು ಹೇಳೋಣ.

ನಮ್ಮದೇ ಆದ ದ್ರಾವಿಡ ಭಾಷೆಯನ್ನು ಕುರಿತು ಈ ರೀತಿ ತೋರಿದ ಹಾಗೆ ಹೇಳುವುದಾದರೆ ಇನ್ನು ಅಷ್ಟಾಗಿ ಪರಿಚಯವಿಲ್ಲದ ಪರ್ಶಿಯನ್, ಬರ್ಬರ. ಯವನ, ರೋಮನ್, ಮೊದಲಾದ ಭಾಷಾ ಶಬ್ದಗಳ ವ್ಯುತ್ಪತ್ತಿಯ ವಿಚಾರವಾಗಿ ಯಾವ ರೀತಿ ಯಲ್ಲಿ ಈ ಜನರು ಹೇಳಿಬಿಡಬಹುದು ಎಂದು ನಮಗೆ ಊಹಿಸಲಾಗುವುದಿಲ್ಲ.*

ಮೇಲೆ ಉದ್ಧರಿಸಿರುವುದರಿಂದಲೇ ಲೀಲಾತಿಲಕಕಾರನೂ 'ಚೋರು' 'ವಯರು' 'ಪಾಂಬು'ಗಳನ್ನು ! ಎತ್ತಿಕೊಂಡಿರಬಹುದೆಂದು ಸ್ಪಷ್ಟವಾಗುವುದಿಲ್ಲವೆ? ಕುಮಾರಿಲನ 'ಮಾಲ'ಕ್ಕೆ ಸಂಬಂಧಿಸಿದ ವಿಷಯವನ್ನು ಮುಂದೆ ವಿವರಿಸಲಾಗುವುದು.

ಸ್ವಾರಸ್ಯಕರ ವಿವಾದಗಳು

ತಂತ್ರವಾರ್ತಿಕವನ್ನು ಮೊದಲು ಉದ್ಧರಿಸಿ ಪ್ರಯೋಗಿಸಿದ ಪ್ರಸಿದ್ಧ ಪಂಡಿತ ಪಿ.ಟಿ. ಶ್ರೀನಿವಾಸ ಅಯ್ಯಂಗಾರ ೧೯೧೩ರಲ್ಲಿ ಬರೆದ ಒಂದು ವೈಜ್ಞಾನಿಕವಾದ ಲೇಖನ "ಕುಮಾರಿಲನ ತಮಿಳು ಪರಿಚಯ"* ಎನ್ನುವ ಶೀರ್ಷಿಕೆಯಲ್ಲಿ ಪ್ರಸಿದ್ಧಿ ಪಡೆಯಿತು.

---

೨. ಊಟ: "ಚೋರನೆ" ಹಸಿವಾದಾಗ ಕದಿಯುವುದಕ್ಕೂ ನಾಚಿಕೆಪಡುವುದಿಲ್ಲವೆಂದು ವ್ಯಂಗ್ಯ.

* (ಅನುವಾದ) ಡಾ. ಕೆ. ಕುಂಜುಣ್ಣಿರಾಜ. ಭಾಷಾ ಸಂಶೋಧನೆ. (1962) P. 295–96.

* Indian Antiquary Vol. 42. PP. 200–201

ಅವರಲ್ಲಿ ಮೊತ್ತಮೊದಲಾಗಿ ಪಂಡಿತರೆಲ್ಲ ತಪ್ಪಾಗಿ ಭಾವಿಸುವಂತೆ ಮಾಡಿದ ಒಂದು ಪ್ರಯೋಗ ಹಸ್ತಪ್ರತಿಮಾಡುವವನಿಂದ ಉಂಟಾದದ್ದೆಂದು ಎತ್ತಿ ತೋರಿಸಿದೆ. ತಂತ್ರವಾರ್ತಿಕದಲ್ಲಿ ಮೊದಲು ಉದ್ಧರಿಸಿದ ಮೂಲಭಾಗ ಪ್ರಾರಂಭವಾಗುವುದು: "ತದ್ಯಥಾ ದ್ರವಿಡಾದಿ ಭಾಷಾಯಾಂ ತಾವಲ್" ಎಂದು. ಬರ್ನೆಲ್‌ನ ಪ್ರತಿಯನ್ನು ತಯಾರಿಸಿದ ವಿದ್ವಾಂಸ ಇದಕ್ಕೆ ಬದಲಾಗಿ "ಯಥಾಂಧ್ರ ದ್ರವಿಡಾದಿ ಭಾಷಯಾಂ" ಎಂದು ಬರೆದು ಕೊಟ್ಟ.[೩] 'ಭಾಷಾಯಾಂ' ಎನ್ನುವ ಸಪ್ತಮೇಕ ವಚನ ಬರ್ನೆಲ್‌ನನ್ನು ಕಷ್ಟಕ್ಕೊಳಗು ಮಾಡಿತು. "ಇದು ತಮಿಳಿಗೆ ಅವ್ಯಕ್ತವಾಗಿ ಸಂಬಂಧಿಸುತ್ತದೆ" ಎಂದು ಹೇಳಿ ಆತ ತಪ್ಪಿಸಿಕೊಂಡ. ಸ್ಟೆನ್ ಕೋನೋವ್, ಆಂಧ್ರರದೂ ತಮಿಳರದೂ ಆದ ಭಾಷೆಯನ್ನು ಕುರಿತು ಹೇಳುವ ಪ್ರಸ್ತುತ ಶಬ್ದ ದ್ರಾವಿಡ ಕುಟುಂಬದಲ್ಲಿ ಒಂದೆಂದು ಪರಿಗಣಿಸಬೇಕಾಗುತ್ತದೆ ಎಂದು ಪ್ರಸ್ತಾಪಿಸಿದ.[೪] ಬರ್ನೆಲ್‌ನ ಗ್ರಂಥದ ಹಸ್ತಪ್ರತಿ ತೆಗೆದವನು ಅನಾಹುತವನ್ನುಂಟುಮಾಡಿದುದು ಇಷ್ಟು ಮಾತ್ರವಲ್ಲ. ಸೂತ್ರದ 'ಅತರ್' ಎನ್ನುವುದರ ಅರ್ಥ ತಿಳಿಯದೆ ಆತ ಅದನ್ನು 'ನಡೈ' ಎಂದು ತಿದ್ದಿದ. 'ಮಾಲ್' ಎನ್ನುವುದನ್ನು ಬದಲಾಯಿಸಿ ಎಲ್ಲರಿಗೂ ಅರ್ಥವಾಗುವ 'ಅಳ್' ಎಂದು ತಿದ್ದಿದ. ಗ್ರಂಥಗಳ ಹಸ್ತಪ್ರತಿಮಾಡುವವರಿಂದ ಉಂಟಾಗುವ ಈ ತೆರನಾದ ತೊಂದರೆಗಳೆಲ್ಲವೂ ಸಂಶೋಧನೆಯ ವಿದ್ಯಾರ್ಥಿಗಳಿಗೂ ತಲೆ ಸುತ್ತು ಬರಿಸುವುದು ಸಾಮಾನ್ಯವಾದದ್ದೇ ಕುಮಾರಿಲನ ಶುದ್ಧಪಾಠ "ಯಥಾ ದ್ರವಿಡ ಭಾಷಾಯಾಂ" ಎಂದು ಶ್ರೀ ಅಯ್ಯಂಗಾರ್ ಸ್ಪಷ್ಟಪಡಿಸಿದ ಮೇಲೆ ಒಂದು ದೊಡ್ಡ ಅನಾಹುತ ಕೊನೆಗೊಂಡಿತು.

ಲೇಖಕ ಮತ್ತೆ ಕುಮಾರಿಲನ ತಮಿಳು ಪಾಂಡಿತ್ಯ ಆಳವಾದದ್ದಲ್ಲವೆಂದೂ ಯಾರಿಂದಲೋ ಕೇಳಿ ತಿಳಿದಿದ್ದಲ್ಲದೆ ಖಚಿತವಾದ ಜ್ಞಾನ ಆ ಭಾಷೆಯನ್ನು ಕುರಿತು ಆತನಿಗೇನೂ ಇರಲಿಲ್ಲವೆಂದೂ ಸ್ಥಾಪಿಸಿದ. ವ್ಯಂಜನಾಂತ ಪದಗಳನ್ನು ಸ್ವರಾಂತ ಪದಗಳನ್ನಾಗಿ ಮಾಡಿ ಪ್ರಯೋಗಿಸಿದ್ದು ಎಂದಲ್ಲವೇ ಕುಮಾರಿಲ ದೋಷಾರೋಪಣೆ ಮಾಡುವುದು? ಚೋರ್, ಅತರ್, ಪಾಪ್ (ಪಾಂಪ್, ವಯರ್). ಇವು ಯಾವೂ ವ್ಯಂಜನಾಂತ ಪದಗಳಾಗಿಲ್ಲ. ಅರ್ಧ ಉಕಾರವನ್ನು (ಸಂವೃತೋಕಾರವನ್ನು) ಸೇರಿಸಿ ಚೋರು, "ಅತರು", ಪಾಂಬು, "ವಯರು" ಎಂದು ಸ್ವರಾಂತಗಳಾಗಿ ತಮಿಳರು ಉಪಯೋಗಿಸುವುದು. ಕುಮಾರಿಲ ಕೊಟ್ಟಿರುವ ಅತರ್ ಎನ್ನುವುದರ ಸರಿಯಾದ ಉಚ್ಚಾರಣೆ 'ಅವರ್' ಎಂದು. ಅಷ್ಟೇ ಅಲ್ಲ. ಅತರ್ಕ್ಕೋಳ್ (ದಾರಿಯಲ್ಲಿ ಹೋಗುವವನನ್ನು ಅತಿಕ್ರಮಿಸುವುದು.) ಎನ್ನುವ ಒಂದೇ ಶಬ್ದದಲ್ಲಿ ಅದು ಕಾಣಿಸುತ್ತದೆ. ಪ್ರಸಿದ್ಧವಲ್ಲದ

---

೩. A. C. Barnell: Indian Art. 1872- P. 309.

೪. Linguistics Survey of India (U. P. 277).

ಯಾವುದೋ ಪ್ರಾದೇಶಿಕ ಪದವೂ ಆಗಿರಬೇಕು ಅದು.[೫] ಉದಾಹರಣೆಯನ್ನು ಕೊಡಲು ಸಾಧ್ಯವಾಗಲಿಲ್ಲ. 'ಮಾಲ್' ಎನ್ನುವುದನ್ನು ಕುರಿತು ಶ್ರೀ ಅಯಂಗಾರ್ ಒಂದು ಅಭಿಪ್ರಾಯವನ್ನು ಆವಿಷ್ಕರಿಸಿದರು. ಮಂಗಮ್ಮಾಳ್ ಸೀತಮ್ಮಾಳ್ ಮುಂತಾಗಿ ತಮಿಳರು ಉಚ್ಚರಿಸುವಾಗ ಅದರ ಕೊನೆಯ ಭಾಗ, 'ಅಮ್ಮಾಳ್' ಎಂದಾಗುವುದನ್ನು ಗ್ರಹಿಸದೆ 'ಮ್ಮಾಳ್'(=ಮಾತ್)ಎಂದೂ, ಅದು ಸ್ತ್ರೀವಾಚಕವಾದ ಒಂದು ಪದವೆಂದೂ ಕುಮಾರಿಲ ತಪ್ಪಾಗಿ ಗ್ರಹಿಸಿರಬಹುದೆಂದೂ ಇವೇ ಮುಂತಾಗಿ ಅವರ ವಾದ. ಅಷ್ಟೇ ಅಲ್ಲ ಕುಮಾರಿಲನ "ದ್ರವಿಡಾದಿ ಭಾಷಾಯಾಂ" ಎನ್ನುವ ಪ್ರಯೋಗದಲ್ಲಿ ಆದಿಯ ಅರ್ಥವೂ ಸ್ಪಷ್ಟವಲ್ಲ. ಕಾರಣ, ಉದ್ಧರಿಸುವುದೆಲ್ಲವೂ ತಮಿಳು ಪದಗಳೇ.

ಭಾಷಾ ಶಾಸ್ತ್ರಜ್ಞನ ಪ್ರವೇಶ

ತಮಿಳಿನಲ್ಲಿ ಚೋರ್, ವಯರ್, ಇಂತಹ ವ್ಯಂಜನಾಂತ ಪದಗಳಿಲ್ಲವೆಂದೂ ಅವು ಚೋರು, ವಯರು. ಮುಂತಾಗಿ ಸ್ವರಾಂತಗಳು ಎಂದಲ್ಲವೇ ಶ್ರೀ ಅಯ್ಯಂಗಾರ್ ವಾದಿಸಿದುದು ಅಷ್ಟೇ ಅಲ್ಲ, ಪದ ಮಧ್ಯ ಖರ (ಕಚಟತಪ)ಗಳಿಗೆ ಮೃದೂಚ್ಚಾರಣೆ (ಗಜಡದಬ)ಯುಂಟು, (ಅತರ್ = ಅದರ್) ಎಂದೂ ಆತ ಎತ್ತಿ ತೋರಿಸಿದ. ಅಂದರೆ ಯಾವ ಕಾಲದಲ್ಲಿ ತಮಿಳರು ಹೀಗೆಲ್ಲ ಆಗಿದ್ದರು ಎಂದು ಭಾವಿಸಲು ಮಾರ್ಗವಿಲ್ಲವೆಂದು ತಮಿಳಿನ ವರ್ಣಪ್ರತ್ಯಯಗಳ ಕಾರ್ಯದಲ್ಲಿ ಇಂಡೋಆರ್ಯನ್ ಭಾಷೆಗಳಾಗಿರುವ ವ್ಯತ್ಯಾಸಗಳಂತೆಯೇ ತಮಿಳಿನಲ್ಲೂ ಬಂದಿರಬಹುದೆಂದೂ ಕುಮಾರಿಲ ಕೇಳಿಸಿಕೊಂಡಿದ್ದ. ಹಾಗೆ ಅದನ್ನು ಉಲ್ಲೇಖಿಸಿದ ಎಂದು ಭಾವಿಸಲು ಹೆಚ್ಚು ಅವಕಾಶವಿದೆ ಎನ್ನುತ್ತಾ ಎದುರುವಾದದವರು ಹೊರಟರು. ಇದನ್ನು ಹೊರಗೆಡಹಿದ ಮನುಷ್ಯ ಪ್ರಸಿದ್ಧ ಭಾಷಾಶಾಸ್ತ್ರಜ್ಞನಾದ ಜೂಲ್ಸ್ ಬ್ಲಾಕ್[೬]

"ತಮಿಳಿನಲ್ಲಿ ಸ್ವರಮಧ್ಯಗಳಾದ ವ್ಯಂಜನಗಳು" ಎನ್ನುವ ಶೀರ್ಷಿಕೆಯಲ್ಲಿ ಆತ ಬರೆದ ಈ ಲೇಖನ ತುಂಬ ಗಮನಾರ್ಹವಾದುದು. ತಮಿಳು ಮಲಯಾಳಗಳಲ್ಲಿ ಕಟುಕು, ತಗರಂ ಎಂದು ಈಗ ಉಚ್ಚರಿಸಲಾಗುತ್ತಿದೆ. ಎರಡು ಸ್ವರಗಳ ಮಧ್ಯದಲ್ಲಿ ಖರ ಮೃದುವಾಗುತ್ತದೆ. ಹಿಂದೆಯೇ ಶ್ರೀ ಅಯ್ಯಂಗಾರ ಎತ್ತಿ ತೋರಿಸಿದಂತೆ ವ್ಯಂಜನಾಂತ ಪದಗಳಲ್ಲಿ ಸಂವೃತೋಕಾರವನ್ನು ಸೇರಿಸಿ ಉಚ್ಚರಿಸುವುದು. (ಚೋರು ವಯರು) ಈ ಧ್ವನಿವಿಜ್ಞಾನಿಯ ತತ್ವಗಳನ್ನು ಗ್ರಿಯರ್‌ಸನ್, ಸ್ಟೆನ್ ಕೋನೋವ್,[೭] ಬರ್ನೆಲ್[೮] ಮುಂತಾ

---

೫ ಅಷ್ಟೊಂದು ಪ್ರಸಿದ್ಧವಲ್ಲದ ಶಬ್ದ ಇದು ಎಂದು ತೋರುವುದಿಲ್ಲ. 'ಚೇರ್‌ಮಾನ್' ಪೆರುಮಾಳ್ ನಾಯನಾರ್ ತಿರುವಾರೂರ್ ಮುಮ್ಮಣಿ ಕೋವೈಯಿಲ್ (16.3) ಇದೆ. ತಿರುಕ್ಕುರುಳಿನಲ್ಲೂ ಕಾಣಿಸುತ್ತದೆ. (594)

೬. Jules Block. Indain Art. Vol. 48. (1919) (Tr. Anderson) P. P. 191-195.

೭. Linguistic Survey of India IV p. 287.

೮. South Indian Paleography P. 126. Note. 2.

ದವರೆಲ್ಲರೂ ಎತ್ತಿ ಪ್ರತಿಪಾದಿಸಿದ್ದಾರೆ. ಇದಕ್ಕೆ ಬ್ಲಾಕ್ ಬರೆದ ಉತ್ತರ ಇದು. "ಸ್ವರವೂ ಸೇರಿಕೊಂಡಂತೆ ವ್ಯಂಜನಾಂತ ಪದಗಳ ಪ್ರಯೋಗ ಇತ್ತೀಚಿನದಲ್ಲವೆಂದು ನಂಬಲು ಕಾರಣವಿಲ್ಲ ಎನ್ನುವುದು ನನ್ನ ವಾದ" ಎಂದು.

ಇದಲ್ಲದೆ ವ್ಯಾವಹಾರಿಕ ತಮಿಳಿನಲ್ಲಿ ಅಂತ್ಯಸ್ವರವನ್ನು ಸೇರಿಸುವುದಿಲ್ಲ. ಸಮಾಸ ಗಳಲ್ಲಿಯೂ ಪ್ರಥಮೇತರ ವಿಭಕ್ತಿಗಳಲ್ಲೂ ಅದಿಲ್ಲ. ಅಷ್ಟೇ ಅಲ್ಲ; ಈ ರೀತಿಯ ಬದಲಾವಣೆಗಳು ಪ್ರತಿಯೊಂದು ದ್ರಾವಿಡ ಭಾಷೆಯಲ್ಲೂ ವ್ಯತ್ಯಾಸಹೊಂದುವುದು ಕಾಣಿಸುತ್ತದೆ. ಉದಾಹರಣೆಗೆ ತಮಿಳಿನಲ್ಲಿ ನಪುಂಸಕ ಬಹುವಚನ ಪ್ರತ್ಯಯವಾದ 'ಕಳ್' ಕನ್ನಡದಲ್ಲಿ 'ಗಳು' (ವ್ಯಾವಹಾರಿಕ ಭಾಷೆಯಲ್ಲಿ 'ಗೊಳ್') ತುಳುವಿನಲ್ಲಿ 'ಕುಳು' ತೆಲುಗಿನಲ್ಲಿ 'ಲು' ಆಗುತ್ತವೆ. ಹಳೆಯ ತಮಿಳಿನಲ್ಲಿ 'ಇಲ' ಸಪ್ತಮೀ ವಿಭಕ್ತಿಯಲ್ಲಿ 'ಇಲಿ' ಆಗುತ್ತದೆ. ತೆಲುಗಿನಲ್ಲಿ ಇದು 'ಇಲ್ಲು'; ಕುಯಿ ಭಾಷೆಯಲ್ಲಿ 'ಇಡು' ಹೀಗೆ ವ್ಯತ್ಯಾಸ ವಾಗುತ್ತದೆ. ತಮಿಳಿನಲ್ಲಿ ತಣ್ಣೀರ್ (ಆಡುಭಾಷೆ ತಣ್ಣಿ) ತೆಲುಗಿನಲ್ಲಿ ನೀಳ್ಳು. ನೀರು ಈ ರೀತಿಯ ವ್ಯತ್ಯಾಸಗಳು ಹಲವು ರೀತಿಯಲ್ಲಿ ಅಂತ್ಯವ್ಯಂಜನಗಳಿಗೆ ಉಂಟಾಗುತ್ತವೆಂದು ಕಾಣುತ್ತದೆ. ತಮಿಳಿನಲ್ಲೂ ವ್ಯಂಜನಾಂತಗಳಾಗಿ ಮೊದಲೇ ಪದಗಳನ್ನು ಪ್ರಯೋಗಿಸಿ-ದ್ದಿರಬೇಕು. ಇಂದಿನ ಹಾಗೆ ಸಂವೃತ ಸ್ವರ (Close Vovels) ಉ ಸೇರಿಸಿ ಉಚ್ಚರಿಸ ಬೇಕೆಂದಿಲ್ಲ.

ಇದೇ ರೀತಿ ಬ್ಲಾಕ್‌ನ ವಾದದಲ್ಲಿರುವ ಪದಮಧ್ಯದಲ್ಲಿ 'ಖರ' ಮೃದುವಾಗುವುದನ್ನು ಕುರಿತು ಕಾಲ್ಡ್‌ವೆಲ್ ಆವಿಷ್ಕರಿಸುವ ಪ್ರಸಿದ್ಧ ನಿಯಮವನ್ನು ಪುನರ್ ವಿಮರ್ಶೆ ಮಾಡಬೇಕಾಗುತ್ತದೆ.[೯] ಈ ನಿಯಮವನ್ನು ಅನುಸರಿಸಿ ಕತಪಗಳು ಪದಾದಿಯಲ್ಲಿ ಇದ್ದರೂ ನಡುವಿನಲ್ಲಿ ದ್ವಿತ್ವವಾಗಿ ಬಂದರೂ ಧ್ವನಿವ್ಯತ್ಯಾಸವಿಲ್ಲ. 'ಕಡ' 'ಚಕ್ಕರ' ಇವು ಗಳಲ್ಲಿ ಕಕಾರದ ಉಚ್ಚಾರಣೆ ಒಂದೇ ರೀತಿಯಲ್ಲಿದೆ. ಇದಕ್ಕೆ ಪ್ರತಿಯಾಗಿ ಅವು ಎರಡು ಸ್ವರಗಳ ಮಧ್ಯದಲ್ಲೋ ಅನುನಾಸಿಕಗಳು ಸೇರಿಯೋ ಬಂದರೆ ಮೃದುತ್ವನಿಯುಂಟಾಗು ತ್ತದೆ. (ಕಡುಕ-ಕಡುಕ್ಕ, ಕುನ್ತಂ→ಕನ್ದಂ) ಇದರಂತೆಯೇ ಪದಾದಿಯಲ್ಲಿ ಚಕಾರವನ್ನು ಶಕಾರದ ಹಾಗೆ ಉಚ್ಚರಿಸಲಾಗುತ್ತದೆ. ಮಧ್ಯ ದ್ವಿತ್ವವಾದರೆ ಯಾವಾಗಲೂ ಚಕಾರ ಧ್ವನಿಯೇ ಬರುತ್ತದೆ.

ಚಕಾರ ಞಕಾರದ ನಂತರ ಬಂದಾಗ ಜಕಾರವಾಗುತ್ತದೆ. ಕುಞ್ಚು → ಕುಂಜು ಟ.ರ.ಗಳ ವಿಷಯವೂ ಹೀಗೆಯೇ. ಅವು ಪದಾದಿಯಲ್ಲಿ ಬರುವುದೇ ಇಲ್ಲ. ಪದಮಧ್ಯ ದಲ್ಲೂ ಪದಾಂತ್ಯದಲ್ಲೂ ಟ್ಟ: ಇಟ್ಟ. ಮುಂತಾಗಿ ಪ್ರಾರಂಭವಾಗಿ ಒಂಟಿಯಾಗಿ ನಡುವಿ ನಲ್ಲಿ ಬಂದರೆ ಡ.ರ. ಎಂದಾಗಿ ಉಚ್ಚಾರಣೆ. (ಕಟಕಂ→ಕಡಗಂ. ಕಱಿ-ಕರ) ಸಂಸ್ಕೃತದಲ್ಲಿ ಕಥ, ದಂತಂ. ಪಾಪಂ ಮೊದಲಾದ ಪದಗಳು ಕದೈ. ತನ್ದಂ ಪಾಬಂ. ಈ ರೀತಿಯಲ್ಲಿ

---

೯. Caldwell. Dravidian Comparative Grammar (Reprint) Madras 1956 P. P. 138 H.

ಉಚ್ಚರಿಸಲ್ಪಡುತ್ತದೆ. ಇತರ ದ್ರಾವಿಡ ಭಾಷೆಗಳಲ್ಲೂ ಈ ರೀತಿಯ ಧ್ವನಿ ವ್ಯತ್ಯಾಸಗಳು ಕಾಣಿಸುತ್ತವೆ. ಹಿಂದೆ ಹೇಳಿದ ಖರಗಳ ಮೃದೂಚ್ಚಾರಣೆ ಹಿಂದಿನಿಂದಲೂ ಇರುವ ಮೂಲ ತತ್ವ ಎಂದು ಕಾಲ್ಡ್‌ವೆಲ್‌ನ ವಾದ. 'ಫೇರ' ಎಂದರೆ ಅದರ್(ಅತರ್) ಪಾಂಬು ಎಂಬಿತ್ಯಾದಿ ಮೃದೂಚ್ಚಾರಣೆಯುಳ್ಳ ಸ್ವರೂಪಗಳು ತಮಿಳಿನಲ್ಲಿ ಅನಂತರ ಪ್ರಚಾರ ದಲ್ಲಿ ಬಂದವಾಗಿರಬೇಕು–ಎಂದು ಬ್ಲಾಕನ ವಾದ. 'ಅದರ್' ಎಂದೇ ಕುಮಾರಿಲ ಕೇಳಿ ದಿದ್ದರೆ ಸಂಸ್ಕೃತದಲ್ಲಿ 'ದ' ಕಾರಕ್ಕೆ ಲಿಪಿ ಇರುವ ಅವಸ್ಥೆಗೆ ತಪ್ಪು ಬರೆಯಲು ಸಾಧ್ಯವಿಲ್ಲ. ಪಾಂಬು. ಪಾಂಪು. ತೆಲುಗಿನಲ್ಲಿ ಪಾಮು ಎಂಬಿತ್ಯಾದಿಯಾಗಿ ಕಾಣಿಸುತ್ತದೆ. ತಮಿಳು ಸಂಧಿಯಲ್ಲಿ ಪಾಂಬುಕ್ಕೊಡಿ–ಪಾಪ್ಪುಕ್ಕೊಡಿಯಾಗುವುದೂ ಉಂಟು. ಉದಾ: ವೇಂಬು (ತ). ಬೇವು(ಕ), ವೇಮ (ತೆ). ವೇಪು (ಮ): ಕಾಂಬು (ತ). ಕಾವು (ಕ) ಇಟ್ಟಿ (ಮ.) ದೀರ್ಘಸ್ವರದ ನಂತರ ಅನುನಾಸಿಕವನ್ನು ಸೇರಿಸುವ ಕ್ರಮ ಇತ್ತೀಚೆಗೆ ಬಂದದ್ದು 'ಪಾಪ್' ಎಂದುದಾಗಿರಬೇಕು. ಕುಮಾರಿಲ ಕೇಳಿದ ಸ್ವರೂಪ (ತಂತ್ರವಾರ್ತಿಕದಲ್ಲಿ ಮೂಲ ದಲ್ಲಿ ಪಾಪ್ ಎಂದೇ ಅಲ್ಲವೇ ಕಂಡುಬರುವುದು?) ಪದಮಧ್ಯದಲ್ಲಿ ಖರಗಳು ತುಂಬ ಹಿಂದಿನಿಂದಲೂ ತಮಿಳಿನಲ್ಲಿ ಅದೇ ರೀತಿಯಲ್ಲಿ ಉಚ್ಚಾರಣೆಯುಲ್ಲಿದ್ದುವು ಎಂದು ಸಾಧಿ ಸಲು ಬ್ಲಾಕ್ ಬೇರೆ ಕಾರಣವನ್ನು ಕೊಟ್ಟಿದ್ದಾನೆ. ಎಲ್ಲಾ ಲಿಪಿಗಳಂತೆ ಅಲ್ಲದಿದ್ದರೂ ತಮಿಳು ಅಕ್ಷರಮಾಲೆ ಆರ್ಯಮಾತೃಕೆಯಿಂದ ಪ್ರಾರಂಭವಾದದ್ದು–ಎನ್ನುವುದು ಸ್ಪಷ್ಟ. ತಮಿಳಿನಲ್ಲಿ ಊಷ್ಮಾಕ್ಷರಗಳು (ಶ.ಷ.ಸ.ಹ) ಇಲ್ಲದ್ದರಿಂದ ಅತಿಖರಂ (ಖ.ಛ.ಠ.ಥ.ಫ ಘೋಷಂ(ಘ.ಝ.ಢ.ಧ.ಭ.) ಮುಂತಾದವುಗಳಿಗೆ ಅವರು ಪ್ರತ್ಯೇಕ ಲಿಪಿಯನ್ನು ಸೃಷ್ಟಿಸಿಲ್ಲ. ಅದೇ ರೀತಿ ಮೃದುಧ್ವನಿ ಸ್ವಾಭಾವಿಕವಾಗಿ ಇಲ್ಲದ್ದರಿಂದ ಅವಕ್ಕೆ ಲಿಪಿ ಯನ್ನು ಸೃಷ್ಟಿಸದೆ ಹೋಗಲಿಲ್ಲ. ಹಾಗಿದ್ದರೆ ಖರವನ್ನು ಮೃದುಗೊಳಿಸಿ ಉಚ್ಚರಿಸುವುದು ಇತ್ತೀಚೆಗೆ ಬಂದದ್ದಾಗಿರಲೇಬೇಕು. ಕುಮಾರಿಲನ 'ಅತರ್' ಒಂದು ಕಾಲದಲ್ಲಿ ಅದೇ ರೀತಿಯಲ್ಲಿ ಉಚ್ಚರಿಸಲಾಗುತ್ತಿದ್ದಿರಬೇಕೆಂದು ಭಾವಿಸಲು ಸಾಧ್ಯವಿದೆ.

ಬ್ಲಾಕನ ಲೇಖನದಲ್ಲಿ ಬಹುಮುಖ್ಯ ವಿಷಯ ಇದು. ಕ್ರಿ.ಶ. ಆರಂಭದಿಂದ ಭಾರತದ ಭಾಷೆಗಳ ಚರಿತ್ರೆಯನ್ನು ಪರಿಶೋಧಿಸಿದರೆ ದಕ್ಷಿಣೋತ್ತರದ ಎಲ್ಲ ಭಾಷೆಗಳಲ್ಲಿಯೂ ಸಾಮಾನ್ಯವಾಗಿ ಒಂದೇ ರೀತಿಯಲ್ಲಿರುವ ಧ್ವನಿವಿಜ್ಞಾನ ತತ್ವಗಳು ಪ್ರವರ್ತಿಸಿರುವು ದನ್ನು ಕಾಣಬಹುದು. ಇಂಡೋ ಆರ್ಯನ್ ಭಾಷೆಗಳಲ್ಲಿ ಆ ಕಾಲದಲ್ಲಿ ಪದಾಂತ್ಯದಲ್ಲಿ ಸ್ಪರ್ಶಾಕ್ಷರಗಳು ಲೋಪಹೊಂದುತ್ತಿದ್ದುವು. ಖರಗಳೋ ಮೃದುಗಳೋ ಆಗಿ ಪದಾದಿ ಯಲ್ಲಿ ಬರುವ ಅಕ್ಷರಗಳು ಬದಲಾವಣೆ ಹೊಂದದೆ ನಿಲ್ಲುತ್ತವೆ. ಒತ್ತಕ್ಷರಗಳುಳ್ಳ ಸ್ಥಾನದಲ್ಲಿ ಸ್ವರಮಧ್ಯದಲ್ಲಿ ದ್ವಿತ್ವಾಕ್ಷರಬರುತ್ತದೆ. ಉದಾ: ಪದ್ಯ-ಪದ್ದ. ವಿಕಲ್ಪಂಜನದ 'ನಾದಿ'ಯಾಗಿ ಪರಿಣಮಿಸುತ್ತವೆ. ಊಷ್ಮ (ಶ.ಷ.ಸ.ಹ) ಸಂಸರ್ಗವಿರುವ ವರ್ಣಗಳು ದಕ್ಷಿಣ ಭಾರತದ ಭಾಷಗಳಲ್ಲಿಲ್ಲ. ಇಂಡೋ ಆರ್ಯನ್ ಭಾಷೆಗಳಿಗೆ ಸಂಬಂಧಿಸಿದ ಭಾಷೆ ಗಳ ಧ್ವನಿಪರವಾದ ಹಳೆಯ ವ್ಯತ್ಯಾಸಗಳಲ್ಲಿ ಅದ್ಭುತ ರೀತಿಯ ಸಾದೃಶ್ಯವು ಕಂಡು

ಬರುತ್ತದೆ. ಅಷ್ಟೇ ಅಲ್ಲ, ಮಧ್ಯ ಇಂಡೋ ಆರ್ಯನ್ ಭಾಷೆಗಳಲ್ಲಿ ಸ್ವರ ಮಧ್ಯದಲ್ಲಿರುವ ಮೃದುಗಳು ಶ್ವಾಸಿಗಳಾಗಿ (ಕಚಟತಪ, ಖಛಠಥಫ, ಶಷಸ) ಬರುತ್ತವೆ. ಇಲ್ಲದಿದ್ದಲ್ಲಿ ಅದೃಶ್ಯವಾಗುತ್ತವೆ. ಹಿಂದಿನ ಸಂಯುಕ್ತ ವ್ಯಂಜನಗಳಿಗೆ ಬದಲಾಗಿ ಬರುವ ದ್ವಿತ್ವಾಕ್ಷರಗಳಿಗೆ ಇಂಡೋ ಆರ್ಯನ್ ಭಾಷೆಗಳಲ್ಲಿ ಲಘೂಕರಣ ಪ್ರಾಪ್ತವಾಗುತ್ತದೆ. ಇದೇ ರೀತಿಯಲ್ಲಿ ಇಂದಿನ ತಮಿಳು ಸ್ವರ ಮಧ್ಯದ (ನಾದಿಗಳು, ಶ್ವಾಸಿಗಳಾಗಿ) ಪರಿಣಮಿಸುವುದಕ್ಕೂ ದ್ವಿತ್ವಾಕ್ಷರಗಳು ಏಕವಾಗುವುದಕ್ಕೂ ಇರುವ ಬಗೆಯನ್ನು ಪ್ರದರ್ಶಿಸುತ್ತವೆ. ಅನುನಾಸಿಕಗಳಿಗೆ ಪರವಾದ ಖರಗಳು ಮೃದುವಾಗುವ ದ್ರಾವಿಡದ ಸಂಪ್ರದಾಯ ಎಷ್ಟೋ ಶತಕಗಳ ನಂತರ ವಾಯುವ್ಯ ಭಾಗದಲ್ಲಿ ಇಂಡೋ ಆರ್ಯನ್ ಭಾಷೆಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಆರ್ಯನ್ ವರ್ಗದಲ್ಲೂ ದ್ರಾವಿಡ ವರ್ಗದಲ್ಲೂ ಇರುವ ಭಾಷೆಗಳಿಗೆ ಮಧ್ಯ ಕಾಲದಲ್ಲೂ ಆಧುನಿಕ ಕಾಲದಲ್ಲೂ ಧ್ವನಿಪರವಾದ ಬದಲಾವಣೆಗಳು ಸಮಾನ ರೀತಿಯಲ್ಲಿ ಕಾಣಿಸುತ್ತಿವೆಯಾದರೂ ಅತ್ಯಂತ ಹಿಂದಿನ ಕಾಲದಲ್ಲೂ ಈ ರೀತಿಯ ಸಂಬಂಧಗಳು ಉಂಟಾಗಿರುತ್ತಿದ್ದುವು—ಎಂದು ಊಹಿಸಬಹುದು. ದ್ರಾವಿಡ ಭಾಷೆಗಳಲ್ಲಿ ತುಂಬ ಹಳೆಯ ಆಧಾರ (ಗ್ರಂಥ)ಗಳು ನಮಗೆ ದೊರೆಯುವುದು ತುಂಬ ತಡವಾಗಿ ತಾನೇ? ಸಂಸ್ಕೃತದಲ್ಲೂ ಗ್ರಂಥಗಳು ನಮಗೆ ತಡವಾಗಿಯೇ ದೊರೆತದ್ದು ಎಂದಿಟ್ಟುಕೊಳ್ಳಬೇಕು. ಆಗ ಪ್ರಾಕೃತದಲ್ಲಿ ಬಂದ ಬದಲಾವಣೆಗಳ ಚರಿತ್ರೆ ನಮಗಿನ್ನೂ ತೀರ ಅಜ್ಞಾತವಾಗಿತ್ತು. ಸಂಸ್ಕೃತ, ಪ್ರಾಕೃತ, ಅಪಭ್ರಂಶಗಳಲ್ಲೂ ಇಂದಿನ ಇಂಡೋ ಆರ್ಯನ್ ಭಾಷೆಗಳಾಗಿ ಹೋದ ಚರಿತ್ರೆಯನ್ನು ನಮಗಿಂದು ಸ್ಪಷ್ಟವಾಗಿ ತಿಳಿಯಲು ಆಧಾರಗಳಿವೆ. ದ್ರಾವಿಡ ಭಾಷೆಗಳಲ್ಲಿ ಇದಿಲ್ಲ. ಸಂಘ ಸಾಹಿತ್ಯ ಕಾಲಕ್ಕೂ ಮೊದಲಿನ ತಮಿಳು ಸ್ವರೂಪ, ನಮಗೆ ಸರಿಯಾಗಿ ತಿಳಿದಿಲ್ಲ. ಗ್ರಂಥಸ್ಥವಾಗಿಲ್ಲದಿದ್ದರೂ ಇಂಡೋ ಆರ್ಯನ್ ಭಾಷೆಗಳು ಒಂದು ಕಾಲದಲ್ಲಿ ಒಂದೇ ಸಮೂಹವಾಗಿದ್ದುವು. ಕ್ರಮೇಣ ವ್ಯತ್ಯಾಸಗಳುಂಟಾದವೆಂದು ಊಹಿಸುವುದಕ್ಕೂ ನಮಗೆ ಸಾಧ್ಯವಾಗಿರಲಿಲ್ಲ. ಉದಾಹರಣೆಯಾಗಿ 'ಮೂರು 'ಎನ್ನುವ ಅರ್ಥವುಳ್ಳ ಹಿಂದಿಯ 'ತೀನ್', ಸಿಂಹಳಿಯ 'ತೂನ್' ಶಬ್ದಗಳು ಪ್ರಾಕೃತದ 'ತಿಣ್ಣೀ' ಎನ್ನುವುದರಿಂದ ಬಂದುವು. 'ತ್ರಿ' ಶಬ್ದದ ರೂಪಾಂತರ ಎಂದು ನಾವು ಭಾವಿಸುವುದು ಸಂಸ್ಕೃತ ನಮಗೆ ಗೊತ್ತಿರುವುದರಿಂದ. ಅಲ್ಲದಿದ್ದಲ್ಲಿ ಒತ್ತಕ್ಷರವಿಲ್ಲದ ಇಂದಿನ ರೂಪ (ತೀನ್) ಆದಿ ರೂಪವಾಗಿತ್ತೆಂದು ನಾವು ಭಾವಿಸುವುದಿಲ್ಲವೇ? ಹಾಗೆ ಭಾವಿಸುವುದಕ್ಕೆ ಯಾವ ಕಾರಣವೂ ಇಲ್ಲ. ಅದೇ ರೀತಿ 'ಇಲ' 'ಎಲೆ' ಎನ್ನುವ ಅರ್ಥಕೊಡುವ 'ಪತ್ರ' ಶಬ್ದ ಪ್ರಾಕೃತದಲ್ಲಿ ಪತ್ತ. ಮರಾಠಿ ಬಂಗಾಳಿಯಲ್ಲಿ 'ಪಾತ್' ಸಿಂಹಳಿಯಲ್ಲಿ 'ಪದ್'—ಹೀಗೆ ಎಲ್ಲವೂ ಬದಲಾವಣೆ ಹೊಂದುತ್ತವೆ. ಪಾಳಿ ಭಾಷೆಯಲ್ಲಿ 'ದೋಣಿ' ಮರಾಠಿ—ಬಂಗಾಳಿ ಭಾಷೆಗಳಲ್ಲಿ 'ದುನಿ' ಸಿಂಹಳಿಯಲ್ಲಿ 'ದೊಣೆ'—ಇತ್ಯಾದಿಯಾಗಿ ಬದಲಾವಣೆ ಹೊಂದಿ ಬಂದ 'ತೋಣಿ'

'ದೋಣಿ'ಯ ಮೂಲ ಸ್ಥಾನ ಸಂಸ್ಕೃತದ 'ದ್ರೋಣಿ' ಎಂದು ನಮಗೆ ತಿಳಿದು ಬರುತ್ತದೆ. ಮಞ್ಞಳ್ (ಹಳದಿ) ಎನ್ನುವ ಅರ್ಥದಲ್ಲಿರುವ ಹಿಂದಿಯ 'ಹಲ್‌ದಿ' ಮರಾಠಿ ಗುಜರಾಥಿಯಲ್ಲಿರುವ 'ಹಲ್‌ದ' ಎಂಬುವು ಪ್ರಾಕೃತದ 'ಹಲಿದಾ' 'ಹಲ್‌ದಾ'ದಿಂದ ಬಂದ ಶಬ್ದಗಳು. ಅದಕ್ಕಿಂತಲೂ ಪೂರ್ವರೂಪ ಸಂಸ್ಕೃತದ 'ಹರಿದ್ರ' ಎಂದು ತಿಳಿಯದೆ ಇದ್ದಿದ್ದರೆ 'ದ್ರ' ಒಂದು ಕಾಲದಲ್ಲಿ ಇಂಡೋ ಆರ್ಯನ್ ಭಾಷೆಗಳಲ್ಲಿ ಇಂದಿಗೂ ನಮಗೆ ದೊರೆಯುವುವು ಮೂಲ ರೂಪಗಳಲ್ಲಿ. ಉತ್ತರ ಇಂಡಿಯದಲ್ಲಿ ಇತ್ತೀಚಿನ ಇಂಡೋ ಆರ್ಯನ್ ಭಾಷೆಗಳಂತೆಯೇ ಬದಲಾವಣೆ ಹೊಂದಿದ ರೂಪಗಳು ಎಂದು ಬ್ಲಾಕನ ವಾದ. ಇದು ತುಂಬ ಗಮನಾರ್ಹವಾದ ಒಂದು ಊಹೆಯೂ ಆಗಿದೆ. ತಮಿಳಿನಲ್ಲಿಯೂ ಸಂಧಿಯಲ್ಲಿ ಸವರ್ಣಗಳು ಬಂದಾಗ ಧ್ವನಿವಿಷಯಕವಾದ ಬದಲಾವಣೆಗಳುಂಟಾಗುತ್ತವೆ ಎಂದು ಆತ ಎತ್ತಿತೋರಿಸಿದ್ದಾನೆ.

ತ್ + ಕ→ತ್ಕ; ಟ್ + ಡ→ಡ್ಡ ಇತ್ಯಾದಿ. ಈ ತರನಾದ ಬದಲಾವಣೆಗಳು ವ್ಯಾಕರಣಕ್ಕೂ ಸಂಬಂಧಿಸುತ್ತವೆ ಎನ್ನುವುದು ಸ್ಪಷ್ಟ. ಆರ್ + ತು→ಅಟ್ಟು; ಚೆಲ್ + ತು →ಚೆಸು; ಡ್ಕ + ತು ಕಟ್ಟು: ಇತ್ಯಾದಿ. ಇವುಗಳಲ್ಲೆಲ್ಲ 'ತು' ಎನ್ನುವ ಪ್ರತ್ಯಯ
ಜ
ಅಡಗಿದೆ ಎಂದು ಭಾಷಾಶಾಸ್ತ್ರಜ್ಞ ಹೇಳಿದಾಗ ಮಾತ್ರ ಇದು ತಿಳಿಯುತ್ತದೆ.

ತಮಿಳ್ ಎನ್ನುವ ಪದವೇ ಇಷ್ಟು ಪರಿಣಾಮಗಳಿಗೊಳಪಟ್ಟಿದೆ ಎಂದು ಬ್ಲಾಕನ ಅಭಿಪ್ರಾಯ. ತಮಿಳ್ ಶಬ್ದ ದ್ರವಿಡವಾಗಿ ರೂಪಾಂತರ ಹೊಂದಿತು ಎಂದು ಸಾಧಾರಣವಾಗಿ ಹೇಳುವುದು. ಅಂದರೆ ತಕಾರಕ್ಕೆ ಪ್ರತ್ಯೇಕ ಲಿಪಿಯೂ ಧ್ವನಿಯೂ ಇರುವ ಇಂಡೋ ಆರ್ಯನ್ ಭಾಷೆಗೆ ಹಾಗೆ ವ್ಯತ್ಯಾಸವನ್ನುಂಟುಮಾಡಬೇಕಾದ ಅಗತ್ಯವಿಲ್ಲ ವೆನ್ನುವುದು ಸ್ಪಷ್ಟ. ತಕಾರವನ್ನು ದಕಾರ ಮಾಡಿದರೂ 'ದ್ರ' ಮಾಡಬೇಕಾದ ಯಾವ ಕಾರಣವೂ ಇಲ್ಲ. ಅದರ ಬದಲು ಪ್ರಾಕೃತಾದಿಗಳಲ್ಲಿ ಮೊದಲು ಎತ್ತಿ ತೋರಿಸಿದ ಬದಲಾವಣೆಗಳನ್ನು ನೋಡಿದಾಗ ದ್ರ–ದಕಾರವಾಗಿರುವ ಸಂಭವವೇ ಹೆಚ್ಚು. ದ್ರಮಿಡ ಶಬ್ದ ಅಥರ್ವವೇದದ ಪರಿಶಿಷ್ಟದಲ್ಲೂ ಮನುಸ್ಮೃತಿಯಲ್ಲೂ ಮಹಾಭಾರತದಲ್ಲೂ ಇನ್ನೂ ಕೆಲವೆಡೆಗಳಲ್ಲೂ ಬರುವುದುಂಟು. ಅಷ್ಟೇ ಅಲ್ಲ: ಅನಂತರದಲ್ಲಿ ಜೈನ ಪ್ರಾಕೃತಗಳಲ್ಲಿ ದಮಿಳ ಎಂದು ಕಾಣಿಸುತ್ತದೆ. ಅಲ್ಲದೆ ಪಾಶ್ಚಾತ್ಯ ಸಾಹಿತ್ಯದಿಂದ ಕ್ರಿ.ಶ.ದ ಆದಿಯಲ್ಲಿ ದ್ರಮಿಡ ಶಬ್ದವೇ ಪ್ರಚಾರದಲ್ಲಿದ್ದದ್ದು ಎಂದು ಕಂಡುಬರುತ್ತದೆ. ಪ್ಯೂಟಿಂಜಲ್ಸ್ ಟೇಬಲಿನಲ್ಲಿ (A.D 225) ದಮಿರಿಕೆ ಎಂದೂ ಪೆರಿಪ್ಲಸ್‌ನಲ್ಲೂ (A.D. 80 96) ಟಾಲಮಿಯಲ್ಲೂ (A.D. 150) ದಿಮಿರಿಕೆ ಎಂದೂ ಕಾಣಿಸುತ್ತದೆ. (ಕೊನೆಯಲ್ಲಿ ಹೇಳಿದ ದಿಮಿರಿಕೆ ಎನ್ನುವುದು ಅಕ್ಷರದ ತಪ್ಪಾಗಿರಬಹುದು.) ಕಾಸ್ಮಸ್ ಇಣ್ಡಿಕೋಪ್ಲಸ್ಟಸ್ (A.D. 600) ಬರೆಯುವುದು 'ದಿಮಿರಿಕೆ' ಎಂದು ಮಹಾವಂಶದಲ್ಲಿ 'ದಾಮಿಲೋ' ಎನ್ನುವ ರೂಪ ಕಾಣುತ್ತದೆ. ಕಾಲ್ಡ್‌ವೆಲ್ ಊಹಿಸುವುದು 'ದ್ರ'

'ದ' ಆಗುವುದು ಪ್ರಾಕೃತದ ಸ್ವಭಾವ ಎಂದು. 'ದ್ರಮಿಡ' ರೂಪ ಉತ್ತರ ಭಾರತದ ವರಿಗೆ ಸಿಕ್ಕಿದ ಕಾಲದಲ್ಲಿ ತಮಿಳಿನಲ್ಲೂ 'ದ್ರ' ಇದ್ದಿರಬೇಕು. ಯೂರೋಪಿಯನ್ನರಿಗೆ ಸಿಕ್ಕಿದ ಕಾಲದಲ್ಲಿ ಅದು 'ದ' ಕಾರ ಘಟಿತವಾಗಿ ಬದಲಾವಣೆ ಹೊಂದಿರಬೇಕು. ಬೇರೆ ದೇಶದವರು ಸ್ಥಳದ ಹೆಸರು ಮುಂತಾದವುಗಳನ್ನು ಕೇಳಿದ ಹಾಗೆಯೇ ಬರೆಯು ವುದು ರೂಢಿ. ಮೃದು ಅಕ್ಷರಗಳೂ ಒತ್ತಕ್ಷರಗಳೂ ಇಂದು ತಮಿಳಿನಲ್ಲಿ ಕಾಣುವುದಿಲ್ಲ ವೆಂದು ತಿಳಿದು ಹಿಂದೆಂದೂ ಇರಲಿಲ್ಲವೆಂದು ವಾದಿಸುವುದು ಶಾಸ್ತ್ರೀಯವಲ್ಲ.

ಕುಮಾರಿಲನ 'ಅತರ್' ಪ್ರಯೋಗವನ್ನು ಕುರಿತು ಈ ಮೊದಲು ಹೇಳಲಾಗಿದೆ ಯಷ್ಟೇ. ಪದಮಧ್ಯದಲ್ಲಿ ಖರಗಳಿಗೆ ಮೃದುತ್ವ ಉಂಟಾಗುವುದು ಕನ್ನಡದಲ್ಲಿಯೂ ಮತ್ತಿತರ ದ್ರಾವಿಡ ಭಾಷೆಗಳಲ್ಲಿಯೂ ಉಂಟು. ಮೇಲೆ ಹೇಳಿದ ರೀತಿಯಲ್ಲಿ ಪೂರ್ವ ಕಾಲದಲ್ಲಿ ತಮಿಳಿನಲ್ಲಿ ಮೃದು ಅಕ್ಷರಗಳು ಇದ್ದಿರಬೇಕು ಎಂದೂ ಕ್ರಿ.ಶ.ದ ಆರಂಭಕ್ಕೂ ಕುಮಾರಿಲನ ಕಾಲಕ್ಕೂ ಮಧ್ಯೆ ಅವುಗಳ ನಾದ ಸ್ವಭಾವ ನಷ್ಟಹೊಂದಿ ಖರದ ಉಚ್ಚಾ ರಣೆ ಬಂದಿರಬೇಕು–ಎಂದು ಊಹಿಸಬೇಕಾಗಿದೆ. ಆ ಮೂಲಕ ಕುಮಾರಿಲ ಕೇಳಿದ್ದ ರಲ್ಲಿ ತಪ್ಪಿಲ್ಲ. ಅಂದರೆ ಇಂದಿನ ಹಾಗೆ ಖರ ಮಧ್ಯಮಗಳ ಉಚ್ಚಾರಣೆ ಮೃದು ವಾಗಿರಲೇಬೇಕು ಎಂದೂ ತಮಿಳಿನಲ್ಲಿ ಬಂದು ಸೇರಿತು ಎಂದೂ ಹೇಳಲು ಸಾಧ್ಯವಿಲ್ಲ. ಅದು ಎಷ್ಟೋ ತಡವಾಗಿ ಆಗಿರಬೇಕು–ಎಂದು ಬ್ಲಾಕನ ವಾದ. ನನ್ನೂಲಿನ (ಕ್ರಿ.ಶ. ೧೨೦೦) ಸಂಸ್ಕೃತಾಕ್ಷರಗಳು ತಮಿಳಿನಲ್ಲಿ ಮಾರ್ಪಾಟು ಹೊಂದುವಾಗ ಆಯಾ ವರ್ಗದ ಪ್ರಥಮಾಕ್ಷರ ಆ ವರ್ಗದ ಎಲ್ಲ ಅಕ್ಷರಗಳಿಗೂ ಬದಲಾಗಿ ಬರುವುದುಂಟೆಂದು ಹೇಳು ವುದಿದೆ. (III–20) ಅಂದರೆ ಪದಮಧ್ಯದಲ್ಲಿ ಖರಕ್ಕೆ ಮೃದುತ್ವ ಬರುವುದನ್ನು ಕುರಿತು ಏನನ್ನೂ ಹೇಳುವುದಿಲ್ಲ. ಒತ್ತಕ್ಷರಗಳನ್ನು ಕುರಿತು (III-55) ಪ್ರತ್ಯೇಕವಾಗಿ ಹೇಳು ವುದಿದ್ದರೂ ಸ್ಥಾನವನ್ನನುಸರಿಸಿದ ಉಚ್ಚಾರಣೆಯನ್ನು ಕುರಿತು ಅದು ಏನನ್ನೂ ಹೇಳುವ ದಿಲ್ಲ. ಸಂಧಿಯಾಗುವಾಗ ಪರಪದದ ಮೊದಲಕ್ಷರಕ್ಕೆ ಬರುವ ದ್ವಿತ್ವವನ್ನು ಕುರಿತ ನಿಯಮಗಳೂ ಇದರ ಮೇಲೆ ಬೆಳಕು ಚೆಲ್ಲುವುದಿಲ್ಲ. ಪದದ ಆದಿವ್ಯಂಜನಗಳಲ್ಲಿ ಒತ್ತಿ ಉಚ್ಚರಿಸುವಾಗ ಖರೋಚ್ಚಾರಣೆ ಸ್ವಾಭಾವಿಕವಾಗಿ ಬಂದು ಸೇರುವ ಸಾಧ್ಯತೆಯುಂಟು. 'ದ' ಕಾರ ಹೀಗೆ 'ತ' ಕಾರವಾಗಬಹುದು. (ದ್ರಮಿಳಂ=ತಮಿಳ್) ಪದಮಧ್ಯದ ಖರಗಳಿಗೆ ತಮಿಳಿನಲ್ಲಿ ಮೃದೂಚ್ಚಾರಣೆಯುಂಟಾದದ್ದು ನನ್ನೂಲ್‌ಕಾಲದ ನಂತರ ವಾಗಿರಬೇಕು. ಇವೇ ಮೊದಲಾದ ಅಭಿಪ್ರಾಯಕ್ಕೆ ಬ್ಲಾಕ್ ಬಂದು ನಿಲ್ಲುವುದು.

ಆತನ ವಿಶ್ಲೇಷಣೆಗಳೆಲ್ಲವೂ ಸಾಧುವೇ ಎನ್ನುವ ಸಂಶಯವುಂಟಾಗುತ್ತದೆ. ಬರ ವಣಿಗೆಯೂ. ಉಚ್ಚಾರಣೆಯೂ ಪರಸ್ಪರ ಹೊಂದಾಣಿಕೆಯಿಲ್ಲದಿರುವುದು ಯಾವುದೇ ಭಾಷೆಯಲ್ಲೂ ಎಣಿಕೆಗೆ ಮೀರಿದಷ್ಟಿರುತ್ತವೆ. ತಮಿಳರು ಈಗ 'ಚಿಲಪ್ಪದಿ' ಕಾರಂ ಎಂದು ಬರೆದು 'ಶಿಲಪ್ಪದಿಕಾರಂ' ಎಂದು ಉಚ್ಚರಿಸುತ್ತಾರೆ. ನಮ್ಮ ನಾಡಿನ ವೈಯಾ

ಕರಣಿಗಳು ಸಾಧುರೂಪಗಳನ್ನು ಮಾತ್ರ ಪ್ರದರ್ಶಿಸುತ್ತಾರಲ್ಲದೆ ಪದದ ಧ್ವನಿಪರವಾದ ವಿಕೃತರೂಪಗಳನ್ನು ಪರಿಗಣಿಸಿರಲಿಲ್ಲ. ಈಗಲೂ ಭಾಷಾಶಾಸ್ತ್ರಜ್ಞರಲ್ಲದೆ ಇತರರಾರೂ ಸೂಕ್ಷ್ಮ ಧ್ವನಿಗಳನ್ನು ಗುರುತಿಸಲು ಪ್ರಯತ್ನಿಸುತ್ತಿಲ್ಲ. 'ಅಪಾ' 'ಚೆಂಬ' ಎಂದೆಲ್ಲಾ ಬರೆದು ಆಡು ಚೆಂಬು ಎಂದು ನಮ್ಮ ಹಿರಿಯರು ತಪ್ಪಿಲ್ಲದಂತೆ ಓದುತ್ತಿದ್ದರಲ್ಲವೆ? ಪದಮಧ್ಯದ ಖರದ ಮೃದೂಚ್ಚಾರಣೆಗೆ ಸಂಬಂಧಿಸಿದ ಅಭಿಪ್ರಾಯಗಳಿಗೂ ಇದೇ ರೀತಿಯಲ್ಲಿ ಹೆಚ್ಚಿನ ಬೆಲೆಯನ್ನೇನೂ ಕಲ್ಪಿಸಬೇಕಾಗಿಲ್ಲವೆಂದು ತೋರುತ್ತದೆ. ಕಾಲ್ಡ್‌ವೆಲ್ಲನ ಸಿದ್ಧಾಂತವನ್ನು ಈಗಿನ ಭಾಷಾ ಶಾಸ್ತ್ರಜ್ಞರು ಅಂಧರಂತೆ ಸ್ವೀಕರಿಸಲು ಸಿದ್ಧರಾಗಿಲ್ಲವೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಅಂದರೆ ತಮಿಳಿನಲ್ಲಿದ್ದುದು ದಕಾರ. ಆದರೆ ದ್ರಕಾರವೂ ಒಂದು ಕಾಲದಲ್ಲಿ ಹೆಚ್ಚು ಉಪಯೋಗದಲ್ಲಿತ್ತು ಎಂದು ಊಹಿಸುವುದರಲ್ಲಿ ತಪ್ಪಿಲ್ಲವೆನ್ನುವ ವಾದ ಗಮನಾರ್ಹವಾದದ್ದು. ತಮಿಳು ದ್ರಾವಿಡದ ಆದಿರೂಪವನ್ನು ಸರಿಯಾಗಿ ಪಡೆದಿರಲೇಬೇಕೆಂದಿಲ್ಲ. ಈ ವಿಷಯದಲ್ಲಿ ಪ್ರಾಕೃತಗಳು ನೀಡುವ ಜ್ಞಾನ ಪುಷ್ಟಿಯುತವಾದದ್ದು. ಚೇರದ ರೂಪಾಂತರವೇ ಕೇರಳ ಎನ್ನುವುದರ ಬದಲು ತೀರ ವಿರುದ್ಧವಾಗಿ ಅದರ ಪ್ರಕ್ರಿಯೆ ನಡೆದಿರಬೇಕು ಎನ್ನುವ ವಾದ ಇದರ ಬೆಳಕಿನಲ್ಲಿ ಹೆಚ್ಚು ಯುಕ್ತವೆನ್ನಿಸುತ್ತದೆ. ಯವನ ಉಲ್ಲೇಖಗಳಲ್ಲಿ 'ಕೇರಬೋತ್ರೋಸ್' ಎಂದಲ್ಲವೇ ಕೇರಳೀಯ ರಾಜನನ್ನು ಕರೆದಿರುವುದು? ಯಾವ ಆರ್ಯನ್ ಗ್ರಂಥಗಳಲ್ಲೂ ಚೇರವೋ ಚೇರಳವೋ ಕಾಣಿಸುವುದಿಲ್ಲ. ಕಾಣಿಸುವುದು 'ಕೇರಳ' ಎಂದು ಮಾತ್ರ. ಆರ್ಯವರ್ಗದವರು ಹಿಂದೆ ಹೇಳಿದ ರೂಪಗಳಲ್ಲಿ ಪದವನ್ನು ಉಚ್ಚರಿಸುತ್ತಿದ್ದುದನ್ನು ಕೇಳಿದ್ದೇ ಆಗಿದ್ದಿದ್ದರೆ ಹಾಗೆಯೇ ಉಲ್ಲೇಖಿಸುತ್ತಿದ್ದರು ಎಂದು ಊಹಿಸಬೇಕು. ಸಂಸ್ಕೃತಾ–ಕ್ಷರಮಾಲೆಯಲ್ಲಿ ಚಕಾರವುಂಟು ತಾನೇ? ಕಕಾರ ಘಟಿತವೂ ಚಕಾರ ಘಟಿತವೂ ಆದ ಒಂದು ಪದವನ್ನು ಕಂಡಾಗ ಮೊದಲಿನ ರೂಪವೇ ಪ್ರಾಚೀನ ಎಂದು ಕಲ್ಪಿಸಬೇಕು ಎಂದು ಭಾಷಾಶಾಸ್ತ್ರ ಹೇಳುವುದು. ತಾಲವ್ಯಾದೇಶ ಎನ್ನುವ ಪ್ರಸಿದ್ಧ ನಿಯಮವನ್ನನುಸರಿಸಿಯೇ ಇದು ನಡೆಯುವುದು. ತಮಿಳಿನ ಚಕಾರದಿಂದ ಪ್ರಾರಂಭವಾಗುವ ಪದಗಳು ಕನ್ನಡ ಮತ್ತಿತರ ಭಾಷೆಗಳಲ್ಲಿ ಕಕಾರದಿಂದ ಪ್ರಾರಂಭವಾಗುತ್ತವೆ. ಅಷ್ಟೇ ಅಲ್ಲ ಪ್ರಾಕೃತದಲ್ಲಿಯೂ ಮತ್ತಿತರ ಭಾಷೆಗಳಲ್ಲೂ ದೊರೆಯುವ ಪ್ರಕ್ರಿಯೆಯನ್ನು ನೋಡುವಾಗ ಕೇರಳ ಎನ್ನುವ ಪದದ ಅಂತ್ಯವರ್ಣ ಲೋಪವಾಗುತ್ತದೆ. ಅನಂತರ ಚೇರಂ. ಚೇರಲ್ ಇತ್ಯಾದಿಯಾಗಿ ಬದಲಾವಣೆ ಹೊಂದಿರಬೇಕು ಎಂದು ಭಾವಿಸುವುದು ಹೆಚ್ಚು ಸಮಂಜಸವಾದೀತೆನ್ನಬಹುದು. ಪ್ರಾಕೃತದ ಪ್ರಭಾವ ತಮಿಳಿನಲ್ಲಿ ಧಾರಾಳವಾಗಿ ಇದೆಯೆಂದು ನಿಷ್ಪಕ್ಷಪಾತಿಗಳಾದ ಪಂಡಿತರು ಸಮ್ಮತಿಸುತ್ತಾರೆ. ದಿನ ತಿಂಗಳು ಮೊದಲಾದುವುಗಳ ಹೆಸರುಗಳು ಪ್ರಾಕೃತದ ಮಾರ್ಗವಾಗಿ ಬಂದುವೆನ್ನುವುದು ಸ್ಪಷ್ಟ. ಆ ಪದಗಳ ಪ್ರಕ್ರಿಯೆಯು ಎರವಲು ಅತಿ ಪ್ರಾಚೀನ ಕಾಲದಲ್ಲಿ ನಡೆದದ್ದೆಂದು ಸೂಚಿಸುತ್ತದೆ. 'ಪೂರ್ವ ಭಾದ್ರಾದಿ' 'ಪುರುರುಟ್ಟಾದಿ'ಯಾಗಿ. 'ಆಷಾಢ' 'ಆಟಿ'ಯಾಗಿರುವುದನ್ನು ನೋಡಿ ಇಂದು ಇಷ್ಟೊಂದು ರೂಪಾಂತರ ಹೊಂದಿದ ಪದಗಳು ಎರವ

ಲಾಗಿ ಬಂದುವಲ್ಲ ಎನ್ನುವುದೂ ನಿರ್ವಿವಾದ. ಸಂಸ್ಕೃತ ಪದಗಳು ನಮಗೆ ತಿಳಿಯದೇ ಇದ್ದಿದ್ದಲ್ಲಿ ಇವುಗಳ ವ್ಯುತ್ಪತ್ತಿಯನ್ನೇ ಊಹಿಸಲು ನಮಗೆ ಸಾಧ್ಯವಾಗುತ್ತಿರಲಿಲ್ಲ. 'ಸಹಸ್ರಂ' ಆಯಿರ (ಸಾವಿರ)ವಾಗುವುದು ಆಶ್ಚರ್ಯವಲ್ಲವೇ? ಇದರಲ್ಲಿ ನಮ್ಮ ಕಣ್ಣಿಗೆಟುಕದ ಕಾಲದಲ್ಲಿಯೇ ಆರ್ಯ ಭಾಷೆಗಳಿಗೂ ತಮಿಳಿಗೂ ಪರಸ್ಪರ ಕೊಡು ಕೊಳುವಿಕೆ ನಡೆದಿತ್ತೆಂದು ತಿಳಿದುಬರುತ್ತದೆ. ತಮಿಳಿನಲ್ಲಿ ಕಾಣುವ ಧ್ವನಿ ಮತ್ತು ಇನ್ನಿತರ ಕಡೆಗಳಲ್ಲಿ ಅಡಗಿರುವುದನ್ನು ನಮಗೆ ತಿಳಿಯಲು ಆಧಾರಗಳಿಲ್ಲವೆಂದು ಹೇಳ ಬೇಕಾಗಿದೆ. ಒಂದು ಚರಿತ್ರೆ ಇಲ್ಲದಿರಲು ಸಾಧ್ಯವಿಲ್ಲ. ತಮಿಳಿನಲ್ಲಿ ಪಾಂಬು ಇತ್ಯಾದಿ ಶಬ್ದಗಳು ಸಂಘಸಾಹಿತ್ಯದ ಕಾಲದಲ್ಲಿದ್ದುವೆ ಎನ್ನುವ ಆಧಾರದಿಂದ ಅವೇ ಆದಿಯ ರೂಪವೆಂದು ಹೇಳಲಾಗುವುದಿಲ್ಲ.

ಹೀಗೆ ನಾವು ಲೀಲಾತಿಲಕದ 'ಚೋರ್' 'ಪೈರ್'ಗಳನ್ನು ಹಿಂಬಾಲಿಸಿ ಹೋಗಿ ಭಾಷಾಶಾಸ್ತ್ರ ಮತ್ತು ಇತಿಹಾಸದ ಕೆಲವು ಭಾಗಗಳಲ್ಲಿ ಪ್ರವೇಶಿಸಿ ಒಂದು ಪರ್ಯಟನ ನಡೆಸಿದ್ದೇವೆ.

ಬಂಜೆ-ಬಸಿರು

ಭುಜೇಂದ್ರ ಮಹೀಶವಾಡಿ

ದೊಡ್ಡವರದೆಲ್ಲಾ
ದೊಡ್ಡದಲ್ಲವಪ್ಪಾ
ಮುಸುಕಿನೊಳಗಿನ ಟೊಣ್ಣೆ
(ನಿನಗೆ ಕಾಣುವುದಿಲ್ಲಾ)

ದೊಡ್ಡ ಮೈ–ಕೋಟು–ಮನಿ–ದುಡ್ಡು–ಅಧಿಕಾರ
ದೊಡ್ಡಸ್ತಿಕೆಯೋ ?
ಈ ಸೋಗಲಾಡಿ ಸೂ....ಮಕ್ಕಳದು

ಕೆಳಗೊಂದು ಕೈ ಮೇಲೊಂದು ಕೈ !
ಕೆಳಗಿನ ಕೈಯ್ಯೊಳಗೆ ಬೆಣ್ಣೆ
ಮೇಲಿನ ಕೈಯ್ಯೊಳಗೆ ಟೊಣ್ಣೆ
ಕಾಲಿಗೆ ಮಣಿದ ನಿನಗೆ
ಬೆಣ್ಣೆ ಕಾಣುವುದು, ಹೊರತು,
ಟೊಣ್ಣೆ ಕಾಣದೊ ತಮ್ಮಾ !
ಮೀನು ಗಾಳ ನುಂಗಿ
ಮೀನುಗಾರನ ಬುಟ್ಟಿ ಸೇರುವಂತೆ, ನೀನೂ !
ಕಣ್ಣು ಮುಚ್ಚಿ ಹಾಲು ಕುಡಿದರೆ
ಬೆಕ್ಕಿನ ಬೆನ್ನ ಮೇಲಿದೆ ಬಡಿಗೆ !
ಹಣಾ–ಗಿಣಾ
ಸ್ಥಾನ–ಮಾನ !
ಹಣಾಗಿಣದ ಹೆಣಕ್ಕೆ ಹದ್ದು ಜಾತ್ರೆ ;
ಸ್ಥಾನಮಾನದ ಜೆಲ್ಲಿಕ್ಕೆ ನೊಣದಂಡುಯಾತ್ರೆ !
ಅದೇ ತನ್ನ ಬಳಗ
ಎನ್ನುವ ದೊಡ್ಡ ದಡ್ಡ
ಪ್ರಾಣಿಗೇನು ಗೊತ್ತು ?–
ಹಾಕಪ್ಪಗಳ ಗತ್ತು,

ಗೌಲಿತ್ತಿನ ಗೋಣ,
ಇಕ್ಕಳ ಕೈ ಮುಗಿತೆ,
ಬಿಕ್ಕಳ ಸೋಗಿನ ನಗೆ!
ಹಣಾ ತಾಣಾ
ಮೆರವಣಿಗೆ ಮುಗಿದ ಮರುದಿನಾ
ಮೂದಿಗೂಗೆಯ ಮೋರೆ
ನೋಡಿದರೆ ಅಪಶಕುನಾ
'ಶಾಂತಂ ಪಾಪಂ ಸ್ನಾನಂ!'
ಅಧಿಕಾರ ಕಳಾಕಳೆದ ಮೇಲೆ
ಹುಳಾ ಕೂಡ ಅಂಜದು;
ಯಾವ ಕತ್ತೆಯೂ ಕೇಳದು!
ಯಾವ ನಾಯಿಯೂ ಬಂದು
ಬಾಯಲ್ಲಿ...
ಹೊಯ್ಯದು!
ಹವಾ ಹೋದ ಮೇಲೆ
ಹೂಳೂ ದಿಕ್ಕಿಲ್ಲಾ!
ಅವೇ ಹುಳಾ ಹದ್ದೂ ಕಾಗಿ
ನೊಣಾ ನೊರಜಾ-
ಭೂದೇವಿ ಹೊಟ್ಟೆ ಒಲ್ಲದು
ಪಾಪದ ಹೆಣಾ!
ದೇವರೆಂಬ ನ್ಯಾಯಾಧೀಶಾ
(ಜೀವಂತ ಇದ್ದರೆ)
ಮಾಫಿ ಮಾಡನು!
ಗುಣಾ ಬಿಟ್ಟು ಹಣಾ ತಾಣಾ
ಹೆಚ್ಚೊ ಅಪ್ಪಾ ದೊಡ್ಡವನ?
ಮುಸುರಿ ಮುರುಳೀ ಹೆಣ್ಣೂ ಬೆಣ್ಣೆ
ಹೆಚ್ಚೊ ತಮ್ಮಾ ಸಣ್ಣವನೆ?
ಗೊಡ್ಡು ದೊಡ್ಡಸ್ತಿಕೆ
ಬಂಜೆ ಬಸಿರು ಕಾಣೊ!
ಮೃಗಜಲದ ಹಸಿರು ಕಾಣೊ!

ವಿಶ್ವಸಾಹಿತ್ಯಕ್ಕೆ ಮರ್ತ್ಯಜೀವನವೇ ಒರೆಗಲ್ಲು

ವಿ. ಶಿವಾನಂದ

ಕನ್ನಡ ನವಮನ್ವಂತರದ ಹಿರಿಯ ಕವಿ ಶ್ರೀ ಗೋಕಾಕರು ತಮ್ಮ "ದ್ಯಾವಾ ಪೃಥಿವಿ"ಯಲ್ಲಿ—

ಮರ್ತ್ಯದಲ್ಲಿ ನಿಂತು ಗೆಲ್ಲು
ಮರ್ತ್ಯವೆ ಒರೆಗಲ್ಲು;
ನೆಲವೆ ಆಧಾರಾ
ನೆಲವೆ ಆ—ಧಾರ;

ಎಂದು ಹಾಡಿದ್ದಾರೆ. ಈ ಚಿರಂತನ ಸಂದೇಶ, ಜಗತ್ತಿನ ಯಾವುದೇ ಕಾಲದ ಮಹಾ ಕವಿಯ ಮಹಾಕಾವ್ಯದಲ್ಲೂ ಆವಿರ್ಭೂತವಾಗಿರುವುದನ್ನು ಕಾಣುತ್ತೇವೆ. ಐಹಿಕ-ಆಮುಷ್ಮಿಕ ವಿಚಾರಗಳಮಂಥನ ನಡೆಸಿ ಕೊನೆಗೆ 'ಮಾನವತಾವಾದ'ಕ್ಕೇ ಅಗ್ರಪೂಜೆ ಸಲ್ಲಿಸಿರುವ ಕವಿಗಳು ಅನೇಕರಿದ್ದಾರೆ. ಆದರೆ ಅವರನ್ನು ನಾವಿಂದು ಅಲೌಕಿಕ ಮಟ್ಟದಲ್ಲಿ ನಿಲ್ಲಿಸಿ ಪೂಜಿಸುತ್ತಿದ್ದೇವೆ.

ವಾಲ್ಮೀಕಿ, ವ್ಯಾಸ, ಹೋಮರ್, ಡಾಂಟೆ ಅವರ ಕಾವ್ಯಗಳನ್ನು 'ಅಲೌಕಿಕ'ವೆನ್ನುತ್ತೇವೆ. ಅವನ್ನು ಬರೆದ ಕವಿಗಳು ಅಲೌಕಿಕ ಶಕ್ತಿ ಸಂಪನ್ನರಾಗಿದ್ದರೆನ್ನುತ್ತೇವೆ. ಈ 'ಅಲೌಕಿಕತೆ' ಎಂದರೇನು? ಲೋಕದಲ್ಲಿ ಇದ್ದೂ ಇಲ್ಲದಿರುವದೇ? ಅಥವ ಲೋಕಾತೀತವಾದುದೇ? ಇವೆರಡೂ ಕವಿಯ ಅವಸ್ಥೆಗಳಾದರೆ ಅವನು ಮರ್ತ್ಯಜೀವನವನ್ನು ಮರ್ತ್ಯದ ಕಣ್ಣಿನಿಂದ ಕಾಣುವದೆಂತು? ಅಂಥವನ ಕಾವ್ಯ ಯಾವ ಲೋಕ ಸಂಸ್ಪರ್ಶಿಯಾದ ಭಾವದಿಂದ ಸಹೃದಯನನ್ನು ಮುಟ್ಟುತ್ತದೆ? ತಟ್ಟುತ್ತದೆ? ಕವಿಯ 'ಅಲೌಕಿಕತೆ' ಲೋಕಸತ್ಯದಿಂದ ದೂರಾದ ನಿಲುಗಡೆಯೆಂದು ಆಲೋಚಕರ ಅಭಿಮತವಾದರೆ ಅದು ಅವರ ವಿಪರೀತ ಕಲ್ಪನೆಯೆಂದೇ ಹೇಳಬೇಕು. ಲೋಕಸಹಜವಾದ ಭಾವಗಳ ಪರಮಾನುಭವವನ್ನು ಪರಾಮರ್ಶಿಸಿ ಲೋಕ ಸದ್ವೃತ್ತಿಯಾಗಿಸಬಲ್ಲ ಪ್ರಾತಿಭ ಚಕ್ಷುವುಳ್ಳವನೇ ಅಲೌಕಿಕ. ಹಾಗೆ ನೋಡಿದರೆ ಕವಿ ಅಲೌಕಿಕ ಜಾತಿಗೆ ಸೇರಿದ ವ್ಯಕ್ತಿ. ಆದರೆ ಈಗ 'ಅಲೌಕಿಕತೆ' ಎಂಬ ಪದ ಯಾವುದೋ ಕಣ್ಣಿಗೆ ಕಾಣದ, ಮನಕ್ಕೆ ಹೊಳೆಯದ ಒಂದು ಅಸಾಧಾರಣವಾದ, ಆಧ್ಯಾತ್ಮಿಕವಾದ ಶಿಷ್ಟ ಸಂಕೇತವಾಗಿದೆ.

'ವಾಲ್ಮೀಕಿ ಕವಿ' ಮೊದಲು ಕ್ರೂರನಾದ ಬೇಡನಾಗಿದ್ದನು. ಹಿಂಸಾವೃತ್ತಿ ಅವನ ಕಾಯಕವಾಗಿತ್ತು. ರಾಮನಾಮಸ್ಮರಣೆಯ ಅಮೃತ ಮುಹೂರ್ತದಲ್ಲಿ

ಎಚ್ಚತ್ತಂದು ಅವನ ಪೂರ್ವಾಶ್ರಮ ನಿರಸನವಾಯಿತು. ಅವನೊಬ್ಬ ದಿವ್ಯ ತಪಸ್ವಿಯಾದನು. ಮಹಾಕಾವ್ಯ ರಚಿಸಿದನು. ವಾಲ್ಮೀಕಿಯ 'ರಾಮಾಯಣ ಮಹಾಕಾವ್ಯ'ದಲ್ಲಿ ಕರುಣಾರಸದ ಸ್ರೋತ ಹರಿದಿದೆ. ಅಲ್ಲಿ ಪಾಷಾಣ ಹೃದಯವೂ ಕರಗಿ ನೀರಾಗುತ್ತದೆ. ಈ ಆಕ್ರಂದನದ ಮೂಲವೆಲ್ಲಿ? ಗಿಡದ ಮೇಲಿದ್ದ ಕ್ರೌಂಚಪಕ್ಷಿಗಳಿಗೆ ಬೇಡನಾಗಿದ್ದ ವಾಲ್ಮೀಕಿ ತನ್ನ ಬಾಣ ಪ್ರಯೋಗಿಸಿದ. ಗಂಡು ಪಕ್ಷಿ ನೆಲಕ್ಕೆ ಬಿದ್ದು ಪ್ರಾಣ ಬಿಟ್ಟಿತು. ಹೆಣ್ಣು ಕಣ್ಣೀರಿಟ್ಟಿತು. ಆ ಪಕ್ಷಿಯ ವ್ಯಥೆ ವಾಲ್ಮೀಕಿಯ ಕವಿಹೃದಯವನ್ನು ಕಲಕಿತು. ಶೋಕವಾವರಿಸಿತು. ಅದುವೇ ಶ್ಲೋಕವಾಗಿ ಈ 'ರಾಮಾಯಣ ಮಹಾಕಾವ್ಯ'ಕ್ಕೆ ನಾಂದಿಯಾಯಿತು. 'ರಾಮಾಯಣ' ರಚನೆಯ ಹಿನ್ನೆಲೆಯಲ್ಲಿ ಯಾವ ಲೌಕಿಕತೆ ಇದೆಯೋ ಅದುವೆ 'ರಾಮಾಯಣ' ಕಾವ್ಯದಲ್ಲಿದೆ. ಆದರೆ 'ರಾಮಾಯಣ ಕಾವ್ಯ' ಇಂದು ಕೇವಲ ಭಾವುಕಭಕ್ತರ ಪಾರಾಯಣಕ್ಕೆ ಸಲ್ಲುವ ಧಾರ್ಮಿಕ ಕೃತಿಯಾಗಿಬಿಟ್ಟಿದೆ. ಭಕ್ತರ ಮನೆ ಜಗುಲಿಗಳ ಮೇಲೆ ಪೂಜೆಗೊಳ್ಳುತ್ತಿದೆ. 'ಶ್ರೀರಾಮ'ನಂತೂ 'ಪುರುಷೋತ್ತಮ'ನಾಗಿಬಿಟ್ಟಿದ್ದಾನೆ. ಅವನ ನಾಮಸ್ಮರಣ ಮಾತ್ರದಿಂದ ನೀಚನೂ ಕೂಡ ಭವಸಾಗರವನ್ನು ದಾಟುವ ಭಕ್ತನಾಗುವನೆಂಬ ನಂಬುಕೆ ಹೆಚ್ಚಿದೆ. ಶ್ರದ್ಧೆಯುಳ್ಳವನಿಗೆ ಹೀಗೆನ್ನಿಸುವದು ಸಹಜ. ಆದರೆ ಅವನ ಉದ್ಧಾರ ಶಕ್ತಿ ಒಂದು ಪವಾಡವೆನ್ನಿಸಬಾರದು. ನಿಜ ಹೇಳಬೇಕೆಂದರೆ ರಾಮನ ದೈವತ್ವದ ನಂಬುಗೆಗೆ ಅವನ ಅಲೌಕಿಕ ವ್ಯಕ್ತಿತ್ವ ಕಾರಣವಾಗಿಲ್ಲ. ಲೌಕಿಕ ವ್ಯಕ್ತಿತ್ವದಿಂದಲೇ ಅವನು ಆ ಮಹೋನ್ನತಿಗೇರಿದ್ದಾನೆ. 'ರಾಮಚಂದ್ರ'ನು 'ಪುರುಷೋತ್ತಮ'ನಿದ್ದಾನೆಂದೇ ಭಾವಿಸೋಣ. ಆದರೆ ಅವನು ಮನುಷ್ಯ ರೂಪದಲ್ಲಿ ಅವತರಿಸಿದ್ದನೆಂಬುದನ್ನೇ ಮರೆತರೆ ಹೇಗೆ? ಅವನ ಲೌಕಿಕ ಚರಿತ್ರೆಯನ್ನು ಮಣ್ಣುಮರೆಮಾಡಿ ಕೇವಲ ಅಲೌಕಿಕವಾದ ಅಘಟಿತ ಘಟನೆಗಳ ವರ್ಣನೆಯಿಂದ ಅವನನ್ನು ಹೊಗಳುವದು ಅವಾಸ್ತವವೂ ಅಭಾಸವೂ ಅಲ್ಲವೇ? ರಾಮನಿಗೆ ತಾಯಿ–ತಂದೆಗಳಿದ್ದರು. ಬಂಧು – ಬಾಂಧವರಿದ್ದರು. ಹೆಂಡತಿ–ಮಕ್ಕಳಿದ್ದರು. ಇಹಜೀವನದ ಕಷ್ಟ – ಸುಖ, ಆಶೆ – ನಿರಾಶೆಗಳ ಸ್ಪಷ್ಟ ಅನುಭವ ಅವನಿಗಿತ್ತು. ಹಂಸತೂಲಿಕಾತಲ್ಪದ ಮೇಲೆ ಮಲಗುವ ಮಹಾರಾಜನು ಬಡವನು ಮಲಗುವ ಚಾಪೆಯನ್ನೆಂದೂ ಕಂಡಿರಲಾರ. ಆದರೆ ರಾಮನಿಗೆ ಬಡತನದ ನಿಕಟ ಪರಿಚಯವಿತ್ತು. ರಾಜಸಿಂಹಾಸನವನ್ನು ತೊರೆದು ನಾರು ಮಡಿಯನ್ನುಟ್ಟು ವನವಾಸದಲ್ಲಿ ದಿನಗಳನ್ನು ಕಳೆದ ಕಥೆ ಒಂದು ದೊಡ್ಡ ವ್ಯಥೆಯೇ ಆಗಿದೆ. 'ವಾಲ್ಮೀಕಿ ಮಹಾಕವಿ' ತನ್ನ ರಾಮಾಯಣದಲ್ಲಿ 'ರಾಮನ' 'ಈಶ್ವರೀ ವ್ಯಕ್ತಿತ್ವ'ಕ್ಕೆ ಮಾರು ಹೋಗದೆ ಅವನನ್ನು ಮನುಷ್ಯ ರೂಪದಲ್ಲಿ ಚಿತ್ರಿಸಿ ಬಾಳಿನ ದುರ್ಗಮ ದಾರಿಯನ್ನು ಆ ಪಾತ್ರದಿಂದ ಸುಗಮಗೊಳಿಸಲು ಯತ್ನಿಸಿರುವನು. 'ಸೀತೆಯ' ಚರಿತ್ರೆಯಂತೂ ಇನ್ನೂ ಲೋಕ ಸಂಸ್ಪರ್ಶಿಯಾಗಿದೆ. ಇಂಥ ಲೌಕಿಕ ಆದರ್ಶಗಳಿಂದಲೇ ಆ ಕೃತಿ ಲೋಕ ಪೂಜ್ಯವಾಗಿದೆ. ಪ್ರಾಚೀನ ಅಯೋಧ್ಯೆಯೇನೋ ಧ್ವಂಸವಾಗಿದೆ. ಆದರೆ ಭಾರತೀಯರ ಹೃನ್ಮಂದಿರಗಳಲ್ಲಿ ರಾಮ–ಸೀತೆಯರ ಆದರ್ಶಗಳು ಶಾಶ್ವತವಾಗಿ ಇನ್ನೂ ಪ್ರತಿಷ್ಠಾನಗೊಂಡಿವೆ.

'ವ್ಯಾಸರ' 'ಮಹಾಭಾರತ'ಕ್ಕೂ ಇದೇ ಪಾಡು ಒದಗಿದೆ. ಅದನ್ನು 'ಪಂಚಮ ವೇದ'ವೆಂದು ಜನತೆ ಪೂಜೆ ಮಾಡುತ್ತದೆ. ಪೂಜೆ ಮಾಡುವ ಭಕ್ತರಿಗೆ ಆ ಪೂಜೆ ಆ ಕೃತಿಗೆ ಏಕೆ ಸಲ್ಲುತ್ತದೆ? ಎಂಬುದು ಮಾತ್ರ ತಿಳಿಯದು. ವ್ಯಾಸರು ತಮ್ಮ 'ಮಹಾಭಾರತ'ದಲ್ಲಿ ಹಿಂದೂ ಸಮಾಜಕ್ಕೆ ಅವಶ್ಯಕವಾದ ಧರ್ಮ ಮತ್ತು ನೀತಿಯ ಪಾಠ ಕಲಿಸಿದ್ದಾರೆ. ಆ ಕಾರಣ ಅದು 'ಪಂಚಮ ವೇದ'ವಾಗಿದೆ. ಆದರೆ ಇಂಥ ಉತ್ಕೃಷ್ಟ ಕೃತಿ ರಚಿಸಿದ ಆ ಕವಿ–ವ್ಯಕ್ತಿಯ ಜನ್ಮ ವೃತ್ತಾಂತವನ್ನು ಹೇಳಿದರೆ ಅದರ ಭಕ್ತರು ಅದೇಕೆ ಮುಖ ತಿರುವುತ್ತಾರೋ; ವ್ಯಾಸರು ಕೀಳು–ಕುಲದಲ್ಲಿ ಹುಟ್ಟಿದ ರೇನಾಯಿತು? ಅವರ ಕೃತಿ ಹಿಂದೂ ಸದಾಚಾರಗಳ 'ಸಂಹಿತೆ'ಯಾಗಿಲ್ಲವೇ? ಧರ್ಮ– ಮತ್ತು ಜ್ಞಾನಗಳ ಸೂಕ್ಷ್ಮಾವಲೋಕನೆ ಉಚ್ಚ ಕುಲದವರಿಗೆ ಮೀಸಲೆಂಬ ತಿಳುವಳಿಕೆ ತಪ್ಪು. ಜನ್ಮದಿಂದ ಮನುಷ್ಯನ ಭವಿಷ್ಯ ನಿರ್ಮಾಣಗೊಳ್ಳುವುದಿಲ್ಲ. ಅದು ಅವನ ಚಾರಿತ್ರ್ಯದ ಮೇಲೆ ಅವಲಂಬಿಸಿರುತ್ತದೆ. ಉಚ್ಚ–ನೀಚ ಕುಲದಲ್ಲಿ ಹುಟ್ಟುವದು ದೈವಲೀಲೆಯೋ ಕರ್ಮಜಾಲವೋ ಆಗಿರಬಹುದು. ಆದರೆ. ಪೌರುಷ ಅವನ ಅಧೀನ ವಾಗಿದೆಯೆಂಬುದನ್ನು ವ್ಯಾಸರೇ ತಮ್ಮ 'ಮಹಾಭಾರತದಲ್ಲಿ' ಸ್ವತಃ ಸಿದ್ಧ ಮಾಡಿ ತೋರಿಸಿದ್ದಾರೆ.

'ಜಗತ್ತಿನ ಶ್ರೇಷ್ಠ ಕವಿ ಹೋಮರ್ ಕುರುಡನಾಗಿದ್ದ. ಹಿಂದಿಯ ಸಂತಕವಿ ಸೂರದಾಸ'ರೂ ಕುರುಡರು. ಅವರ ಕಾವ್ಯಪ್ರತಿಭೆಯಲ್ಲಿ ಸೃಷ್ಟಿಯನ್ನೇ ಸ್ವರ್ಗವಾಗಿಸಿದರು. ಅವರಿಗೆ ಅಲೌಕಿಕವೆಂಬುದು ಅಂತರಂಗದ ಶೋಧನೆಯಾಗಿತ್ತು. ಅದಕ್ಕೆ ಚರ್ಮಚಕ್ಷುವಿನ ಆಶ್ರಯವಿಲ್ಲದೆಯೂ ಲೋಕದ ಅನುಭವಗಳ ಸಾಕ್ಷಾತ್ಕಾರ ಮಾಡಿಕೊಳ್ಳುವದು ಸಾಧ್ಯವಾಯಿತು. ಮರ್ತ್ಯ ಜೀವನದಿಂದ ದೂರಾದವನ ಕಾವ್ಯ ಎಂದೂ ಮಹಾನುಭೂತಿಯನ್ನುಂಟು ಮಾಡದು. ಮಾನವನ ಬದುಕು ಜನನ– ಮರಣಗಳ ನಡುವಿನ ಒಂದು ಕ್ಷಣಿಕ ಸಂಯೋಗವಾಗಿದೆ. ಇಲ್ಲಿ ನೋವು–ನಲಿವಿದೆ. ರಾಗ–ದ್ವೇಷವಿದೆ. ಇವುಗಳಲ್ಲಿ ಬಾಳಿನ ಮಹಾಮೌಲ್ಯಗಳನ್ನು, ವಿಶ್ವಸತ್ಯವನ್ನು ಗುರುತಿಸುವ ಕಣ್ಣು ಮಹಾಕವಿಗೆ ಬೇಕು. ಆದರಿಂದ ಲೌಕಿಕವನ್ನು ಬೆಳಗಬೇಕು. ಲೋಕದ ಮನೋಭೂಮಿಕೆಯಿಂದ ದೂರಾಗಿ ಕೇವಲ ಕಾಲ್ಪನಿಕ ಜಗತ್ತಿನಲ್ಲಿ ಸಂಚರಿಸುವ, ಇಲ್ಲದುದನ್ನು ಇದೆಯೆಂದು ವರ್ಣಿಸುವ ಕವಿಗಳು ತನ್ನ 'ಆದರ್ಶ ರಾಜ್ಯ'ದ ಹೊರಗಿರಬೇಕೆಂದು 'ಪ್ಲೇಟೊ' ಆಜ್ಞಾಪಿಸಿ ಕಾವ್ಯಾಲಾಪವನ್ನು ಬಹಿಷ್ಕರಿಸಿದನಂತೆ. 'ಪ್ಲೇಟೊ'ನಿಗೆ ಕಾವ್ಯದ ಮೇಲೆ ಪ್ರೇಮವಿರಲಿಲ್ಲವೆಂದಲ್ಲ. ಆದರೆ ಅಂದಿನ ಕವಿಗಳ ಕಾವ್ಯ ಸೃಷ್ಟಿಗೂ, ಅವನ ದೃಷ್ಟಿಯ ಕಾವ್ಯಸೃಷ್ಟಿಗೂ ಅಂತರವಿತ್ತು. ವಾಸ್ತವಿಕ ಲೋಕದಿಂದ 'ಆದರ್ಶಲೋಕ'ಕ್ಕೆ ಕರೆದೊಯ್ಯುವದೇ ಕವಿತೆಯ ಗುರಿಯೆಂಬ ಪರಿಭಾವನೆ ಅವನದಾಗಿತ್ತು. ಆದರೆ ಆ 'ಆದರ್ಶಲೋಕ'ವನ್ನು ಅಪಾರ್ಥ ಮಾಡಿ ಕೊಂಡವರು ಅನೇಕರು. ಮಧ್ಯಯುಗದಲ್ಲಿ 'ಆದರ್ಶಲೋಕ'ವೆಂಬುದು ಐಹಿಕ ಜಗತ್ತಿನ ಸೀಮಾರೇಖೆಯನ್ನು ದಾಟಿದ ಪಾರಲೌಕಿಕ ಜಗತ್ತಾಯಿತು. ಆ ಲೋಕದ

ಬೆನ್ನು ಹತ್ತಿದವರು ಇಹಜೀವನ ತತ್ತ್ವಕ್ಕೆ ಉಗ್ರಗಾಮೀ ವಿರೋಧಿಗಳಾದರು. ಜಗತ್ತಿನ ಮಾನವರನ್ನು ತುಚ್ಛವಾಗಿ ಕಂಡರು. ಐಹಿಕ ಜಗತ್ತು ಅವರಿಗೆ ಮಾಯಾ ಪ್ರಪಂಚ ವಾಯಿತು. ಲೋಕ ಸತ್ಯವಾದುದೆಲ್ಲ ಮಿಥ್ಯ ಭ್ರಾಂತಿಯೆನ್ನಿಸಿತು. ಇದಕ್ಕೆ ಮಾರು ಹೋದವರು ಮರ್ತ್ಯದ ಮಹಾಬಾಳಿನಿಂದ ಪಲಾಯನ ಮಾಡಿದರು. ಮನುಷ್ಯ ತನ್ನ ಕರ್ತವ್ಯದಿಂದ ಪರಾಙ್ಮುಖನಾದನು. ಈ ಅಕರ್ಮಣ್ಯತೆ ಅಲಕ್ಷಿತೆ, ಉದಾಸೀನತೆ, ನಿರಪೇಕ್ಷತೆಗಳ, ದುಷ್ಪರಿಣಾಮದಿಂದ ಸಮಾಜವು ಕ್ರಿಯಾಹೀನವಾಯಿತು.

ಈ ಯುಗಧರ್ಮಕ್ಕೊಲಿದ ಕವಿಗಳೆಲ್ಲ ಹೆಚ್ಚಾಗಿ 'ನಿವೃತ್ತಿ' ಮಾರ್ಗಾವಲಂಬಿ ಗಳೆಂದು ಬೇರೆ ಹೇಳಬೇಕಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಕ್ರೈಸ್ತಧರ್ಮ ಒಡ್ಡಿದ ನಿವೃತ್ತಿ ಮಾರ್ಗದ ಅತಿರೇಕತೆಯಾಗಲಿ, ಇಂಗ್ಲೆಂಡಿನ ಪ್ಯೂರಿಟಾನಿಸಂ (Puritanism) ಹೇರುವ ನಿಯಮಗಳ ಹೊರೆಯಾಗಲಿ, 'ಭಾರತ'ದಲ್ಲಿನ 'ಸನ್ಯಾಸ ಧರ್ಮ'ದ ಬೋಧೆಯಾಗಲಿ ಇಹಜೀವನದ 'ಪೌರುಷವಾದ'ದಿಂದ ಕಾಲ್ತೆಗೆದುವೆಂದೇ ಹೇಳಬೇಕು. ಆದರೆ ಮಹಾ ಕವಿಗಳು ಮಾತ್ರ ಜಾಗ್ರತರಾಗಿದ್ದುಕೊಂಡು ತಮ್ಮ ಸಾಹಿತ್ಯದ ಸಂದೇಶದಿಂದ ಮರ್ತ್ಯದ ಮಣಿಹ ಪೂರೈಸಿದರು. ಎರಡೂವರೆ ಸಾವಿರ ವರುಷಗಳ ಹಿಂದೆ ಗ್ರೀಸಿನ ಪ್ರಸಿದ್ಧ ಕವಿ 'ಈಸ್ಕಿಲಸ್'ನು 'ಪ್ರೊಮಿತಿಯಸ್ ಬಾಂಡ್' ಎಂಬ ನಾಟಕದಲ್ಲಿ 'ಪ್ರೊಮಿತಿಯಸ್' ನನ್ನು ಮಾನವ ಲೋಕದ ಪ್ರತಿನಿಧಿಯೆಂಬಂತೆ ಚಿತ್ರಿಸಿದನು. ಇವನ ಕಾಲಕ್ಕೆ ಹತ್ತಿರ ದವನಾದ 'ಸೊಫೊಕ್ಲಿಸ್'ನು ತನ್ನ 'ಆ್ಯಂಟಿಗೊನೆ' ನಾಟಕದಲ್ಲಿ ಮನುಷ್ಯ ಸಾಹಸದ ಮುಂದೆ ಪಂಚಭೂತಗಳೂ ತಲೆಬಾಗಿರುವದನ್ನು ಸಾರಿ ಹೇಳಿದನು. ಈಸ್ಕಿಲಸ್‌ನಿಗೆ ಸಮಕಾಲೀನನಾದ 'ಯುರಿಪಿಡಸ್'ನಂತೂ ಗ್ರೀಸಿನದೇವತೆಗಳ ಉಚ್ಚಾಟನೆ ಮಾಡಿ ಅವರ ಅದ್ಭುತ ರಮ್ಯಲೀಲಾಜಾಲಗಳ ಅಸಮಂಜಸ್ಯಗಳನ್ನು ಅತಿಗಳೆದು ಮಾನವೀಯ ಶಕ್ತಿಯ ಮೇಲ್ಮೆಯನ್ನು ದೈವತ್ವಕ್ಕೂ ಮಿಗಿಲೆಂಬಂತೆ ಬಣ್ಣಿಸಿದನು. ಪರಂಪರೆಯ ಚೌಕಟ್ಟಿನಿಂದ, ಧಾರ್ಮಿಕ ಜಗತ್ತಿನಿಂದ ಹೊರಬಂದು ವಾಸ್ತವ ಜಗತ್ತಿನ ಒಳಚಿಂತನೆ ಮಾಡಿದವರು ಮಾನವ ಲೋಕದ ಶ್ರೇಷ್ಠ ಪ್ರಾತಿನಿಧಿಕ ಕವಿಗಳಾಗಿದ್ದಾರೆ. ಅವರ ಕಾವ್ಯಗಳಿಗೊಂದು ಸಿದ್ಧಾಂತವಿದೆ. "ಡಾಂಟೆ"ನ ಅಭಿಪ್ರಾಯದಲ್ಲಿ "La-Sua Voluntadee nostra Pace".... ಎಂದರೆ "ಉತ್ತಮ ಕಾವ್ಯ ಒಂದು ಉತ್ತಮ ಸಿದ್ಧಾಂತ ದಿಂದ ರೂಪಿತವಾಗಿರುತ್ತದೆ. ಅದು ನಾವು ತಿಳಿಯದ ಯಾವುದೋ ಅಲೌಕಿಕವಾದ ಸಿದ್ಧಾಂತವೇನೂ ಅಲ್ಲ. ಜೀವನ ಸಿದ್ಧಾಂತವೇ ಆಗಿರುತ್ತದೆ." ಇದಕ್ಕೆ ಕೆಲವರ ಹೇಳಿಕೆ ಗಳನ್ನಿಲ್ಲಿ ಪರಾಮರ್ಶಿಸಬಹುದು.

ಶೇಕ್ಸಪಿಯರ: As flies to the Wanton boy's are we to the Gods.
They kill Us for their Sport.

(ತುಂಟ ಹುಡುಗರು ನೊಣವನ್ನು ಕೊಲ್ಲುವಂತೆ ದೇವರು ಮೋಜಿಗಾಗಿ ನಮ್ಮನ್ನು ನೊಣಗಳಂತೆ ಕೊಲ್ಲುವರು.)

ತುಳಸೀದಾಸ : अगनि आँच सहना सुगम, सुगम खड्ग की धार, प्रेम
निभावन भेक रस बहुत कठिण बौहार

(ಅಗ್ನಿಗಾಹುತಿಯಾಗುವದು ಸುಲಭ. ಖಡ್ಗಕ್ಕೆ ದೂರಾಗುವದು ಸುಲಭ. ಆದರೆ ಜೀವನದಲ್ಲಿ ಪ್ರೇಮವನ್ನು ನಿರ್ವಹಿಸುವದು ಅತ್ಯಂತ ಕಠಿಣ).

ಚಾಮರಸ : ಭೋಗಭೂಮಿಯ ಭೋಗತನುವಿನ
ಲಾಗದನುಭವ ಸಿದ್ಧಿ ಕರ್ಮ
ದ್ಯೋಗ ಭೂಮಿಯುಲಲ್ಲದೆ........

ಮೇಲಿನ ವಿಚಾರ ಪ್ರಣಾಲಿಕೆಗೆ ಇಂಥ ಬೇರೆ ನೂರೆಂಟನ್ನಾಯ್ದು ಸೇರಿಸಬಹುದು. ಆದರೆ ಉದ್ದೇಶವಿಷ್ಟೇ, ಇಲ್ಲಿನ ಯಾವ ಎತ್ತರದ ಪ್ರಜ್ಞೆಗೂ ಅದರ ಆತ್ಯಂತಿಕ, ಕಟ್ಟಕಡೆಯ ನಿಲುವೆಗೂ, ಮಾನವೀಯ ಪ್ರೇರಣೆಯೇ ವಸ್ತುವಾಗಿರುವದನ್ನರಿತರೆ ಸಾಕು.

ಕಾವ್ಯಗಳಲ್ಲಿ ರಮ್ಯವಾದುದು ನಾಟಕ. ನಾಟಕಗಳಲ್ಲಿ ಕಾಳಿದಾಸನ ಶಾಕುಂತಲ. ಅದರಲ್ಲಿ ಚತುರ್ಥಾಂಕದ ಚತುರ್ಥಶ್ಲೋಕಗಳಂತೂ ಹೆಚ್ಚು ರಮ್ಯವೆಂದು ವ್ಯಾಖ್ಯಾನ-ಕಾರರು ಕರೆವಲ್ಲಿ ಔಚಿತ್ಯವಿದೆ. ಏಕೆಂದರೆ ಅಲ್ಲಿ ಲೋಕಜೀವನದ ಒಂದು ಸನ್ನಿವೇಶ ಕಣ್ಮುಂದೆ ಕಟ್ಟಿದೆ. ಕಣ್ವರು ಶಾಕುಂತಲೆಯನ್ನು ಪತಿಗೃಹಕ್ಕೆ ಕಳಿಸುವವೇ ಅದಾಗಿದೆ. ಕಣ್ವರ ಕಣ್ಣಲ್ಲಿ ಆಗ ನೀರು ಸುರಿಯಿತು. "ಕಂಠಃ ಸ್ತಂಭಿತ ಭಾಷ್ಪವೃತ್ತಿ ಕಲುಶಶ್ಚಿಂತಾ ಜಡಂ ದರ್ಶನಮ್" ಎಂದು 'ಕಾಳಿದಾಸ ಕವಿ' ವರ್ಣಿಸುತ್ತಾನೆ. ಸನ್ಯಾಸಿಗಳಾದ ಕಣ್ವರಿಗೆ ಸಾಕು ಪುತ್ರಿಯಾದ ಶಕುಂತಲೆಯನ್ನು ಕಳಿಸುವಾಗ ಇಷ್ಟು ದುಃಖವಾದರೆ ಲೋಕದ ತಾಯಿತಂದೆಗಳು ತಮ್ಮ ನಿಜ ಪುತ್ರಿಯರನ್ನು ಕಳಿಸುವಾಗ ಇನ್ನೆಷ್ಟು ದುಃಖಿತರಾಗ ಬೇಡ ಎಂದು ಉದ್ಗರಿಸುವಲ್ಲಿಯಂತೂ ಕರುಣರಸ ಸರ್ವಸಾಧಾರಣವಾಗುತ್ತದೆ. ಇಲ್ಲಿನ ರಸವಾಹಿನಿಗೆ ಲೋಕ ಜೀವನವೇ ತಲಕಾವೇರಿಯಲ್ಲವೇ ? ಅದಕ್ಕೇ ಆ ಭಾಗವನ್ನೋದು ವಾಗ ಹೃದಯ ಅಷ್ಟು ದ್ರವಿಸುತ್ತದೆ. ಅದೇ ರೀತಿ ಶೇಕ್ಸಪಿಯರನ ನಾಟಕಗಳಲ್ಲಿ ನಮ್ಮ ಚಿತ್ತವನ್ನು ಕೆರಳಿಸುವ ಸನ್ನಿವೇಶಗಳಲ್ಲಿ ಆ ಪಾತ್ರಗಳಲ್ಲಿನ ದುಃಖ–ದುರಂತ ಸೋಲು ಗೆಲುವು, ಪರಿತಾಪ, ವೇದನೆ, ಸೆಣಸಾಟ, ಇವೇ ಮೊದಲಾದ ಮನುಷ್ಯ ಸ್ವಭಾವದ ಒಂದೊಂದು ಗುಣಗಳೇ ನಾಟಕದ ಉತ್ಕಟಕ್ಷಣ (Climax)ಕ್ಕೆ ಕಾರಣವಾಗಿವೆ.

"ಡಾಂಟೆ"ನ 'ಡಿವ್ಹಾಯಿನ್ ಕಾಮೆಡಿ' ಅರ್ಥಾತ್ 'ದಿವ್ಯ ವಿನೋದ' ಯಾವ ದೇವವಾಣಿಯಲ್ಲೂ ರಚಿತವಾಗಿರದೆ, ಇಟಲೀ ದೇಶದ, ಗ್ರಾಮ್ಯ ಭಾಷೆಯಲ್ಲಿ ಪ್ರತಿಧ್ವನಿಸಿದೆ. "ಟಿ. ಎಸ್. ಎಲಿಯಟ್" ಎಂಬ ಪ್ರಸಿದ್ಧ ವಿಮರ್ಶಕ "ಡಾಂಟೆ"ನ ಬಗೆಗೆ ಬರೆಯುತ್ತ "ಇಂಗ್ಲೀಷ" ಸಾಹಿತ್ಯದಲ್ಲಿ ಎಷ್ಟೋ ಧಾರ್ಮಿಕ ಕವಿಗಳಿದ್ದಾರೆ. ಆದರೆ ಇಟಲಿಯ ಡಾಂಟೆ ಅವರಿಗಿಂತ "ಧಾರ್ಮಿಕ ಕವಿ" ಎನ್ನುತ್ತಾನೆ. ವಿಶ್ವವ್ಯಾಪಕ ವಾದ ಮಾನವೀಯ ಭಾವಗಳನ್ನು ವಿಶ್ವಮಾನವನ ಚಿತ್ರವನ್ನು ವಿಶ್ವತೋಮುಖವಾಗಿ

ಅಭಿವ್ಯಕ್ತ ಮಾಡಬಲ್ಲ "ಶ್ರೇಷ್ಠ ಮಾನವಿಕ" ಎಂಬರ್ಥದಲ್ಲಿ "ಎಲಿಯಟ್" ಇಲ್ಲಿ ದೊಡ್ಡ ಧಾರ್ಮಿಕ ಪದವನ್ನು ಬಳಸಿದ್ದಾನೆ. "ಡಾಂಟೆ"ನಿಗೆ ಇದು ಅನ್ವರ್ಥಕವಾಗಿದೆ. ಅವನ "ದಿವ್ಯ ವಿನೋದ"ದಲ್ಲಿ ಮೂರು ಭಾಗಗಳಿವೆ. ಮೊದಲನೆಯದರಲ್ಲಿ "ನರಕ"ದ ಕಥೆಯಿದೆ. ಎರಡನೆಯದರಲ್ಲಿ ಪಾಪಕ್ಷಯ ಭೂಮಿಯ ವರ್ಣನೆಯಿದೆ. ಕೊನೆಯದು ಸ್ವರ್ಗದ ವಿಷಯಕ್ಕೆ ಮೀಸಲಾಗಿದೆ. ಇಲ್ಲಿನ ವಿಭಾಗಕ್ರಮಕ್ಕೆ ಒಂದು ತಾತ್ವಿಕ ವ್ಯವಸ್ಥೆಯಿದೆ. ಮನುಷ್ಯ ಎಷ್ಟೇ ನೀಚನೂ ಪಾಪಿಯೂ ಆಗಿರಲಿ, ಅವನ ಉದ್ಧಾರಕಾಲವೊಮ್ಮೆ ಬಂದೇ ಬರುತ್ತದೆ ಎಂಬ ವಿಚಾರವಿಲ್ಲಿದೆ. ಮಾನವೀಯ ಬಾಳು ಅನಂತ ದುಃಖದಿಂದ ಅನಂತಾನಂದದ ಕಡೆಗೆ ನಡೆಯಬೇಕು. ಅದಕ್ಕೇ ಇಲ್ಲಿ ನರಕ ಮೊದಲೂ, ಸ್ವರ್ಗ ಕಡೆಗೂ ಚಿತ್ರಿತವಾಗಿದೆ. "ದಿವ್ಯ ವಿನೋದದ" ಸಂದೇಶವೆಂದರೆ ಈ ಸೃಷ್ಟಿ ಭಗವಂತನ ಪೂರ್ಣ ಕೃಪೆಯಿಂದ ಮನುಷ್ಯನಿಗೆ ಲಭ್ಯವಾಗಿದೆ. ಇದು ಅವನ ಆನಂದಧಾಮವಾಗಬೇಕು. ಇದನ್ನರಿತವನ ಬಾಳು ನಿಜಕ್ಕೂ ಸುಖಾಂತ. ಆ ಮಹಾ ಕವಿ ತನ್ನ ಕಾವ್ಯಕ್ಕೆ "ದಿವ್ಯ ವಿನೋದ" ವೆಂದು ಕರೆದಿರುವುದು ಈ ದೃಷ್ಟಿಯಿಂದ ಸಾರ್ಥಕಪೂರ್ಣವಾಗಿದೆ.

ಮಧ್ಯಕಾಲೀನ ಭಾರತದ ಯುಗಪ್ರವರ್ತಕರಲ್ಲಿ 12 ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಾಳಿದ ಬಸವಣ್ಣನವರ ಹೆಸರು ಅಗ್ರಗಣ್ಯವಾಗಿದೆ. ಅವರ ಸಂದೇಶ ಮುಖ್ಯವಾಗಿ "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ" ಎಂಬುದೇ ಆಗಿದೆ. ಬಸವಣ್ಣನವರ ಜೀವನ ಚಿತ್ರವನ್ನು ಕನ್ನಡದಲ್ಲಿ "ಹರಿಹರ ಮಹಾಕವಿ" ಉಜ್ವಲವಾಗಿ ಚಿತ್ರಿಸಿದಷ್ಟು ಇನ್ನಾವ ಕವಿಯೂ ಚಿತ್ರಿಸಿಲ್ಲ. ಅವನ "ಬಸವರಾಜದೇವರ ರಗಳೆ"ಯ ಕೊನೆಯ ಸನ್ನಿವೇಶದಲ್ಲಿ ಬಸವಣ್ಣನವರಿಗೆ ಕೂಡಲಸಂಗಮೇಶ್ವರನು ಜಂಗಮಾಕಾರದಲ್ಲಿ ಪ್ರತ್ಯಕ್ಷನಾಗಿ ಬಂದು "ಪೊಡವಿಯೊಳಗಿರವು ಸಾಕೆಂದೂ" ಇನ್ನು ತನ್ನೊಡನೆ ಕೈಲಾಸಕ್ಕೆ ಬರಬೇಕೆಂದೂ ಕೇಳುತ್ತಾನೆ. ಅದಕ್ಕೆ ಬಸವಣ್ಣನವರು ಹೇಳಿದ್ದೇನು ?

ಶರಣರೊಕ್ಕುದರ ಸವಿ ಕೈಲಾಸದೊಳಗುಂಟೆ ?
ಶರಣಸಂಗದ ಸುಖಂ ಕೈಲಾಸದೊಳಗುಂಟೆ ?

ಹರಿಹರ ಕವಿಯು ಇಲ್ಲಿ, ಬಸವಣ್ಣನವರು ನಿಂತ ನೆಲವೇ ಕೈಲಾಸವಾಗಿತ್ತು ಎಂಬುದನ್ನು ಪ್ರತಿಪಾದಿಸಿದ್ದಾನೆ.

'ವಲ್ಲಭಾಚಾರ್ಯ'ರಂಥ ಮಹಾಪ್ರಭುಗಳಿಂದ ಹಿಂದೀ ಸಾಹಿತ್ಯದಲ್ಲಿ ಬಹುದೊಡ್ಡ ಆಂದೋಲನ ನಡೆಯಿತು. ಆ ಹಿನ್ನೆಲೆಯ ಸಾಹಿತ್ಯ ಪಾರಲೌಕಿಕ ಬಣ್ಣನೆಗಿಂತ ಇಹ – ಪರಗಳ ಸಮನ್ವಯತೆಗೂ ಮುಖ್ಯವಾಗಿ ಮಾನವೀಯ ಆದರ್ಶಗಳ ಅನುಸಂಧಾನಕ್ಕೂ ಪ್ರಾಶಸ್ತ್ಯವಿತ್ತುದನ್ನು ಕಾಣುತ್ತೇವೆ. 'ಧರ್ಮ'ವೆಂಬುದು ಸಮಾಜವನ್ನು ಪಾರಲೌಕಿಕವಾದ ಬಂಧನದಲ್ಲಿ ಬಿಗಿಯದೆ ಅದರ ಉದ್ಧಾರಕ್ಕೆ ಆವಶ್ಯಕವಾದ ಮಾನವೀಯ ನೆಲಗಟ್ಟಾಬೇಕು. ರಾಮ–ಕೃಷ್ಣ–ಈಶ್ವರರು ದೇವತೆಗಳಾಗಿ ದೇವಲೋಕದಲ್ಲೇ ಕೂಡದೆ ಮರ್ತ್ಯಜೀವಿಗಳ ಹೃದಯ ಸಿಂಹಾಸನದಲ್ಲಿ ವಿರಾಜಿಸಿದಾಗ ಬಾಳಿನ ಉದ್ಧಾರ ಸಾಧ್ಯವೆಂಬುದು ಈ ಕವಿಗಳ ಅಭಿಮತವಾಗಿದೆ.

ಪಾಶ್ಚಿಮಾತ್ಯ ಆಧುನಿಕ ಸಾಹಿತ್ಯ 'ಮಾನವತಾವಾದ'ವನ್ನೇ ಹೆಚ್ಚಾಗಿ ಪುರಸ್ಕರಿಸುತ್ತದೆ. ಜರ್ಮನಿಯ ಪ್ರಸಿದ್ಧ ಕವಿ 'ಗೀಥೆ' ಯಾವುದೇ 'ಆದರ್ಶವೆಂಬುದು' ಲೋಕೈಕವಾದುದೇ ಆಗಿವೆಯಲ್ಲದೆ ಸ್ವರ್ಗಸ್ಥವಾದುದಲ್ಲವೆಂದು ಹೇಳುತ್ತ ಎಲ್ಲ ಆದರ್ಶಗಳಲ್ಲಿಯೂ ಒಂದು ಸಮನ್ವಯ ದರ್ಶನವನ್ನು ಕಾಣಲು ಹವಣಿಸುತ್ತಾನೆ. ಕ್ರೈಸ್ತ ಧರ್ಮದ ಅನುಯಾಯಿಯಾಗಿ ಬುದ್ಧನ ತತ್ವಗಳನ್ನು ಹೃದ್ಗತ ಮಾಡಿಕೊಂಡ, ಸನ್ಯಾಸ ಧರ್ಮದ ಮರ್ಮ ತಿಳಿದೂ, ಸಂಸಾರಿಕ ಜೀವನದ ವೈಶಾಲ್ಯವನ್ನು ಅರ್ಥೈಸಿಕೊಂಡ, ಕಲೆಗೆ ಮುಗ್ಧನಾಗಿಯೂ ವಿಜ್ಞಾನದ ಆವಿಷ್ಕಾರಗಳನ್ನು ಮೆಚ್ಚಿದ ದೇಶಪ್ರೇಮ ತುಂಬಿ ತುಳುಕುವಾಗಲೂ ತನ್ನ ದೇಶವನ್ನು ನೆಲಸಮ ಮಾಡಲೆಂದು ಬಂದ ಕಡುವೈರಿ 'ನೆಪೋಲಿಯನ್'ನಿಗೆ ಸ್ನೇಹ ಸುಧೆಯನ್ನೇ ಉಣಿಸಿದ 'ಗೀಥೆ'ನ ಜೀವನ 'ಸರ್ವದರ್ಶನಗಳ ಸಾರ ಸಂಗ್ರಹ'ವೇ ಆಗಿತ್ತೆನ್ನಬಹುದು. ಅವನಿಗೆ ಯಾವ ಸಂಸಾರದ ಪರಿಚಯವಿತ್ತೋ, ಯಾವ ಜೀವನ ತತ್ವವನ್ನು ಅವನು ಪ್ರೀತಿಸಿದನೋ ಅದುವೇ ಅವನ ಕಾವ್ಯದ ವಸ್ತುವಾಗಿದೆ. ಕಲ್ಪನೆಯ ಮುಸಿ ಬಳಿಯದೆ ಯಥಾರ್ಥ ಚಿತ್ರದಿಂದ ಬರೆದ ಅವನ ಶ್ರೇಷ್ಠ ಕೃತಿ 'ಫಾಸ್ಟ್' ಮರ್ತ್ಯಕ್ಕೆ ಮಹಾಬೆಳಗನ್ನು ನೀಡಿದೆ. ರಚನೆ, ಶೈಲಿ ಏಕ ವ್ಯಕ್ತಿಯದೇ ಆದರೂ ಇದರಲ್ಲಿನ ವಸ್ತು ಭಿನ್ನವಾಗಿದೆ. 'ಫಾಸ್ಟ್' ಕೃತಿಯಲ್ಲಿ ಎರಡು ಪರಿಚ್ಛೇದಗಳಿವೆ. ಮೊದಲನೆಯದರಲ್ಲಿ ಓರ್ವ ಮನುಷ್ಯ ಸ್ವರ್ಗದಿಂದ ಮರ್ತ್ಯಲೋಕಕ್ಕಿಳಿದು ಬಂದು ನಗರ ಪ್ರವೇಶಿಸುತ್ತಾನೆ. ಎರಡನೆಯದರಲ್ಲಿ ಅವನು ಮರ್ತ್ಯದಿಂದ ಸ್ವರ್ಗಕ್ಕೇರುತ್ತಾನೆ. ಇಲ್ಲಿನ ಎರಡೂ ಲೋಕಗಳು ತಾತ್ವಿಕ ಸಂಕೇತಗಳಾಗಿವೆ. ಮೊದಲನೆಯದರಲ್ಲಿ ಮನುಷ್ಯ, ಧರ್ಮದ ಆಶ್ರಯದಿಂದ ಆಧ್ಯಾತ್ಮವನ್ನರಸುವಲ್ಲಿ ತನ್ನ ಕರ್ತವ್ಯವನ್ನು ಮೆರೆಯುತ್ತಾನೆ. ಎರಡನೆಯದರಲ್ಲಿ ಮೊದಲು ಕರ್ತವ್ಯನಿಷ್ಠೆ ಜಾಗ್ರತವಾಗುತ್ತದೆ. ಒಂದರಲ್ಲಿ ಜ್ಞಾನ ಮತ್ತು ಪ್ರೇಮಗಳ ಸಂಘರ್ಷವಿದೆ. ಇನ್ನೊಂದರಲ್ಲಿ ಕರ್ಮ ಮತ್ತು ಆಧ್ಯಾತ್ಮ ಸೌಂದರ್ಯಗಳ ತಾಕಲಾಟವಿದೆ. ಇವೆರಡೂ ಮುಖಗಳು ಮಾನವ ಜೀವನದ ಒಂದೊಂದು ಬಗೆಯ ವಿಕಾಸದ ಹಂತಗಳೆಂದು ಹೇಳುವದೇ ಇಲ್ಲಿ 'ಗೀಥೆ' ಕವಿಯ ಮಹೋದ್ದೇಶವಾಗಿದೆ.

ವರ್ತಮಾನ ಮಾನವ ದೇಶ–ಕಾಲ–ಪರಿಸರಗಳ ಪ್ರಭಾವದಿಂದ ಹಿಂದೆಂದೂ ಕಾಣದ ಸಂಕೀರ್ಣತೆಗೆ ಒಳಗಾಗಿದ್ದಾನೆ. ಒಂದೆ ಸಾಂಪ್ರದಾಯಿಕವಾದ, ಧಾರ್ಮಿಕವಾದ, ಯಾವ ಶಕ್ತಿ ಸಾಹಿತ್ಯವನ್ನು ಅಲೌಕಿಕವೆಂದೂ, ಧರ್ಮ ಜಡವೆಂದು ಬಣ್ಣಿಸಿತೋ ಇಂದು ವಿಜ್ಞಾನ ಮತ್ತು ರಾಜಕೀಯ ಕ್ಷೇತ್ರಗಳಿಂದಾಗಿ ಮಾನವ ಹೃದಯ ನೈಜ ಸಾಹಿತ್ಯ ಗಂಗೆಯ ಅಭಾವದಿಂದ ಬಂಜರಾಗುತ್ತಿದೆ. ಆದರೂ ಕೆಲವು ಕವಿಗಳು ಇದರ ಆಹ್ವಾನವನ್ನು ಎದುರಿಸುತ್ತಿದ್ದಾರೆ. 'ಟೆನಿಸನ್' ಕವಿ ವಿಜ್ಞಾನದ ಕ್ರೀಡಾ ಕ್ಷೇತ್ರವಾದ ಈ ಜಗತ್ತಿನಲ್ಲಿದ್ದುಕೊಂಡೇ ಮಾನವ ಪ್ರೇಮದ ಆಳವನ್ನು, ಸತ್ಯ, ಶಿವ, ಸೌಂದರ್ಯದ ಸಾಕ್ಷಾತ್ಕಾರವನ್ನು ಕಾಣುವದಾಗಿ ಉದ್ಘೋಷಿಸಿದನು. 'ಬ್ರೌನಿಂಗ್'ನಂಥ ಕ್ರೈಸ್ತ ಮತದ ಕಟ್ಟಾಳು ವಿಜ್ಞಾನವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಕಂಡು ಬದುಕಿನಲ್ಲಿ ಇಂದು

ಕಾಣುವ ವೈಪರೀತ್ಯ ಮತ್ತು ವಿರೋಧ ಭಾವಗಳ ಉಪಶಮನ ಮಾಡಿ ಸಾಹಿತ್ಯವನ್ನು ಬದುಕಿನ ಶಾಶ್ವತ ಮೌಲ್ಯವನ್ನಾಗಿ ಮಾಡಲು ಯೋಚಿಸಿದನು. ವಿಶ್ವಕವಿ ರವೀಂದ್ರರ ಕೃತಿಗಳೂ ಕೂಡ ಕಾವ್ಯ ಮತ್ತು ಜೀವನಗಳ ಪರಸ್ಪರ ಸಂಬಂಧದ ನಿಗೂಢ ರಹಸ್ಯವನ್ನೇ ಉದ್ಘಾಟಿಸುತ್ತಿರುವದನ್ನು ನಾವು ಕಾಣುತ್ತೇವೆ. ಅವರ "ಸ್ವರ್ಗ ಸಬಿದಾ" – 'ಸ್ವರ್ಗದಿಂದ ಅಗಲಿದಾಗ' ಎಂಬ ಸುಂದರ ಕಥೆಯೊಂದನ್ನಿಲ್ಲಿ ಕೊನೆಯದಾಗಿ ಸ್ಮರಿಸಿಕೊಳ್ಳಬಹುದು. 'ಒಬ್ಬ ವ್ಯಕ್ತಿ ಬಹು ಕಾಲದಿಂದಲೂ ಸ್ವರ್ಗ ಸುಖವನ್ನನುಭವಿಸುತ್ತಿದ್ದಂತೆ ಅವನ ಪುಣ್ಯ ಕ್ಷೀಣಿಸುತ್ತದೆ. ಆಗ ಅವನು ಮತ್ತೆ ಮರಳಿ ಭೂಮಿಗೆ ಬರಬೇಕಾದ ಹೊತ್ತು ಗೊತ್ತಾಗುತ್ತದೆ. ಅಲ್ಲಿನ ಸುಖ ದೂರಾಮುದಕ್ಕೆ ಅತ ಪರಿತಪಿಸುತ್ತಾನೆ. ಸ್ವರ್ಗದಿಂದ ಮರಳುವಾಗಲೂ ಕಣ್ಣಲ್ಲಿ ನೀರು ಬಂದುವಲ್ಲ ಎಂದು ಶೋಕಿಸುತ್ತಾನೆ. ಈ ವರೆಗೆ ಅವನು ಅನುಭವಿಸಿದ್ದು 'ಆನಂದವೊಂದನ್ನೇ', ಶೋಕ ಈಗ ಅವನನ್ನು ಮುತ್ತಿ ಕಂಗೆಡಿಸುತ್ತದೆ. ಕೆಲಹೊತ್ತು ನಿಂತು ಸ್ವರ್ಗದಲ್ಲಿಯೂ ಶೋಕ ಕಾಲಿಟ್ಟರೆ ಹೇಗೆ ? ಎಂದು ಆಲೋಚಿಸುತ್ತಾನೆ. ಗಾಳಿಯಿಂದ ಕೇಳಿ ಬರುವ ಮರ್ಮರನಾದ ಆಗ ಅಲ್ಲಿಯೂ ಕೇಳಬಹುದು. ದಿನದ ಬೆಳಗು ಅಡಗಿ ಕತ್ತಲೆ ಆವರಿಸಬಹುದು. ಆದರೆ ಇದೆಲ್ಲ ಸ್ವರ್ಗದಲ್ಲಿ ಎಂತು ಸಾಧ್ಯ ? ಮರುಗಳಿಗೆಯಲ್ಲೇ ಅವನಿಗೆ ಮಾನವ ಲೋಕದ ಬಗೆಗೆ ಒಂದು ಆಸ್ಥೆ ಮೂಡುತ್ತದೆ. ಸುಖ – ದುಃಖಗಳೆರಡೂ ಇರುವದರಿಂದಲೇ ಮಾನವನ ಬದುಕಿಗೊಂದು ಲಾವಣ್ಯ ದೊರಕಿದೆ. ಸ್ವರ್ಗದಲ್ಲಿರುವವರು ತ್ರಿಲೋಕಸುಂದರಿಯರಾದರೇನಾಯಿತು ? ಅವರ ಪ್ರೇಮದಲ್ಲಿ ವೇದನೆಯಿಲ್ಲ, ಅತೃಪ್ತಿಯಿಲ್ಲ, ಕೂಡುವಿಕೆಯು ಇಚ್ಛೆಯಿಲ್ಲ, ಅಗಲುವಿಕೆಯು ದುಃಖವಿಲ್ಲ. ಇವೆರಡರ ಭಾವಸಂಗಮ ಮರ್ತ್ಯಜೀವನದಲ್ಲಿರುವದು ಒಂದು ಅದೃಷ್ಟವೇ ಸರಿಯೆನ್ನುತ್ತಾನೆ. ಲೋಕದಲ್ಲಿ ಎಷ್ಟೊಂದು ಅವಸ್ಥೆಗಳಲ್ಲಿ ಪ್ರೇಮದ ಸಾಕ್ಷಾತ್ಕಾರ ಸಾಧ್ಯ ! ವಾತ್ಸಲ್ಯ, ದಾಸ್ಯ, ಸಖ್ಯ, ಮಾಧುರ್ಯ ಭಾವಗಳೆಲ್ಲ ಒಂದೊಂದು ವಿಧದ ಪ್ರೇಮವೇ ಅಲ್ಲವೇ ? ಇವುಗಳನ್ನು ಅರ್ಪಿಸಿದಾಗ ಪರಮಾತ್ಮನು ಒಲಿಯುವನೆಂದು ವೈಷ್ಣವರು ಹೇಳುವರು. ಭಾಗವತ್ಸಾಕ್ಷಾತ್ಕಾರ ಈ ಲೋಕದಲ್ಲಿಯೇ ಆಗುತ್ತಿರುವಾಗ ಮತ್ತೆ ಬೇರೆ ಲೋಕದ ಹಂಗೇಕೆ ? ಎಂಬುದಾಗಿ ಸಂತೃಪ್ತಿಪಟ್ಟು ಸ್ವರ್ಗದಿಂದಿಳಿದು ಬಂದು ಮರ್ತ್ಯ ಜೀವನವನ್ನು ಅಪ್ಪುಗೊಳ್ಳುತ್ತಾನೆ. ಖ್ಯಾತ ನಾಟಕಕಾರ 'ಬರ್ನಾಡ ಶಾ' ಅವರ (Man and Superman) ಎಂಬ ನಾಟಕವೂ ಕೂಡ ರವೀಂದ್ರರ ಕಥೆಯನ್ನೇ ಹೋಲುತ್ತದೆ. ಅದರಲ್ಲಿ ಸ್ವರ್ಗದಿಂದ ಬೇಸತ್ತು ಮರ್ತ್ಯಕ್ಕಿಳಿದು ಬಂದ ಒಬ್ಬನ ಪಾತ್ರ ಚಿತ್ರಣವಿದೆ.

ಈ ವರೆಗಿನ ಸಮಾಲೋಚನೆಯಿಂದ ಮಾನವ ಜಗತ್ತು ಮತ್ತು ಮಾನವೀಯ ಭಾವಗಳೇ ಮಹಾಕಾವ್ಯದ ಉದ್ಗಮ ಸ್ಥಾನವೆಂಬುದು ಸ್ಪಷ್ಟವಾಗುತ್ತದೆ. ಮರ್ತ್ಯ ಜೀವನದ ಬಗೆಗೆ ನಾವು ತೋರುವ ಜಿಗುಪ್ಸೆ, ಅಶ್ರದ್ಧೆ, ವೈರಾಗ್ಯಗಳು ಸಾಹಿತ್ಯಕ್ಕೆ ಪ್ರೇರಣೆ ನೀಡಿರದೆ ಪ್ರಪಂಚದಲ್ಲಿ ನಾವು ಕಾಣುವ ನಿರಂತರ ಹೋರಾಟ, ಬದುಕಿನಲ್ಲಿ

ತೋರುವ ಶ್ರದ್ಧೆ, ಮತ್ತು ಮಾನವೀಯ ಗುಣಗಳಾದ ಪೌರುಷ, ಸ್ವಾಭಿಮಾನ, ಪ್ರೇಮ, ಆನಂದಗಳೇ ಸಾಹಿತ್ಯಕ್ಕೆ ಸ್ಫೂರ್ತಿಸೆಲೆಯಾಗಿವೆ. ಇವುಗಳ ಆವಿಷ್ಕಾರವಾಗ ಬೇಕಾದುದು ಇಲ್ಲಿಯೇ ಆದುದರಿಂದ ವಿಶ್ವ ಸಾಹಿತ್ಯಕ್ಕೆ ಮರ್ತ್ಯಜೀವನವೇ ಒಂದು ಒರೆಗಲ್ಲಾಗಿದೆ.

ಬಾಕೀ ಇತಿಹಾಸ: ಒಂದು ವಿಶ್ಲೇಷಣೆ

ದೇಶಪಾಂಡೆ ಸುಬ್ಬರಾಯ

ಸೀತಾನಾಥ ಎಂಬ ವ್ಯಕ್ತಿಯ ಬದುಕಿನ ಒಂದು ದುರಂತ ಘಟನೆ; ಪ್ರತಿಯೊಂದರಲ್ಲಿ ಪ್ರಕಟವಾದ ಸುದ್ದಿ. ಈ ವರದಿಯೊಂದನ್ನು ಮಾತ್ರವೇ ಬಲ್ಲ ಶರದ್ ಆತನನ್ನು ಕುರಿತು ಒಂದು ಕಥೆಯನ್ನು ಬರೆಯುತ್ತಾನೆ. ಬರೆಯುವದು ಒಂದು ನೆಪ ಮಾತ್ರ. ಆ ಮೂಲಕ ಬದುಕಿನ ಆಳ ವಿಷಣ್ಣತೆ, ಕ್ರೌರ್ಯಗಳನ್ನು, ಆದರೆ ಮೇಲ್ ತೋರಿಕೆಯ ಅಸಂಬದ್ಧತೆಯನ್ನು ಹೊದ್ದು ನಿಂತ ಕ್ರೂರ ಸತ್ಯವನ್ನು ಬಿಂಬಿಸಿ ಸೀತಾನಾಥನ ಆತ್ಮಹತ್ಯೆಯ ಸಮರ್ಥನೆ. ಉತ್ತರಾರ್ಧದಲ್ಲಿ ತನ್ನ ಸ್ವಪ್ನಭ್ರಮಾವಸ್ಥೆಯ ಕೆಲ ಗಳಿಗೆಗಳಲ್ಲಿ ಸೀತಾನಾಥನ ಅಸ್ತಿತ್ವ–ಅನಿಸಿಕೆಗಳೆದುರು ಮುಖಾಮುಖಿ ನಿಲುವು. ಈ ಹಂತದಲ್ಲಿ ತನ್ನದೇ ಬದುಕಿನ ಅರ್ಥಸತ್ತ ಯಾಂತ್ರಿಕತೆ, ಸೋತುಹೋದ ಚೇತನ, ಕೊರಕಲೊಡೆದ ಸಂಬಂಧಗಳ ವಿಶ್ಲೇಷಣೆ ಮತ್ತು ಬದುಕಿನ ಒಟ್ಟು ಅರ್ಥಹೀನತೆಯತ್ತ ದಿಗ್ಭ್ರಾಂತ ದರ್ಶನ. ಸಧ್ಯದ ಸಮಾಜದ ಒಳಪದರುಗಳನ್ನು ಸಮರ್ಥವಾಗಿ ಹಿಂಜುವ, ಬಾದಲ್ ಸರಕಾರರ 'ಬಾಕೀ ಇತಿಹಾಸ' ಬದುಕಿನ ಒಂದು ಸತ್ವಪೂರ್ಣ ಅನ್ವೇಷಣ.

ಬೇಸರದ ಆದಿತ್ಯವಾರವೊಂದನ್ನು ಹೇಗೆ ಕಳೆಯಬೇಕೆಂಬ ಯೋಜನೆಯಲ್ಲಿರುವ ದಂಪತಿ–ಶರದ್ ಮತ್ತು ವಾಸಂತಿಗಳಿಗೆ ಪತ್ರಿಕೆಯೊಂದರಲ್ಲಿ ತಮಗೊಮ್ಮೆ ಪರಿಚಯವಾಗಿದ್ದ ಸೀತಾನಾಥ ಎಂಬ ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡದ್ದು ತಿಳಿದು ಬರುತ್ತದೆ. ತಾನು ಬರೆಯಬೇಕೆಂದುಕೊಂಡಿರುವ ಕತೆಯೊಂದರ 'ವಸ್ತು'ವಿಗಾಗಿ ಒದ್ದಾಡಿಕೊಳ್ಳುತ್ತಿದ್ದ ವಾಸಂತಿ, ಆತ್ಮಹತ್ಯೆಯ ಈ ಘಟನೆಯನ್ನು ಭೂಮಿಕೆಯಾಗಿಟ್ಟುಕೊಂಡು ಬರೆಯುವ ಕತೆಯಲ್ಲಿ ಹಣ, ಮನೆ. ಪ್ಲಾಟು. ಸ್ವತಂತ್ರಬದುಕು. ಆಸ್ತಿಗಳ ಸುಂದರ ಕನಸುಗಳಲ್ಲಿದ್ದ ಹೆಂಡತಿಯಿಂದ; ಸತ್ತವನೆಂದಿದ್ದೂ ಸಾಯದಿದ್ದ ಮನುಷ್ಯನಿಂದಾಗಿ, ತಾನು ಪೂರ್ತಿ 'ಪಾಪರ್'ನಾಗಿದ್ದನ್ನು ಎಷ್ಟೆ ಬಚ್ಚಿಟ್ಟಿದ್ದರೂ,ಒಮ್ಮೆ ಕೋರ್ಟ್ ಸಮನ್ಸ್ ಒಂದರಿಂದಾಗಿ, ಕಟ್ಟಿದ ವೇಷವೆಲ್ಲ ಕಳಚಿ ಬಿದ್ದು. ತನ್ನ ಹೆಂಡತಿಕನಕ ಗೃಹ–ತ್ಯಾಗ ಮಾಡಿದಾಗ, ಮೂಡುವ ಆಳವಾದ ನೋವು. ವಿಷಣ್ಣತೆ. ದುಃಖಗಳನ್ನೆದುರಿಸಲಾಗದೆ ಸೀತಾನಾಥ್ ಆತ್ಮಹತ್ಯೆಗೆಳಸುತ್ತಾನೆ.

ವಾಸಂತಿ ಬರೆದ ಈ ಕಥೆಗೆ–ಆತ್ಮಹತ್ಯೆಯ ಪ್ರಕರಣಕ್ಕೆ–ಬೇರೊಂದು ರೆಕ್ಕೆ ಮೂಡಿಸಲು ಶರದ್ ಬರೆಯುವ ಕತೆಯಲ್ಲಿ: ಶಾಲೆಯೊಂದರ ಶಿಸ್ತಿನ ಮುಖ್ಯೋಪಾ–ಧ್ಯಾಯನಾದ ಸೀತಾನಾಥ್, ವಿದ್ಯಾರ್ಥಿಯೊಬ್ಬನ ಸಣ್ಣ ತಪ್ಪಿಗಾಗಿ ತಾನೇ ವಿಧಿಸಿದ ಕ್ರೂರ

ಶಿಕ್ಷೆಯೊಂದರ ಹಿನ್ನೆಲೆಯಲ್ಲಿ, ತನ್ನ ಮನದಲ್ಲಿಯೇ ಆಳವಾಗಿ ಬೇರುಬಿಟ್ಟಿದ್ದ, ಈ ಹಿಂದೆ ತನ್ನ ಬದುಕಿನಲ್ಲಿ ಕಪ್ಪು ಕಲೆಯೊಂದನ್ನು ಹಿಂಡಿಹೋದ ಪಾಪಕೃತ್ಯವೊಂದರ ಕುದಿಯುವ ಪಶ್ಚಾತ್ತಾಪವನ್ನು ಮತ್ತು ಮುಂದೆ ಕ್ಷಿಪ್ರದಲ್ಲೇ (ಪ್ರಾಯಶಃ) ಜರುಗಬಹುದಾದ ಇನ್ನೊಂದು ಪಾಪದ ಸೂಚನೆಯನ್ನು ಗುರುತಿಸಿಕೊಂಡು ಅದನ್ನೆದುರಿಸಲಾಗದ ಪಾಪಪ್ರಜ್ಞೆಯ ತೀವ್ರ ಒತ್ತಡದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಈ ಎರಡೂ ಕಥೆಗಳಾಚೆಯಲ್ಲಿ. ಒಂದು ಸ್ವಪ್ನ–ಭ್ರಮಾವಸ್ಥೆಯ ಸನ್ನಿವೇಶದಲ್ಲಿ ಶರದ್, ತನ್ನ ಸುಪ್ತಮನಸ್ಸಿನಲ್ಲಿ ತೊಳಲಾಡುತ್ತಿರುವ ತನ್ನನ್ನೇ, ಆದರೆ ಸೀತಾನಾಥನ ರೂಪದಲ್ಲಿ ಎದುರಿಸುತ್ತಾನೆ. ಸೀತಾನಾಥನ ಕಥೆಯ ನೆಪದಲ್ಲಿ ಮೆಟ್ಟಿಲು ಮೆಟ್ಟಿಲಾಗಿ, ಅರ್ಥ ಕಳೆಚಿದ ತನ್ನ ಬದುಕಿನ ಸೋಪಾನಗಳನ್ನು ಎಣಿಸಿ ನೋಡುತ್ತಾನೆ. ಆದರೆ, ಶರದ್‌ನಲ್ಲಿ, ಸೀತಾನಾಥನಂತೆ ಬಾಕೀ ಇತಿಹಾಸದ ಭೀಕರತೆಯನ್ನು ಎದುರಿಸುವ ತಾಕತ್ತು ಇಲ್ಲದ್ದರಿಂದಲೇ. ತನ್ನ ಸ್ವಪ್ನ ಭ್ರಮಾವಸ್ಥೆಯಲ್ಲಿಯೂ ಕೂಡ, ನೇರವಾಗಿ ತನ್ನನ್ನೇ ಎದುರಿಸುವುದಕ್ಕೆ ಬದಲಾಗಿ, ಸೀತಾನಾಥನ ಕಲ್ಪಿತ ವ್ಯಕ್ತಿಯ ಆವರಣದ ಆಸರೆ ಪಡೆಯುತ್ತಾನೆ. ಆ ಎದುರಿಸುವಿಕೆಯಲ್ಲಿಯೂ ತನ್ನ ಬದುಕಿನ ಸತ್ತ್ವದ ಸಾವನ್ನು ಒಪ್ಪಲಾರದೆ, ಒಪ್ಪದಿರಲಾರದೆ, ದೊಡ್ಡ ಒದ್ದಾಟಕ್ಕೀಡಾಗಿ, ಈ ತೊಳಲಾಟದಲ್ಲಿಯೇ ಬಾಕೀ ಇತಿಹಾಸದ ಒಟ್ಟು ದರ್ಶನಕ್ಕೆ ಎರವಾಗುತ್ತಾನೆ.

ಶ್ರೀ ಕುರ್ತಕೋಟಿ ಅವರಂವಂತೆ[೧] 'ಈ ನಾಟಕ, ಕೇವಲ ಎರಡು ಘಟನೆಗಳ ತಾಕಲಾಟ' ಮಾತ್ರವಾಗಿರದೆ ಮೇಲು ಬೆಸುಗೆಯ ತೋರಿಕೆಯ ಅನ್ಯೋನ್ಯತೆಗಳ ಆಧುನಿಕ ಬದುಕು ಮತ್ತು ಸತ್ತ ಸಂಬಂಧ. ನಿರ್ಜೀವ ಯಾಂತ್ರಿಕತೆ, ಅರ್ಥಹೀನ ಅನಿಸಿಕೆಗಳ ಒಳಪದರುಗಳ, ಸದ್ಯದ ಯುಗವೈಷಮ್ಯದ ಒಂದು ಅರ್ಥಪೂರ್ಣ ಮುಖಾಮುಖಿಯಾಗಿದೆ.

ಇಡಿಯ ನಾಟಕದ ಕೊನೆಯಲ್ಲಿ, ಶರದ್ ಎದುರಿಸುವುದು ಸೀತಾನಾಥನ ವೇಷದಲ್ಲಿದ್ದ ಶರದ್‌ನನ್ನೇಯಾದ್ದರಿಂದ "ನಾಟಕದ ಕೊನೆಯ ಭಾಗದಲ್ಲಿ ಸೀತಾನಾಥ್. ತೀರ ಸಾಮಾನ್ಯ ವ್ಯಕ್ತಿಯೆಂಬುದು ಗೊತ್ತಾಗುತ್ತದೆ. ಒಂದು ದೃಷ್ಟಿಯಿಂದ ಅವನು Anti - Hero ಅದ್ದರಿಂದಲೇ ಅವನಿಗೆ ನಾಯಕನ ವ್ಯಕ್ತಿತ್ವ ಅಗತ್ಯವಾಗಿದೆ" ಎಂಬ ಶ್ರೀ ಕುರ್ತಕೋಟಿಯವರ ವಿಚಿತ್ರವಾದವನ್ನು ಸ್ವಲ್ಪ ಬದಿಗಿರಿಸಿದರೆ, ಇಲ್ಲಿ ತೀರ ಸಾಮಾನ್ಯ ವ್ಯಕ್ತಿಯಾಗಿರುವನು ಮತ್ತು Anti - Hero ಆಗಿಯೂ ನಾಯಕನ ವ್ಯಕ್ತಿತ್ವಗಳಿಕೆಗಾಗಿ ಪರದಾಡುವವನು ಶರದನೇ ಹೊರತು ಸೀತಾನಾಥ್ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪತ್ರಿಕೆಯಲ್ಲಿ ಒಂದು ತುಣುಕು ಸುದ್ದಿಯಾಗಿ. ಸತ್ತು ನೀಗಿಹೋದ ಸೀತಾನಾಥನೇ ಈಗಾಗಲೇ ಆತನ ಆತ್ಮಹತ್ಯೆಯ ಸುದ್ದಿಯನ್ನೋದಿ ಆತನ

---

೧. ವಿಮರ್ಶೆ : ಪ್ರಜಾವಾಣಿ.

ಮೇಲೊಂದು ಕಥೆಯನ್ನೂ ಬರೆದು ಮುಗಿಸಿದ ಶರದ್‌ನನ್ನು ತಾನೇ ಸ್ವತಃ ಕಾಣಲು ಬರುತ್ತಾನೆಂದು ವಿಶ್ಲೇಷಿಸಿಕೊಂಡು, "ಇವರಿಬ್ಬರ ಬಾಳಿನ ವಿವರಗಳು ತಲೆ ಹಿಡಿಯು ವಷ್ಟು ಒಂದೇ ಆಗಿವೆ"[೨] ಎಂದುಕೊಳ್ಳುವುದು ತೀರಾ ಅವಾಸ್ತವ ಎನಿಸುತ್ತದೆ. ಇಲ್ಲಿ ಶರದ್‌ನನ್ನು ಕಾಣಲು ಬಂದ ಸೀತಾನಾಥ ಮೂಲತಃ ಶರದ್‌ನ ಸುಪ್ತ ಮನಸ್ಸಿನ ಸುರು ಬಿದ ಅನಿಸಿಕೆಗಳ ಒಂದು ಪಡಿನೆಳಲು ಮಾತ್ರ ಆಗುತ್ತಾನೆ. ಆದ್ದರಿಂದಲೇ ಸೀತಾನಾಥನ ಬದುಕಿನ ವಿವರಗಳಿಗೆಲ್ಲ–ಮೂಲತಃ ತಾನೇ ಅವನು–ಮತ್ತು ಅವನ ಅನುಭವ ಗಳೆಂದರಿತು, ಅವುಗಳನ್ನು ಆಳವಾಗಿ ವಿಶ್ಲೇಷಿಸಿಕೊಳ್ಳುವ ಗಟ್ಟಿತನವಿಲ್ಲದ್ದರಿಂದಲೇ ಶರದ್ ಆಶ್ಚರ್ಯ ಸೂಚಿಸುತ್ತಾನೆ. ಇದು, 'ನನ್ನ ಕತೆ' ಎಂದು ಉತ್ತೇಜಿತನಾಗಿ ಕೇವಲ ಉದ್ಗಾರ ಹೊರಡಿಸುತ್ತಾನೆ ಹೊರತು, ತನ್ನ ಶಬ್ದಗಳ ಬೆಂಬತ್ತಿ ಆಳಕ್ಕಿಳಿದು. ಸತ್ಯದ ಎದುರಾಎದುರು ನಿಲ್ಲುವುದಿಲ್ಲ; ವಾಸ್ತವವನ್ನೊಪ್ಪುವ ಸಂದರ್ಭದಲ್ಲೆಲ್ಲ 'ಹೆಂಡತಿ' 'ನೆಂಟರು', 'ಕೆಲಸ' 'ಬದುಕುವ ಆಸೆಗಳ ನೆಪದಲ್ಲಿ ತನ್ನನ್ನೇ ಮರೆಮಾಚಿಕೊಳ್ಳುತ್ತಾನೆ. ಎಂತಲೇ (ಕಥೆಗಳಲ್ಲಿ) ಸೀತಾನಾಥನಿಗಾದಂತೆ ಶರದ್‌ನಿಗೆ ಬಾಕೀ ಇತಿಹಾಸದ ದರ್ಶನ ಲಭಿಸುವುದಿಲ್ಲ.

ತನ್ನ ಮನದಲ್ಲಿ ರೂಪುಗೊಳ್ಳುತ್ತಿರುವ ಹುಳಿತ ಮೌಲ್ಯಗಳ ಕುರಿತು ಅಸಹನೀಯತೆ, ವಿಷಾದ ಮತ್ತು ಅಸಾಯಕತೆಗಳ ಸಂಕೇತವಾಗಿ, ಶರದ್, ಬಾಹ್ಯ ಜಗತ್ತಿನಲ್ಲಿ ಸಂಗ್ರಹಿಸುವ ಸುದ್ದಿ ಸಂಗ್ರಹಕ್ಕೆ ಬದಲಾಗಿ ಸೀತಾನಾಥನ (ಕೊನೆಯ ಆಗಮನದಲ್ಲಿ) ಚಿತ್ರ ಸಂಗ್ರಹದ ಬದಲಾವಣೆ ಕೂಡ ತುಂಬ ಅರ್ಥಪೂರ್ಣ. ಸುದ್ದಿಗಳಲ್ಲಿರುವ ವೈಚಾರಿಕತೆಯನ್ನು ಮೆಲುಕಿಸುವ ಜಾಗೃತಪ್ರಜ್ಞೆಗೆ ವಿರುದ್ಧವಾಗಿ ಕೆಲ ಕ್ಷಣಗಳ 'ಸ್ಟಿಲ್ಸ್' (ಸ್ಥಿರ ಚಿತ್ರ)ಗಳನ್ನು ಮಾತ್ರ ಹೆಚ್ಚಾಗಿ ತನ್ನಲ್ಲಿ ಒಡಮೂಡಿಸಿಕೊಳ್ಳುವ ಸುಪ್ತ ಮನಸ್ಸಿನ ಕ್ರಿಯೆಗೆ ಸರಿಯಾಗಿ ಒಪ್ಪುವಂತಹ ಈ ಬದಲಾವಣೆ ಸಮರ್ಥನೀಯ.

ಶರದ್ ಮತ್ತು ಸೀತಾನಾಥರ ಸ್ವಪ್ನ ಭ್ರಮಾವಸ್ಥೆಯ ಮುಖಾಮುಖಿಯ ಒಂದು ಹಂತದಲ್ಲಿ 'ನೀನೇಕೆ ಆತ್ಮಹತ್ಯೆ ಮಾಡಿಕೊಂಡೆ ಸೀತಾನಾಥ್'? ಎಂದು ಕೇಳಿದಾಗ, 'ನೀನೇಕೆ ಆತ್ಮಹತ್ಯೆ ಮಾಡಿಕೊಂಡಿಲ್ಲ, ಶರದ್'? ಎಂದು ಕೇಳುವವನು ನಿಜವಾಗಿಯೂ ಸೀತಾನಾಥ ಆಗಿರದೆ, ತಾನೇಕೆ ಇನ್ನೂ ಆತ್ಮಹತ್ಯೆ ಮಾಡಿಕೊಂಡಿಲ್ಲ? ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುವ ಶರದ್‌ನೇ ಆಗಿದ್ದಾನೆ. ಆದರೆ. ಒಟ್ಟಾರೆ ಈ ಸೀತಾನಾಥನೆಂಬ ವ್ಯಕ್ತಿಯ ಆತ್ಮಹತ್ಯೆಯ ನಿಜವಾದ ಕಾರಣ ಮಾತ್ರ ನಿಗೂಢವಾಗಿ ಉಳಿದು ಬಿಡುತ್ತದೆ: ಈಗಾ ಗಲೇ ಸ್ಪಷ್ಟಪಡಿಸಿದಂತೆ ಶರದ್. ತನ್ನ ಭ್ರಮಾವಸ್ಥೆಯಲ್ಲಿ ಎದುರಿಸುವುದು ಶರದ್ ನನ್ನೆ ಆದ್ದರಿಂದ ಮತ್ತು ಆಗಲೇ ಸೀತಾನಾಥ್ ಆತ್ಮಹತ್ಯೆ ಮಾಡಿಕೊಂಡು ಜೀವನ ನೀಗಿರುವ ವ್ಯಕ್ತಿಯಾದ್ದರಿಂದ ಅವನ ಆತ್ಮಹತ್ಯೆಯ ಕಾರಣ ಅವನ ಬಾಯಿಯಿಂದಲೇ

೨. ಶ್ರೀ ಕುರ್ತಕೋಟಿ: ವಿಮರ್ಶೆ: ಪ್ರಜಾವಾಣಿ.

ತಿಳಿಯುವುದು ಸಾಧ್ಯವೂ ಇಲ್ಲ. ಅದು ವೈಯಕ್ತಿಕವಾಗಿ ಏನೇ ಆಗಿರಬಹುದಾದ್ದರಿಂದ ಒಂದು ದೃಷ್ಟಿಯಿಂದ ಆ ಅಂಶ ಇಲ್ಲಿ ಅಮುಖ್ಯ ಕೂಡ. ಆದರೆ ಆತನ ಆತ್ಮಹತ್ಯೆಯು ಒಂದು ನೆಪದಿಂದ. ಆತ ಬದುಕಿದ್ದನೆಂಬ ಒಂದು ಅಸ್ತಿತ್ವಕ್ಕೆ ಕಲ್ಪನೆಯು ಗರಿಗೆರಿಸಿ, ಅವಕ್ಕೊಂದು ಜೀವಂತ ಮೂರ್ತರೂಪ ಕೊಡುತ್ತಲೇ ಒಟ್ಟು ನಿಲುವಿನ ಒಟ್ಟು ಅರ್ಥದ, ಅನರ್ಥದ ಯಾಂತ್ರಿಕತೆಯು. ವಿಕ್ಷಣ್ಯತೆಯು ಬೇರುಗಳನ್ನು ಅಲುಗಿಸಿ, ವಾಸ್ತವ ಬದುಕಿನ ವಿರಾಟ್ ದರ್ಶನಕ್ಕೆ ತೊಡಗುವುದು ಮಾತ್ರ ಇಲ್ಲಿ ತುಂಬ ಮಹತ್ವದ ಸಂಗತಿ.

ಕಥೆಯ ಕೊನೆಯಲ್ಲಿ, ಬದುಕಿ ಸಾಯುತ್ತಿರುವ ಶರದ್, ಸತ್ತು ಬದುಕುತ್ತಿರುವ ಸೀತಾನಾಥ; ಶರದ್‌ನ ಸ್ವಯಂ ನಿರ್ಮಿತ ಪೊಳ್ಳು ವ್ಯಕ್ತಿತ್ವದ ಕುಸಿತಗಳ ಒಟ್ಟು ಸಂಕೇತ ವಾಗುತ್ತಾರೆ.

ಸಿರಿಯಾಳ ಚಂಗಳೆ

ಸಂ: ವೀರಣ್ಣ ರಾಜೂರ

ಶಿವಭಕ್ತರು ಕೇಳಿರಿ ಕುಂತs
ಹೇಳತೀನಿ ಒಂದ ಮಾತs
ನಾ ಹಾಡತೀನಿ ಶರಣಮಾಡುಂತ ॥ ಪ ॥

ಮಾನಾಡ ದೈವ ಬಂದ ಕುಂತೀರಿ ತಲಿಗೂಡಿ
ಹುಂಚ್ಚಾದೆ ನಾನು ಚಂಗಳವ್ವ ಭಕ್ತಿ ನೋಡಿ ॥ ಅ. ಪ. ॥

ಸಿರಿಯಾಳರಾಜ ಸತಿಪುರುಷ
ಚಂಗಳೆವ್ವ ಅತಿಹರುಷ
ಸತಿಪತಿ ಖಾಸು ಇದ್ದರೊ ಜೋಡಿ ।
ಇವ್ರ ಭಕ್ತಿ ನೋಡಬೇಕೆಂದು ಆಗ
ಜಂಗಮಯೋಗಿ ಬಂದ ಮರ್ತ್ಯದೊಳಗ
ರುಂದ್ರಾಕ್ಷಿ ರುಂಡ ಮಾಲಿ ಹಾಕಿದ್ದ ಕೊರಳಾಗ
ಜೋಳಿಗಿ ದಂಡಕೋಲು ಹಿಡಿದಿದ್ದ ಕೈಯಾಗ
ಶಿವ ತಪ್ಪಿಸ್ಯಾನ ತನ್ನ ರೂಪಾಗ
ಹಾಕ್ಯಾನೊ ಕ್ಯಾವಿ ಕೈಪ ಮೈಯೊಳಗ ॥ ಜೀ ॥

ನೌನಾರಸಂದಿಗೆಲ್ಲ ತೂತು ಅದರಾಗ
ಸೋರುತದ ಕೀವರಕ್ತ ಕೆಟ್ಟ ಹೊಲಸು ನಾತ ಮೈಯ್ಯೊಳಗ
ಬಾಯಿಂ ಒಳಗಿನ ಜೊಲ್ಲು ಬೀಳತಿತ್ತು ಎದಿಮ್ಯಾಗ
ಮಾಹದೇವ್ರ ಮಹಿಮಾ ಎಷ್ಟs ಹೇಳಲಿ ಹೀಂಗ
ಕಣ್ಣಿಗೆ ಕಾಣಿಸ್ತಿದ್ದ ಹೇಸಿ ಅಯ್ಯೊ ಪರದೇಶಿ
ಕೇಳ್ರಿ ಮುಂದಿನ ಕತಿಯನ್ನಾ ॥ ಜೀ ॥

ಇಳುವು : ಇವನು ಇಂಥಾ ರೂಪಾ ತೊಟ್ಟುಕೊಂಡು
ಹೊಂಟಾನ ಓಣಿ ಒಳಗ
ಮೈ ನಾರುತಿತ್ತ ಜಿಡ್ಡs ಹೆಣಾ ಕೊಳವ್ರ ಹಾಂಗಾ ॥ ಜೀ ॥

ಮೊದಲ ಹೋಗಿ ಹೊಕ್ಕ ಶಿವಭಕ್ತರೋಣಿವಳಗ
ಯಾರು ಸೇರಲಿಲ್ಲ ಕಟಿಗಿಲ್ಲೆ ಶಿವದಾರೂ ಬಾವಾಗ ॥ ಜೀ ॥

ಏರು : ಆ ಯೋಗಿ ನೋಡಿದಾನೊ ಬಾವಾ ಸಾಕ್ಷಾತ್ ಶಿವಾ
ತಿರುಗಿದಾನೊ ಆ ಲೋಕ ನೋಡಿ |
ಮಾನಾಡದೈವ ಬಂದು ಕುಂತೀರಿ ತಲಿಗೂಡಿ
ಹುಚ್ಚಾದೆ ನಾನು ಚಂಗಳವ್ವ ಭಕ್ತಿ ನೋಡಿ || ಜೀ || ||೧|

ಊರಲ್ಲಿ ತಿರಗಿ ಬ್ಯಾಸತ್ತs ನೋಡಿದ ಅವನು ಸುತ್ತಮುತ್ತ
ಹೊಂಟಾನೊ ಮುತ್ತ ಚಂಗಳವ್ವ ಮನಿಗೆ
ವೇಷಗಾರ ಆಗಿದಾತ ಒದರೀದಾನ ಕೂಗಿ
ಆ ಶಬ್ದ ಹೋಗಿ ಬಿದ್ದಿತ ಚಂಗಳವ್ವ ಕಿವಿಗಿ
ಹೊರಗ ಬಂದು ಕೇಳ್ಯಾಳ ಭಕ್ತೀಲಿ ಏನು ಬೇಕು ನಿಮಗ
ಹೇಳ್ರಿ ಈಗ ನನಗ ಬೇಡಿದ್ದು ತಂದು ಕೊಡುವೆನು ಬೇಗ
ಪಾದಕ್ಕ ನಮಸ್ಕಾರ ಮಾಡತಾಳ ಹೋಗಿ ಆಗ
ಅವಹೇಳ್ಯಾನ ಸುಳ್ಳs ವಂದ ಚಂಗಳವ್ವ ಮುಂದ
ಈಗ ನಾ ಬಂದೀನಿ ಬಾಳ ಹಸುವಾಗಿ || ಜೀ ||

ಕೈ ಹಿಡದ ಕರದಾಳ ಮೆಲ್ಲಕ ತಡ ಇನ್ಯಾಕ
ಏಳ್ರಿ ಸಲ್ಲಿಸುದಕ ಜಂಗಮ ಯೋಗಿ |
ನಡಮನಿಯೊಳಗ ಗದ್ದಿಗಿ ಹಾಕ್ಯಾಳ ಹೋಗಿ
ಇಲ್ಲೆ ಸ್ವಲ್ಪ ಕೂಡ್ರಿ, ತುರ್ತವಾಗಿ
ಜಳಕಕ್ಕ ಬಿಸಿ ನೀರಯಿಟ್ಟು
ಆಗ ಜಟಪಟ ಕಾಸಿದಾಳೊ ಲಗಟ ಲಗಿಬೀಗಿ || ಜೀ ||

ಸಕ್ಕರಿ ಬುಂದೆವುಂಡಿ ಹಾಲಿನಲಿ ಸರಿಪಡಿಸಿ
ನೀಡ್ಯಾಳ ಎಡಿಗೆ ಬಿಸಿ ಅಡಿಗಿ
ಶ್ಯಾವಿಗಿ ಪಾಯುಸ ಸುರಗಿ ಹೋಳಿಗಿ
ನೀವು ಉಣ್ಣುವದನು ತರುವೆನು ಮೇಲಾಗಿ
ಬೇಡಿದ್ದು ಇಲ್ಲ ಅನ್ನುವುದಿಲ್ಲ ಬೇಡ್ರಿ ಖುಸಿಯಾಲಾ
ಎಲ್ಲಾ ಬಡಿಸುವೆನು ನಿಮ್ಮs ಎಡಿಗೆ || ಜೀ ||

ಇಳುವು : ಅವನು ಹೇಳ್ಯಾನ ಮಾಂಸದಡಿಗಿ ಮಾಡ ತಾಯಿ
ಬಾಯಿತೆರದ ಕೇಳತೀನಿ ಇದಕೇನುಪಾಯಿ || ಜೀ ||
ಎಳೆ ಎಳೆ ಕಂಡ ಕಡದು ಅಡಿಗೆ ಮಾಡಿ ನೀಡ ತಾಯಿ
ಮಾಂಸದ ಮ್ಯಾಲೆ ಮನಸಾಗಿ ಕೆಟ್ಟದ ನನ ಬಾಯಿ || ಜೀ ||

ಏರು : ಇಂದಿಗೆ ಆಯಿತು ಮೂರುದಿವಸ
ಉಂಡಿಲ್ಲ ಉಪವಾಸ ಬೇಡಿ ನರಮಾಂಸ ।
ಮಾನಾಡದೈವ ಬಂದು ಕುಂತೀರಿ ತಲಿಗೂಡಿ
ಹುಚ್ಚಾದೆ ನಾನು ಚಂಗಳವ್ವ ಭಕ್ತಿ ನೋಡಿ ॥ ಜೀ ॥ ॥ ೨ ॥

ಚಂಗಳವ್ವ ಮನಸಿಗೆ ಬಂತು ಜಂಗಮನ ಮಾತು
ಕೇಳಿದಳೊ ನಿಂತು ತಲಿಯುದೂಗಿ
ಗಂಡಹೆಂಡರ ಎಳಿ ತೊಡಿಯು ಕೊಯ್ದು ಮಾಡುವೆ ಅಡಿಗಿ
ಮಾಡಿ ನೀಡತೀನಿ ಉಂಡ್ಹೋಗ್ರಿ ಸಂತೋಷಾಗಿ ।
ಒಲ್ಲೆಂದಾನೊ ಇಬ್ಬರ ಮಾಂಸ ನಾರತೈತಿ
ಹೊಲಸ ಅಂದಾಕರ ಬಿರುಸು ಮುಳ್ಳುಗೋಗಿ ॥ ಜೀ ॥

ನಿನ್ನ ಮಗನ ಸಣ್ಣ ಕಂದ ಮೋಹದ ನಂದ
ಆಮಂದ ಕೊಯ್ಕೊಂಡ ಕುತ್ತ್ರsಗಿ
ಅವಗ ಕೊಯ್ದು ಚೂರಮಾಡಿ ಅಡಿಗಿ
ಇಷ್ಟಾದ್ರು ನಾನು ಉಣತೀನಿ ಸುಖಾಬಿಡತೀನಿ
ಹರಕಿ ಕೊಡತೀನಿ ಸಂತೋಷಾಗಿ ॥ ಜೀ ॥

ಚಂಗಳವ್ವ ಮಗ ಚಿಲ್ಲಾಳ
ಇದ್ದಾನೊ ಒಲು ನಿವುಳಾ
ಹೋಗಿದ್ದ ಸಾಲೀಗ ಸಣ್ಣ ಬಾಲಾ
ಓನಾಮ ಬರದು ಕೈಯಾಗ ಹಿಡಿದಿದ್ದ ಹಲಗಿ
ಊಟದ ಹೊತ್ತಿಗೆ ಸಾಲಿಂದ ಬಂದಾನೊ ಮನಿಗೆ
ಯಾಕ ಒಣಗೈತಿ ಹೇಳವ್ವ ನಿನ ಮಾರಿ
ಮಗ ಕೇಳತಾನ ಪರಿಪರಿ ತನ್ನ ತಾಯೀಗಿ ॥ ಜೀ ॥

ತಾಯಿಹೇಳತಾಳ ಮಗನ ಮುಂದ
ಕೇಳನನ ಕಂದ ಜಂಗಮ ಬಂದು ಆತ ಗಳಿಗಿ
ಮನಿಸ್ಯಾನ ಮಾಂಸ ಬೇಡಿ ಕುಂತಾನ ಹಸುವಾಗಿ
ಇದಕ್ಹ್ಯಾಂಗ ಮಾಡೂನ ಚಿಲ್ಲಾಳ ಹೇಳ ಬೇಗ
ಜಂಗಮನ ಒಲಿಸುವದು ಇಂದು ಹ್ಯಾಂಗ
ಎಳಿ ಮಾಂಸ ನಂದು ಕೊಯ್ಯವ್ವ ಕುತ್ತ್ರsಗಿ ॥ ಜೀ ॥

ಚಂಗಳವ್ವ ತಿಳದಾಳೊ ಆ ಕ್ಷಣಕ ತಡ ಇನ್ಯಾಕ
ಕೆಡವಿದಾಳೊ ನೆಲಕ ಮಂಗನಿಗೆ
ಹಿಂದವಂಂದ ನೋಡಲಿಲ್ಲ ಕೊಯ್ದಾಳೊ ಕಂತ್ತsಗಿ
ಸಣ್ಣಾಗಿ ಹೆಚ್ಚ್ಯಾಳೊ ತೊಗೊಂಡು ಈಳೀಗಿ
ತೆಗೆದಿಟ್ಟ್ಯಾಳೊ ಕಡದ ತಲಿ ನೆಲವಿನ ವ್ಯಾಗ
ನಾಳೆ ನೋಡುಂದಕ ಪಸಂದಾಗಿ || ಜೀ ||

ಇಳುವು : ಮಾಂಸ ಕಂದಿಯಂಲಾಕ ಒಲಿಮ್ಯಾಲೆ ಇಟ್ಟ್ಯಾಳೊ ಗಡಿಗಿ
ಸಾಹಿತ್ಯೆಲ್ಲಾ ಹಾಕಿ ಜಟಪಟ ಮಾಡಿದಾಳೊ ಸಾರಿನಡಿಗಿ ||ಜೀ||

ಜಳಕಕ್ಕ ಬಿಸಿ ನೀರs ಇಟ್ಟ್ಯು ಜಂಗಮಯೋಗಿ
ಕೀವ ರಕ್ತ ತೊಳದಾಳೊ ಬಚ್ಚಲಕ ತಾ ಹೋಗಿ || ಜೀ ||

ಏರು : ತಂಬಿಗಿ ಪಾತ್ರೆಯಂ ಬೆಳಗಿ ಗಂಗಾಳ ಚರಿಗಿ
ಹಾಕ್ಯಾಳೊ ಅಡ್ಡಣಗಿ ತಂದಾಳೊ ಎಡಿ |
ಮಾನಾಡ ದೈವ ಬಂದು ಕುಂತೀರಿ ತಲಿಗೂಡಿ ||ಜೀ|| ||೩||

ಜಂಗಮಂ ಹೇಳಿದನಾಗ ಚಂಗಳವ್ಗ
ಹಾಕಿದರವ್ಯಾಗ ಮಾಡಿ ನೀಡವ್ವ ನಾಲ್ಕು ಭಾಗಾ
ನಾವು ನೀವು ಕೂಡಿ ಉಣ್ಣಾನ ಮಾಂಸದ ಪಾಲಾ
ನೀವು ಉಣಲಿಕ್ರ ನಾನೂ ಉಣ್ಣೂದಿಲ್ಲಾ
ನಾರಿ ಕೇಳಿದಾಳೊ ಈ ಶಬುದ
ಅಯ್ಯೋ ಪ್ರಾರಬ್ಧ ಹಿಡಿದಾಳೊ ಬಿದ್ದುಕಾಲಾ ||ಜೀ||

ಐನೋರಂ ಹೇಳತಾರ ಅಕಲಾ
ಮೂರು ಮಂದಿ ಆಗಲಾ
ಮತ್ತೊಂದು ಪಾಲು ಮಾಡs ಮೇಲಾ
ತಡಮಾಡ ಬೇಡವ್ವ ಗಡಾ ಮಾಡಿ ನೀಡ ಮುದಲ
ಈ ಹೊಟ್ಟಿ ಹಸುವಾಗಿ ಬರುವಲ್ಲವು ಕೈಕಾಲ |
ನಾಲ್ಕು ಎಡಿಮಾಡ್ಯಾಳ ಪರಪರತ
ಮೀರಲಿಲ್ಲ ಮಾತ ಕೇಳ್ರಿ ನೀವು ಕುಂತದೈವೆಲ್ಲ ||ಜೀ||

ಚಂಗಳವ್ವಗ ಕೇಳಿದ ಭಕ್ತೀಲಿ
ಚಿಲ್ಲಾಳನ ತಲಿ ಇಟ್ಟೇದಿ ಎಲ್ಲಿ ಕಾಣೂದಿಲ್ಲಾ
ಅದ್ನ ಕುಟ್ಟಿ ಚಟ್ನಿಮಾಡಿ ಬಡಿಸಿದರ ಮೇಲಾ

ಅತಗೊಂತ ಕುಟ್ಟಿದರ ನಾನು ಉಣ್ಣುದಿಲ್ಲಾ
ಗಂಡ ಹೆಂಡರು ಇಬ್ಬರು ಕೂಡಿ ಕುಟ್ಟಬೇಕ ಹಾಡಿ
ಒಳ್ಳೇ ದನಿಮಾಡಿ ಸ್ವರಮೇಲಾ ||ಜೀ||

ಸತಿ-ಪತಿ–ತಗದಾರೊ ಹಂಚಗಿ ತೊಗೊಂಡಾರ ಒಣಕಿ
ಒಳಾಗ ತೆಲಿಹಾಕಿ ಕುಟ್ಟ್ಯಾರಲ್ಲಾ ಹಾಡಿ ಹಾಡಿ
ಕುಟ್ಟತಾರ ಅವರು ದನಿ ಕೋಕಿಲಾ
ಶರಣರು ಹೌದು ನೋಡಿ ಅಂದು ಖಾಸ ತಮ್ಮ
ಮಂಗನೀಗೆ ಕೊಂದಾರಲ್ಲಾ ||ಜೀ||

ಮೂರು ಮಂದಿ ಕೂಡಿ ಪಾತ್ರಿಕುಂತಾರ ಉಣ್ಣುದಕ
ಜಂಗಮ ಅಂದ ಚಂಗಳವ್ವ ನಿನ್ನ ಮಗನ ಕರಿ ತಡ ಇನ್ಯಾಕ ||ಜೀ||

ಕೈಮುಗಿದು ಚಂಗಳವ್ವ ಹೇಳಿದಳು ಆಕ್ಷಣಕ
ಸತ್ತಮಗ ಎಲ್ಲಿಂದ ಬರಬೇಕs ||ಜೀ||

ಇಳುವು : ಚಂಗಳವ್ವಗ ಸ್ವಾಮಿ ಆಗ ತಿಳಿಸಿದನು ಆ ಕ್ಷಣಕ
ನಿನ್ನ ಭಾವ ಶುದ್ಧಿ ಇರಬೇಕs ||ಜೀ||

ಕೂಗಿ ಕೂಗಿ ಚಂಗಳವ್ವ ಕರದಾಳ ನೋಡ್ರಿ ಆ ಕ್ಷಣಕ
ಬಾರಪ್ಪ ಮಂಗನ ಈ ಕ್ಷಣಕ ||ಜೀ||

ಏರು : ಭಾವ ಭಕ್ತಿ ಆಕಿದಿತ್ತುಮಂದಾ
ಜೀವಪಡದ ಕಂದ ಬೇಗನೆ ಬಂದ ಚಿಲ್ಲಾಳ ಓಡಿ
ಮಾನಾಡದೈವ ಬಂದು ಕುಂತೀರಿ ತಲಿಗೂಡಿ ||ಜೀ|| ||೪||

ಆಕಿಭಾವಕ್ಕೊಲ್ದು ಈಶ್ವರಾ ಸ್ವಾಮಿ ಶಂಕರಾ
ಬೇಗನೆ ಕರದರ ಬಂದನಿಂತs
ಏನು ಬೇಡತೀದಿ ಬೇಡವ್ವ ತೆಲಿಮ್ಯಾಲಿಟ್ಟೇನಿ ಹಸ್ತಾ
ಚಂಗಳವ್ವ ಅಂತಾಳ ಸ್ವಾಮಿ ಕೊಟ್ಟೀರಿ ನೀವು ಮಸ್ತಾ
ಇಲ್ಲಿಂದ ತೊಗೊಂಡ ನಡಿಯಿರಿ ಕೈಲಾಸಕ
ಸ್ವರ್ಗದಾಗ ಕೊಡ್ರಿ ಜಾಗಾಸಿಸ್ತಾ ||ಜೀ||

ನಾ ಏನ ಹೇಳಲಿ ವಿಸ್ತಾರಾ
ಹೂವಿನ ತೇರ ಮ್ಯಾಲಿಂದ ಬರರ ಇಳದ ಬಂತ
ಕಾಸಿಲ್ಲದೆ ಕೈಲಾಸಕೊಯ್ದಾನೊ ಭಗವಂತ

ಆಗ ನುಡಿದೀತ ಆಕಾಶವಾಣಿ ಚಂಗಳವ್ವ ಶರಣಿ
ಕಂಡ್ಲೊ ಗುರುವುನಿ ಕೈಲಾಸ ಸಿಸ್ತಾ ||ಜೀ||

ಇಳುವು : ಸತಿ–ಪತಿ–ಶರಣರ್ರು ಕೇಳಿರಿ ದೈವೆಲ್ಲಾ
ಬಂದ ತಾಪ ಪರಿಹಾರ ಆಗೂದುಂ ದೂರ ನಮುನಿಮುಂಗೆಲ್ಲಾ ||ಜೀ||
ಸುತ್ತ ಊರೊಳಗ ಇಂಗಳಗಿ ಇರುವದುಂ ಶಹರಾ
ಇಬ್ರಾಮುಸ್ಯಾವುಸ್ತಾದ ಶಾರ್ದೂಲಾ ||ಜೀ||

ಏರು : ಹಕೀಮು ಕಾಶೀಮು ಜತ್ತ ಜೋಡಿ
ಹಾಡತಾರ ಕೂಡಿ ವೈರಿ ಓಡಿಹ್ವಾದ ಖೋಡಿ |
ಮಣಾನಾಡ ದೈವ ಬಂದು ಕುಂತೀರಿ ತಲಿಗೂಡಿ
ಹುಂಚ್ಹಾದ ಚಂಗಳವ್ವ ಭಕ್ತಿ ನೋಡಿ ||ಜೀ|| ||೫||

[ಹಾಡಿದವರು: ಯುಮುನಪ್ಪ ಹಾಗೂ ಬಸಪ್ಪ ಗುರಿಕಾರ, ಬೆನಕನಾಳ]

ಬಯಕೆ

ಎಸ್. ಎಸ್. ಕೋತೀನ

ಸತ್ತು—
ಹಿರಿಯರಾದವ್ರು
ನಕ್ಷತ್ರ ಆಗ್ತಾರಂತ
ನಾನೂ ರಗಡ ಕೇಳೀನಿ
ಅಲ್ದ ರಗ್ಯಡ ನಂಬೀನಿ
ನನಗೂನೂ ಆಸೆ—
ನಕ್ಷತ್ರ ಆಗಬೇಕೂ ಅಂತ
ಆದ್ರ . . . .
ಸಾಯೂದು ನನ್ನ ಕೈಲಾಗೂದಿಲ್ಲ
ಬದುಕಿದ್ದೇ ನಕ್ಷತ್ರ ಆಗೂದು
ಆ ನಮ್ಮಪ್ಪಗೂ ಆಗದ ಮಾತು.
ಅದ್ಕ . . . .
ಏನ್ಮಾಡಬೇಕೂ ಅಂತ
ಗೇನಿಸಿ ಗೇನಿಸಿ ಗೋಣು ಉದ್ದಾತು;
ಜೀವ ಸಣ್ಣಾತು
ಒಮ್ಮೊಮ್ಮೆ ಅನಸ್ತೈತಿ
ಆ ಆಕಾಶದೊಳಗರ ಏನೈತಿ ಮಣ್ಣು
ಹಾಳಬೂದಿ, ಹಳಸಿದ ಅನ್ನ ಸತ್ತ ಇಲಿ, ಬೆಕ್ಕು, ನಾಯಿ
ಮತ್ತ—
ಸಣ್ಣ ಹುಡುಗರ ಹೊಲಸು
ಹಂಗ ನೋಡಿದ್ರ....

ಆದೂ ಒಂದ ಕಸದ ಕುಂಡೇನ!
ಹಂಗಾದ್ರ
ನಮ್ಮ ಮನಿ ಮುಂದಿರೊ ಮುನ್ಸಿಪಾಲ್ಟಿ ಕುಂಡೇದಾಗs
ಬಿದ್ದ
ಯಾಕ ಸಂತೋಷ ಪಡಬಾರದು ?
ಯಾಕ ಹಾಯಾಗಿ ನಗನಗ್ತಾ ಇರಬಾರ್ದ್ದು ಅಂತ!
ಹೌದು
ಬಿದ್ರೂ ಬಿದ್ದೇನು
ಈ ಹೊರಗಿರೊ
ಹದ್ದು ಕಾಗಿ ನಾಯಿ ನರಿಯೊಂದ
ಸಂಮ್ನು ಬಿಡಬೇಕಲಾ......
ಎಳಎಳದ ಒಗಿತಾವು
ಕುಕ್ಕಿ ಕುಕ್ಕಿ ಕೊಲತಾವೂ ಅಂತ
ಅಂಜಿಕಿ!
ಅದ್ಕ.......
ಏನ್ಮಾಡ್ಲಿ?!
ಗೇನಿಸಿ ಗೇನಿಸಿ ಗೋಣು ಉದ್ದಾತು
ದಿಟ್ಟಿ—
ಮಂದಾ
ತು

ಬೆಡಗಿನ ವಚನಗಳಿಗೆ ಒಗಟುಗಳು ಮೂಲವೆ?

[ಒಂದು ಪ್ರತಿಕ್ರಿಯೆ]

ಸುಧಾಕರ

ನನ್ನ "ಜನಪದ ಬೆಡಗಿನ ವಚನಗಳು" ಎಂಬ ಕೃತಿಯ ಪ್ರಸ್ತಾವನೆಯಲ್ಲಿ ನಾನು ವಿದ್ವಾಂಸರ ಗಮನವನ್ನು ಒಂದು ಸಾಧ್ಯತೆಯತ್ತ ಸೆಳೆದಿರುವುದನ್ನು ಎತ್ತಿಕೊಂಡು ಮಾನ್ಯ ರಾಚಪ್ಪನವರು 'ಕರ್ಣಾಟಕ ಭಾರತಿ'ಯಲ್ಲಿ ಬರೆದಿರುವುದನ್ನು ಓದಿದ ಮೇಲೆ, ಅವರು ಎತ್ತಿರುವ ಕೆಲವು ಪ್ರಶ್ನೆಗಳಿಗೆ ಹಾಗೂ ಮಾಡಿರುವ ಕೆಲವು ಆರೋಪಗಳಿಗೆ ಸ್ಪಷ್ಟೀಕರಣ ಅಗತ್ಯವೆನಿಸಿತು; ಅದರ ಪ್ರತೀಕ ಈ ಲೇಖನ. ಅವರ ಆರೋಪದ ಒಂದೊಂದು ಅಂಶಕ್ಕೂ ಉತ್ತರ ಕೊಟ್ಟು ಕೊನೆಗೆ ನನ್ನ ನಿಲುವನ್ನು ಮುಂದಿಡಬಯಸುತ್ತೇನೆ.

೧. "'ಕನಕದಾಸರು ತಮ್ಮ ಒಗಟಿನ ರೂಪದ ಕೀರ್ತನೆಗಳ ಅಂತ್ಯದಲ್ಲಿ ನುಡಿಗೆ, ಮುಂಡಿಗೆ, ಹಳೆಗನ್ನಡ ಎಂಬ ಪರ್ಯಾಯ ಪದಗಳನ್ನು ಹೆಸರಿಸಿದಂತೆಯೇ ಬೆಡಗು ಪದವನ್ನೂ ಹೆಸರಿಸಿದ್ದಾರೆ. ಇಂದಿಗೂ ಮಲೆನಾಡಿನತ್ತ ಒಗಟಿಗೆ ಬೆಡಗು ಎಂಬ ಶಬ್ದವೇ ಚಾಲ್ತಿಯಲ್ಲಿದೆ ಎಂದು ಕೇಳಿದ್ದೇನೆ. ಆದ್ದರಿಂದ ಬೆಡಗಿನ ವಚನಗಳೆಂದರೆ ಒಗಟಿನ ರೂಪದ ವಚನಗಳು ಅಥವಾ ಒಗಟುಗಳು ಎಂದು ಇಟ್ಟುಕೊಳ್ಳಬಹುದು' ಎಂದು ಹೇಳಿ ಒಗಟುಗಳನ್ನು ಬೆಡಗಿನ ವಚನಗಳೆಂದು ಹೇಳುವ ಸಾಹಸ ಮಾಡಿದ್ದಾರೆ. ಕನಕದಾಸರು ಬೆಡಗು ಶಬ್ದವನ್ನು ಎಲ್ಲಿ! ಹೇಗೆ? ಯಾವ ಅರ್ಥದಲ್ಲಿ ಬಳಸಿದ್ದಾರೆ? ಎಂಬುದನ್ನು ಉದಾಹರಣೆ ಸಹಿತ ವಿವರಿಸಬೇಕಾಗಿತ್ತು. ಆ ಕೆಲಸ ಆಗದೆ ಅವರ ಹೇಳಿಕೆ ಅನುಮಾನಾಸ್ಪದವಾಗಿದೆ."

—ನನ್ನ ಪ್ರಸ್ತಾವನೆಯ ಉದ್ಧೃತ ಭಾಗದ ಪ್ರಥಮ ವಾಕ್ಯವೇ ಎಲ್ಲಿ? ಹೇಗೆ? ಯಾವ ಅರ್ಥದಲ್ಲಿ ಬಳಸಿದ್ದಾರೆ? ಎಂಬುದಕ್ಕೆ ಸಾಕಷ್ಟು ನಿರ್ದೇಶನ ನೀಡಿದರೂ ಮಾನ್ಯ ರಾಚಪ್ಪನವರು 'ಕನಕದಾಸರು' ಬೆಡಗು ಶಬ್ದವನ್ನು ಎಲ್ಲಿ? ಹೇಗೆ? ಯಾವ ಅರ್ಥದಲ್ಲಿ ಬಳಸಿದ್ದಾರೆ? ಎಂಬುದನ್ನು ಉದಾಹರಣೆ ಸಹಿತ ವಿವರಿಸಬೇಕಿತ್ತು. ಆ ಕೆಲಸ ಆಗದೆ ಅವರ ಹೇಳಿಕೆ ಅನುಮಾನಾಸ್ಪದವಾಗಿದೆ' ಎಂದು ಸಾವೇರಿ ರಾಗ ಹಾಡತೊಡಗಿದ್ದು ಏಕೋ ಅರ್ಥವಾಗುವುದಿಲ್ಲ. ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಅರ್ಥಾತ್ ಇನ್ನೊಬ್ಬರ ಅಭಿಪ್ರಾಯವನ್ನು ಹೀಗಳೆಯಲು

ಕಷ್ಟಪಟ್ಟು ಎಲ್ಲೆಲ್ಲಿಂದಲೊ ಮೂಲವನ್ನು ಉದ್ಧರಿಸುವ ಶ್ರೀಯುತರಿಗೆ, ನಾನು ಹೆಸರಿಸಿರುವ ಕನಕದಾಸರ ಯಾವುದೇ ಒಗಟಿನ ರೂಪದ ಕೀರ್ತನೆಯನ್ನು ನೋಡಿ, ಮನನ ಮಾಡಿ, ನಾನು ಹೇಳಿದ ಅರ್ಥದಲ್ಲಿ ಬೆಡಗು ಶಬ್ದ ಅಲ್ಲಿ ಬಳಕೆಯಾಗಿಲ್ಲ ಎಂದು ಉದಾಹರಣೆ ಸಹಿತ ತಮ್ಮ ವಾದವನ್ನು ಮುಂದಿಡಲು ಕಷ್ಟವಾಗುತ್ತಿರಲಿಲ್ಲ ಎನ್ನಿಸುತ್ತದೆ. ಓದಿದ ಯಾರಿಗಾದರೂ ಅಲ್ಲದೆ ಯಾವ ಲೇಖಕನೇ ಆಗಲೀ ಲೇಖನದ ಪ್ರತಿಯೊಂದು ಹೇಳಿಕೆಗೂ ಉದಾಹರಣೆ ಕೊಟ್ಟೇ ಮುಂದೆ ಹೋಗಬೇಕೆಂದರೆ ಕಷ್ಟವಾಗುತ್ತದೆ; ಅತಿ ವಿವರದಿಂದ ಲೇಖನ ತೆಳ್ಳಗೂ ಆಗುತ್ತದೆ. ಆದ್ದರಿಂದ ಅನಿವಾರ್ಯ ಎನ್ನಿಸಿದ ಕಡೆ ಉದಾಹರಣೆ ಕೊಟ್ಟು ಇನ್ನು ಕೆಲವು ಕಡೆ ಸುಮ್ಮನೆ ನಿರ್ದೇಶಿಸಿ ಮುಂದೆ ಹೋಗಬೇಕಾಗುತ್ತದೆ. ತಪ್ಪು ಒಪ್ಪುಗಳನ್ನು ಕುರಿತು ಗಂಭೀರವಾಗಿ ವಿವೇಚನೆ ಮಾಡ ಹೊರಟ ಮಾನ್ಯ ರಾಜಪ್ಪನವರು ನಾನು ಬೆರಳು ಮಾಡಿರುವ ಮೂಲದತ್ತ ಗಮನ ಹರಿಸದಿರುವುದು ಹಾಗೂ ಒಂದೇ ಆರೋಪದ ಉದ್ಗಾರವೆತ್ತುವುದು ಛಿದ್ರಾನ್ವೇಷಣೆಯ ದೃಷ್ಟಿಯಾಗುತ್ತದೆಯೇ ಹೊರತು ಸತ್ಯಾನ್ವೇಷಣೆಯ ದೃಷ್ಟಿಯಾಗುವುದಿಲ್ಲ ಎಂದು ನನ್ನ ನಮ್ರ ಅಭಿಪ್ರಾಯ.

೨. ಡಾ. ಚಿದಾನಂದಮೂರ್ತಿಯವರು ಮುಂಡಿಗೆ ಶಬ್ದಕ್ಕೆ 'ಸವಾಲು' ಎಂಬ ಅರ್ಥ ಹೇಳಿದ್ದಾರೆಂದೂ, ಬಹುಶಃ ಒಗಟಿಗೂ ಇದೇ ಅರ್ಥವನ್ನು ಇಟ್ಟುಕೊಳ್ಳಬಹುದೆಂದೂ (ಏಕಪಕ್ಷೀಯವಾಗಲ್ಲ, ಸರ್ವಪಕ್ಷೀಯವಾಗಿ!) ತೀರ್ಮಾನವನ್ನು ಕೈಗೊಂಡು "ಬೆಡಗು ಶಬ್ದಕ್ಕೆ ಸವಾಲು ಎಂಬ ಅರ್ಥ ಎಲ್ಲಿಯೂ ಬಳಕೆಯಾಗಿಲ್ಲ. ವಚನಕಾರರಲ್ಲಿ ಕೆಲವರ ಕೆಲವೊಂದು ವಚನಗಳನ್ನು ಬೆಡಗಿನ ವಚನಗಳೆಂದು ಯಾರು ? ಯಾವಾಗ ? ಯಾವ ಉದ್ದೇಶದಿಂದ ಹೆಸರಿಸಿದರು ? ಎಂಬ ಅಂಶವನ್ನು ವಿಚಾರ ಮಾಡದೆಯೆ ಹೀಗೆ ಬೆಡಗಿನ ವಚನಗಳೆಂದರೆ ಒಗಟಿನ ರೂಪದ ವಚನಗಳು ಅಥವಾ ಒಗಟುಗಳು ಎಂದಿಟ್ಟುಕೊಳ್ಳಬಹುದು ಎಂದು ಹೇಳುವುದು ತುಂಬ ಅಪಾಯಕಾರಿ ನಿಲುವು ಎನ್ನಿಸುತ್ತದೆ" ಎಂದಿದ್ದಾರೆ.

—ಮೊದಲನೆಯದಾಗಿ ಬೆಡಗು ಶಬ್ದಕ್ಕೆ ಸವಾಲು ಎಂಬ ಅರ್ಥ ಎಲ್ಲೂ ಬಳಕೆಯಾಗಿಲ್ಲ ಎನ್ನುವವರಿಗೆ ಒಗಟು ಶಬ್ದಕ್ಕೆ ಸವಾಲು ಎಂಬ ಅರ್ಥ ಎಲ್ಲಿ ಬಳಕೆಯಾಗಿತ್ತು ಎಂದು ಹೀಗೆ ತಮ್ಮ ಶರಾವನ್ನು ಮಂಡಿಸಿದರು ? ಎಂದು ಕೇಳಬೇಕಾಗುತ್ತದೆ. ಎರಡನೆಯದಾಗಿ 'ವಚನಕಾರರಲ್ಲಿ ಕೆಲವರ ಕೆಲವೊಂದು ವಚನಗಳನ್ನು ಬೆಡಗಿನ ವಚನಗಳೆಂದು ಯಾರು ? ಯಾವಾಗ ? ಯಾವ ಉದ್ದೇಶದಿಂದ ಹೆಸರಿಸಿದರು ? ಎಂಬ ಅಂಶವನ್ನು ವಿಚಾರ ಮಾಡದೆಯೇ ಅಪಾಯಕಾರಿ ನಿಲುವು ತಳೆದಿದ್ದಾರೆ' ಎಂದು ಆಕ್ಷೇಪವೆತ್ತಿರುವ ಹಾಗೂ ಪ್ರತಿಯೊಂದಕ್ಕೂ ಉದಾಹರಣೆಯ ವಿವರವನ್ನು ಅಪೇಕ್ಷಿಸುವ ಮಾನ್ಯ ಲೇಖಕರೇ ಬೆಡಗಿನ ವಚನಗಳೆಂದು ಯಾರು ? ಯಾವಾಗ ? ಯಾವ ಉದ್ದೇಶದಿಂದ ಹೆಸರಿಸಿದರು ? ಎಂಬ ವಿವರವನ್ನು ಕೊಡದಿರುವುದು ಗೂಢ ಒಗಟಿ

ನಂತಿದೆ. ಆ ವಿವರವನ್ನು ಕೊಟ್ಟು, ಒಗಟಿಗೂ ಬೆಡಗಿನ ವಚನಕ್ಕೂ ಯಾವ ಸಂಬಂಧವೂ ಇಲ್ಲವೆಂದು ಪ್ರತಿಪಾದಿಸಿದ್ದರೆ ಹೆಚ್ಚು ಸಹಾಯವಾಗುತ್ತಿತ್ತು ಎಂದು ನನ್ನ ಭಾವನೆ.

೩. "ಬೆಡಗಿನ ವಚನಗಳು ತತ್ತ್ವ, ಆಧ್ಯಾತ್ಮ, ಯೋಗ, ಆತ್ಮ-ಪರಮಾತ್ಮಗಳ ವಿಚಾರವನ್ನು ಕುರಿತು ಸಾಂಕೇತಿಕವಾಗಿ ಪ್ರತಿಪಾದಿಸುತ್ತವೆ. ಒಗಟುಗಳು ಸಾಮಾಜಿಕ, ಲೌಕಿಕ ವಿಚಾರಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಸಾಂಕೇತಿಕವಾದ ತಂತ್ರದಿಂದಾಗಿ ಒಂದು ಮಾತಿನಿಂದ ಇನ್ನೊಂದು ವಸ್ತುವನ್ನು ನಿರ್ದೇಶಿಸುವುದು ಈ ಎರಡರಲ್ಲಿ ನಿಜವಾದರೂ ಉದ್ದೇಶ ಬೇರೆ ಬೇರೆ."

ಈ ವಾದದ ಮುಖಾಂತರ ಒಗಟಿಗೂ ಬೆಡಗಿನ ವಚನಕ್ಕೂ ಏನೇನೂ ಸಂಬಂಧ ವಿಲ್ಲವೆನ್ನುವುದನ್ನು ಹೇಳ ಹೊರಟಿರುವುದು ಕಂಡು ಬರುತ್ತದೆ. ಆದರೆ ಒಂದೇ ರೀತಿಯ ಆಕಾರ ಸಾದೃಶ್ಯವಿರುವ ಎರಡು ಪಾತ್ರೆಗಳಲ್ಲಿ ಬೇರೆ ಬೇರೆ ರುಚಿಯ ತಿನಿಸು ಇದ್ದಾಕ್ಷಣವೇ, ಈ ಪಾತ್ರೆಗೂ ಆ ಪಾತ್ರೆ ಯಾವ ರೀತಿಯ ರೂಪ ಸಾದೃಶ್ಯವಿಲ್ಲ ಎಂಬ ನಿಲುವಿಗೆ ಬರುವುದು ಸರಿಯೆ? ಎಂದು ಮಾನ್ಯ ಲೇಖಕರು ಮತ್ತೊಮ್ಮೆ ಯೋಚಿಸಬೇಕು. ಏಕೆಂದರೆ ಎರಡು ಕಾದಂಬರಿಗಳಲ್ಲಿ ಒಂದು ಕಾದಂಬರಿಯ ವಸ್ತು ಚಾರಿತ್ರಿಕ ಇರಬಹುದು; ಇನ್ನೊಂದು ಕಾದಂಬರಿಯ ವಸ್ತು ಸಾಮಾಜಿಕ ಇರಬಹುದು. ಒಂದನ್ನು ಚಾರಿತ್ರಿಕ ಕಾದಂಬರಿಯೆಂದು ಮತ್ತೊಂದನ್ನು ಸಾಮಾಜಿಕ ಕಾದಂಬರಿ ಯೆಂದು ಹೆಸರಿಸಿದರೂ, ಕಾದಂಬರಿಗಿರಬೇಕಾದ ಲಕ್ಷಣಗಳಿಂದ-ಬಂಧ, ವಸ್ತುವಿನ್ಯಾಸ, ಪಾತ್ರಪೋಷಣೆ, ಆವರಣ ಸೃಷ್ಟಿ-ಅವೆರಡೂ ಒಂದಕ್ಕೊಂದು ಭಿನ್ನ ಎಂದು ಹೇಳಲಾಗು ವುದಿಲ್ಲ. ಹಾಗೆಯೇ ಬೆಡಗಿನ ವಚನ ಮತ್ತು ಒಗಟುಗಳ ವಸ್ತುವಿನಲ್ಲಿ ವ್ಯತ್ಯಾಸ ವಿದ್ದರೂ ಅವುಗಳ ರಚನಾವಿಧಾನದಲ್ಲಿ ಸಾಮ್ಯವಿರುವುದರಿಂದ ಅವುಗಳಿಗೆ ಏನೇನೂ ಸಂಬಂಧವಿಲ್ಲ ಎಂದು ಹೇಳುವುದು ಎಷ್ಟು ಸಮ್ಮತ? ಎಂಬುದನ್ನು ಯೋಚಿಸಬೇಕು. ಅದೂ ಅಲ್ಲದೆ ಒಗಟುಗಳು ಕೇವಲ ಸಾಮಾಜಿಕ ಲೌಕಿಕ ವಿಷಯವನ್ನು ನಿರೂಪಿಸುತ್ತವೆ ಎಂಬ ಮಾನ್ಯ ಲೇಖಕರ ಹೇಳಿಕೆ ಪೂರ್ಣ ತಿಳಿವಳಿಕೆಯ ಬೆಂಬಲವಿಲ್ಲದೆ ಮಾಡಿರು ವಂಥದು. ಏಕೆಂದರೆ ದುರ್ಗಾಭಾಗವತ್ ಎಂಬ ಜಾನಪದ ವಿದ್ವಾಂಸರು ತಮ್ಮ "Riddle in Indian life, lore and literature" ಎಂಬ ಗ್ರಂಥದಲ್ಲಿ ಒಗಟು ಗಳನ್ನು Ritualistic Riddles Non-Ritualistic Riddles ಎಂದು ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಮೊದಲನೆಯದರಲ್ಲಿ ಆಧ್ಯಾತ್ಮಿಕ ಪಾರಮಾರ್ಥಿಕ ವಿಷಯ ಗಳ ನಿರೂಪಣೆ ಕಂಡುಬಂದರೆ ಎರಡನೆಯದರಲ್ಲಿ ಸಾಹಿತ್ಯಿಕ ವೈನೋದಿಕ ವಿಷಯಗಳ ನಿರೂಪಣೆ ಕಂಡುಬರುತ್ತದೆ ಒಗಟುಗಳ ಈ ಮುಖವನ್ನು ಗಮನಿಸಿದ್ದರೆ ಇಂಥ ಆತುರದ ಹೇಳಿಕೆಗೆ ಅವಕಾಶವಾಗುತ್ತಿರಲಿಲ್ಲವೆಂದು ನನ್ನ ಅನ್ನಿಸಿಕೆ.

೪. "ಒಗಟಿನಲ್ಲಿ ಉಪಮಾನದ ಆಧಾರದ ಮೇಲೆ ಉಪಮೇಯದ ಅರ್ಥವನ್ನು ಗ್ರಹಿಸಬಹುದು ಅಂದರೆ ಉಪಮೇಯದ ಅರ್ಥವನ್ನು ಗ್ರಹಿಸಲು ಒಂದು ಸಾಧನ

ಇವೆ ಎಂದಾಯಿತು. ಆದರೆ ಬೆಡಗಿನ ವಚನಗಳಿಗೆ ತತ್ವವಿಚಾರವೇ ಆಧಾರ ತತ್ವಗಳ ಆಳವಾದ ಅಭ್ಯಾಸವಿದ್ದರೆ ಮಾತ್ರ ಅರ್ಥ ಮಾಡಲು ಸಾಧ್ಯ."

ಒಗಟಿನ ಅಂತರರ್ಥವನ್ನು ಗ್ರಹಿಸಲು ಉಪಮಾನದ ಆಧಾರವಾದರೂ ಇದೆ; ಆದರೆ ಬೆಡಗಿನ ವಚನಕ್ಕೆ ಉಪಮಾನದ ಉಪಾಲಂಬನವಿಲ್ಲದೆ ಕೇವಲ ತತ್ವವಿಚಾರವೇ ಏಕೈಕ ಆಧಾರವಾಗಿದೆ ಎಂಬ ಮಾನ್ಯ ಲೇಖಕರ ಮೇಲಿನವಾದ ತುಂಬ ಕುತೂಹಲ ಕಾರಕವಾಗಿದೆ. ಉಪಮಾನ ರೂಪಕ ಪ್ರತಿಮೆ ಇದಾವುದೂ ಇಲ್ಲದೆ ಬೆಡಗಿನ ವಚನ ಬಯಲದೇಹಿಯಾಗಿರುವಂಥದೆ? ಆದರೆ ಶ್ರೀಯುತರು ಲೇಖನದಲ್ಲೇ ಮತ್ತೊಂದು ಕಡೆ ಬೆಡಗಿನ ವಚನಗಳಲ್ಲಿ ಉದಕ ಎಂದರೆ ಮನಸ್ಸು, ಗಗನ ಎಂದರೆ ಆತ್ಮ, ತರಗೆಲೆ ಎಂದರೆ ಸಂಸಾರ" ಎಂದು ಹೇಳಿರುವುದರಿಂದ ಅನುಮಾನವಾಗುತ್ತದೆ. ಉದಕ, ಗಗನ, ತರಗೆಲೆ ಇವು ಉಪಮಾನ ಅಥವಾ ರೂಪಕ ಅಥವಾ ಪ್ರತಿಮೆ ಅಲ್ಲವೆಂದು ಶ್ರೀಯುತರು ಬಲವಾಗಿ ನಂಬಿರುವುದರಿಂದಲೇ ಮೇಲಿನ ಅಂಥ ಹೇಳಿಕೆಯನ್ನು ಕೊಟ್ಟಿರಬಹುದೆಂದು ಕಾಣುತ್ತದೆ. ಈ ಹೊಸ ವಿಚಾರದ ಬಗ್ಗೆ ಅಂದರೆ ಬೆಡಗಿನ ವಚನಗಳನ್ನು ಅರ್ಥಮಾಡಿಕೊಳ್ಳಲು ಉಪಮಾನಗಳ ಆಧಾರವಿಲ್ಲ; ತತ್ವ ವಿಚಾರವೇ ಆಧಾರ ಎಂಬುವರ ಬಗ್ಗೆ ಶ್ರೀಯುತರೇ ಇನ್ನಷ್ಟು ಬೆಳಕು ಚೆಲ್ಲಿದರ ಗೊಂದಲದಲ್ಲಿ ರುವ ನನ್ನಂಥ ಹಲವಾರು ಜನಗಳಿಗೆ ತುಂಬ ಸಹಾಯವಾಗುತ್ತದೆ ಎಂದು ನನ್ನ ಭಾವನೆ.

ಕತೆ ಯತೆ (ವ್ಯಥೆ)ಯಾಯ್ತು
ಸಂಸಾರ ಎರಡಾಯ್ತು
ನೆನ್ನೆ ಹೊಡೆದ ಮೊಲ ಎಸರಾಯ್ತು
ಮೊಲ ಹೊಡೆದೋನು ಸತ್ತು ಮೂರು ದಿವಸಾಯ್ತು

ಮೇಲಿನ ಒಗಟನ್ನು ಅರ್ಥೈಸಲು ಕೇವಲ ಉಪಮಾನದ ಆಧಾರವೇ ಸಾಲದು: ತತ್ವಗಳ ಆಳವಾದ ಅಭ್ಯಾಸವಿದ್ದರೆ ಮಾತ್ರ ಬೆಡಗಿನ ವಚನಗಳನ್ನು ಅರ್ಥ ಮಾಡಲು ಸಾಧ್ಯ ಎಂಬ ಶ್ರೀಯುತರ ಹೇಳಿಕೆಯಂತೆ, ಜನಪದ ಕಥೆಗಳ ಆಳವಾದ ಅಭ್ಯಾಸವಿದ್ದರೆ ಮಾತ್ರ ಇಂಥ ಒಗಟುಗಳನ್ನು ಅರ್ಥ ಮಾಡಲು ಸಾಧ್ಯ ಎಂದು ಹೇಳಬಹುದಲ್ಲವೆ?

೩. ಒಗಟುಗಳಲ್ಲಿ ಬುದ್ಧಿ ಚಮತ್ಕಾರ ವಿಶೇಷವಾಗಿದೆ. ಬೆಡಗಿನ ವಚನಗಳಲ್ಲಿ ಕವಿತಾಶಕ್ತಿ, ಅನುಭಾವದ ಬಿಂಬ, ರಸಾವೇಶ ಇರುತ್ತದೆ."

–ಮೇಲಿನ ಶ್ರೀಯುತರ ಅಭಿಪ್ರಾಯ ಒಗಟುಗಳಲ್ಲಿ ಕವಿತಾಶಕ್ತಿ ಕಂಡು ಬರುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ನನ್ನ ಕೃತಿಯ ಪ್ರಸ್ತಾವನೆಯಲ್ಲಿ ಬರುವ ಒಗಟುಗಳ ಸಾಹಿತ್ಯಿಕ ಮೌಲ್ಯವನ್ನು ಕುರಿತ ಭಾಗವನ್ನು ಮೆಲುಕು ಹಾಕಿದ್ದರೆ ಇಂಥ ಹೇಳಿಕೆಗೆ ಅವಕಾಶವಿರುತ್ತಿರಲಿಲ್ಲವೆಂದು ತೋರುತ್ತದ. ಹಾಗೆ ನೋಡಿದರೆ ಬೆಡಗಿನ ವಚನಗಳಲ್ಲೂ ಬುದ್ಧಿ ಚಮತ್ಕಾರ ಹೇರಳವಾಗಿಲ್ಲವೆ? ಕವಿತಾಶಕ್ತಿಯ ದೃಷ್ಟಿಯಿಂದ

ಎಲ್ಲ ಬೆಡಗಿನ ವಚನಗಳೂ ಸಮಾನವಾಗಿವೆಯೆ? ಶುಷ್ಕವಾದವು ಅಲ್ಲೂ ಇವೆ; ಇಲ್ಲೂ ಇವೆ. ಯಾವ ಸಾಹಿತ್ಯದಲ್ಲಿ ಇರುವುದಿಲ್ಲ?

೬. "ವಚನಕಾರರೆನಿಸಿದ ಬಸವಾದಿ ಪ್ರಮಥರು ಜೀವನದ ದರ್ಶನವನ್ನು ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಉಪನಿಷತ್ತು ಎಂದೂ ಕರೆಯಲಾಗಿದೆ. ಒಗಟುಗಳು ವಚನಗಳಿಗೆ ಮೂಲ ಸೆಲೆ ಹೇಗಾದಾವು ಎಂಬಂಶ ವಿವಾದಾಸ್ಪದವಾಗಿ, ಸತ್ಯಕ್ಕೆ ದೂರವಾಗಿದೆ.

– ಮೇಲಿನ ಮೊದಲ ಎರಡು ವಾಕ್ಯಗಳಿಗೂ ಕೊನೆಯ ವಾಕ್ಯಕ್ಕೂ ಯಾವ ಆಲೋಚನಾ ಸಂಬಂಧದ ಸಾತತ್ಯವೂ ಕಂಡು ಬರದೆ ಲೇಖಕರ ಇಂಗಿತ ಅಸ್ಪಷ್ಟವಾಗಿರುವುದರಿಂದ, ಇನ್ನಷ್ಟು ಗಟ್ಟಿ ವಿಚಾರ ಸಾತತ್ಯದ ಗದ್ಯ ಅಗತ್ಯವೆನ್ನಿಸುತ್ತದೆ.

೭. "ಇಷ್ಟೆಲ್ಲ ಹೇಳಿದ ಮಾನ್ಯ ಲೇಖಕರು 'ಬೆಡಗು' ಶಬ್ದದ ಅರ್ಥ ವಿವೇಚನೆಯನ್ನೇ ಮಾಡದಿರುವುದು ಆಶ್ಚರ್ಯದ ಸಂಗತಿ. ಹೀಗಿರುವಲ್ಲಿ ಶ್ರೀಯುತರ ಹೇಳಿಕೆ ಏಕಪಕ್ಷೀಯವಾಗುತ್ತದೆ."

– ಬಳಸುವ ಪ್ರತಿಯೊಂದು ಪದಕ್ಕೂ ಪ್ರಾಥಮಿಕ ಎನ್ನಬಹುದಾದ ಎಲ್ಲ ಅರ್ಥ ವಿವರವನ್ನೂ ಓದುಗ ಬಯಸುವುದು ತಪ್ಪಾಗುತ್ತದೆ. ಅದರಲ್ಲೂ ಪ್ರಬುದ್ಧ ಸಂಶೋಧಕ ವಿಮರ್ಶಕ ನಿರೀಕ್ಷಿಸುವುದು ಇನ್ನೂ ತಪ್ಪಾಗುತ್ತದೆ ಎನ್ನಿಸುತ್ತದೆ. ತಮಿಳಿನ ಪೈಪ್ಪು (greatness) ವೇಡಿಕ್ಕೈ (A show, pomp) ಎಂಬ ಶಬ್ದಗಳಿಗೆ ಅರ್ಥ ಕೊಟ್ಟ ಮಾನ್ಯ ರಾಚಪ್ಪನವರು ತೆಲುಗಿನ ವ್ರೇಕ, ವ್ರೇಗು ಶಬ್ದಗಳಿಗೆ ಏಕೆ ಅರ್ಥ ಕೊಡಲಿಲ್ಲ? ಅದು ಏಕಪಕ್ಷೀಯ ನಿಲುವಲ್ಲವೆ? ಎಂದು ಯಾರಾದರೂ ಪ್ರಶ್ನಿಸಿದರೆ ಹೇಗೆ ತಪ್ಪಾಗುತ್ತದೋ ಹಾಗೆಯೇ ಶ್ರೀಯುತರ ಮೇಲಿನ ಹೇಳಿಕೆ ಕೂಡ, ಎಂದು ನನ್ನ ಅಭಿಪ್ರಾಯ.

೮ ವಚನಗಳ ಮೂಲವನ್ನು ಕುರಿತ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಕಲೆಹಾಕಿ "ಹೀಗೆ ವಚನಗಳ ಅರ್ಥ, ಅವುಗಳ ಮೂಲದ ಬಗೆಗೆ ವಿವರಣೆಗಳನ್ನು ವಿದ್ವಾಂಸರು ನೀಡಿರುವಾಗ ವಚನಗಳಿಗೆ ಒಗಟುಗಳು ಮೂಲಸೆಲೆಯಾಗಿವೆ ಎಂಬ ಮಾತು ಎಷ್ಟು ಸತ್ಯವಾಗುಳಿಯುತ್ತದೋ ತಿಳಿಯದು" ಎಂದಿದ್ದಾರೆ.

– ಇಲ್ಲಿ ಮುಖ್ಯ ಪ್ರಶ್ನೆ, ವಚನಗಳ ಮೂಲವನ್ನು ಕುರಿತ ವಿವಿಧ ವಿದ್ವಾಂಸರ ಅಭಿಪ್ರಾಯಗಳ ಬಗ್ಗೆ ಮಾನ್ಯ ರಾಚಪ್ಪನವರಿಗೆ ಕೊಂಚವೂ ಅನುಮಾನವಿಲ್ಲ ಎಂದಂತಾಯಿತು. ಆ ಎಲ್ಲ ಮೂಲದ ಬಗ್ಗೆಯೂ ಇವರಿಗೆ ಸಮ್ಮತಿ ಇರುವುದರಿಂದಲೋ ಏನೋ ಇಂಥವರ ಅಭಿಪ್ರಾಯ ಈ ಕಾರಣಕ್ಕೆ ಅಂಗೀಕಾರಾರ್ಹ ಹಾಗೂ ಈ ಕಾರಣಕ್ಕೆ ಅಲ್ಲ ಎಂದು ಹೇಳುವ ಗೋಜಿಗೆ ಹೋಗಿಲ್ಲ. ಒಂದು ಸಂತೋಷದ ಸಂಗತಿ ಎಂದರೆ ನನ್ನದನ್ನೂ ಹಾಗೆಯೇ ಅನಾಮತ್ತು ಒಪ್ಪಿಕೊಳ್ಳದೆ ಪ್ರಶ್ನಿಸಿದ್ದಾರಲ್ಲ ಎಂಬುದು.

೯. ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ಅಭಿಪ್ರಾಯವೊಂದನ್ನು ಉದ್ಧರಿಸಿ ಮಾನ್ಯ ಲೇಖಕರು "ಇಲ್ಲಿ ಪದದ ತೋರಿಕೆಯ ಅರ್ಥವೇ ಒಂದು ಅದು ಪ್ರತಿನಿಧಿಸುವ ಅರ್ಥವೇ ಇನ್ನೊಂದು ಎನ್ನುವಲ್ಲಿ ಒಗಟಿಗೂ ಬೆಡಗಿನ ವಚನಕ್ಕೂ ಸಂಬಂಧವಿದೆಯಾದರೂ ಅವು ಉಂಟು ಮಾಡುವ ಅನುಭವವೇ ಬೇರೊಂದು ಎಂಬಲ್ಲಿ ಅಪಾರವಾದ ವ್ಯತ್ಯಾಸವಿದೆ" ಎಂದಿದ್ದಾರೆ.

– ಮಾನ್ಯ ರಾಜಪ್ಪನವರು ಉದ್ಧರಿಸಿರುವ ಭಾಗದಲ್ಲಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಹೇಳಿರುವುದು ಶ್ಲೇಷೆಗೂ ಬೆಡಗಿನ ವಚನಕ್ಕೂ ಇರುವ ಸಾದೃಶ್ಯ ವೈದೃಶ್ಯವೇ ಹೊರತು ಒಗಟಿಗೂ ಬೆಡಗಿನ ವಚನಕ್ಕೂ ಅಲ್ಲ ಎಂಬುದನ್ನು ಎಚ್ಚರಿಕೆಯ ಓದಿನಿಂದ ಅರ್ಥಮಾಡಿಕೊಳ್ಳಬಹುದಿತ್ತು ಎನ್ನಿಸುತ್ತದೆ.

ಮುಖ್ಯವಾಗಿ ಮೂಲ ಲೇಖಕರ ಆಶಯವನ್ನು ವಿಮರ್ಶಕ ಸರಿಯಾಗಿ ಗ್ರಹಿಸಬೇಕಾಗುತ್ತದೆ. ಛಿದ್ರಾನ್ವೇಷಣೆಯ ಮಾರ್ಗಕ್ಕೆ ಎಳ್ಳುನೀರು ಬಿಟ್ಟು ಸತ್ಯಾನ್ವೇಷಣೆಯ ದೃಷ್ಟಿಗೆ ಬೇರಿಗೆ ಬೆಲ್ಲವನ್ನು ಎರೆಯಬೇಕಾಗುತ್ತದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ. ಉದಾಹರಣೆಗೆ ಡಾ. ಚಿದಾನಂದಮೂರ್ತಿಯವರು ತಮ್ಮ ಗ್ರಂಥ 'ಸಂಶೋಧನ ತರಂಗ'ದ ಲೇಖನವೊಂದರಲ್ಲಿ 'ಅಚ್ಚ ಕನ್ನಡ ದೇಶೀಯ ಪದ್ಯಜಾತಿಯಾದ ತ್ರಿಪದಿಯೇ ವಚನಗಳ ಉಗಮಸ್ಥಾನ ಇರಬೇಕು' ಎಂದು ಹೇಳಿದ್ದಾರಷ್ಟೆ. ಯಾರಾದರೂ "ವಚನಗಳು ಸಮಾಜ ಸುಧಾರಣೆಯ, ಆತ್ಮಶೋಧನೆಯ, ಆಧ್ಯಾತ್ಮದ ವಿಷಯವನ್ನು ಪ್ರಸ್ತಾಪಿಸುತ್ತವೆ. ಆದರೆ ತ್ರಿಪದಿಗಳು ಜನಸಾಮಾನ್ಯರ ದೈನಂದಿನ ಕಷ್ಟಸುಖಗಳ ನಿರೂಪಣೆಯನ್ನೊಳಗೊಂಡಿವೆ. ಮೂರು ಸಾಲಿನ ಚಿಕ್ಕ ಚಿಕ್ಕ ತ್ರಿಪದಿಯೆಲ್ಲಿ ? ಅನಿಯತ ಪಾದದ ವಚನವೆಲ್ಲಿ ?" ಎಂದು ವಾದಿಸಿದರೆ, ಮೂಲ ಲೇಖಕರ ಆಶಯವನ್ನೇ ಅರ್ಥ ಮಾಡಿಕೊಳ್ಳಲಾರದ ವ್ಯರ್ಥ ಟೀಕೆಯಾಗುತ್ತದೆ. ಹೀಗೆಯೇ ಶ್ರೀಯುತ ರಾಜಪ್ಪನವರು "ವಚನಗಳನ್ನು ಕನ್ನಡದ ಉಪನಿಷತ್ತುಗಳೆಂದು ಕರೆಯುತ್ತಾರೆ" ಎಂದು ತಮ್ಮ ಲೇಖನದಲ್ಲೊಂದು ಕಡೆ ಹೇಳಿದ್ದಾರೆ. ಹೀಗೆ ಹೇಳಿದವರ ಆಶಯ ಉಪನಿಷತ್ತುಗಳಿಗೂ ವಚನಗಳಿಗೂ ನಿಕಟ ಸಾದೃಶ್ಯವಿದೆ; ಉಪನಿಷತ್ತಿನ ಜೀವನದರ್ಶನ, ಸಾರಸಂಗ್ರಹ ವಚನಗಳಲ್ಲೂ ಮಡುಗಟ್ಟಿದೆ ಎಂಬುದೇ ಆಗಿದೆ. ಈ ಆಶಯವನ್ನು ಅರ್ಥ ಮಾಡಿಕೊಳ್ಳದೆಯೇ "ಉಪನಿಷತ್ತುಗಳು ಮಾಡಿದ ಸಂದರ್ಭವೇ ಬೇರೆ, ವಚನಗಳು ಮಾಡಿದ ಸಂದರ್ಭವೇ ಬೇರೆ; ಅವುಗಳ ಉದ್ದೇಶವೇ ಬೇರೆ, ಇವುಗಳ ಉದ್ದೇಶವೇ ಬೇರೆ, ಆದ್ದರಿಂದ ವಚನಗಳನ್ನು ಕನ್ನಡದ ಉಪನಿಷತ್ತುಗಳೆಂದು ಹೇಳುವುದು ಅಪಾಯಕಾರಿ ನಿಲುವು" ಎಂದು ವಾದಿಸಿದರೆ ಅದು ಸತ್ಯಾಧಾರಿತ ನಿಲುವಾಗುವುದಿಲ್ಲ. ಇದೇ ರೀತಿ ಒಗಟುಗಳಿಗೂ ಬೆಡಗಿನ ವಚನಗಳಿಗೂ ಆಕಾರ (form)ದಲ್ಲಿರುವ ಸಾದೃಶ್ಯದಿಂದ, ನನ್ನ ಜನಪದ ಒಗಟುಗಳ ಸಂಗ್ರಹಕ್ಕೆ ಅಲಂಕಾರಿಕವಾಗಿ "ಜನಪದ ಬೆಡಗಿನ ವಚನಗಳು" ಎಂದು ಹೆಸರಿಟ್ಟೆನೇ ವಿನಾ ವಸ್ತುವಿನ (Content) ದೃಷ್ಟಿಯಿಂದಲ್ಲ.

ಸಮರ್ಥರಾದವರು ಹಾಲಿ ತಮ್ಮ ಕಣ್ಮುಂದೆ ಇರುವ ಪ್ರಕಾರವೊಂದನ್ನು ಎತ್ತಿಕೊಂಡು, ಬೇರೊಂದು ಉನ್ನತ ಅಭಿವ್ಯಕ್ತಿ ಮಾಧ್ಯಮವಾಗಿ ಮಾಡಿಕೊಂಡು ಪ್ರಬುದ್ಧ ಸ್ಥಿತಿಗೆ ತರಬಹುದು. ವಚನಕಾರರು ಅಂಥ ಕೆಲಸವನ್ನು ಮಾಡಿದ್ದಾರೆ ಎಂದು ನನ್ನ ಅನ್ನಿಸಿಕೆ. ಸಾಮಾನ್ಯವಾಗಿ ನಾವು ಪ್ರತಿಯೊಂದಕ್ಕೂ ಅನ್ಯ ಮೂಲದ ಅನ್ವೇಷಣೆಗೆ ಹೊರಡುತ್ತೇವೆಯೇ ಹೊರತು ಅಂದಿನ ಕಾಲದ ಕವಿಗಳು ಬದುಕಿದ ನೆಲದ, ಪರಿಸರದ ತಾಯಿಬೇರನ್ನು ಮರೆಯುತ್ತೇವೆ. ಉದಾಹರಣೆಗೆ ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ಕೃತಿಯ 'ಮಹಾಛಂದಸ್ಸು' ಇಂಗ್ಲೀಷಿನ Blankverse ಮೂಲದಿಂದ ಬಂದದ್ದು ಎಂದು ಯಾರಾದರೂ ಹೇಳಿದರೆ ಅದು ಎಷ್ಟರ ಮಟ್ಟಿಗೆ ಪೂರ್ಣ ಸತ್ಯ? ಕನ್ನಡ ಚಂಪೂ ಕೃತಿಗಳಲ್ಲಿ ಅಲ್ಲಲ್ಲಿ ಕ್ವಚಿತ್ತಾಗಿ ಕಂಡು ಬರುವ ರಗಳೆಯ ರೂಪ, ಹರಿಹರನ ರಗಳೆಗಳಲ್ಲಿ ಕಂಡು ಬರುವ ಸುಧಾರಿತ ರಗಳೆಯ ರೂಪ-ಇವುಗಳ ಬೆನ್ನೆಲುಬಿಲ್ಲದೆ ಕೇವಲ Blankverse ನಿಂದಲೇ ಮಹಾಛಂದಸ್ಸು ಮೂಡಿದೆ ಎನ್ನುವುದು ಆಂಶಿಕ ಸತ್ಯವಾಗುತ್ತದೆ ಎನ್ನದೆ ವಿಧಿಯಿಲ್ಲ. ಹೀಗೆಯೇ ತಾಂತ್ರಿಕ ಸಾಹಿತ್ಯದ ಆಧಾರದಿಂದ ವಚನಕಾರರು ಬೆಡಗಿನ ವಚನಗಳು ಎಂಬ ಪ್ರಕಾರವನ್ನು ಬೆಳೆಸಿದರು ಎಂಬ ಅಭಿಪ್ರಾಯವೂ ಸಹ ಪೂರ್ಣ ಸತ್ಯ ಎನ್ನಿಸುವದಿಲ್ಲ ನನಗೆ. ಏಕೆಂದರೆ ಆತ್ಮ ಕಲ್ಯಾಣ ಹಾಗೂ ಲೋಕಕಲ್ಯಾಣದ ದೃಷ್ಟಿಯುಳ್ಳ; ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದ ವಚನಕಾರರು ಕೇವಲ ಕಲ್ಪನೆಯ ದಂತಗೋಪುರದಲ್ಲಿ ಕುಳಿತು ಸಾಹಿತ್ಯ ರಚಿಸಿದವರಲ್ಲ. ಆಕಾಶದಲ್ಲಿ ಅರಳಿದ್ದರೂ ನೆಲದಲ್ಲಿ ಭದ್ರವಾಗಿ ಬೇರು ಬಿಟ್ಟವರು; ಜನಸಾಮಾನ್ಯರ ಮಧ್ಯೆ ಹುಟ್ಟಿ, ಬೆಳೆದು, ಬದುಕಿ ಅವರ ಕಷ್ಟ ಸುಖಗಳನ್ನು ಅರಿತಿದ್ದವರು; ದೋಷ ದೌರ್ಬಲ್ಯಗಳನ್ನು ಅರ್ಥ ಮಾಡಿಕೊಂಡಿದ್ದವರು; ತಮ್ಮ ಪ್ರಬುದ್ಧ ವಿಚಾರಧಾರೆಯಿಂದ ಅವುಗಳನ್ನು ತಿದ್ದಲು ಯತ್ನಿಸಿದವರು. ಹೀಗೆ ಜನಸಂಮುಖ ದೃಷ್ಟಿಯುಳ್ಳ ವಚನಕಾರರಿಗೆ ಜನಸಾಮಾನ್ಯರ ನಡೆನುಡಿ ಸಾಹಿತ್ಯ ಸಂಸ್ಕೃತಿಗಳ ನಿಕಟ ಪರಿಚಯ ಅಗಾಧವಾಗಿತ್ತು ಎಂಬುದರಲ್ಲಿ ಎಳ್ಳುಕಾಳು ಮುಳ್ಳು ಮೊನೆಯಷ್ಟು ಅನುಮಾನಕ್ಕೆಡೆಯಿಲ್ಲ. ವಚನಗಳಿಗೆ ಬಳಸಿಕೊಂಡ ಜನಸಾಮಾನ್ಯರ ಆಡು ಮಾತು, ಗಾದೆ ನುಡಿಗಟ್ಟು ಮೊದಲಾದುವು ಇದಕ್ಕೆ ಹೆಚ್ಚು ಪುಷ್ಟಿಯನ್ನು ನೀಡುತ್ತವೆ. ಆದ್ದರಿಂದ ಜನಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಒಗಟಿನ ಪ್ರಕಾರವನ್ನು, ವಚನಕಾರರು ಗೂಢವಾದ ಅಧ್ಯಾತ್ಮ ವಿಷಯ ಪ್ರತಿಪಾದನೆಗೆ ತಕ್ಕ ಮಾಧ್ಯಮವೆಂದು ಗ್ರಹಿಸಿ, ಅದನ್ನೇಕೆ ಹೀಗೆ (ಅಂದರೆ ಬೆಡಗಿನ ವಚನಗಳಂತೆ) ಪ್ರಬುದ್ಧವಾಗಿ ಬೆಳೆಸಿರಬಾರದು ಎಂಬ ಬಗ್ಗೆ ವಿದ್ವಾಂಸರು ಯೋಚಿಸಬೇಕಾಗಿದೆ. ವಚನಗಳ ಮೂಲವನ್ನು ಕುರಿತು ಸಂಸ್ಕೃತದ ಸ್ತೋತ್ರಗದ್ಯ ಅಥವಾ ತಮಿಳಿನ ಸ್ತೋತ್ರಗೀತೆಗಳು ಮೂಲವಾಗಿರಲು ಸಾಧ್ಯವಿಲ್ಲವೆಂದೂ, ದೇಶೀಯವಾದ ಪದ್ಯ ಜಾತಿ ಅಂದರೆ ತ್ರಿಪದಿಯೇ ವಚನಗಳ ಉಗಮಸ್ಥಾನ ಇರಬೇಕೆಂದು ವಾಸ್ತವ ನಿಲುವಿಗೆ ಬಂದ ಡಾ. ಚಿದಾನಂದಮೂರ್ತಿಯವರು ಬೆಡಗಿನ ವಚನಗಳ ಉಗಮ ಸ್ಥಾನವನ್ನು ತಾಂತ್ರಿಕ

ಸಾಹಿತ್ಯಕ್ಕೆ ಕೊಂಡೊಯ್ಯುವ ಮೊದಲು ಈ ಮಗ್ಗುಲಿನ ಸಾಧ್ಯತೆಯತ್ತ ಗಮನ ಹರಿಸಿದರೆ ಹೆಚ್ಚು ಬೆಳಕು ಬೀಳಬಹುದೆಂದು ನನಗನ್ನಿಸುತ್ತದೆ.

ಮುಖ್ಯವಾಗಿ ನನ್ನ ಕೃತಿಯ ಪ್ರಸ್ತಾವನೆಯಲ್ಲಿ ವಿದ್ವಾಂಸರ ಗಮನವನ್ನು ಈ ನಿಟ್ಟಿನತ್ತ ಸೆಳೆದಿದ್ದೇನೆಯೇ ಹೊರತು 'ಇದಮಿತ್ಥಂ' ಎಂದು ನಾನು ಹೇಳಹೋಗಿಲ್ಲ. ಸಿಕ್ಕಿದ ಸಾದೃಶ್ಯಗಳ ಆಧಾರದ ಮೇಲೆ, ಈ ಸಾಧ್ಯತೆಯತ್ತ ವಿದ್ವಾಂಸರು ಕಣ್ಣು ಹಾಯಿಸುವಂತೆ ಮಾಡಿದ್ದೇನೆ ಅಷ್ಟೆ. ಆದರೆ ಮಾನ್ಯ ರಾಜಪ್ಪನವರು ನನ್ನ ಇಂಗಿತವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಹಿಗ್ಗಾಮುಗ್ಗಾ ಜಗ್ಗಾಡಿದ್ದಾರೆ. ಇದಕ್ಕೆ ಬದಲಾಗಿ ಇವರ ಮೇಲೆ ಬೆಳಕು ಚೆಲ್ಲುವಂಥ, ಸತ್ಯ ಹೊರಬೀಳುವಂಥ ಇನ್ನೂ ಗಟ್ಟಿಮುಟ್ಟಾದ ಗಂಭೀರ ಪ್ರಯತ್ನವನ್ನು ಮಾಡಿದರೆ ಹೆಚ್ಚು ಉಪಕಾರವಾದೀತು ಎಂದು ಭಾವಿಸಿದ್ದೇನೆ.

ಅಗಸ್ಟ ಕೋಂಟ್

ಕೆ. ಜಿ. ಜೋಶಿ

ಸಮಾಜಶಾಸ್ತ್ರದ ಜನಕನೆಂದು ಪ್ರಸಿದ್ಧನಾದ ಅಗಸ್ಟ್ ಕೋಂಟ್ ಮೂಲತಃ ಫ್ರಾನ್ಸ್ ದೇಶದವ. ಆತನ ಪೂರ್ಣ ಹೆಸರು ಇಸಿಡೋರ್ ಅಗಸ್ಟ ಮೆರಿ ಫ್ರಾನ್ಸ್ವಾಯಿಷ್ ಝೇವಿಯರ್‌ಕೋಂಟ್. ೧೭೯೮ರಲ್ಲಿ ಮಾಂಟ ಪೆಲಿಯರ್ ಎಂಬ ಸ್ಥಳದಲ್ಲಿ ಜನಿಸಿದ ಆತ ಚಿಕ್ಕಂದಿನಿಂದಲೂ ಬಲು ಚುರುಕು ಬುದ್ಧಿಯವನಾಗಿದ್ದ. ಮೊದಲು ಕೆಲವರ್ಷ ಗಣಿತ ಶಾಸ್ತ್ರವನ್ನೂ, ಅನಂತರ ಇತಿಹಾಸವನ್ನೂ ಆತ ಆಸ್ಥೆಯಿಂದ ಅಭ್ಯಸಿಸಿದ. ತನ್ನ ವಯಸ್ಸಿನ ಹತ್ತೊಂಬತ್ತನೆಯ ವರ್ಷಕ್ಕೆ ಸಮಾಜ ಸಾಮ್ಯವಾದಿ ಸೇಂಟ ಸೈಮನ್ ಪ್ರತಿಭಾ ಪ್ರಭಾವಕ್ಕೆ ಒಳಗಾಗಿ ಅವನಂತೆಯೇ ತಾನೂ 'ಭಾಷಣಕಾರ'ನಾಗಿ ಕೆಲಕಾಲ ತಿರುಗಾಡಿದ. ೧೮೨೨ರಲ್ಲಿ "ದಿ ಪ್ರಾಸ್ಪೆಕ್ಟಸ್ ಆಫ್ ದಿ ಸೈಂಟಿಫಿಕ್ ವರ್ಕ್ಸ್ ರಿಕ್ವೈರ್ಡ್ ಫಾರ್ ದಿ ರಿ ಆರ್ಗನೈಝೇಶನ್ ಆಫ್ ಸೊಸೈಟಿ" ಎಂಬ ಆತನ ಮೊದಲ ಪುಸ್ತಕ ಪ್ರಕಟವಾಯಿತು. ಇದರ ಹೊರತಾಗಿ "ಪೊಸಿಟಿವ್ ಫಿಲಾಸಫಿ" (೧೮೩೦–೧೮೪೨) ಮತ್ತು "ಪೊಸಿಟಿವ್ ಪೊಲಿಟಿ" ಎಂಬ ಗ್ರಂಥಗಳನ್ನು ಆತ ರಚಿಸಿದ. ತನ್ನ ವಿಚಾರ ಪರಿಪೂರಿತ ಭಾಷಣ ಹಾಗೂ ವೈವಿಧ್ಯಮಯವಾದ ಬರವಣಿಗೆಗಳಿಂದಾಗಿ ಆ ಕಾಲದ ಫ್ರಾನ್ಸ್‌ದೇಶದಲ್ಲಿ ಆತ ಒಂದು ವೈಚಾರಿಕ ಕ್ರಾಂತಿಯನ್ನೇ ಬಿತ್ತಿದ. ಅಂತೆಯೇ ಆತನನ್ನು 'ಪ್ರಪಂಚದ ಮೇಧಾವಿಗಳಲ್ಲೆಲ್ಲಾ ಅಗ್ರಗಣ್ಯ'ನೆಂದೂ (ಜೆ.ಎಸ್.ಮಿಲ್.). 'ಆಧುನಿಕ ಸಮಾಜದ ಮಾರ್ಗದರ್ಶಕ'ನೆಂದೂ (ಜಾರ್ಜ ಹೆನ್ರಿ ಲೂಯಿಸ್): ಹಾಗೂ 'ಸರಿಮಿಗಿಲಿಲ್ಲದ ಸಮಾಜಶಾಸ್ತ್ರಜ್ಞ'ನೆಂದೂ (ಜಾನ್ ಮಾರ್ಲೆ) ಹೇಳುತ್ತಾರೆ.

ಕೋಂಟನಿಗಿಂತಲೂ ಮೊದಲು 'ಸಮಾಜ ಶಾಸ್ತ್ರ'ವೆಂಬ ಅಧ್ಯಯನ ವಿಷಯವು ಆ ಹೆಸರಿನಲ್ಲಿ ಇರಲೇ ಇಲ್ಲ. ಆತನೇ ಅಂಥದೊಂದು ಅಧ್ಯಯನ ಕ್ಷೇತ್ರವನ್ನು ಗುರುತಿಸಿ. ಅದಕ್ಕೊಂದು ವೈಜ್ಞಾನಿಕ ಸ್ವರೂಪವನ್ನು ಕೊಟ್ಟು. ಅದನ್ನು ಒಂದು ಸ್ವಾತಂತ್ರವಾದ ಅಭ್ಯಾಸ-ವಿಷಯವನ್ನಾಗಿ ಬೆಳೆಸಿದನೆಂದು ಹೇಳುತ್ತಾರೆ. ಇಷ್ಟೇ ಅಲ್ಲ. ಅದಕ್ಕೆ 'ಸಮಾಜ ಶಾಸ್ತ್ರ'ವೆಂದು ಹೆಸರು ಕೊಟ್ಟವನೂ ಅವನೇ! ಅದ್ದರಿಂದ ಬಹುತೇಕ ವಿದ್ವಾಂಸರು ಆತನನ್ನು 'ಸಮಾಜ ಶಾಸ್ತ್ರದ ಜನಕ'ನೆಂದು ಗುರುತಿಸಿದ್ದಾರೆ. ಆದರೆ ಅವರಲ್ಲೇ ಕೆಲವರು ಇದಕ್ಕೆ ವಿಪರೀತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರ ದೃಷ್ಟಿಯಲ್ಲಿ ಕೋಂಟ ತನ್ನದೆನ್ನುವ ಯಾವ ಸ್ವತಂತ್ರ ವಿಚಾರವನ್ನೂ ಹೇಳಲಿಲ್ಲ. ತನಗಿಂತಲೂ ಮೊದಲು ಕಾಲಕಾಲಕ್ಕೆ ಯಾರು ಯಾರೋ ಹೇಳುತ್ತ ಬಂದ ವಿಚಾರಗಳನ್ನೇ ಆತ ಕ್ರೋಢೀಕರಿಸಿ ಅದಕ್ಕೊಂದು ವ್ಯವಸ್ಥಿತವಾದ ರೂಪವನ್ನು ಕೊಟ್ಟ. ಕೇವಲ ವಿಚಾರ

ರೂಪವಾಗಿ ಅವರೆಲ್ಲ ಹೇಳಿದ ವಿಷಯಗಳನ್ನೇ ಆತ ವೈಜ್ಞಾನಿಕ, ಜಿಜ್ಞಾಸೆಯಾಗಿ ಪರಿವರ್ತಿಸಿದ. ಇದಿಷ್ಟನ್ನು ಬಿಟ್ಟು ಆತ ಸಾಧಿಸಿದ ಹೆಚ್ಚಿನ ಸಂಗತಿಯಾದರೂ ಏನು? ಇಷ್ಟೇ ಅಲ್ಲ. ಯಾವುದೇ ವಿಷಯಕವಾದ ಚಿಂತನಪರ ವಿಚಾರಗಳು ಏಕಕಾಲಕ್ಕೇ ಹಲವಾರು ಜನರಲ್ಲಿ ವ್ಯಕ್ತಗೊಳ್ಳುವ ಸಾಧ್ಯತೆಯಿದ್ದು, ಆ ರೀತಿಯಾಗಿ ಅವು ವ್ಯಕ್ತಗೊಂಡಿರುವಾಗ ಕೋಂಟ ಒಬ್ಬನೇ ಸಮಾಜಶಾಸ್ತ್ರದ ಜನಕನೆನ್ನುವದು ಸರಿಯೆನಿಸೀತೆ? ಎಂದೆಲ್ಲ ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ಕೋಂಟ ಇಲ್ಲದೇ ಹೋಗಿದ್ದರೂ, ಕನಿಷ್ಠ ಪಕ್ಷ ಬೇರೆ ಹೆಸರಿನಿಂದಲೇ ಆದರೂ ಸಮಾಜಶಾಸ್ತ್ರವು ಪ್ರಸ್ತುತರೂಪದಲ್ಲಿ ಅಸ್ತಿತ್ವಕ್ಕೆ ಬಂದೇ ತೀರುತ್ತಿತ್ತೆಂದು ಎಚ್.ಇ.ಬಾರ್ನ್ಸ್ ಎಂಬ ಮಹಾಶಯರು ವ್ಯಕ್ತಪಡಿಸಿದ್ದಾರೆ.

ಆದರೂ ಕೋಂಟ ಮಹಾ ಮೇಧಾವಿ! ಮಾನವನ ಸಮಾಜ ಜೀವನದ ಮೂಲ-ಲಕ್ಷಣಗಳನ್ನು ತಿಳಿದುಕೊಳ್ಳುವಲ್ಲಿ ಆತ ಎಲ್ಲರಿಗಿಂತಲೂ ಹೆಚ್ಚು ಪರಿಶ್ರಮಿಸಿದ. ಆತ ಸ್ವಂತವಾಗಿ ಹೇಳಿದ ವಿಚಾರಗಳು ಕಡಿಮೆ ಇರಬಹುದು. ಅಥವಾ ಯಾವವೂ ಇರಲಿಕ್ಕಿಲ್ಲ. ಆದರೂ ಆತ ತನ್ನ ಕಾಲದ 'ವೈಚಾರಿಕತೆ'ಯನ್ನು ಯಶಸ್ವಿಯಾಗಿ ಸಮನ್ವಯಿಸಿದ. ಸಮಾಜ ಜೀವನದ ಬಗೆಗೆ ವ್ಯವಸ್ಥಿತವಾಗಿ ಹಾಗು ವಸ್ತುನಿಷ್ಠವಾಗಿ ಆಲೋಚಿಸುವದನ್ನು ತಿಳಿಸಿಕೊಟ್ಟ. ಉಳಿದೆಲ್ಲ ಸಂಗತಿ ಏನೇ ಆಗಿರಲಿ, ಪ್ರಾರಂಭದ ದೆಸೆಯಲ್ಲಿ ಮಾತ್ರ ಸಮಾಜಶಾಸ್ತ್ರ ಆತ ಹಾಕಿಕೊಟ್ಟ ಮಾರ್ಗದಲ್ಲಿಯೇ ಮುನ್ನಡೆದು ಈಗ ಒಂದು ಮಹತ್ವದ ವಿಜ್ಞಾನವಾಗಿ ಬೆಳೆದು ನಿಂತಿದೆ– ಇದರಲ್ಲಿ ಏನೂ ಸಂಶಯವಿಲ್ಲ. ಈ ದೃಷ್ಟಿಯಿಂದ ಆತನನ್ನು ಸಮಾಜಶಾಸ್ತ್ರದ ಜನಕನೆಂದು ಅಲ್ಲವಾದರೂ ಅದರ ಮೂಲ ಪ್ರವರ್ತಕರಲ್ಲಿ ಒಬ್ಬ–ಬಹುಶಃ ಬಹು ಮಹತ್ವದವ–ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಲೋಕಸಿದ್ಧವಾದ (Positivism)

ವಾಸ್ತವಾಂಶಗಳು ಹಾಗೂ ಗೋಚರಸಾಧ್ಯ ಸಂಗತಿಗಳನ್ನು ಮಾತ್ರ ಅಂಗೀಕರಿಸುವ ಲೋಕಸಿದ್ಧವಾದವೆಂಬುದು ಕೋಂಟನ ಸುಪ್ರಸಿದ್ಧ ಸಿದ್ಧಾಂತಗಳಲ್ಲಿ ಒಂದಾಗಿದೆ. ಕಾಲ್ಪನಿಕ ಸಂಗತಿಗಳನ್ನು ಹತ್ತಿಟ್ಟು 'ನೈಜ' ಅನುಭವಗಳನ್ನು ಮಾತ್ರ ಅದು ಅಂಗೀಕರಿಸುತ್ತದೆಯಾದ್ದರಿಂದ "ದೃಷ್ಟ (ಪ್ರತ್ಯಕ್ಷ) ಪ್ರಮಾಣವಾದ" ಎಂದೂ ಹೆಸರಿದೆ. ಆತನ ವಿಚಾರದಂತೆ ಇತರ ನೈಸರ್ಗಿಕ ವಿಜ್ಞಾನಗಳಲ್ಲಿ ಅಧ್ಯಯನಕ್ಕಾಗಿ ಬಳಸಲಾಗುವ ವಿಧಾನಗಳನ್ನೇ ಅಪ್ಪರಹುಟ್ಟಿಗೆ ಈ ಹೊಸ–ವಿಜ್ಞಾನ (ಸಮಾಜಶಾಸ್ತ್ರ) ದಲ್ಲಿಯೂ ಬಳಸಬಹುದಾಗಿದೆ. ವಿಜ್ಞಾನವೆನ್ನುವದು ಒಂದು ಅಭ್ಯಾಸ–ವಿಷಯವಲ್ಲ; ಅದು ಒಂದು ಅಧ್ಯಯನದ ವಿಧಾನವಾಗಿದೆಯಷ್ಟೇ! ಅಂಥ ವಿಧಾನಗಳನ್ನು ತಾನೂ ರೂಢಿಸಿಕೊಳ್ಳುವ ಮೂಲಕ ಸಮಾಜಶಾಸ್ತ್ರವೂ ಒಂದು ವಿಜ್ಞಾನವಾಗಬಲ್ಲದು–ಅದೇಕೆ, ಅದು ಹಾಗಾಗಬೇಕು–ಎಂದು ಆತ ವ್ಯಕ್ತಪಡಿಸಿದ. ಅಂತೆಯೇ ಅದಕ್ಕೆ ಮೊದಲು "ಸಾಮಾಜಿಕ-ಭೌತಶಾಸ್ತ್ರ" (Social Physics) ಎಂದೂ, ಅನಂತರದಿಂದ ಅದನ್ನೇ "ಸಮಾಜ-ವಿಜ್ಞಾನ"ವೆಂದೂ ಆತ ಕರೆದ.

ವಿಜ್ಞಾನಗಳ ವರ್ಗೀಕರಣ (Classification of Sciences)

ಸಮಾಜಶಾಸ್ತ್ರವನ್ನು ಒಂದು ವಿಜ್ಞಾನವಾಗಿ ಪರಿಗಣಿಸಿದ ಮೇಲೆ ಸ್ವಾಭಾವಿಕವಾಗಿಯೇ ಆತ ವಿಜ್ಞಾನಗಳ ಸಾಲಿನಲ್ಲಿ ಅದಕ್ಕೂ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟ. ಆತನ ಹೆಸರಾಂತ ವಿಜ್ಞಾನಗಳ ವರ್ಗೀಕರಣ ತತ್ತ್ವದಂತೆ ಪ್ರಪಂಚದಲ್ಲಿರುವ ವಿಜ್ಞಾನಗಳೆಲ್ಲ ಎರಡು ಬಗೆಯಾಗಿವೆ– ಒಂದು ಸೈದ್ಧಾಂತಿಕ ಹಾಗೂ ಎರಡು. ಅನ್ವಯಿಕ. ಸೈದ್ಧಾಂತಿಕ ವಿಜ್ಞಾನಗಳು, ಮುಂದುವರಿದು. ಎರಡು ಪ್ರಕಾರವಾಗಿವೆ–ಒಂದು. 'ಮೂರ್ತ' ಸಂಗತಿಗಳನ್ನು ಕುರಿತಾದ 'ವಿಜ್ಞಾನ'ಗಳು; ಎರಡು. 'ಅಮೂರ್ತ' ಸಂಗತಿಗಳನ್ನು ಕುರಿತಾದ 'ಶಾಸ್ತ್ರ'ಗಳು. ವಿವಿಧ ವಿಜ್ಞಾನಗಳು ಬೆಳವಣಿಗೆ ಹೊಂದಿದ ಕ್ರಮಕ್ಕೆ ಅನುಸರಿಸಿ ಅಮೂರ್ತ ಸೈದ್ಧಾಂತಿಕ ವಿಜ್ಞಾನಗಳನ್ನು (Abstract–Theoretical–Sciences) ಏಣಿಶ್ರೇಣಿ (ಸೋಪಾನದೋಪಾದಿ)ಯಾಗಿ ಅಣಿಗೊಳಿಸಬಹುದೆಂಬುದು ಆತನ ಅಭಿಪ್ರಾಯ. ಮೊದ ಮೊದಲು ಬಲು ಕಠಿಣವಲ್ಲದ, ಬಹು ಸಾಮಾನ್ಯವಾದ ವಸ್ತು–ವಿಷಯವನ್ನುಳ್ಳ ಹಾಗೂ ಮಾನವಮಾತ್ರರಿಗೆ ಅತಿ ದೂರದಿಂದ ಸಂಬಂಧಿಸಿದ ವಿಷಯಗಳನ್ನು ಕುರಿತಾದ ವಿಜ್ಞಾನಗಳು ಬೆಳೆದವೆಂದೂ. ಅನಂತರ ಕಾಲಾಂತರದಲ್ಲಿ ಒಂದಾದ ಮೇಲೊಂದರಂತೆ ಸರಳವೂ. ಸಾಮಾನ್ಯವೂ. ಮಾನವಮಾತ್ರರಿಗೆ ಅತಿ ಸಮೀಪದಿಂದ ಸಂಬಂಧಿಸಿದುವೂ ಆದ ವಿಷಯಗಳನ್ನು ಒಳಗೊಂಡ ಶಾಸ್ತ್ರಗಳು ಬೆಳೆದವೆಂದೂ ಆತ ತಿಳಿಯ ಪಡಿಸಿದ. ಈ ರೀತಿಯಾಗಿ ಬೆಳೆದ ಕೊನೆಯ 'ಶಾಸ್ತ್ರ'ವೇ ಸಮಾಜಶಾಸ್ತ್ರ. ಯಾವೊಂದು ಹೊಸ ವಿಜ್ಞಾನ ಬೆಳೆಯಬೇಕಾದರೂ ಅದರ ಹಿಂದಿನದು ಬೆಳವಣಿಗೆಯ ನಿರ್ದಿಷ್ಟ ಹಂತವೊಂದನ್ನು ತಲುಪಿರಲೇ ಬೇಕು. ಮುಂದಿನ ವಿಷಯಗಳು ಹಿಂದಿನವುಗಳು ಕಂಡುಕೊಂಡ ಸತ್ಯ ಸಂಗತಿಗಳನ್ನು ಆಧರಿಸಿಯೇ ಬೆಳೆಯಬೇಕು; ಮತ್ತು ಎಲ್ಲ ವಿಜ್ಞಾನಗಳಿಗೂ 'ಸಾಮಾನ್ಯ'ವಾದ ಕೆಲವು ವಿಧಾನಗಳು ಇರಲೇಬೇಕು ಎಂಬುದು ಆತ ಕಂಡುಕೊಂಡ ವಿಚಾರ. ಈ ದೃಷ್ಟಿಯಿಂದ. ಆತನ ಪ್ರಕಾರ. ಮೊದಲು ಗಣಿತಶಾಸ್ತ್ರ ಹುಟ್ಟಿ ಅನಂತರ ಒಂದಾದ ಮೇಲೆ ಒಂದರಂತೆ ಖಗೋಲಶಾಸ್ತ್ರ. ಭೌತಶಾಸ್ತ್ರ. ರಸಾಯನ ಶಾಸ್ತ್ರ, ಆರೋಗ್ಯಶಾಸ್ತ್ರ ಹಾಗೂ ಕೊನೆಯದಾಗಿ ಸಮಾಜಶಾಸ್ತ್ರ ಹುಟ್ಟಿದ್ದವು. ತೀರ ಇತ್ತೀಚೆಗೆ ಜನ್ಮತಳೆದ ಸಮಾಜಶಾಸ್ತ್ರವು ಸಂಪೂರ್ಣ ಬೆಳವಣಿಗೆಹೊಂದಬೇಕಾದರೆ ಅದಿನ್ನೂ ಹಲವಾರು ಹಂತಗಳನ್ನು ದಾಟಬೇಕಾಗಿರುವುದಾಗಿಯೂ ಆತ ಅಭಿಪ್ರಾಯಪಟ್ಟ.

ಮೂರು ಹಂತಗಳ ಸೂತ್ರ (Law of three stages)

ವಿವಿಧ ವಿಜ್ಞಾನಗಳು ಬೆಳವಣಿಗೆ ಹೊಂದುವ ಕ್ರಮವನ್ನು ವಿವರಿಸುತ್ತ ಕೋಂಟ ತನ್ನ ಲೋಕವಿಖ್ಯಾತವಾದ ಮೂರು ಹಂತಗಳ ಸೂತ್ರವನ್ನು ಪ್ರತಿಪಾದಿಸಿದ. ಆತನ ಅಭಿಪ್ರಾಯದಂತೆ ಮಾನವ (ವ್ಯವಹಾರ) ಜ್ಞಾನದ ಪ್ರತಿಶಾಖೆಯೂ ದೇವತಾವಿಜ್ಞಾನ ಕಾಲ (Theological Stage): ಅತಿ ಭೌತಿಕ ವಿಚಾರಗಳ ಕಾಲ (Metaphysical

Stage); ಹಾಗೂ ಪ್ರತ್ಯಕ್ಷ ಪ್ರಮಾಣಾವಲಂಬೀ ಕಾಲ (Positive-Stage)ಗಳೆಂಬ ಮೂರು ಮೆಟ್ಟಿಲುಗಳನ್ನು ದಾಟಿಯೇ ಬೆಳೆಯಬೇಕಾಗಿದೆ. ಈ ಕೊನೆಯ ವಿಜ್ಞಾನ ಬೆಳವಣಿಗೆಯು ಮೂರನೆಯ ಹಂತದಲ್ಲಿದ್ದಾಗ, ಅವರ ಮುಂದಿನದು ಮೊದಲನೆಯ ಮೆಟ್ಟಿಲಲ್ಲಿರುತ್ತದೆ: ಮತ್ತು ಕೊನೆಯ ಅವಸ್ಥೆಯನ್ನು ತಲುಪಿದಾಗ ಜೀವನದ ಯಾವ ಸಂಗತಿಯೇ ಆದರೂ (ಆರ್ಥಿಕ. ಸಾಮಾಜಿಕ, ರಾಜಕೀಯ ಮುಂ.) ಒಂದೇ ಬಗೆಯಾದ (ಪ್ರಾಕೃತಿಕ) ನಿಯಮಗಳಿಗೆ ಒಳಗಾಗಿರುವ ಕಲ್ಪನೆ ಬರುತ್ತದೆ. ವಿಜ್ಞಾನಿಗಳು ಬೆಳವಣಿಗೆ ಹೊಂದಿದ ಹಾಗೂ ಹೊಂದುತ್ತಿರುವ ಈ ಕ್ರಮವೇ ವಿಶಾಲಾರ್ಥದಲ್ಲಿ ಬೌದ್ಧಿಕ ಬೆಳವಣಿಗೆ. ವೈಚಾರಿಕ ವಿಕಾಸ. ಹಾಗೂ ಸಾಮಾಜಿಕ ಮುಂಬರಿಯುವಿಕೆ ಗಳಿಗೂ ಅನ್ವಯಿಸುತ್ತದೆ.

ಇತಿಹಾಸ ದರ್ಶನ (Philosophy of History)

ಐತಿಹಾಸಿಕ ಘಟನೆಗಳು ಪರಸ್ಪರವಾಗಿ ಸಂಬಂಧಹೊಂದಿದ್ದು ಅವುಗಳ ಕ್ರಮಾನು ಕ್ರಮಣಿಕೆಯನ್ನು ಗುರುತಿಸುವ ಮೂಲಕ ಅವುಗಳ ಹಿಂದಿರುವ ನಿಯಮಗಳನ್ನು ಅರಿತು ಕೊಳ್ಳಬಹುದೆಂಬ ವಿಚಾರವನ್ನು ಕೋಂಟ ವ್ಯಕ್ತಪಡಿಸಿದ. ಇದೇ ಅತನ ಸುಪ್ರಸಿದ್ಧ ಇತಿಹಾಸದರ್ಶನ. ಬೀಜಗಣಿತದ ಸೂತ್ರದಿಂದ ವಕ್ರರೇಖೆಯೊಂದನ್ನು ಗುರುತಿಸಲು ಸಾಧ್ಯವಿರುವಂತೆ ಬೌದ್ಧಿಕ ಬೆಳವಣಿಗೆಯ 'ಮೂರು ಹಂತಗಳ ಸೂತ್ರ'ದ ಕಲ್ಪನೆಯ ಮುಖಾಂತರ ಮಾನವೀಯ ಇತಿಹಾಸದಲ್ಲಿ ಅಡಕವಾಗಿರುವ ನಿಯಮಗಳನ್ನು ಗುರು ತಿಸಬಹುದು. ಸಮಾಜ ಜೀವನದಲ್ಲಿ ಎಲ್ಲವೂ ಸಂಕೀರ್ಣವಾಗಿದ್ದು ಪರಸ್ಪರ ಸಂಬಂಧ ಹೊಂದಿರುವದರಿಂದ ಬೌದ್ಧಿಕತೆಯಲ್ಲಿ ಬೆಳವಣಿಗೆಯಾದಂತೆ ಸಮಾಜ ಜೀವನದಲ್ಲಿಯೂ ತತ್ಸಂಬಂಧೀ ಮಾರ್ಪಾಟುಗಳು ಸಹಜವಾಗಿಯೇ ಉಂಟಾಗುತ್ತವೆ. ಉದಾಹರಣೆಗೆ ಮಾನವ ಸಮಾಜವು ಬೌದ್ಧಿಕತೆಯ ಮೊದಲ ಹಂತದಲ್ಲಿದ್ದಾಗ ಸಮಾಜದಲ್ಲಿ ಕ್ಷಾತ್ರ ಪ್ರಭಾವ ತಾನೇ ತಾನಾಗಿದ್ದು ಜನರು ಯುದ್ಧಾಸಕ್ತರಾಗಿದ್ದರು. ಅನಂತರ ಸಮಾಜವು ಬೆಳವಣಿಗೆಯ ಎರಡನೆಯ ಹಂತಕ್ಕೆ ಬಂದಾಗ. 'ಆತ್ಮರಕ್ಷಣೆಗಾಗಿ' ಮಾತ್ರ (ಅವಶ್ಯ ಬಿದ್ದಲ್ಲಿ. ಅವಶ್ಯಬಿದ್ದಷ್ಟು ಮಾತ್ರ) ಯುದ್ಧವೆಂಬ ಕಾಲ ಬಂತು. ಅಲ್ಲಿಂದ ಮುಂದೆ ಮೂರನೆಯ ಹಂತಕ್ಕೆ ಬಂದಾಗ ಸಮಾಜ ಜೀವನದ ರೀತಿಯೇ ಬೇರೆಯಾಯಿತು– ವಿಜ್ಞಾನ ಹಾಗೂ ತಾಂತ್ರಿಕತೆಗಳ ಪರಿಣಾಮ ಜೀವನದ ಮೇಲೆ ಬಹಳವಾಗಿ ಆಗ ಹತ್ತಿತು. ಇದನ್ನೇ ಸೂತ್ರರೂಪವಾಗಿ ಈ ಕೆಳಗಿನಂತೆ ವಿವರಿಸಬಹುದು:

ಬೌದ್ಧಿಕ ಬೆಳವಣಿಗೆಯ ಹಂತಗಳು	ಸಮಾಜ-ಲಕ್ಷಣ	ಸಮಾಜ-ಘಟಕ	ಆಧಾರತತ್ತ್ವ	ಆಧಾರ-ಭಾವನೆ
ಶ್ರುತಿಪ್ರಧಾನ ಕಾಲ	ಕ್ಷಾತ್ರಭಾವ	ಕುಟುಂಬ	ಸ್ವಗೃಹ-ಪ್ರೀತಿ	ಮಮತೆ.
ಅಮೂರ್ತ-ವಿಚಾರಗಳ ಹೆಚ್ಚಳದ ಕಾಲ	ನ್ಯಾಯಪರತೆ	ರಾಷ್ಟ್ರ	ಸಹಜೀವನ	ಪರಸ್ಪರ ಗಾರವ
ಪ್ರತ್ಯಕ್ಷ ಪ್ರಮಾಣಾವಲಂಬೀ ಕಾಲ	ಕೈಗಾರಿಕ	ಮಾನವ ಜನಾಂಗ	ವಿಶ್ವವ್ಯಾಪಕತೆ	ದಯಾಪರತೆ

ಸಮಾಜಶಾಸ್ತ್ರ (Sociology)

ವಿಜ್ಞಾನಗಳ ವರ್ಗೀಕರಣದಲ್ಲಿ 'ಸಮಾಜಶಾಸ್ತ್ರ'ಕ್ಕೆ ನೀಡಿದ ಸ್ಥಾನವೇ ಅದರ ಬಗೆಗಿನ ಆತನ ವಿಚಾರ ಹಾಗೂ ನಿಕೃಷ್ಟಭಾವಗಳನ್ನು ಸ್ಪಷ್ಟಪಡಿಸುತ್ತದೆ. ಅದು ಆತನ ದೃಷ್ಟಿಯಲ್ಲಿ ಅಮೂರ್ತ ಸೈದ್ಧಾಂತಿಕ ಶಾಸ್ತ್ರವಾಗಿದೆ. ಖಗೋಲಶಾಸ್ತ್ರ, ಭೌತಶಾಸ್ತ್ರ, ಆರೋಗ್ಯಶಾಸ್ತ್ರ ಮುಂತಾದವೆಲ್ಲ ತಮ್ಮ ತಮ್ಮ ವಿಷಯುಗಳನ್ನು ಅಭ್ಯಸಿಸುವ ರೀತಿಯಲ್ಲಿಯೇ ಸಮಾಜಶಾಸ್ತ್ರವೂ ತನ್ನ ವಿಷಯುವನ್ನು ಅಭ್ಯಸಿಸಬೇಕು... ಹಾಗೆ ಮಾಡುವದರಿಂದ ಅದೂ ಒಂದು ವಿಜ್ಞಾನವಾಗುತ್ತದೆ. ಮಾನವನ ಸಮಾಜ ಜೀವನವನ್ನು ವೈಜ್ಞಾನಿಕ ವಿಧಾನಗಳನ್ನನುಸರಿಸಿ ಅಭ್ಯಸಿಸಿ, ಅದರಲ್ಲಿರುವ (ಬದಲಿಲ್ಲದ) ನೀತಿ ನಿಯಮಗಳನ್ನು ಕಂಡು ಹಿಡಿಯುವದೇ ಅದರ ಉದ್ದೇಶವಾಗಿದೆ. ಜೀವನದ ಇತರ ಸಂಗತಿಗಳಿಗೆ ಅನ್ವಯಿಸುವ ನೀತಿ ನಿಯಮಗಳೇ ಸಮಾಜ ಜೀವನದ ಘಟನೆಗಳಿಗೂ ಅನ್ವಯಿಸುವದರಿಂದ, ಉಳಿದೆಲ್ಲ ವಿಜ್ಞಾನಗಳು ವಿಶಿಷ್ಟವಾದ ವಿಧಾನಗಳನ್ನು ಬಳಸುವ ಮೂಲಕ ಬೆಳವಣಿಗೆ ಹೊಂದುವದು ಸಾಧ್ಯವಾದರೆ ಅವೇ ವಿಧಾನಗಳನ್ನು ಅನುಸರಿಸಿ ಸಮಾಜಶಾಸ್ತ್ರವೂ ಏಕೆ ಬೆಳೆಯಲು ಸಾಧ್ಯವಿಲ್ಲ, ಎಂದು ಆತ ಪ್ರಶ್ನಿಸಿದ.

ವೈಧಾನಿಕ ಕ್ರಮ (Methodology)

ಸಮಾಜಶಾಸ್ತ್ರವೂ ಒಂದು 'ವಿಜ್ಞಾನ'ವಾಗ ಬೇಕಾದರೆ ಉಳಿದೆಲ್ಲ ವಿಜ್ಞಾನಗಳು ಹೊಂದಿರುವಂತೆ ಅದೂ ಕೆಲವು 'ಸಾಮಾನ್ಯ'ವಿಧಾನಗಳನ್ನೂ, ಕೆಲವು 'ವಿಶಿಷ್ಟ' ವಿಧಾನಗಳನ್ನೂ ಹೊಂದಿರುವದು ಅವಶ್ಯಕವಾಗಿದೆ. ಅದು ದೃಷ್ಟ (ಪ್ರತ್ಯಕ್ಷ) ಪ್ರಮಾಣಾವಲಂಬಿಯಾಗಲು ನಾಲ್ಕು ವಿಧಾನಗಳನ್ನು ಅನುಸರಿಸುವದು ಅನಿವಾರ್ಯವಾಗಿದೆ. —ವೀಕ್ಷಣೆ, ಪರೀಕ್ಷಣೆ, ತುಲನೆ ಹಾಗೂ ಐತಿಹಾಸಿಕ ವಿಧಾನ.

ವೀಕ್ಷಣೆಯು (Observation) ಪ್ರಯೋಜನಕಾರಿ ಆಗಿರಬೇಕಾದರೆ ಅದಕ್ಕೆ ಸಿದ್ಧಾಂತದ (Theory) ಮಾರ್ಗದರ್ಶನ ಬೇಕೇಬೇಕು. ಸಿದ್ಧಾಂತವು ಮೊದಲು ಮಾರ್ಗದರ್ಶನ ಮಾಡಿ ಅನಂತರ ಅರ್ಥ ವಿವರಣೆಯನ್ನು ನೀಡದೇ ಯಾವ ಸಂಗತಿಯನ್ನು ಕುರಿತೂ (ವ್ಯವಸ್ಥಿತವಾಗಿ) ವೀಕ್ಷಿಸುವದು ಸಾಧ್ಯವಿಲ್ಲ... ವೈಜ್ಞಾನಿಕ ದೃಷ್ಟಿಯಿಂದ ಸಂಯೋಜನೆಗಳಿಂದ ಪೃಥಃಕರಿತ ಎಲ್ಲ ಆಳಲೆಕಾಯಿ ವೀಕ್ಷಣೆಯೂ ವ್ಯರ್ಥ... ಕೇವಲ ಕಾಲ್ಪನಿಕವಾಗಿ ಯಾಕಾಗಿರಲೊಲ್ಲದೇಕೆ. ಒಂದೇ ನಿಯಮಕ್ಕೆ ಅನುಸರಿಸಿ ನಡೆಯುವ ವೀಕ್ಷಣೆಯ ಪ್ರತಿಫಲಗಳನ್ನು ಮಾತ್ರ ವಿಜ್ಞಾನವು ಬಳಸಿಕೊಳ್ಳಬಹುದಾಗಿದೆ." (ಪೇ. ೯೭. ಪೊಜಿಟಿವ್ ಫಿಲಾಸಫಿ).

ಎರಡನೆಯದಾಗಿ ಪ್ರಯೋಗ (Experimentation) ವಿಧಾನ. ಸ್ವತಃ ಕೋಂಟನಿಗೇ ಗೊತ್ತಿತ್ತು. ಅದು ಸಮಾಜ ಅಭ್ಯಾಸದಲ್ಲಿ ಸಾಧ್ಯವಾಗುವದಿಲ್ಲವೆಂದು. ಅಂತೆಯೇ ಆತ ಅದರ ಬದಲಾಗಿ 'ತುಲನಾತ್ಮಕ (Comparative) ವಿಧಾನವನ್ನು ಪ್ರತಿಪಾದಿಸಿದ. ಮಾನವ ಸಮಾಜವನ್ನು ಪ್ರಾಣಿ ಸಮಾಜದೊಂದಿಗೆ. ಯಾವೊಂದು

ಸಮಾಜದೊಳಗಿನ ಒಂದು ವರ್ಗವನ್ನು ಅದೇ ಸಮಾಜದ ಇನ್ನೊಂದು ವರ್ಗದೊಡನೆ 'ತುಲನೆ'ಮಾಡಿ ನೋಡಿದರೆ ಮಹತ್ವದ ಅನೇಕ ಸಂಗತಿಗಳು ಬೆಳಕಿಗೆ ಬರುವವಾಗಿ ಆತ ಅಭಿಪ್ರಾಯಪಟ್ಟ.

ಆತನ ಕೃತಿಗಳಲ್ಲೆಲ್ಲಾ ತುಂಬ ಜನಪ್ರಿಯವಾದ 'ಕೊರ್ಸ್ ಡಿ ಫಿಲಾಸಫಿ ಪೋಜಿಟಿವ್'ನಲ್ಲಿ ಸಮಾಜ ಶಾಸ್ತ್ರಕ್ಕೆ ಬೇಕಾಗುವ ಅಭ್ಯಾಸ ವಿಷಯವನ್ನು ಇತಿಹಾಸವು ಒದಗಿಸುವದಾಗಿಯೂ. ಮಾನವೀಯ ಘಟನೆಗಳ ಸಾಮರಸ್ಯವನ್ನು ತುಲನಾತ್ಮಕ ಹಾಗೂ ಐತಿಹಾಸಿಕ ವಿಧಾನಗಳ ಮೂಲಕ ಅರ್ಥಮಾಡಿಕೊಳ್ಳಬಹುದೆಂದೂ ಆತ ಅಭಿಪ್ರಾಯಪಟ್ಟ. "ಮಾನವ ಸಮಾಜದ (ಬೆಳವಣಿಗೆಯ ವಿವಿಧ) ಹಂತಗಳನ್ನು ಐತಿಹಾಸಿಕವಾಗಿ. ಅವುಗಳ ಕ್ರಮಾನುಕ್ರಮದಲ್ಲಿ ತುಲನೆಮಾಡಿ ನೋಡುವದು ಹೊಸ ರಾಜನೀತಿ ಶಾಸ್ತ್ರದ ಪ್ರಮುಖ ವಿಧಾನವಾಗಿದೆ ಮಾತ್ರವಲ್ಲ... ಅದರ ವಿವೇಚನಾಪೂರ್ಣ ಬೆಳವಣಿಗೆಯು ಸಮಾಜ ಶಾಸ್ತ್ರದ ಅಸ್ತಿಭಾರವೂ ಆಗಿದೆ." ಈ ದೃಷ್ಟಿಯಿಂದ ಇತಿಹಾಸಕಾರನ ಕೃತಿಯು ಸಮಾಜಶಾಸ್ತ್ರಜ್ಞನ ಕೆಲಸಕ್ಕೆ ತುಂಬ ಪ್ರಯೋಜನಕಾರಿಯಾಗಿದೆ. ಅಂತೆಯೇ ಸಮಾಜಶಾಸ್ತ್ರವನ್ನು ವಿಶಾಲಾರ್ಥದಲ್ಲಿ ವ್ಯಾಪಕವಾದ ವಿಷಯವ್ಯಾಪ್ತಿಯುಳ್ಳ ಇತಿಹಾಸವಾಗಿ ಗ್ರಹಿಸಬಹುದೆಂದು ಆತ ಅಭಿಪ್ರಾಯಪಟ್ಟ.

ಇದರ ಹೊರತಾಗಿ ವೈಧಾನಿಕ ಕ್ರಮದ (Methodology) ಬಗೆಗೆ ಕೋಂಟ ವ್ಯಕ್ತಪಡಿಸಿದ ಇತರ ಎರಡು ಮಹತ್ವದ ವಿಚಾರಗಳನ್ನು ನಾವಿಲ್ಲಿ ನೆನೆಯಬಹುದು. ಎನಿಸುತ್ತದೆ. ಒಂದು ಸಮಾಜವೂ ಪ್ರಾಣಿಯಂತೆ ರಚನಾತ್ಮಕ ಹಾಗೂ ಕ್ರಿಯಾತ್ಮಕ ಐಕ್ಯವನ್ನು ಹೊಂದಿರುವದರಿಂದ. ಅದನ್ನು ವಿಭಾಗಾತ್ಮಕವಾಗಿ ಅರಿಯಲೆತ್ನಿಸುವದಕ್ಕಿಂತ "ಇಡಿಯಾಗಿ" ಗ್ರಹಿಸಲೆಳಸುವದು ಹೆಚ್ಚು ಯೋಗ್ಯವಾಗಿದೆ. ಸಮಾಜಶಾಸ್ತ್ರವು ಜೀವನವನ್ನು "ಇಡಿಯಾಗಿ". "ಒಟ್ಟಾಗಿ". ಕಾಣುತ್ತದೆ– ಕಾಣಬೇಕು. ಎರಡನೆಯದಾಗಿ. ಸಮಾಜ ಜೀವನದ ಮಾದರಿಗಳು (Social Types) ನಿಜ ಜೀವನದ ಘಟನೆಗಳಿಗೆ ಬಹಳವಾದರೆ ಸಮೀಪ ಬರಬಹುದೇ ಹೊರತು ಅವನ್ನು ಎಂದಿಗೂ ತಾಕಲಾರವು. ಇಲ್ಲಿರುವದನ್ನೆಲ್ಲಾ ಸಾಂಕೇತಿಕವಾಗಿ ನಿರೂಪಿಸಬಹುದಾದರೂ ವಾಸ್ತವತೆ ಮತ್ತು ಆದರ್ಶ ಚಿತ್ರಣಗಳ (Reality Vs. Ideal Types) ನಡುವಣ ಅಂತರ ಉಳಿದೇ ತೀರುತ್ತದೆ. ಅಂತೆಯೇ ಸಮಾಜಶಾಸ್ತ್ರದಲ್ಲಿ ಬರುವದೆಲ್ಲ 'ಸ್ಥೂಲವಾಗಿ' ಸತ್ಯವಾಗಿರುವದೇ ಹೊರತು 'ಸ್ಪಷ್ಟಾರ್ಥದಲ್ಲಿ' ಅಲ್ಲ.

ಸ್ಥಾಯೀ ಬಲಶಾಸ್ತ್ರ ಮತ್ತು ಸಂಚಲನಾತ್ಮಕ ಕ್ರಿಯಾಶಾಸ್ತ್ರ (Statics and Dynamics)

ಆರೋಗ್ಯಶಾಸ್ತ್ರದ ಮಾದರಿಯನ್ನನುಸರಿಸಿ ಸಮಾಜಶಾಸ್ತ್ರವನ್ನು ಕೋಂಟ ಸ್ಥಾಯೀ ಬಲಶಾಸ್ತ್ರ ಮತ್ತು ಬಲಕ್ರಿಯಾಶಾಸ್ತ್ರಗಳೆಂದು ಎರಡು ವಿಭಾಗಮಾಡಿದ.

ಸಮಾಜ ಜೀವನದ ನಿತ್ಯಸಂಗತಿಗಳನ್ನು ಮೊದಲನೆಯದೂ ಅನಿತ್ಯಸಂಗತಿಗಳನ್ನು ಎರಡನೆಯದೂ ಅಭ್ಯಾಸಮಾಡುತ್ತದೆ. ನಿಜಜೀವನದಲ್ಲಿ ನಿತ್ಯಾನಿತ್ಯ ಸಂಗತಿಗಳು ಅವಿ–ಭಾಜ್ಯವಾಗಿ ಹೊಂದಿಕೊಂಡಿರುವದರಿಂದ ಅವುಗಳನ್ನು ವಿಶ್ಲೇಷಣೆಗೆಂದು ಪ್ರೊರತು ಪಡಿಸಿ ಸುಲಭವಾಗಿ ವಿಭಜಿಸುವದು ಸಾಧ್ಯವಿಲ್ಲ.

ಸಾಮಾಜಿಕ ಸ್ಥಾಯೀಬಲಶಾಸ್ತ್ರವು (Social–Statics) ಸಮಾಜದ ಸಮಷ್ಟಿ-ಪ್ರಜ್ಞೆಗೆ ಸಂಬಂಧಿಸಿದುದಾಗಿದೆ. ಸಮಾಜದ ವಿವಿಧ ಘಟಕಗಳು ಪರಸ್ಪರವಾಗಿ ಈ ವಿಧವಾದ 'ಸಹ-ಸಂಬಂಧದ' ಭಾವನೆಗಳನ್ನು ಹೊಂದಿರುವದರಿಂದಲೇ ಸಮಾಜ ಜೀವನ ಸಾಧ್ಯವಾಗುತ್ತದೆ. 'ಸಮಷ್ಟಿ ಪ್ರಜ್ಞೆ' ಜೀವರಾಶಿಗಳ ವಿಕಾಸಕ್ರಮದ ಪ್ರತಿ ಹಂತದಲ್ಲೂ ಕಾಣಸಿಗುತ್ತದೆ, ನಿಜ. ಆದರೆ ಮಾನವ ಸಮಾಜದಲ್ಲಿ ಅದು ಗರಿಷ್ಠ ಪ್ರಮಾಣದಲ್ಲಿ ಇರುತ್ತದೆ.

ಸಮಾಜದಲ್ಲಿ ವ್ಯಕ್ತಿ, ಕುಟುಂಬ ಹಾಗೂ ಜನಮಂದೆಗಳು ಮೂರು ಮುಖ್ಯ ಘಟಕಗಳಾಗಿವೆ. ವ್ಯಕ್ತಿ ಮತ್ತು ಸಮಾಜಗಳು ಒಂದರೊಂದರ ವ್ಯಷ್ಟಿ–ಸಮಷ್ಟಿ ಚಿತ್ರಣಗಳಾಗಿವೆ. ಕುಟುಂಬವು ಸಮಾಜ ಜೀವನದ ಒಂದು ಮಹತ್ವದ ಘಟಕವಾಗಿದ್ದದಾದರೂ ಸಾಮಾಜಿಕ ನೀತಿ-ನಿಯಮಗಳಿಗೆ ಒಳಪಟ್ಟೇ ಕಾರ್ಯಮಾಡುತ್ತಿರುತ್ತದೆ. ಜನಮಂದೆಯಾದರೋ ಬೇರೆಯೇ ಆಗಿದೆ. ಅದಕ್ಕೆ ರಾಜಕೀಯ ಬಣ್ಣ ಬಳಿದಾಗ ಅದು ಒಂದು "ರಾಷ್ಟ್ರ"ವೆನಿಸಿ ಕೃತ್ರಿಮ ವ್ಯವಸ್ಥೆಯಾಗಿ ಮಾರ್ಪಡುತ್ತದೆ.

ಸಾಮಾಜಿಕ ಸಂಚಲನಾತ್ಮಕ ಕ್ರೀಯಾಶಾಸ್ತ್ರವನ್ನು (Social Dynamics) ಕೋಂಟ 'ದೇಶಕಾಲಗಳಾವುದರದೂ ಹೆಸರು ದೆಸೆಯಿಲ್ಲದ ಇತಿಹಾಸ' ಎಂಬರ್ಥದಲ್ಲಿ ಪ್ರಯೋಗಿಸಿದ. ನಾಗರಿಕತೆಯು ಹೇಗೆ ಹಂತಹಂತವಾಗಿ ಬೆಳವಣಿಗೆ ಹೊಂದುತ್ತಿದೆ ಎಂಬುದನ್ನು ಕುರಿತು ಅದು ಅಭ್ಯಸಿಸುತ್ತದೆ. ಸಾಮಾಜಿಕ ವಿಕಾಸವು ಸೃಷ್ಟಿ-ವಿಕಾಸಕ್ರಮದ ಒಂದು ಸ್ತರಮಾತ್ರವಾಗಿದ್ದು ಅದನ್ನು ಅಭ್ಯಸಿಸುವ ಉದ್ದೇಶವನ್ನೇ ಈ ಶಾಸ್ತ್ರವು ಹೊಂದಿದೆ.

ಉಪಸಂಹಾರ :

ಈ ರೀತಿಯಾಗಿ ಕೋಂಟ ಸಮಾಜಶಾಸ್ತ್ರದ ಮುಖ್ಯವಾದ ಸಮಸ್ಯೆಗಳಿಗೆ ಉತ್ತರ ಕೊಡಲು ಪ್ರಯತ್ನಿಸಿದ. 'ಸಮಾಜ'ವನ್ನು ಆತ ಎಂದಿಗೂ ವ್ಯಾಖ್ಯೆಗೊಳಪಡಿಸಲಿಲ್ಲ; ನಿಜ. ಆದರೆ ಅದೆಂದರೆ ಹಲವಾರು ಕುಟುಂಬ ಹಾಗೂ ಜನ ಮಂದೆಗಳ ಕೂಡು ವಿಕೆಯಿಂದಾಗಿ ಒಟ್ಟುಮೊತ್ತವೆಂದು ಆತನ ಭಾವನೆಯಾಗಿತ್ತು. ಸಮಾಜವನ್ನು 'ಸೃಷ್ಟಿ'ಯ ಅಂಗವಿಶೇಷವಾಗಿ ಆತ ಗುರುತಿಸಿದ. ಅದರಂತೆಯೇ ಸಮಾಜ ಜೀವನವನ್ನು 'ಇಡಿ'ಯಾಗಿ ನೋಡುವದರಲ್ಲಿ ಕೆಲವು ಅನುಕೂಲತೆಗಳು ಇರುವದನ್ನು ಕಂಡುಕೊಂಡ. ಇಲ್ಲಿ ಆತನ ಪ್ರತಿಭೆ ಅಡಗಿದೆ. ಆತನ ಸಮಾಜಶಾಸ್ತ್ರಕ್ಕೆ ಲೋಕಸಿದ್ಧವಾದ (Positivism) ಹಾಗೂ ಮೂರು ಹಂತಗಳ ಸೂತ್ರ (Law of three

Stages) ಗಳು ಆಧಾರಶ್ರುತಿಗಳಾಗಿದ್ದವು. ಮಾನವ ಸಮಾಜ ಜೀವನವನ್ನೇ ಅಧ್ಯಯನ ವಿಷಯವನ್ನಾಗಿ ಉಳ್ಳ ಹೊಸ ವಿಷಯವೊಂದನ್ನು ಕಂಡು ಹಿಡಿದು ಅದು 'ವಿಜ್ಞಾನವಾಗುವ' ವರ್ಗಗಳನ್ನು ಸೂಚಿಸಿದ್ದಾದರೂ ಏನು ಸಾಮಾನ್ಯ ಸಂಗತಿಯೆ? ಸಮಾಜಶಾಸ್ತ್ರವು ಅಮೂರ್ತದಿಂದ ಮೂರ್ತಕ್ಕೆ ಸ್ವರೂಪ ಬರುತ್ತಿದ್ದ ಕಾಲದಲ್ಲಿ ಕೋಂಟನ ಸೇವೆ ಅತ್ಯಗತ್ಯವಾಗಿತ್ತು. ಏನೊಂದೂ ಇಲ್ಲದಿದ್ದಲ್ಲಿ ಆತ ಏನನ್ನೋ ಕಂಡುಕೊಂಡ. ತಾನು ಕಂಡುದನ್ನೇ ಕಂಡಂತೆ ವಿವರಿಸಿದ. ಆತನ ಕಾಣ್ಕೆಯ ಅಸ್ತಿಭಾರದ ಮೇಲೆಯೇ ಇಂದಿನ ಸಮಾಜ-ವಿಜ್ಞಾನ ಬೆಳೆದುದು. ಇದೆಲ್ಲ ಸುಳ್ಳಾದರೂ ಆತನೇ ಅದಕ್ಕೆ ಹೆಸರಿಟ್ಟು ಹರಸಿದ ತಂದೆ ಎಂಬ ಮಾತಾದರೂ ಉಳಿಯುತ್ತದೆ ಅಲ್ಲವೆ?

ಆಧಾರ ಗ್ರಂಥಗಳು

1) Sociological Theory —*by. Nicholas Timasheff.*
2) A Short History of Sociolagy —*by. Heinz Maus.*
3) The Nature & Types & Sociological Theory —*by. Martindale.*
4) An Introduction to the History of Sociology —*by. H. E. Barnes*
5) The Development of Social Thought —*by. Emony S. Bogardus.*
6) Modern Sociological Theory —*by. Beckers and Boskoff.*
7) Encyclopaedia of Social Sciences.
8) ಕನ್ನಡ–ಶಬ್ದಕೋಶ. (ಭಾಗ–೧.) ಮುಂ.

ಕಳೆದುದು

ಪ್ರೇಮಾ ತಾಶೀಲದಾರ

'ಹುಷಾರಾಗಿದೀರಾ?' ಎಂದಾರೋ ಕೇಳಿದರು.
ಆಗಿರದೆ ಏನು?
ನನ್ನ ವಲಯದಲೇ ನಾ
ಸುತ್ತುತಿರುವಾಗ
ಕಳೆದು ಹೋಗುವ ಮಾತಾದರೂ ಎಲ್ಲಿಯದು?
ಅಂದೊಮ್ಮೆ ಕಳೆದಿದ್ದೆ :
ಎದೆಮಟ್ಟ ಬೆಳೆದು ನಿಂತ
ಬೇಲಿಯನು ಹಾರಿ
ಗಗನಚುಂಬಿ ಗಿಡ–ಮರ, ಊರು–ಸೀಮೆ,
ಕಾಡು–ಮೇಡು
ದಾಟಿ.
ಸ್ಮಶಾನದ ಎಲುವು ಚಕ್ಕಳೆ ಬುರುಡೆ
ಬೂದಿಯಲಿ ಹೊರಳಾಡಿ
ಕತ್ತಲೆಯಲಿ ನನ್ನ ನಾ
ಕಳೆದುಕೊಂಡು ಆನಂದಿಸುವಾಗ
ಬಂದ ಬೆಳಕು ಬಡಿದು
ಎಚ್ಚರಿಸುವ ಅವಶ್ಯಕತೆಯೇನಿತ್ತು?
ಅತ್ತು, ದಿಂಬಿಗೆ ತಲೆಯಿಟ್ಟು
ತೊಯ್ದು ಚಿಂತಿಸಿದೆ
ನನ್ನೂರು
ಕಲ್ಲು–ಮುಳ್ಳಿನ ನಾಡು, ನನ್ನ–
ನಲ್ಲಿಂದ ಈ
ಹಗಲು–ಗನಸಿನ ರಾಜ್ಯಕೆಳೆತಂದವರಾರು?

ಅವಕಾಶ

ಪ್ರೇಮಾ ತಾಶೀಲದಾರ

ಪ್ರಶ್ನೆ!
ಬಾಗಿಲು ತಟ್ಟಿದಾಗ
ಉತ್ತರದ ತುಂಬೆಲ್ಲ ಕಳವಳ
'ತೆರೆಯಲೋ ಬೇಡವೋ'–ಶಂಕೆ
ಚಿಂತೆ ಹಾಸಿಗೆಯ ತುಂಬ ಮೈಚೆಲ್ಲಿದ
ಆಲಸ್ಯ.
ಇಂಥ ಅವಕಾಶಗಳು ಅಪರೂಪವಾದರೂ
ಬಾಗಿಲು ತೆರೆಯಲಾಗದೆ
ಉತ್ಸಾಹದ ಮನೆಯ ಮೂಲೆ–ಮೂಲೆಯ ದೀಪ
ಹೊತ್ತಿಸುವವರಿಲ್ಲದೆ–ಕತ್ತಲಂ
ಗುಡಿಸುವವರಿಲ್ಲದೆ–ಅವ್ಯಕ್ತವನ್ನೆಲ್ಲ ಗೀಚಿ
ಹರಿದೆಸೆವ ಹಾಳೆಗಳು–ಧೂಳು.
ಬೇಸರದ ಹೊದಿಕೆ. ಕಿತ್ತೆಸೆಯಲಾರದೆ
ಎದೆಯ ಬೇಸಿಗೆ –ಬೆವರು–
ಮಳೆಗಾಲದಲಿ ನೆನೆದು–ಜುಗುಪ್ಸೆ
ಮೈಗಂಟಿದ ಬಟ್ಟೆ.
"ಥತ್! ಪೀಡೆ. ನಾಳೆ ಬಾ ಹೋಗೆಂದು
ಕಳುಹಿಸಿದ್ದು;
ಇಂದು
ಬದುಕಿನುದ್ದಕೂ ಬಾಗಿಲು ತೆರೆದಿಟ್ಟು
ಕಸಗುಡಿಸಿ, ದೀಪ ಹಚ್ಚಿಟ್ಟು
ಕಾಯ್ದರೂ.
ಸಿಗಲಾರದ ಅವಕಾಶ.

ಗಂಗಾವತಿ ತಾಲೂಕಿನ ಪ್ರಾಚ್ಯವಸ್ತುಗಳು

ಡಾ. ಅ. ಸುಂದರ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಸಂಸ್ಥೆಯ ಹಿಂದಿನ ನಿರ್ದೇಶಕರಾಗಿದ್ದ ಡಾ. ಪಾಂ. ಭೀ. ದೇಸಾಯಿಯವರು ಈ ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರಕ್ಕೊಳಪಟ್ಟ ಜಿಲ್ಲೆಗಳಲ್ಲಿಯ ಶಾಸನಗಳೆಲ್ಲವನ್ನು ಸಮೀಕ್ಷಿಸಿ. ಅವುಗಳ ಪ್ರತಿಗಳನ್ನು ಮಾಡಿ, ಅವುಗಳ ಪಾಠಗಳನ್ನು ಕ್ರಮವಾಗಿ ಸಂಪುಟಗಳಲ್ಲಿ ಪ್ರಕಟಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಈ ಶಾಸನಗಳ ಸಮೀಕ್ಷೆಯ ಒಂದು ಯೋಜನೆಯನ್ನು ಅವರ ಸಹೋದ್ಯೋಗಿಗಳಾಗಿದ್ದ ಡಾ. ಶ್ರೀ. ಹಾ. ರಿತ್ತಿ ಮತ್ತು ಡಾ. ಬಾ. ರಾ. ಗೋಪಾಲರವರ ಸಹಾಯದಿಂದ ರೂಪಿಸಿದರು.

ಈ ಯೋಜನೆಯ ಪ್ರಕಾರ, ಮೊದಲು ರಾಯಚೂರು ಜಿಲ್ಲೆಯನ್ನು ಆರಿಸಲಾಯಿತು. ಈ ಜಿಲ್ಲೆಯ ಗಂಗಾವತಿ ತಾಲೂಕಿನ ಪ್ರದೇಶವನ್ನು ಅನ್ವೇಷಣೆ ಮಾಡುವ ಸದವಕಾಶ ನನಗೆ ದೊರೆಯಿತು.[೧] ಇದುವರೆಗೆ ಗಂಗಾವತಿ ತಾಲೂಕಿನಲ್ಲಿಯ ೧೫೮ ಹಳ್ಳಿಗಳನ್ನು. ಇದರ ಪಕ್ಕದಲ್ಲಿರುವ ಸಿಂಧನೂರು ತಾಲೂಕಿನ ೫ ಹಳ್ಳಿಗಳನ್ನು ಕುಷ್ಟಗಿ ತಾಲೂಕಿನ ಪುರದಂಬ ಹಳ್ಳಿಯನ್ನು ಮತ್ತು ಕೊಪ್ಪಳ ತಾಲೂಕಿನ ಆಗ್ನೇಯ ಭಾಗದಲ್ಲಿಯ ೬ ಹಳ್ಳಿಗಳನ್ನು ಅನ್ವೇಷಣೆ ಮಾಡಿದ್ದೇನೆ.[೨] ಈ ಹಳ್ಳಿಗಳಲ್ಲಿ ಶಾಸನಗಳನ್ನು

---

೧. ಇದಕ್ಕಾಗಿ ನಾನು ಕನ್ನಡ ಸಂಶೋಧನ ಸಂಸ್ಥೆಯ ಹಿಂದಿನ ಮತ್ತು ಈಗಿನ ನಿರ್ದೇಶಕರಾದ ಡಾ. ಶ್ರೀ. ಹಾ. ರಿತ್ತಿಯವರಿಗೂ, ಡಾ. ಬಿ. ಎಸ್. ಕುಲಕರ್ಣಿಯವರಿಗೂ, ಕನ್ನಡ ಸಂಶೋಧನ ಸಂಸ್ಥೆಗೂ ಮತ್ತು ಈ ಲೇಖನದ ಹಸ್ತಪ್ರತಿಯನ್ನು ಬರೆದುಕೊಟ್ಟ ನನ್ನ ಪತ್ನಿ ಭಾಗ್ಯಲಕ್ಷ್ಮಿ ಸುಂದರ ಅವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

೨. ದಿನಾಂಕ ೨೫-೫ ರಿಂದ ೩-೬-೭೧; ೧೯-೭ ರಿಂದ ೨೨-೭; ೧೨-೧ ರಿಂದ ೧೬-೧-೭೨ ಮತ್ತು ೨೮-೬ ರಿಂದ ೫-೭-೭೩ ರ ವರೆಗಿನ ಸಮಯದಲ್ಲಿ ಈ ಸಮೀಕ್ಷೆ ನಡೆಸಲಾಯಿತು. ಈ ಕಾರ್ಯದಲ್ಲಿ ಗಂಗಾವತಿಯ. ದಿ. ಗಂಗಾವತಿ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ. ಲಿ.. ಹಾಗೂ ಹಳ್ಳಿಗಳಲ್ಲಿಯ ಗ್ರಾಮ ಪಂಚಾಯತಿಯವರು. ಶಿಕ್ಷಕರು. ಗ್ರಾಮಸ್ಥರು ಹಲವು ವಿಧಗಳಲ್ಲಿ ಸಹಾಯ ಮಾಡಿದ್ದಾರೆ. ಇವರೆಲ್ಲರಿಗೂ ನನ್ನ ಮನಃಪೂರ್ವಕ ಕೃತಜ್ಞತೆಗಳು.



1. ಕನಕಗಿರಿ: ಕನಕಾಚಲಸ್ವಾಮಿ ದೇವಾಲಯ, ಹಿಂಭಾಗದ ನೋಟ



2. ಯಮ್ಮಿಗುಡ್ಡ : ಶಿವ-ಪಾರ್ವತಿ ದೇವಾಲಯ



3. ವೆಂಕಟಗಿರಿ: ವೆಂಕಟರಮಣ ದೇವಾಲಯ



4 ಕನಕಗಿರಿ: ಊರಹೊರಗಿನ ಒಂದು ಅಪೂರ್ವ ಕಟ್ಟಡ

ಚಿತ್ರ ೨




1. ಮುಕ್ಕುಂದ: ದಂಡ ಮತ್ತು ಪಿಂಗಳನೊಡನೆ ಸೂರ್ಯದೇವ



2. ಕನಕಗಿರಿ: ಲಕ್ಷ್ಮೀಲಾಂಛನ ಸಹಿತ ವಿಷ್ಣು



3. ಬೆಣ್ಣೂರು: ಭಾರತಿ ರಮಣ ಮುಖ್ಯ ಪ್ರಾಣ



1. ಕನಕಗಿರಿ: ಸೂರ್ಯದೇವ




2. ಕಾರಟಗಿ: ಭೈರವ ಸ್ವರೂಪಿ ವೀರಭದ್ರ




← 1

2 →



1 2, 3, ಪುರ: ವಿವಿಧ ಲಿಂಗಗಳು



3

4. ಕಲ್ಕೆರ: ಸಪ್ತಮಾತೃಕೆ



ಹುಡುಕುತ್ತಿದ್ದಾಗ ಮತ್ತು ಅವು ಸಿಕ್ಕಿದೆಡೆಯಲ್ಲಿ ಅವುಗಳ ಅಚ್ಚುಪ್ರತಿಗಳನ್ನು[೩] ಮಾಡಿಕೊಳ್ಳುತ್ತಿರುವ ಸಮಯದಲ್ಲಿ ಸುತ್ತ ಮುತ್ತಲಿನ ಭಾಗಗಳನ್ನು ಶೋಧಿಸಿದಾಗ ಕೆಲವು ಸ್ವಾರಸ್ಯಕರವಾದ ಶಿಲಾಮೂರ್ತಿಗಳೂ. ದೇವಾಲಯಗಳ ಭಗ್ನಾವಶೇಷಗಳೂ ಮತ್ತು ಪ್ರಾಗೈತಿಹಾಸಿಕ. ಇತಿಹಾಸ ಪ್ರಾರಂಭ ಕಾಲದ ಮತ್ತು ಮಧ್ಯ ಯುಗದ ಮಾನವರ ವಾಸ್ತವ್ಯದ ನೆಲೆಗಳೂ ಶೋಧವಾದವು. ಪ್ರಸ್ತುತ ಲೇಖನದಲ್ಲಿ ಕೆಲವು ಮುಖ್ಯವಾದ ನೆಲೆಗಳು. ಪ್ರಾಚೀನ ಕಟ್ಟಡಗಳ ಹಾಗೂ ಮೂರ್ತಿಗಳ ಒಂದು ವಿಮರ್ಶಾತ್ಮಕ ಸಮೀಕ್ಷೆ ಮಾಡಲಾಗಿದೆ.

೧. ಪ್ರಾಚೀನ ನೆಲೆಗಳು

ಈ ನೆಲೆಗಳಲ್ಲಿ ದೊರೆತ ಸಾಂಸ್ಕೃತಿಕ ಅವಶೇಷಗಳ ವೈವಿಧ್ಯ ಮತ್ತು ಲಕ್ಷಣಗಳ ಮೇಲೆ ಇವು ನಾಲ್ಕು ಬೇರೆ ಬೇರೆ ಕಾಲಗಳ ಸಂಸ್ಕೃತಿಗಳಿಗೆ ಸಂಬಂಧಪಟ್ಟಿವೆಯೆಂದು ಹೇಳಬಹುದು. ಇವು ನೂತನ ಶಿಲಾಯುಗ ಸಂಸ್ಕೃತಿ: ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ: ಇತಿಹಾಸ ಪ್ರಾರಂಭ ಕಾಲದ ಸಂಸ್ಕೃತಿ ಮತ್ತು ಮಧ್ಯ ಯುಗದ ಸಂಸ್ಕೃತಿ.

(i) ನೂತನ ಶಿಲಾಯುಗದ ನೆಲೆಗಳು (ಕ್ರಿ. ಪೂ. ೧೭೦೦-೮೦೦):

೧. ಹೇರೂರು	೩ ಕಿ. ಮೀ. ದೂರದಲ್ಲಿ ವಾಯುವ್ಯ ದಿಕ್ಕಿಗೆ	"ಮಂದಳ್ಳಿಯವರ ಗಚ್ಚಿನ ಹೊಲ"ದಲ್ಲಿ
೨. ಕೆಸರಟ್ಟಿ	೧೩ ಕಿ. ಮೀ. ಈಶಾನ್ಯ-ಪೂರ್ವ ದಿಕ್ಕಿಗೆ	"ಬೂದಯಪ್ಪನ ಹೊಲ"ದಲ್ಲಿ
೩. ಗೋನಾಳ (ಈಗ ಹಾಳು ಬಿದ್ದ ಹಳ್ಳಿ)	ಹನುಮಂತನ ಗುಡಿಯ ಹಿಂಬದಿ-ಯಿಂದ ಸುಮಾರು ೨೦೦ ಮಿ. ದೂರದಲ್ಲಿರುವ ಒಂದು ಹಳ್ಳದ ದಂಡೆಯ ಮೇಲೆ.	ಈ ಹಳ್ಳಿಯ ನೆಲೆಯಲ್ಲಿಯೇ.
೪. ಆರ್‌ಹಾಳ್	೧೩ ಕಿ.ಮೀ. ದೂರದಲ್ಲಿ ನೈರುತ್ಯ ದಿಕ್ಕಿಗೆ	"ಬೂದಿಹಾಳ್" ಎಂಬ ದಿಬ್ಬದ ಸುತ್ತ ಮುತ್ತಲಿನ ಹೊಲದಲ್ಲಿ.
೫. ಹಿರೇ ಜಂತಕಲ್	ಗ್ರಾಮದ ಹೊರ ಬಯಲಿನಲ್ಲಿ. ಆಗ್ನೇಯ ದಿಕ್ಕಿಗೆ	ರಾಮರಾಯರ ಮಠದ ಆಗ್ನೇಯಕ್ಕೆ ನೀರಿನ ಕಾಲುವೆಯ ಬದಿಯಲ್ಲಿ.
೬. (ಜಂಗಮರ) ಕಲ್ಗುಡಿ	ಗ್ರಾಮದ ಹೊರ ಬದಿಯಲ್ಲಿ. ಉತ್ತರ ದಿಕ್ಕಿಗೆ	ಮಧ್ಯಯುಗದ ಹಾಳು ನೆಲೆಯಲ್ಲಿ ದ್ಯಾಮವ್ವನ ಗುಡಿ ಹತ್ತಿರ.

೩. ಇದುವರೆಗೆ ೫೭ ಶಿಲಾಶಾಸನಗಳ ಅಚ್ಚುಪ್ರತಿಗಳನ್ನು ಮಾಡಿಕೊಳ್ಳಲಾಗಿದೆ. ಅವುಗಳಲ್ಲಿ ರಾಷ್ಟ್ರಕೂಟರ ಕಾಲದ್ದು ೩ : ಕಲ್ಯಾಣ ಚಾಲುಕ್ಯರ ಮತ್ತು ಸೇವುಣರ ಕಾಲದ್ದು ೧೪: ಉಳಿದವು ವಿಜಯನಗರ ಕಾಲದ್ದು.

೭. ಹೊಸಕೆರ	ಗ್ರಾಮದ ಹೊರ ಬದಿಯಲ್ಲಿ, ಪಶ್ಚಿಮ ದಿಕ್ಕಿಗೆ	"ಪೋಲೀಸ್ ಗೌಡರ ಊರ ಹಿಂದಿನ ಹೊಲ" ಇಲ್ಲಿ ವೀರಣ್ಣನ ಗುಡಿ ಇದೆ.
೮. ಹೆಬ್ಬಾಳ್	ಗ್ರಾಮದ ಹೊರ ಬದಿಯಲ್ಲಿ, ನೈಋತ್ಯ ದಿಕ್ಕಿಗೆ	ಸೋಮೇಶ್ವರ ದೇವಾಲಯದ ನೈಋತ್ಯ ಬದಿಯಲ್ಲಿಯ "ಹಾಳು ಹೊಲ"ದಲ್ಲಿ.
೯. ಕುಂಟೋಜಿ	೨ ಕಿ. ಮಿ. ದೂರದಲ್ಲಿ, ನೈಋತ್ಯ ದಿಕ್ಕಿಗೆ	"ಅಂಚೆಟ್‌ಹಾಳ" ಎಂಬ ಹೊಲದಲ್ಲಿ.
೧೦. ಸಿಂಗನಹಾಳ	ಸಮೀಪದಲ್ಲಿ, ಈಶಾನ್ಯ-ಉತ್ತರ ದಿಕ್ಕಿಗೆ	ನೀರಿನ ಕಾಲುವೆ ಎಡ ದಂಡೆಯ ಹತ್ತಿರ ಕುರಿ ದೊಡ್ಡಿ ಇರುವ ಹೊಲದಲ್ಲಿ.
೧೧. ತಿಪ್ಪನಹಾಳ	ಸು. ೨೦೦ ಮಿ. ದೂರದಲ್ಲಿ	ಹನುಮಪ್ಪನ ಗದ್ದೆ.
೧೨. ಪನ್ನಾಪುರ	ಸಮೀಪದಲ್ಲಿ, ಗ್ರಾಮದ ಪಶ್ಚಿಮಕ್ಕೆ	"ಕೆರೆ ಹೊಲ"ದಲ್ಲಿ.
೧೩. ಬೇವಿನಹಾಳ	ಸಮೀಪದಲ್ಲಿ ಗ್ರಾಮದ ನೈಋತ್ಯಕ್ಕೆ	"ಮಠದ ಪಡಿ"ಯ ಹೊಲದಲ್ಲಿ.
೧೪. ಸೋಮನಾಳ ಕೆರೆಹಾಳ	೧½ ಕಿ. ಮಿ. ದಕ್ಷಿಣಕ್ಕೆ ಗ್ರಾಮದ ಹೊರ ಬದಿಯಲ್ಲಿ	"ವಣಗೇರಿ ದೊಡ್ಡನಗೌಡರ ಹೊಲ" ಹಿರೆಹಳ್ಳ ಎಡದಂಡೆಯ ಸಮೀಪದ ಹೊಲದಲ್ಲಿ.
೧೫. ಅರಹಳ್ಳಿ (ಸಿಂಧನೂರ ತಾ.)	೨ ಕಿ. ಮಿ. ದೂರದಲ್ಲಿ ಪಶ್ಚಿಮಕ್ಕೆ	(i) "ಅಲಕಂದಿಗುಡ್ಡದ ಹೊಲ" (ii) ಇಲ್ಲಿಂದ ಸು. ೨೦೦ ಮಿ. ಪಶ್ಚಿಮಕ್ಕೆ ಗೌಡರ ಹೊಲ.

ಈ ಎಲ್ಲ ನೆಲೆಗಳಲ್ಲಿ ಸಾಮಾನ್ಯವಾಗಿ ಮಸ್ಕಿ[೪] (ರಾಯಚೂರು ಜಿ.)ಯಲ್ಲಿಯ ಉತ್ಖನನದಲ್ಲಿ ದೊರೆತ ನೂತನ ಶಿಲಾಯುಗ ಸಂಸ್ಕೃತಿಯ ಬೂದುವರ್ಣದ ಮಣ್ಣಿನ ಪಾತ್ರೆಗಳಂತಹ ಮೃತ್‌ಪಾತ್ರೆಯ ಚೂರುಗಳು, ಅಪರೂಪವಾಗಿ ಉತ್ತಮ ಜಾತಿಯ ಚಕಮುಕಿ ಕಲ್ಲಿನ ಬ್ಲೇಡಿನಂತಹ ಚಕ್ಕೆಗಳ ಸಣ್ಣ ಸಣ್ಣ ಆಯುಧಗಳು (microliths), ತಿಕ್ಕಿ ನಯ ಮಾಡಿದ ಮೈಯುಳ್ಳ ಕಲ್ಲಿನ ಕೊಡಲಿಗಳ ಅವಶೇಷಗಳು. ಪ್ರಾಣಿಗಳ ಎಲುಬುಗಳು, ಮುಂತಾದವುಗಳು ಬೂದಿ ಹಾಳು ಮಣ್ಣಿನಲ್ಲಿವೆ. ಇವುಗಳ ವಿಸ್ತಾರ ಸುಮಾರು ೧ರಿಂದ ೩ ಎಕರೆಯಷ್ಟು ಇದ್ದು ತುಂಗಭದ್ರಾ ನದಿಯನ್ನು ಸೇರುವ ಹಳ್ಳಗಳ ಸಮೀಪದಲ್ಲಿವೆ. ಕುಂಟೋಜಿ, ಸೋಮನಾಳ ಮತ್ತು ತಿಪ್ಪನಹಾಳದಲ್ಲಿಯ ನೆಲೆಗಳು ಸ್ವಲ್ಪ ಹೆಚ್ಚು ವಿಸ್ತಾರವಾಗಿದ್ದು. ಸುಮಾರು ೧½ಯಿಂದ ೨ ಮಿ.ನಷ್ಟು ಆಳ ಹಾಳುಮಣ್ಣು ಇರುವ ಹಾಗೆ ಕಾಣುವುದು. ಅರಹಳ್ಳಿಯ ೧ನೇ ನೆಲೆಯಲ್ಲಿ ನೂತನ ಶಿಲಾಯುಗ. ಬೃಹತ್ ಶಿಲಾ ಸಂಸ್ಕೃತಿ ಮತ್ತು ಇತಿಹಾಸ ಪ್ರಾರಂಭ ಕಾಲದ ಸಂಸ್ಕೃತಿಯ ಅವಶೇಷಗಳಿವೆ. ೨ನೆಯದರಲ್ಲಿ ಕೇವಲ ನೂತನ ಶಿಲಾಯುಗದ್ದು ಮಾತ್ರ ಇದೆ. ಬಟ್ಟಿನಲ್ಲಿ

---

೪. ಏನ್‌ಷಿಯೆಂಟ್ ಇಂಡಿಯಾ (ಏ ಇ) ಸಂಪುಟ ೧೩, ಪುಟಗಳು ೩೮–೪೯.

ಈ ನೆಲೆಗಳು ಈ ಭಾಗದಲ್ಲಿ ನೂತನ ಶಿಲಾಯುಗದ ವಾಸ್ತವ್ಯದ ಸಾಂದ್ರತೆಯನ್ನು, ಪ್ರಸಾರವನ್ನು ತಿಳಿಯಲು ಸಹಾಯವಾಗುತ್ತವೆ.

(ii) ಬೃಹತ್ ಶಿಲಾ ಸಂಸ್ಕೃತಿ ನೆಲೆಗಳು (ಕ್ರಿ. ಪೂ. ೮೦೦-೧೦೦) :

೧. ತಿಪ್ಪನಾಳ	ನೂತನ ಶಿಲಾಯುಗದ ನೆಲೆಯ ಬದಿಯಲ್ಲಿಯೇ ಹೊನ್ನೂರು ಸಾಬನ ಹೊಲದಲ್ಲಿ ಅಗೆದು ಹಾಕಲ್ಪಟ್ಟ ಬೃಹತ್ ಶಿಲಾ ದುಂಡು ಕಟ್ಟೆಗಳು. ಹೊಳಪಾದ ಕಪ್ಪು-ಕೆಂಪು ಬಣ್ಣದ ಮಡಿಕೆ ಚೂರುಗಳು; ಕಬ್ಬಿಣ ವಸ್ತುಗಳ ಚೂರುಗಳು ಮತ್ತು ಮಾನವನ ಅಸ್ಥಿ ಚೂರುಗಳು ಇವೆ.	
೨. ಗೂಡೂರು	೧ ಕಿ. ಮೀ. ಉತ್ತರ-ಈಶಾನ್ಯ ದಿಕ್ಕಿಗೆ	"ಗುಡಿ ಹೊಲ" ಪ್ರಾಯಶಃ ಇಲ್ಲಿ ಹಿಂದೆ ದುಂಡು ಕಟ್ಟೆಗಳಿದ್ದವೆಂದು ತೋರುವುದು. ಈಗ ಅಲ್ಲಲ್ಲಿ ಕಪ್ಪು-ಕೆಂಪು ಬಣ್ಣದ ಮಡಿಕೆ ಚೂರುಗಳು ಸಿಗುತ್ತವೆ.
೩. ಬಸರಿಹಾಳ	೧. ಕಿ. ಮೀ. ಈಶಾನ್ಯ ದಿಕ್ಕಿಗೆ	ಅಳಿದುಳಿದ ಮೂರು, ನಾಲ್ಕು ದುಂಡು ಕಟ್ಟೆಗಳು, ಸಣ್ಣ ತುಂಡು ಕಲ್ಲುಗಳ ರಾಶಿ ಕಟ್ಟೆಯಲ್ಲಿವೆ (Cairn Stone Circles).
೪. ಜೀರಾಹಾಳ ಕಲ್ಗುಡಿ	೧½ ಕಿ. ಮೀ. ದಕ್ಷಿಣಕ್ಕೆ	ಬೃಹತ್ ಶಿಲಾ ಶವ ಕುಣಿಗಳು (Pit-Circles) ಕಪ್ಪು-ಕೆಂಪು ಬಣ್ಣದ ಮಡಿಕೆ ಚೂರುಗಳು, ಮಾನವನ ಅಸ್ಥಿ ಚೂರುಗಳು ತುಂಬ ಅಲ್ಲಲ್ಲಿ ಬಿದ್ದಿವೆ. ಈ ಕುಣಿಗಳ ಸಮೀಪದಲ್ಲಿ ಒಂದು ಹಳ್ಳ ಇದೆ.
೫. ಬಂಡರಹಾಳ	ದಕ್ಷಿಣಕ್ಕಿರುವ ಕಲ್ಗುಡ್ಡಗಳಲ್ಲಿ	"ಮೋರಿಯರ ತಟ್ಟೆ"ಗಳು ಕಂಡಿ ಕೋಣೆ ಗೋರಿಗಳು (Port-holed Chambers).
೬. ಗುಡ್ಡಿ	" "	" "
೭. ಅರಹಳ್ಳಿ	" "	೧ನೇ ನೆಲೆಯ ಹತ್ತಿರ ದುಂಡು ಕಟ್ಟೆಗಳು.

ಸೋಮನಾಳದ ನೂತನ ಶಿಲಾಯುಗದ ನೆಲೆಯಲ್ಲಿಯೂ ಬೃಹತ್ ಶಿಲಾ ಸಂಸ್ಕೃತಿಯ ಜನರ ವಾಸ್ತವ್ಯ ನೆಲೆಯೂ ಇದ್ದ ಹಾಗೆ ಕಾಣುವುದು.

ಒಟ್ಟಿನಲ್ಲಿ ದುಂಡು ಕಟ್ಟೆಗಳು (Stone-circles with or without cairn) ಶವ-ಕುಣಿಗಳು ಮತ್ತು ಕಂಡಿ ಕೋಣೆ ಗೋರಿಗಳೆಂದು ಮೂರು ವಿಧವಾದ ಬೃಹತ್ ಶಿಲಾ ಗೋರಿಗಳು ಈ ಭಾಗದಲ್ಲಿವೆ. ಇವು ಮಸ್ಕಿ[೫] ಮತ್ತು ಬ್ರಹ್ಮಗಿರಿಯ[೬] ಉತ್ಖನನಗಳಲ್ಲಿ ತೋರಿದ ಬೃಹತ್ ಶಿಲಾ ಗೋರಿಗಳಿಗೆ ಕ್ರಮವಾಗಿ ಹೋಲುತ್ತವೆ.

೫. ಅದೇ ಕಡೆ; ಪುಟ ೩೩, ಚಿತ್ರ ೭.

೬. ಏ ಇ, ಸಂಪುಟ ೪, ಪುಟಗಳು ೧೮೭-೧೯೯.

(iii) ಇತಿಹಾಸ ಪ್ರಾರಂಭ ಕಾಲದ ನೆಲೆಗಳು (ಕ್ರಿ.ಶ.೨ ನೇ-ಕ್ರಿ.ಶ. ೩ನೇ ಶತಮಾನ):

ಈ ನೆಲೆಗಳು ಹೇರೂರು, ಹೊಸಕೆರೆ ಮತ್ತು ಸೋಮನಾಳದ ನೂತನ ಶಿಲಾ ಯುಗದ ನೆಲೆಗಳಲ್ಲಿಯೆ ಇವೆ. ಸ್ವಲ್ಪ ಅಪರೂಪವಾಗಿ ಬಿಳಿಬಣ್ಣದ ರೇಖಾ ಚಿತ್ರಗಳಿಂದ ಅಲಂಕೃತ ಮೃತ್ ಪಾತ್ರೆಗಳು (Russet coated white painted pottery) ಕೂಡ ಸಿಗುತ್ತವೆ.

(iv) ಮಧ್ಯ ಯುಗದ ನೆಲೆಗಳು (ಕ್ರಿ. ಶ. ೯ ರಿಂದ ೧೬ನೇ ಶತಮಾನ) :

ಇವು ಮೇಲೆ ಹೇಳಿದ ಅನೇಕ ಹಳ್ಳಿಗಳಲ್ಲಿಯೂ ಮತ್ತು ಇತರ ಗ್ರಾಮಗಳಲ್ಲಿಯೂ ಇವೆ. ಇಂಥ ನೆಲೆಗಳ ಉತ್ಖನನಗಳು (ಮಸ್ಕಿಯೊಂದನ್ನು ಬಿಟ್ಟು) ಆಗದಿದ್ದುದರಿಂದ ಇವುಗಳ ಮಹತ್ವವು ಅಷ್ಟಾಗಿ ತಿಳಿಯುವುದಿಲ್ಲ.

೨. ಪ್ರಾಚೀನ ಕಟ್ಟಡಗಳು

ಕಲ್ಯಾಣ ಚಾಲುಕ್ಯರ ಹಿಂದಿನ ಕಾಲದ ದೇವಾಲಯಗಳೆಲ್ಲೂ ಕಾಣ ಬರಲಿಲ್ಲ. ವಿಪ್ಪರ, ಕಾರಟಗಿ ಮತ್ತು ಮುಕ್ಕುಂದಗಳಲ್ಲಿ ಮಾತ್ರ ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯಗಳಿವೆ. ಇವುಗಳ ವಾಸ್ತುಶಿಲ್ಪದಲ್ಲಿ ಗಮನಾರ್ಹವಾದ, ಹೊಸದಾಗಿ ತೋರುವಂಥಹ ವೈಶಿಷ್ಟ್ಯವೇನು ಇಲ್ಲ. ಮುಕ್ಕುಂದಈಶ್ವರ ದೇವಾಲಯದ ಹೊರಗೋಡೆಯ ಮೇಲೆ ನಾಗ–ನಾಗಿನಿ, ವಿವಿಧ ಭಂಗಿಗಳಲ್ಲಿ ನಿಂತ ಸ್ತ್ರೀ ವಿಗ್ರಹಗಳು, ಕಾಲಭೈರವ, ನಾರಾಯಣ, ಕೇಶವ, ಸೂರ್ಯ ಮತ್ತು ಉಗ್ರ ನರಸಿಂಹನ ಉಬ್ಬು ಚಿತ್ರಗಳಿವೆ. ಉಳಿದ ಹಳ್ಳಿಗಳ ಹಲವೆಡೆಗಳಲ್ಲಿ ಹೆಚ್ಚಾಗಿ ವಿಜಯನಗರ ಕಾಲದ ದೇವಾಲಯಗಳೇ. ಇದಕ್ಕೆ ಕಾರಣ ವಿಜಯನಗರದ ರಾಜಧಾನಿಯಾಗಿದ್ದ ಹಂಪಿ–ಆನೆಗೊಂದಿಯ ಉತ್ತರ ಭಾಗವೇ ಗಂಗಾವತಿ ಪ್ರದೇಶ. ಒಟ್ಟು ೨೪ ಹಳ್ಳಿಗಳಲ್ಲಿ ವಿಜಯನಗರ ಹಾಗು ವಿಜಯನಗರ ಉತ್ತರ ಕಾಲದ ದೇವಾಲಯಗಳು, ಅವುಗಳ ಭಗ್ನಾವಶೇಷಗಳಿವೆ. ಇವುಗಳಲ್ಲಿ ಹೆಬ್ಬಾಳದ ಸೋಮನಾಥ, ಯಮ್ಮಿಗುಡ್ಡದ ಶಿವ ಮತ್ತು ಶಿವ ಪಾರ್ವತಿ ವೆಂಕಟಗಿರಿಯ ವೆಂಕಟೇಶ್ವರ. ಚಿಕ್ಕರಾಮಪುರದ ವೀರಭದ್ರ; ಹಿರೆಜಂತಕಲ್ಲಿನ ಪಂಪಾಪತಿ; ಕನಕಗಿರಿಯ ಕನಕಾಚಲಪತಿಸ್ವಾಮಿ (ಚಿತ್ರ ೧·1); ಹಾಗು ಅಲ್ಲಿಯ ಇತರ ದೇವಾಲಯಗಳು ಮತ್ತು ಆನೆಗೊಂದಿಯ ರಂಗನಾಥ ಸ್ವಾಮಿ, ಗವಿರಂಗನಾಥ. ಗಜಾನನ, ಹನುಮಂತನ ದೇವಾಲಯಗಳು ಜೈನ ಬಸದಿಯು ವಾಸ್ತುಶಿಲ್ಪದೃಷ್ಟಿಯಿಂದ ಸ್ವಲ್ಪ ಗಮನಾರ್ಹವಾಗಿವೆ. ಸೋಮನಾಥ. ಶಿವ–ಪಾರ್ವತಿ ಮತ್ತು ವೆಂಕಟರಮಣ, ಗಜಾನನ, ವೀರಭದ್ರ, ಹನುಮಂತನ ದೇವಾಲಯಗಳು (ಶಿಖರವೂ ಕೂಡಿ) ಮತ್ತು ಜೈನ ಬಸದಿಯು ಪೂರ್ಣವಾಗಿ ಕಲ್ಲಿನಿಂದ ಕಟ್ಟಲಾಗಿವೆ. ಉಳಿದ ದೇವಾಲಯಗಳ ಸಭಾಂಗಣದ ಮೇಲಿನ ಮತ್ತು ಪ್ರಾಕಾರಗಳ ಮೇಲಿನ ಶಾಲ ಮತ್ತು ಕೂಟಗಳು. ಶಿಖರ ಮತ್ತು ಗೋಪುರಗಳು ಹೆಚ್ಚಾಗಿ ಇಟ್ಟಿಗೆ ಮತ್ತು ಗಚ್ಚಿನಿಂದ ಮಾಡಲಾಗಿವೆ. ಸೋಮನಾಥ ದೇವಾಲಯವು ಉತ್ತರ–ದಕ್ಷಿಣಾಭಿ

ಮುಖವಾಗಿರುವ ಎರಡು ಗರ್ಭಗೃಹಗಳು ಮತ್ತು ಅರ್ಧ ಮಂಟಪಗಳಿಂದ ಮತ್ತು ಇವುಗಳ ಮಧ್ಯದಲ್ಲಿ ಒಂದು ಸಭಾಮಂಟಪದಿಂದ ಕೂಡಿದೆ. ಸಭಾ ಮಂಟಪದ ಪೂರ್ವ ಭಾಗದಲ್ಲಿ ಪ್ರವೇಶ ದ್ವಾರವಿದೆ. ಉತ್ತರಕ್ಕಿದುರಾಗಿರುವ ಗರ್ಭಗೃಹದಲ್ಲಿ ಏಳು ಕುದುರೆಗಳ ಉಬ್ಬು ಚಿತ್ರವುಳ್ಳ ಪೀಠವಿದೆ. ಇದು ಸೂರ್ಯನ ಗರ್ಭಗೃಹವಾಗಿರಬೇಕು. ಶಿವ–ಪಾರ್ವತಿ ದೇವಾಲಯವು (ಚಿತ್ರ ೧.2) ಗರ್ಭಗೃಹ. ಅಂತರಾಳ ಮತ್ತು ಸಭಾ ಮಂಟಪದಿಂದಕೂಡಿದೆ. ಮುಂದೆ ಪ್ರತ್ಯೇಕವಾದ ಮಹಾದ್ವಾರವಿದೆ. ಇದರ ಶಿಖರವು ಕದಂಬನಾಗರ ಶೈಲಿಯಲ್ಲಿದೆ. ಅಂತರಾಳದಲ್ಲಿ ಶಿವ–ಪಾರ್ವತಿಯರ ವಿಗ್ರಹವಿದೆ. ಮೇಲ್ಭಾಗ ಒಡೆದು ಹೋಗಿದೆ. ವೆಂಕಟರಮಣನ ದೇವಾಲಯದಲ್ಲಿ (ಚಿತ್ರ ೧,3) ಗರ್ಭಗೃಹ. ಎರಡು ಅರ್ಧ ಮಂಟಪಗಳು ಮತ್ತು ಸಭಾ ಮಂಟಪದ ಭಾಗಗಳಿವೆ. ಮುಂದೆ ಪ್ರತ್ಯೇಕವಾದ ಕಲ್ಮಂಟಪವಿದೆ. ಇದರ ಮುಂದೆ ಎತ್ತರದ ದೀಪಸ್ತಂಭವಿದೆ. ಶಿಖರದ ಸ್ತೂಪಿ ಭಾಗವು ವರ್ತುಳವಾಗಿದೆ. ಸಭಾ ಮಂಟಪದಲ್ಲಿಯ ಮಧ್ಯದ ನಾಲ್ಕು ಕಂಬಗಳ ನಾಲ್ಕು ಬದಿಗಳ ಕೆಳ, ಮಧ್ಯ ಮತ್ತು ಮೇಲ್ಭಾಗಗಳಲ್ಲಿ ಮತ್ತು ಗೋಡೆಯ ಅರ್ಧಗಂಬಗಳ ಮೇಲೆ ಉಬ್ಬು ಚಿತ್ರಗಳಿವೆ. ಕೂರ್ಮಾವತಾರದ ವಿಷ್ಣು, ವಾಮನ ಮತ್ತು ಬಲಿಚಕ್ರವರ್ತಿ, ರಾಮ, ವೇಣುಗೋಪಾಲ. ಕೇವಲ ನರಸಿಂಹ, ಗಜಾನನ ಸೂರ್ಯ, ಶಿವಲಿಂಗ. ಕಾಲಿಂಗಮರ್ದನ, ಅಂಬೆಗಾಲು ಕೃಷ್ಣ, ಬೆಣ್ಣೆ ಕೃಷ್ಣ, ರಾಮ. ಸೀತೆ. ಹನುಮಂತ, ಗರುಡ. ಶಂಖ. ಚಕ್ರ, ತ್ರಿನಾಮ, ಯೋಗಾಸನ ಮಾಡುತ್ತಿರುವರು, ಶಂಖನಿಧಿ, ಪದ್ಮನಿಧಿ. ಗಣ್ಯ ವ್ಯಕ್ತಿಗಳು, ಸ್ತ್ರೀಯರು, ಕೈ ಮುಗಿದು ನಿಂತಿರುವವರು, ತಾಳ, ಚಿಟಿಕೆ ಹಾಕುತ್ತ ಮೈ ಮರೆತು ಭಜನೆ ಮಾಡುತ್ತಿರುವರು, ತಮಟೆ ಬಡಿಯುವವರು. ನೃತ್ಯಗಾತಿಯರು, ಮೀನಿನ ಮೇಲೆ ಕುಳಿತವರು,[೨] ಆನೆ, ಹಂಸ, ಸಿಂಹ, ಕಪಿ. ಮೀನು, ಅರ್ಧ ಮನುಷ್ಯ, ಅರ್ಧ ಹಂಸ ಅಥವ ಸಿಂಹ, ಕುಮುದ, ಪದ್ಮ ಮುಂತಾದ ಚಿತ್ರಗಳಿವೆ. ಕನಕಾಚಲಪತಿ ಸ್ವಾಮಿ ದೇವಾಲಯವು ಬಹಳ ವಿಸ್ತಾರವಾಗಿದ್ದು, ಇದರಲ್ಲಿ ಗರ್ಭಗುಡಿ. ಅಂತರಾಳ ಸಭಾ ಮಂಟಪ ಮತ್ತು ಕಂಬಗಳ ಸಾಲುಗಳುಳ್ಳ ಸಭಾಂಗಣಗಳಿವೆ. ಗರ್ಭಗುಡಿಯಲ್ಲಿ ಕನಕಾಚಲ ಸ್ವಾಮಿಯ ಸಾಲಿಗ್ರಾಮವಿದೆ. ಅದಕ್ಕೆ ಬಿತ್ತಾಳೆಯ ನರಸಿಂಹ ಮುಖವಾಡವಿದೆ. ಅಂತರಾಳದ ಬಾಗಿಲಿನ ಬದಿಯಲ್ಲಿನ ಜಯ ವಿಜಯ ದ್ವಾರಪಾಲಕರ ಉಬ್ಬು ಚಿತ್ರಗಳು, ಅಡ್ಡ ಜಂತಿಯ ಲಲಾಟಬಿಂಬದಲ್ಲಿ ಶಂಖ. ತ್ರಿನಾಮ ಮತ್ತು ಚಕ್ರಗಳ ಚಿಹ್ನೆಗಳು ಇವೆ. ಸಭಾ ಮಂಟಪದ ದ್ವಾರದ ಎರಡು ಬದಿಯಲ್ಲಿ ಕಲಶಗಳು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯು ಇವೆ. ಸಭಾಂಗಣದ ಮಧ್ಯದಲ್ಲಿಯ ಕಂಬಗಳಲ್ಲಿ ಸಿಂಹಾರೋಹಿಗಳ ದೊಡ್ಡ ಮೂರ್ತಿ ಶಿಲ್ಪಗಳಿವೆ. ಆನೆಯನ್ನು ತುಳಿಯುತ್ತಿರುವ ಸಿಂಹವು ಹಿಂದಿನ ಕಾಲುಗಳ ಮೇಲೆ ನಿಂತಿದೆ.

೨. ಮೀನು ಲಾಂಛನವಾಗಿಟ್ಟುಕೊಂಡಿದ್ದ ಪಾಂಡ್ಯರ ರಾಜ್ಯವು ವಿಜಯನಗರ ಸಾಮ್ರಾಜ್ಯದಲ್ಲಿ ಸೇರಿತ್ತೆಂಬ ಸಂಕೇತವೇನೊ ?

ಸವಾರರು ಸಾಮಾನ್ಯವಾಗಿ ಆಯುಧ ಪಾಣಿಗಳು. ಅವರ ಹಣೆಯ ಮೇಲೆ ತ್ರಿನಾಮ ವಿರುವುದು ಗಮನಾರ್ಹ. ಅಲ್ಲದೆ ಈ ಕಂಬಗಳ ಮೇಲೂ ಮತ್ತು ಉಳಿದ ಕಂಬಗಳ ಮೇಲೂ ವೆಂಕಟರಮಣ ದೇವಾಲಯದಲ್ಲಿದ್ದ ಹಾಗೆ ವಿವಿಧ ಉಬ್ಬು ಚಿತ್ರಗಳಿವೆ. ಬೇಡರ ಕಣ್ಣಪ್ಪನು ತನ್ನ ಕಣ್ಣುಗಳನ್ನು ಶಿವಲಿಂಗಕ್ಕೆ ಅರ್ಪಿಸುತ್ತಿರುವುದು. ನಾಗರಾಜನು ಶಿವ ಲಿಂಗವನ್ನು ಪೂಜಿಸುತ್ತಿರುವುದು. ಮತ್ಸ್ಯಾವತಾರ, ಲಕ್ಷ್ಮೀನರಸಿಂಹ, ಉಗ್ರನರಸಿಂಹ ಮುಂತಾದ ಇನ್ನೂ ಅನೇಕ ಚಿತ್ರಗಳಿವೆ. ಮೇಲಿನ ಶಾಲ ಮತ್ತು ಕೂಟಗಳಲ್ಲಿ ವಿವಿಧ ದೇವರುಗಳ ಗಚ್ಚಿನ ಗೊಂಬೆಗಳಿವೆ. ಈ ದೇವಾಲಯದ ಎಡಬದಿಯಲ್ಲಿ ಲಕ್ಷ್ಮಿ ದೇವಾಲಯವಿದೆ. ಬೃಹದಾಕಾರದ ನಾಲ್ಕು ಗೋಪುರವುಳ್ಳ ದೊಡ್ಡ ಪ್ರಾಕಾರವಿದೆ.

ಇದಲ್ಲದೆ ಕನಕಗಿರಿಯಲ್ಲಿ ಗೋಪಿಯರಿಂದ ಕೂಡಿದ ಗೋಪಾಲಕೃಷ್ಣ, ವೀರಭದ್ರ, ಗಜಲಕ್ಷ್ಮಿ, ಶಿವ, ವಿಷ್ಣು, ಸೂರ್ಯದೇವರುಗಳ ಒಟ್ಟು ೧೩ ದೇವಾಲಯಗಳು; ಉಪ್ಪರಿಗೆ ಮತ್ತು ವಿಷ್ಣು, ಬ್ರಹ್ಮ(?) ಮತ್ತು ಶಿವ(?) ಗೃಹಗಳಿಂದ ಕೂಡಿದ ವೆಂಕಟಪತಿ ಭಾವಿ ಎಂಬ ಕೊಳವು, ಅರ್ಧಕಟ್ಟಿದ ೨೦೪ ಮಿ. ಚದುರದ ಒಂದು ವಿಶಾಲವಾದ ಸಭಾ ಮಂದಿರವು (ಚಿತ್ರ ೧, 4) ಇವೆ. ಆದರೆ ದೇವಾಲಯಗಳು ವಾಸ್ತುಶಿಲ್ಪದಲ್ಲಿ ಹೆಚ್ಚಿನ ವಿಶೇಷತೆಯನ್ನು ಹೊಂದಿಲ್ಲ. ಶಿಖರಗಳು ಮಾತ್ರ ಚೌಕೋನವಾಗಿಯೂ ಇಲ್ಲವೆ ವರ್ತುಳ ವಾಗಿಯೂ ಇರುತ್ತವೆ. ಈ ದೇವಾಲಯಗಳಿಗೆ ಸ್ಥಳಿಕ ಹೆಸರುಗಳು ಬೇರೆ ಬೇರೆ ಇವೆ. ಹಿರೆಜಂತಕಲ್ಲಿನ ದೇವಾಲಯವು ಕನಕಾಚಲಪತಿ ಸ್ವಾಮಿ ದೇವಾಲಯದಂತೆಯೆ ಇದೆ. ಇದರ ಕಂಬಗಳ ಮೇಲಿನ ಉಬ್ಬು ಚಿತ್ರಗಳು ಹೆಚ್ಚಾಗಿ ಶೈವ ಕಥೆಗಳಿಗೆ ಸಂಬಂಧ ವಿರುತ್ತವೆ. ಶಿವಲಿಂಗವನ್ನು ನಾಗರಾಜ. ಆನೆ ಪೂಜಿಸುತ್ತಿರುವ. ಹಸು ಶಿವ ಲಿಂಗಕ್ಕೆ ಹಾಲು ಅಭಿಷೇಕ ಮಾಡುತ್ತಿರುವ. ಬಿದಿಗೆ ಚಂದ್ರ. ಆಮೆ. ವೀರಭದ್ರನ ಚಿತ್ರ ಗಳಿವೆ. ಸಭಾಮಂಟಪದಲ್ಲಿ. ಗಜಾನನ, ಕಾರ್ತಿಕೇಯ. ಮಹಿಷಮರ್ಧಿನಿ. ಭೈರವ, ಸೂರ್ಯನ ಬಿಡಿ ವಿಗ್ರಹಗಳಿವೆ. ಜೈನ ದೇವಾಲಯವು ಪೂರ್ವ ದಿಕ್ಕಿಗೆದುರಾಗಿದ್ದು. ಹಿಂದೂ ತ್ರೈಪುರುಷ ದೇವಾಲಯದ ಹಾಗೆ ಪೂರ್ವ ದಕ್ಷಿಣ ಉತ್ತರಕ್ಕೆದುರಾಗಿರುವ ಮೂರು ಗರ್ಭಗೃಹಗಳಿಂದ ಕೂಡಿ ವಿಶಿಷ್ಟವಾಗಿದೆ. ಇವೆಲ್ಲಕ್ಕೂ ಪ್ರತ್ಯೇಕ ಅಂತ ರಾಳವಿದ್ದು. ಇವುಗಳ ಮುಂದೆ. ಮಧ್ಯದಲ್ಲಿ ಒಂದೇ ಸಭಾ ಮಂಟಪವಿದೆ. ಸಭಾ ಮಂಟಪದ ಮುಂದೆ ಕಕ್ಷಾಸನದಿಂದ ಕೂಡಿದ. ಸಭಾ ಮಂಟಪದಷ್ಟೇ ಅಗಲವಾದ ಮುಖ ಮಂಟಪವಿದೆ. ಸಭಾ ಮಂಟಪದ ಮತ್ತು ಗರ್ಭಗೃಹಗಳ ಪ್ರವೇಶ ಚೌಕಟ್ಟು ಗಳ ಲಲಾಟಬಿಂಬಗಳಲ್ಲಿ ಜಿನಬಿಂಬವಿದೆ. ಪೂರ್ವಕ್ಕೆದುರಾಗಿರುವ ಗರ್ಭ ಗೃಹವಲ್ಲಿ ಚೌತಿಚಂದ್ರನ ಚಿಹ್ನೆಯುಳ್ಳ ಒಡೆದ ಪೀಠವಿದೆ. ಆದುದರಿಂದ ಇದು ಚಂದ್ರಪ್ರಭ ತೀರ್ಥಂಕರರ ಗೃಹವಿರಬೇಕು.

ಮೇಲೆ ಹೇಳಿದ ಎಲ್ಲ ವಿಷ್ಣು ಹಾಗು ಶಿವ ದೇವಾಲಯಗಳ ಪ್ರತಿಯೊಂದು ಕಂಬದ ಮೇಲಿನ ಉಬ್ಬು ಚಿತ್ರಗಳನ್ನು ಪರಿಶೀಲಿಸಿದ್ದೇನೆ. ಆದರಿಂದ ಈ ಕೆಳಗಿನ ಅಂಶಗಳು ನನಗೆ ತೋರುತ್ತವೆ.

ವಿಷ್ಣು ದೇವಾಲಯಗಳಲ್ಲಿ: ನಾರಾಯಣ, ಉಗ್ರ ಶಾಂತ, ಮತ್ತು ಲಕ್ಷ್ಮಿ ನರಸಿಂಹ: ರಾಮ, ಸೀತೆ, ಶಂಖ; ಚಕ್ರ; ತ್ರಿನಾಮ (ಅಥವಾ ದ್ವಿನಾಮ?); ಮೂರು ರೀತಿಯಲ್ಲಿ ಬಿಡಿಸಿದ ಹನುಮಂತ ಮತ್ತು ಅವನ ಸಾಹಸಗಳು, ಗರುಡ, ಮಂಗ, ಸಿಂಹ, ಹಂಸ, ಮೀನು ಮತ್ತು ಮೀನಿನ ಮೇಲೆ ಕುಳಿತ ಮನುಷ್ಯ, ಮತ್ತು ಪದ್ಮಗಳ ಚಿತ್ರಗಳು ಬಹಳವಾಗಿ ಇರುತ್ತವೆ. ಮತ್ಸ್ಯ, ಕೂರ್ಮ, ವಾಮನ ಅವತಾರಗಳಲ್ಲಿ ವಿಷ್ಣು, ಗಜೇಂದ್ರ ಮೋಕ್ಷ, ನರಸಿಂಹ ಪ್ರಹ್ಲಾದನನ್ನು ಅನುಗ್ರಹಿಸುತ್ತಿರುವುದು, ದಾಸಯ್ಯ, ದಂಡಧಾರಿಯಾದ ಆಚಾರ್ಯ, ಲಕ್ಷ್ಮಿ, ಅರ್ಧ ಮನುಷ್ಯ ಅರ್ಧ ಪ್ರಾಣಿ, ಪಕ್ಷಿ ಚಿತ್ರಗಳು, ತಕ್ಕಮಟ್ಟಿನ ಸಂಖ್ಯೆಯಲ್ಲಿರುತ್ತವೆ. ಶಿವಲಿಂಗ, ಶೈವ ಕಥೆಗಳ ಸನ್ನಿವೇಶಗಳ ವಿಗ್ರಹಗಳು ತೀರಾ ಕಡಿಮೆ.

ಶೈವ ದೇವಾಲಯಗಳಲ್ಲಿ: ನಾರಾಯಣ, ನರಸಿಂಹ,ಹನುಮಂತ, ಶಂಖ, ಚಕ್ರ, ತ್ರಿನಾಮಗಳು ಅಪರೂಪವಾಗಿದ್ದು. ವೀರಭದ್ರ, ಗಜಾನನ, ಬೇಡರ ಕಣ್ಣಪ್ಪ, ಹಸು ಲಿಂಗಕ್ಕೆ ಹಾಲೆರೆಯುವುದು. ಆನೆ, ಸರ್ಪ ಲಿಂಗಪೂಜೆ ಮಾಡುವುದು, ಬಿದಿಗೆ ಚಂದ್ರ ವಿಶೇಷವಾಗಿ ಇರುತ್ತವೆ.

ದೇವರನ್ನು ಎರಡು ಕೈಗಳಿಂದ ಜೋಡಿಸಿ ಅಥವಾ ಶಿರಸಾ ಪ್ರಣಾಮದಿಂದ ವಂದಿಸುವ; ತಾಳ, ಚಿಟಿಕೆಯನ್ನು ಹಿಡಿದು ಮೈಮರೆತು ಧ್ಯಾನಿಸುವ ಮಾನವರ ಚಿತ್ರಗಳು ಸಾಕಷ್ಟು ಪ್ರಮಾಣದಲ್ಲಿವೆ. ಹನುಮಂತ ಶ್ರೀರಾಮನ ಮುದ್ರೆಯುಂಗುರವನ್ನು ತೆಗೆದುಕೊಳ್ಳುವುದು, ಸಮುದ್ರಲಂಘನ, ಸುರಸಾ ರಾಕ್ಷಸಿಯ ಹೊಟ್ಟೆಯೊಳಕ್ಕೆ ಹೋಗಿ ಬರುವುದು. ಸೀತೆಯ ಶೋಧನೆ, ಅವಳಿಂದ ಚೂಡಾಮಣಿಯನ್ನು ಪಡೆಯುವುದು, ಅವನ ಮೇಲೆ ಇಂದ್ರಜಿತುವಿನ ಬ್ರಹ್ಮಾಸ್ತ್ರ ಪ್ರಯೋಗ; ಅವನು ತನ್ನ ಬಾಲದಿಂದ ಮಾಡಿದ ಎತ್ತರದ ಇರಿಕೆ ಮೇಲೆ ಕುಳಿತು ಸಿಂಹಾಸನಾರೂಢನಾದ ದಶಮುಖನೊಡನೆ ಸಂಭಾಷಣೆ ಮಾಡುತ್ತಿರುವುದು, ಅವನ ಬಾಲಕ್ಕೆ ಉರಿ ಹಚ್ಚುವುದು. ಲಂಕಾದಹನ, ಮಧುವನ ಪ್ರವೇಶ. ಶ್ರೀರಾಮನಿಗೆ ಚೂಡಾಮಣಿಯನ್ನು ಒಪ್ಪಿಸುವುದು, ಸಂಜೀವಿನಿ ಪರ್ವತವನ್ನು ತರುವುದು: ಇವೇ ಮುಂತಾದ ಚಿತ್ರಗಳುಳ್ಳ ಕಂಬಗಳು ವಿಶೇಷವಾಗಿ ಆನೆಗೊಂದಿಯಲ್ಲಿವೆ.

ಇಂಥ ಉಬ್ಬು ಚಿತ್ರಗಳಲ್ಲಿ ಇನ್ನೊಂದು ವಿಷಯ ಎದ್ದು ಕಾಣುವುದೆಂದರೆ, ಶಕ್ತಿ ದೇವತೆಯಾದ ಮಹಿಷಾಸುರ ಮರ್ದಿನಿ, ಕಾಳಿ, ಭೈರವಿ ಮುಂತಾದ ದೇವಿಯರ[೮] ಚಿತ್ರಗಳಿಲ್ಲದಿರುವಿಕೆ. ಅಪರೂಪವಾಗಿ ಶ್ರೀಲಕ್ಷ್ಮಿ ಚಿತ್ರವಿರಬಹುದು.

ಮತ್ತೊಂದು ಗಮನಾರ್ಹವಾದ ಸಂಗತಿಯೆಂದರೆ ಪ್ರತ್ಯೇಕವಾಗಿ ವೀರಭದ್ರನ್

೮. ಈ ದೇವಿಯರ ಚಿತ್ರಗಳನ್ನು ಹೊಯ್ಸಳ, ಕಲ್ಯಾಣ ಮತ್ತು ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಪದೇ ಪದೇ ಕೆತ್ತಲಾಗಿದೆ.

೯. ೯ ಅ. ಹಂಪಿಯಲ್ಲಿಯ ಸಾಸಿವೆಕಾಳು, ಕಡ್ಲೆಕಾಳು ಗಣಪತಿ ದೇವಾಲಯಗಳು, ಉದ್ದದ ವೀರಭದ್ರ ದೇವಾಲಯವು ಬಹುಪ್ರಸಿದ್ಧವೆಂಬುದನ್ನು ಇಲ್ಲಿ ನೆನೆಸಿಕೊಳ್ಳಬಹುದು.

ಹಾಗು ಹನುಮಂತನ ದೇವಾಲಯಗಳ ನಿರ್ಮಾಣ. ಗಜಾನನಗೋಸ್ಕರವೆ ಬೇರೆ ದೇವಾಲಯಗಳು ಕಟ್ಟುತ್ತಿದ್ದುದು ಆನೆಗೊಂದಿಯಲ್ಲಿ ತುಂಗಭದ್ರಾ ನದಿ ಹತ್ತಿರವಿರುವ ಗಜಾನನ[೯] ಆ ದೇವಾಲಯವೇ ಸಾಕ್ಷಿ.

ಹೆಚ್ಚು ಕಡಿಮೆ ಇವೆಲ್ಲವೂ ಮೊದಲನೆ ಸಲಕ್ಕೆ ವಿಜಯನಗರದ ಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಇವುಗಳಿಂದ ಶ್ರೀ ವೈಷ್ಣವ ಸಂಪ್ರದಾಯ. ಜನಪ್ರಿಯ ಶೈವ ಸಂಪ್ರದಾಯ ಹೆಚ್ಚು ಪ್ರಭಾವಶಾಲಿಯಾಗಿದ್ದು, ಅವುಗಳಲ್ಲಿ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಭಕ್ತಿಪ್ರಧಾನ ಎಂಬ ಭಾವನೆ ಹೆಚ್ಚು ಪ್ರಚಲಿತವಾಗಿತ್ತೆಂದು ತೋರುವುದು. ಮತ್ತು ಹನುಮಂತನಿಗೆ. ಅವನ ಸಾಹಸಗಳಿಗೆ ವಿಶೇಷ ಪ್ರಾಧಾನ್ಯತೆ ಕಾಣುತ್ತದೆ. ಆನೆಗೊಂದಿ–ಹಂಪಿ ಪ್ರದೇಶವು ರಾಮಾಯಣದ ಕಿಷ್ಕಿಂಧೆಯೆಂಬ-ಒಂದು ಕಾಲದಲ್ಲಿ ಬೇರೂರಿದ ನಂಬಿಕೆ ವಿಜಯನಗರ ಕಾಲಕ್ಕಾಗಲೆ ಅದು ಹೆಮ್ಮರವಾಗಿ ಬೆಳೆದು ಹನುಮಂತನ ಸಾಹಸಗಳು ವಿವಿಧ ಮೂರ್ತಿಶಿಲ್ಪಗಳಿಗೆ ಮತ್ತು ದೇವಾಲಯ[೧೦] ನಿರ್ಮಾಣಕ್ಕೆ ಸ್ಫೂರ್ತಿಯನ್ನು ಕೊಟ್ಟಿರಬೇಕು. ಶಿವ/ವಿಷ್ಣು ಪರಮೋಚ್ಚನೆಂಬ ಬಲವಾದ ಭಾವನೆ ಶಕ್ತಿಪೂಜೆಗೆ ಅಷ್ಟು ಪ್ರಮಾಣದಲ್ಲಿ ಎಡೆ ಮಾಡಿಕೊಡಲಿಲ್ಲವೆಂದು ತೋರುವುದು ಆದರೂ ಮಹಿಷಾಸುರ ಮರ್ದಿನಿ. ಗಜಲಕ್ಷ್ಮಿ. ಪಾರ್ವತಿ. ಮುಂತಾದ ದೇವಿಯರ ಪ್ರತ್ಯೇಕ ಮೂರ್ತಿಗಳು, ದೇವಾಲಯಗಳು ಅಲ್ಲಲ್ಲಿ ಇವೆ. ಈ ಅಂಶಗಳನ್ನು ಬೇರೆ ಬೇರೆ ಪ್ರಮಾಣಗಳಿಂದಲೂ ಇನ್ನೂ ಹೆಚ್ಚಿನ ವ್ಯಾಪಕವಾದ ಅನ್ವೇಷಣೆಯಿಂದಲೂ ಒರೆ ಹಚ್ಚಿ ಸತ್ಯವನ್ನು ಕಾಣಬೇಕಾಗಿದೆ.

೩. ಮೂರ್ತಿ ಶಿಲ್ಪಗಳು

1. ಹೊಯ್ಸಳ ಕಾಲದ ಮೂರ್ತಿಗಳು.

(i) ಗಜಾನನ (೧.೨೫ ಮಿ. × ೭೦ ಸೆ. ಮಿ.)

ಆನೆಗೊಂದಿಯ ಹುಚ್ಚಪ್ಪಯ್ಯನ ಮಠದಲ್ಲಿ. ಹೊಯ್ಸಳರ ಕಾಲದ ಸೂಕ್ಷ್ಮ ಕುಸುರಿನ ಕೆತ್ತನೆಯುಳ್ಳ ಆಸನಾಸೀನನಾದ ಗಜಾನನ ಮೂರ್ತಿಯಿದೆ. ಇದಕ್ಕೆ ದಶಬಾಹುಗಳಿವೆ. ಇವುಗಳಲ್ಲಿ ಚಕ್ರ, ತ್ರಿಶೂಲ. ಗಧೆ ಮತ್ತು ವಿಧ ವಿಧವಾದ ಕಮಲ ಪುಷ್ಪಗಳಿವೆ. ಸೊಂಡಿಲು ನೆಟ್ಟಗೆ ಇಳಿ ಬಿಟ್ಟಿದೆ. ಎಡ ತೊಡೆಯ ಮೇಲೆ ಅವನ ಪತ್ನಿಯ ವಿಗ್ರಹವಿದೆ. ತಲೆಯ ಮೇಲೆ ಏಳು ಹೆಡೆಯ ಸರ್ಪ ತನ್ನ ಹೆಡೆಗಳನ್ನು ಬಿಚ್ಚಿ ಹಿಡಿದಿದೆ. ಇವೆರಡೂ ಲಕ್ಷಣಗಳು ಗಮನಾರ್ಹವಾಗಿವೆ.

(ii) ಉಮಾ–ಮಹೇಶ್ವರ (೧.೨೫ ಮಿ. ಎ. × ೭೫ ಸೆ. ಮಿ. ಅ.)

ಇದರ ಹತ್ತಿರದಲ್ಲಿಯೇ ಇದೇ ತರಹದ ಕೆತ್ತನೆಯ ಉಮಾ – ಮಹೇಶ್ವರನ ಮೂರ್ತಿಯಿದೆ. ಜಟಾಮುಕುಟನಾದ ಶಿವನು ಅರ್ಧಪರ್ಯಂಕಾಸನಾಸೀನನಾಗಿ, ಅವನ

---

೧೦. ಆನೆಗೊಂದಿಯಲ್ಲಿಯೇ ವಿಜಯನಗರ ಕಾಲದ ೭.೮ ಹಾಳುಬಿದ್ದ ಹನುಮಂತನ ದೇವಾಲಯಗಳು ನೋಡ ಸಿಗುವುವು.

ಬಲಗಾಲು ನಂದಿಯ ಮೇಲಿದೆ. ಎಡ ತೊಡೆಯ ಮೇಲೆ ಪಾರ್ವತಿಯ ವಿಗ್ರಹವಿದೆ. ಶಿವನ ಜಟೆಯಲ್ಲಿ ಪದ್ಮಾಸನವಲ್ಲಿ ಕುಳಿತು ಕೈ ಜೋಡಿಸಿಕೊಂಡು ಧ್ಯಾನಾಸಕ್ತಳಾದ ಗಂಗೆಯನ್ನು ತೋರಿಸಿರುವುದು ನಿಜವಾಗಿಯೂ ಗಮನಾರ್ಹ. ಶಿವನ ಜಟೆಯ ಮೇಲೆ, ವೃಕ್ಷದ ಕೊಂಬೆಗಳು ಹರಡಿವೆ. ಪ್ರಭಾವಳಿಯ ಮೇಲೆ ಅಷ್ಟದಿಕ್ಪಾಲಕರ ಚಿತ್ರಗಳಿವೆ.

2. ವಿಜಯನಗರ ಕಾಲದ ಮೂರ್ತಿಗಳು :

ಭಾರತೀರಮಣ ಮುಖ್ಯಪ್ರಾಣ (ವಾಯು)ದೇವ. (ಚಿತ್ರ ೨,.3)

ಬೆಣ್ಣೂರಿನಲ್ಲಿ ತುಂಗಭದ್ರಾನದಿ ದಂಡೆಯ ಹತ್ತಿರವಿರುವ ಒಂದು ಸಣ್ಣ ಗುಡಿಯ ಮುಂದೆ ಕಪ್ಪು ಕಲ್ಲಿನ ಒಂದು ಶಿಲಾ ಮೂರ್ತಿಯಿದೆ. ಅರ್ಧ ಪರ್ಯಂಕಾಸನದಲ್ಲಿ ಕುಳಿತ ಈ ದೇವರಿಗೆ ಕಿರೀಟಧಾರಿಯಾದ ಐದು ಕಪಿ ಮುಖಗಳಿವೆ. ನಾಲ್ಕು ಹಸ್ತಗಳಿದ್ದು, ಅವು ಮುರಿದು ಹೋಗಿವೆ. ಅವನ ಉದ್ದನೆ ಬಾಲವು ಹಿಂದಿನಿಂದ ಮೇಲಕ್ಕೇರಿಸಿ ಇರಿಕೆ ಹಾಕಿದೆ. ಇವರ ಹಿಂದೆ ಏಳು ಹೆಡೆಯ ಸರ್ಪವು ನೆಟ್ಟಗೆ ನಿಂತಿದ್ದು ತನ್ನ ಏಳು ಹೆಡೆಗಳನ್ನು ಅವನ ತಲೆಯ ಮೇಲೆ ಬಿಚ್ಚಿ ಹಿಡಿದಿದೆ. ಹಣೆಯ ಮೇಲೆ ತ್ರಿನಾಮವಿದ್ದು ಸಾಲಂಕೃತವಾಗಿದೆ. ಎಡ ತೊಡೆಯ ಮೇಲೆ ಅವನ ಅರ್ಧಾಂಗಿಯ ಚಿತ್ರವಿದೆ. ಇವರ ತಲೆ ಮತ್ತು ಕೈಗಳು ಮುರಿದಿವೆ. ಕಪಿ ಮುಖವನ್ನು ನೋಡಿದಾಕ್ಷಣ ಇದು ಪಂಚ ಮುಖ ಆಂಜನೇಯನ ಮೂರ್ತಿಯೆಂದು ಊಹಿಸಬಹುದು. ಆದರೆ, ತಲೆಯ ಮೇಲಿರುವ ಏಳು ಹೆಡೆಯ ಸರ್ಪ ಮತ್ತು ತೊಡೆಯ ಮೇಲಿರುವ ಸ್ತ್ರೀ ವಿಗ್ರಹವು ಈ ಮೂರ್ತಿಯು ವಿಷ್ಣುವಿನ ಒಂದು ಅವತಾರವನ್ನು ಸೂಚಿಸುತ್ತದೆಯೆಂದು ಕಾಣುವುದು. ಪುರಾಣ ಕಥೆಗಳ ಪ್ರಕಾರ ಒಬ್ಬ ಬ್ರಹ್ಮ ರಾಕ್ಷಸನನ್ನು ಕೊಲ್ಲಲು ವಾಯುದೇವನು (ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ವಾಯು ಅಲ್ಲ) ಪಂಚಮುಖಿ ಅವತಾರವನ್ನು ತಾಳಿದನಂತೆ. ಅವನ ಪತ್ನಿ ಭಾರತೀ ದೇವಿ. ಅವನ ಐದು ಮುಖಗಳು ಕಪಿಯ ಹಾಗೆ ಇರಬಹುದು ಅಥವಾ ಮಾರುತಿ, ಗರುಡ, ವರಾಹ, ನಾರಸಿಂಹ ಮತ್ತು ಹಯಗ್ರೀವಗಳಾಗಿರಬಹುದು.[೧೧] ಆದುದರಿಂದ ಈ ಮೂರ್ತಿಯು ಮಧ್ವ ಸಂಪ್ರದಾಯದವರಿಗೆ ಪ್ರಿಯವಾದ ಭಾರತೀರಮಣ ಮುಖ್ಯಪ್ರಾಣ (ಅಥವ ವಾಯು) ಮೂರ್ತಿಯಾಗಿರಬೇಕು. ಕೃಷ್ಣದೇವರಾಯನು ಮಧ್ವ ಯತಿಗಳಾದ ಶ್ರೀ ವ್ಯಾಸರಾಯರನ್ನು ತುಂಬ ಪೂಜ್ಯಭಾವದಿಂದ ನೋಡುತ್ತಿದ್ದನೆಂದು ಪ್ರತೀತಿಯಿದೆ. ಮತ್ತು ಈ ಕಾಲದಲ್ಲಿ ಮಧ್ವಸಂಪ್ರದಾಯದ ವ್ಯಾಸಕೂಟ ಮತ್ತು ದಾಸಕೂಟ ಹೆಚ್ಚು ಪ್ರಚಲಿತವಾಗಿತ್ತು. ಹಿಂದೂ ಮೂರ್ತಿ ಶಿಲ್ಪಕ್ಕೆ ಇದು ವಿಜಯನಗರ ಸಂಸ್ಕೃತಿಯ ಕೊಡುಗೆಯೆಂದು ಹೇಳಬಹುದು.

---

೧೧. ಮಂತ್ರಾಲಯದ ಹತ್ತಿರವಿರುವ ಘಾಣಧಾಳದಲ್ಲಿ ಇಂತಹ ಮೂರ್ತಿಯಿದೆ. ಆದರೆ ಇದಕ್ಕೆ ಪಂಚಮುಖಿ ಆಂಜನೇಯನೆಂದು ಕರೆಯಲಾಗಿದೆ. ಇದು ನಿಂತ ಭಂಗಿಯಲ್ಲಿದ್ದು ಸ್ತ್ರೀ ವಿಗ್ರಹ ರಹಿತವಾಗಿದೆ. ತಲೆಯ ಮೇಲೆ ಸರ್ಪವಾಗಲಿ ಯಾವ ಚಿಹ್ನೆಯೂ ಇಲ್ಲ.

ಸೂರ್ಯದೇವನ ಮೂರ್ತಿ

(i) ಮುಕ್ಕುಂದದ ಮುರಾರಿ ದೇವಾಲಯದಲ್ಲಿಯ ಮೂರ್ತಿಯನ್ನು ಮುರಾರಿಯೆಂದು ಅಲ್ಲಿಯ ಜನರು ಕರೆಯುತ್ತಾರೆ. ಅಲ್ಲಿಯ ವಿಜಯನಗರ (ಅಥವ ಉತ್ತರ ಕಾಲದ) ಶಾಸನದಲ್ಲಿಯೂ ಇದನ್ನು ಹಾಗೆಯೇ ಕರೆಯಲಾಗಿದೆ. ಆದರೆ, ಎರಡು ಕೈಗಳಲ್ಲಿ ಪದ್ಮಗಳನ್ನು ಹಿಡಿದುಕೊಂಡು ನಿಂತಿರುವ ಲಕ್ಷಣಗಳನ್ನು ನೋಡಿದಾಗ ಈ ವಿಗ್ರಹವು ಸೂರ್ಯನ ಮೂರ್ತಿ(ಚಿತ್ರ. 2.1)ಯೆಂದು ಹೇಳಬಹುದು. ಅವನ ಬದಿಯಲ್ಲಿ ಪಿಂಗಳ ಮತ್ತು ದಂಡ ಮೂರ್ತಿಗಳಿರುವುದು ಗಮನಾರ್ಹವಾಗಿದೆ.[೧೨] ಏಕೆಂದರೆ, ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಸೂರ್ಯನ ಅಕ್ಕ ಪಕ್ಕದಲ್ಲಿರುವುದು: ಉಷಾ ಮತ್ತು ಪ್ರತ್ಯುಷಾ.

(ii) ಕನಕಗಿರಿಯ ಹೊರ ಆವರಣದಲ್ಲಿ ಒಂದು ಹಾಳುಬಿದ್ದ ಸೂರ್ಯ ದೇವಾಲಯವಿದೆ. ಇದರ ಮುಂದೆ ವಿಶಾಲವಾದ ನೀರಿನ ಕೊಳ ಮತ್ತು ಕಲ್ಲುಮಂಟಪವಿದೆ. ಹಾಳಾದ ಗರ್ಭಗುಡಿಯಲ್ಲಿ ಸೂರ್ಯವಿಗ್ರಹದ ಕೇವಲ ಪೀಠವಿದೆ. ಇದು ತುಂಬ ಸ್ವಾರಸ್ಯವಾಗಿದೆ. ಇದರ ಮುಂಬದಿಯಲ್ಲಿ ಅಶ್ವಗಳನ್ನು ಓಡಿಸುತ್ತಿರುವ ಸೂರ್ಯನ ಸಾರಥಿ ಅರುಣನಚಿತ್ರವಿದೆ. ಅವನ ಒಂದೊಂದು ಬದಿಯಲ್ಲಿ ಹತ್ತು ಜನ ನಿಂತು ಶಿರಸಾ ಪ್ರಣಾಮ ಮಾಡುತ್ತಿರುವ ಸೂರ್ಯೋಪಾಸಕರ ಚಿತ್ರಗಳಿವೆ. ಇವರೆಲ್ಲರ ಗೋತ್ರದ (?) ಹೆಸರುಗಳನ್ನು ಕೊಡಲಾಗಿದೆ. ಅಕ್ಷರಗಳು ಅಸ್ಪಷ್ಟ. ಪ್ರಾಯಶಃ ಇವು ಕ್ರಮವಾಗಿ ೧. ಕಾ(ಣ್ವಾ?)ಯುಗ ೨......೩. ಕಾ......೪. ಭೃ......೫. ಗಾಲವ ೬. ......೭. ವೆನೆಯೂ ೮. ಕಂ......೯. ಅರುಣ ೧೦. ಉ...... ೧೧. ಜಾಬಾಲ... ೧೨. ಓ. ಯ ೧೩. ಸಾವಾ...೧೪. ಕಾಪಾಲಿ ೧೫. ಶ್ರೀವತ್ಸ ೧೬. ವ. ರ. ೧೭....ಮಾವ...... ೧೮. ಪರಾಕಯನ ೧೯.. ಪೃಥಯ.

ಒಡೆದ ಸೂರ್ಯನ ವಿಗ್ರಹದ (ಚಿತ್ರ 2.1) ಕೆಲವು ಚೂರುಗಳು ಈಗ ಕಲ್ಲು ಮಂಟಪದಲ್ಲಿದೆ.

ವಿಷ್ಣು (ಚಿತ್ರ ೨,2)

ಕನಕಗಿರಿಯ ವೆಂಕಟಪತಿಯ ಕೊಳದಲ್ಲಿ ವಿಷ್ಣುಗುಡಿಯಿದೆಯೆಂದು ಮೇಲೆ ಹೇಳಿದೆಯಷ್ಟೆ. ಇದರಲ್ಲಿಯ ನಯನ ಮನೋಹರವಾದ ಶಾಂತಭಾವದ ವಿಷ್ಣು ಮೂರ್ತಿಯು ಸೂರ್ಯನ ಮೂರ್ತಿಯಂತೆ ದುರದೃಷ್ಟವಶಾತ್ ಒಡೆದು ಹೋಗಿದೆ. ಶ್ರೀವತ್ಸನೆಂದು ಬಿರುದಾಂಕಿತನಾದ ವಿಷ್ಣುವನ್ನು ತೋರಿಸಲು, ಅವನ ಎಡ ವಕ್ಷಸ್ಥಳದಲ್ಲಿ ಸುಂದರವಾಗಿ ಲಕ್ಷ್ಮಿ ಚಿತ್ರವನ್ನೇ ಬಿಡಿಸಲಾಗಿದೆ. ಇದೂ ಕೂಡ ಒಂದು ವೈಶಿಷ್ಟ್ಯ.

ವೀರಭದ್ರ (ಚಿತ್ರ ೩,2)

ಕಾರಟಗಿಯಲ್ಲಿಯ ಮೇಲರ್ಧ ಒಡೆದು ಹೋದ ವೀರಭದ್ರನ ಮೂರ್ತಿಯು ಒಂದು ರೀತಿಯಲ್ಲಿ ವಿಶಿಷ್ಟವಾಗಿದೆ. ಇವನ ಬದಿಯಲ್ಲಿ ಒಂದೇ ಪ್ರೇತವಿರದೆ ಅನೇಕ

---

೧೨. ಗೋವಾದಲ್ಲಿಯ ಕುಡ್ನೆಮ್ ಎಂಬಲ್ಲಿ ಸು. ಕ್ರಿ. ಶ. ೧೨–೧೩ ನೇ ಶತಮಾನದ ಚೆಲುವಾದ ಸೂರ್ಯವಿಗ್ರಹವಿದೆ. ಇದರಲ್ಲಿಯೂ ಪಿಂಗಳ ಮತ್ತು ದಂಡನನ್ನು ತೋರಿಸಲಾಗಿದೆ.

ಪ್ರೇತಗಳಿವೆ. ದೊಡ್ಡ ಪ್ರಮಾಣದಲ್ಲಿ ಚೇಳನ್ನು ತೋರಿಸಲಾಗಿದೆ. ಅವನ ಕಾಲಡಿಯಲ್ಲಿ ಅಪಸ್ಮಾರಗಳು ತುಳಿಯಲ್ಪಟ್ಟಿವೆ.

ಶಿವಲಿಂಗಗಳು (ಚಿತ್ರ ೪; 1, 2, 3)

(i) ಈ ವೀರಭದ್ರನ ಮೂರ್ತಿಯ ಬಳಿಯಲ್ಲೆ ಒಂದು ಶಿವಲಿಂಗವಿದೆ. ಇದರ ಮೇಲೆ ಉದ್ದಕ್ಕೂ ಒಟ್ಟು ೪೮ ಸಮಾನಾಂತರ ಸರಳರೇಖೆಗಳಿವೆ ಪ್ರತಿಯೆರಡು ಸರಳ ರೇಖೆಗಳ ಮಧ್ಯದಲ್ಲಿ ಉದ್ದಕ್ಕೂ ಸಮಾನಾಂತರದಲ್ಲಿ ಅರ್ಧ ಚಂದ್ರಾಕೃತಿಯ ಗೆರೆಗಳಿವೆ. ಪ್ರತಿಯೊಂದೂ ಪ್ರತ್ಯೇಕ ಶಿವಲಿಂಗವನ್ನು ತೋರಿಸುತ್ತಿರಬೇಕು. ಸಹಸ್ರಲಿಂಗದ ಸಂಕೇತವಿರಬೇಕು.

(ii) ಪುರದ ಸೋಮನಾಥ ದೇವಾಲಯದ ಮೊದಲನೆಯ ಹೊರ ಆವರಣದಲ್ಲಿ ಎರಡು ಬದಿಗಳಲ್ಲಿ ಅನೇಕ ದೇವಕೋಷ್ಠಗಳು, ಮಂಟಪಗಳಿವೆ. ಇವುಗಳಲ್ಲೆಲ್ಲಾ ಏಕಲಿಂಗ, ದ್ವಿಲಿಂಗ, ತ್ರಿಲಿಂಗ, ಚತುರ್ಲಿಂಗ, ಪಂಚಲಿಂಗ, ಷಟ್‌ಲಿಂಗ, ಅಷ್ಟಲಿಂಗ ನವಲಿಂಗ, ದಶಲಿಂಗ, ಏಕಾದಶಲಿಂಗ, ಶತಲಿಂಗ, ಸಹಸ್ರಲಿಂಗ, ಸಾಲುಲಿಂಗಗಳು. ಹೀಗೆ ಬೇರೆ ಬೇರೆ ಅನೇಕಾನೇಕ ಲಿಂಗಗಳಿವೆ.

೩. ಇತರ ಕಂಬಗಳು ಮತ್ತು ಮೂರ್ತಿಗಳು

ಈಚಿನ ಕಾಲದ ಹುಚ್ಚಪ್ಪಯ್ಯನ ಮಠದಲ್ಲಿಯ ಮತ್ತು ರಂಗನಾಥ ಸ್ವಾಮಿಯ ದೇವಾಲಯದ ಮುಂದೆ ನೆಟ್ಟಿರುವ ಹೊಯ್ಸಳ ಕಾಲದ ಕಂಬಗಳು ಬಹು ಚೆಲುವಾಗಿ ಕೆತ್ತಲ್ಪಟ್ಟು, ನಟರಾಜ, ವರಾಹ, ನರಸಿಂಹ, ಬ್ರಹ್ಮ, ವಿಷ್ಣು, ಮಹೇಶ್ವರ, ಮನ್ಮಥ, ಭೈರವ, ವೀರಭದ್ರ, ದುರ್ಗಿ, ಸರಸ್ವತಿ, ಕಾಳಿ, ಚಾಮುಂಡಿ ಮುಂತಾದ ಉಬ್ಬು ಚಿತ್ರಗಳಿವೆ. ಕಾರಟಗಿಯಲ್ಲಿ ಎದುರು ಮುಖ ಮಾಡಿದ ನವಿಲಿನ ಮೇಲೆ ಕುಳಿತ ಆರು ಮುಖಗಳುಳ್ಳ ಕಾರ್ತಿಕೇಯ, ವಿಷ್ಣು, ಗಜಾನನ, ಸೂರ್ಯನ ಮತ್ತು ಪನ್ನಾಪುರದಲ್ಲಿಯ ತಲೆ ಕೈಗಳು ಒಡೆದು ಹೋದ ಕುಳಿತ ದೇವಿಯ ಚೆಲುವಾದ ವಿಗ್ರಹವು ಕಲ್ಯಾಣ ಚಾಲುಕ್ಯರ ಕಾಲದ್ದಾಗಿವೆ. ಆದರೆ ಅವು ಅಲ್ಲಲ್ಲಿ ಭಗ್ನವಾಗಿದ್ದು ಎಣ್ಣೆ ಮಜ್ಜನದಿಂದಲೂ ಅಸ್ಪಷ್ಟವಾಗಿವೆ. ಇವಲ್ಲದೆ ವಿಜಯನಗರದ ಕಾಲದ ನಯನಮನೋಹರವಾದ ಮುಕ್ಕುಂಪಿಯಲ್ಲಿಯ ಗರುಡ, ಶಿವಪುರದಲ್ಲಿಯ ಪಾರ್ವತಿ ಮತ್ತು ವೀರಭದ್ರ, ಕಲ್ಕೆರೆಯ ಸಪ್ತ ಮಾತೃಕೆಯು, (ಚಿತ್ರ ೪,4) ನೌಲಿಯ ಉಗ್ರನರಸಿಂಹನಮೂರ್ತಿ ಮತ್ತು ಸಾಣಾಪುರದ ದೇವರ ಮೂರ್ತಿಯು ಗಮನಾರ್ಹವಾಗಿವೆ. ಸಪ್ತಮಾತೃಕೆಯ ವಿಗ್ರಹದಲ್ಲಿ ವೀಣಾಧರ, ವೀರಭದ್ರ ಮತ್ತು ಗಜಾನನ ಬಿಂಬಗಳಿಲ್ಲದಿರುವುದು ಅಸಾಮಾನ್ಯ ಸಾಣಾಪುರದ ದೇವರ ಮೂರ್ತಿಯು ಪದ್ಮಾಸನದಲ್ಲಿದ್ದು, ಅದರ ನಾಲ್ಕು ಕೈಗಳು ಕ್ರಮವಾಗಿ ಶಕ್ತಿ, ಪಾಶ, ಮತ್ತು ಫಲವನ್ನು ಧರಿಸಿವೆ.

ಅಜ್ಞಾತ

ಎಂ. ವಿ. ಶರ್ಮಾ ತದ್ದಲಸೆ

ಹೊಸ್ತೋಟದಲ್ಲಿ ಸಸಿ ನೆಡಸುವ ನಿಮಿತ್ತ ಹೋದವನಿಗೆ ಅದು ಇದು ಕೆಲಸ ಎಂದು ತಡವಾಯಿತು. ಅವಸರದಲ್ಲಿ ಬರುತ್ತಿದ್ದೆನಾದರೂ ವಾರದ ಹಿಂದೆ ಬಿದ್ದ ಮಳೆಯ ಪ್ರತಾಪದಿಂದ ರಸ್ತೆಯೆಲ್ಲ ಕೊರಕಲಾಗಿ ಓಡಿಯಾಡುವದೇ ಕಷ್ಟವಾಗಿ ಮೈಯೆಲ್ಲ ಕಣ್ಣಾಗಿ ನಡೆದು ಬರುತ್ತಿದ್ದಂತೆ ನಾಲ್ಕಾರು ಮನೆಗಳ ಮಧ್ಯೆ ತುಸು ಎತ್ತರದಲ್ಲಿರುವ ನಮ್ಮ ದೊಡ್ಡ ಹಂಚಿನ ಮನೆ, ಮನೆಯ ಸುತ್ತ ಮುತ್ತಲೂ ದಟ್ಟವಾಗಿ ಬೆಳೆದಿದ್ದ ಕಾಡು, ಗಾಳಿಗೆ ಹೊಯ್ದಾಡುವ ಅಡಿಕೆ ಮರಗಳು, ಹಸಿರು ತುಂಬಿ ನಿಂತ ಗದ್ದೆಯ ಕೋಗು ಕಣ್ಣಿಗೆ ಕಂಡಿತು. ಮನೆಯ ಅಂಗಳದ ದಿಬ್ಬವನ್ನು ಏರಿ ಏರಿ ಹೋಗುತ್ತಿರುವಾಗ ಗುರುತು ಸಿಗದ ನಾಯಿಗಳು ಹರಿದು ತಿನ್ನುವಂತೆ ಬೊಗಳತೊಡಗಿದವು. ನಾಯಿಗಳ ಬೊಗಳುವಿಕೆ ಕೇಳಿ ಯಾರೋ ಮನೆಗೆ ಬಂದರೆಂದು ಹೊರಗೆ ಬಂದ ಅಮ್ಮ 'ಓ, ಮಾಬ್ಲ!' ಎಂದು ಒಳ ನಡೆದರು. ಅಪ್ಪಯ್ಯ: "ಮಾಣಿ ಚೆನ್ನ ಇವತ್ತೇಕೋ ಕೆಲ್ಸಕ್ಕೆ ಬಂದಿನಿಲ್ಲೆ. ಮರ್ಲನೂ ಅಷ್ಟೆ. ನೋಡ್ಕ್ಯಂಡುಬಾ" ಎಂದರು. ಸರಿಯೆಂದು ಬ್ಯಾಟ್ರಿ ಹಿಡಿದು ಹೊರ ಹೊರಡುತ್ತಿರುವಂತೆ ಅಮ್ಮ ಮೊಳ ಉದ್ದನೆಯ ಲೋಟದಲ್ಲಿ ಮಜ್ಜಿಗೆ ತೆಗೆದುಕೊಂಡು ಕೊಟ್ಟಳು. ಮಜ್ಜಿಗೆ ಮುಗಿಸುತ್ತಿರುವಂತೆ, 'ಮರ್ಲಿಗೆ ಬಹುಶಃ ಹುಶಾರಿಲ್ಲೆ. ನಿನ್ನೆ ಔಷ್ಧಿ ತಗಂಡು ಹೋಗು." ಎಂದಾಗ "ಹಂ, ಹೌದು ಸಾಕು ಸುಮ್ಮನಿರು!" ಎಂದು ಅಪ್ಪಯ್ಯ ನುಡಿದಾಗ ಅಮ್ಮನಿಗೆ ಮುಖಭಂಗವಾಗಿ ಪೆಚ್ಚುಮೋರೆಮಾಡಿ ಒಳಹೋದಳು. ನಾನಾಗಲೇ ಮನೆಯಿಂದ ಹೊರಬಿದ್ದಿದ್ದೆ. ಬ್ಯಾಟ್ರಿಯಿಂದ ಕತ್ತಲೆಯನ್ನು ಸೀಳಿಕೊಂಡು ಚೆನ್ನನ ಬಿಡಾರದ ಹಾದಿ ಹಿಡಿದಿದ್ದೆ. ಹಾದಿಯ ಕೊರಕಲಿನಿಂದ ಕತ್ತಲು ಮತ್ತಷ್ಟು ದಟ್ಟವಾಗಿ ಎದ್ದು ಬಂದಂತಾಗಿ ಗಡಬಡಿಸಿದವನ ಕಣ್ಣಿಗೆ ಬೆಳಕಿನ ತುಣುಕುಗಳು ಕಾಣ ತೊಡಗಿದವು. ಗುಪ್ಪೆ ಗುಪ್ಪೆ ಮಿಣುಕು ಹುಳಗಳು. ಅರೆಕ್ಷಣ ಅವನ್ನೇ ದಿಟ್ಟಿಸಿ ಅವಸರವಸರವಾಗಿ ಪಂಚೆಯನ್ನು ಮೊಣಕಾಲಿನವರೆಗೆ ಸಿಕ್ಕಿಸಿಕೊಂಡು ಹೆಜ್ಜೆ ಹಾಕ ತೊಡಗಿದೆ. ತೆಂಗಿನ ವನ ಸಿಕ್ಕಾಗ ಚೆನ್ನನ ಬೆವರು ಹನಿಗಳನ್ನು ಹೀರಿಕೊಂಡು ಬೆಳೆದ ಫಸಲು ಅವ್ಯಕ್ತ ಪ್ರೀತಿಯನ್ನು ಹುಟ್ಟಿಸಿತು. ನಮ್ಮ ವಂಶದ ಉಸಿರಿನಲ್ಲಿ ಚೆನ್ನನ ಅಂಶ ಬೆರೆ-ತಿದೆಯೆಂದು ಅನಿಸಿತು. ನಾನು ಸಣ್ಣಾಗಿನಿಂದಲೂ ಅವನನ್ನು ಬಲ್ಲೆ. ನನ್ನನ್ನು ಎತ್ತಿ ಮುದ್ದಾಡಿ ಪೇಟೆಗೆ ಹೋಗಿ ಬಂದಾಗಲೆಲ್ಲಾ ಪೆಪ್ಪರಮೆಂಟು, ಚಾಕಲೇಟು ತಂದು

ಕೊಟ್ಟು ಖುಷಿ ಪಡಿಸಿ, ಶಾಲೆಗೆ ಕೂಡಾ ಕರೆದುಕೊಂಡು ಹೋಗಿ ಬಂದು ಮಾಡಿದ ದಿನಗಳ ನೆನಪು ಮರೆಯುವಂತಹವಲ್ಲವೆನಿಸಿತು. ಬೆಳಗಿನ ಜಾವ ಕರಗಿ ಹಗಲಾಯಿತು ಎನ್ನುವಷ್ಟು ಬೆಳಕು ಹುಟ್ಟುವವರೆಗೂ ಅವನ ಮಗ್ಗುಲಲ್ಲಿ ಕಂಬಳಿ ಹೊದ್ದು ಕುಳಿತು ಹು, ಹು ಚಳಿಯಪ್ಪಾ ಎಂದು ಕೊಳಗಿ ಬೀಸ ಮೇಳದ ಆಟವನ್ನು ಕಂಡಿದ್ದೆ. ನಾನಾಗ ಚಿಕ್ಕ ಹುಡುಗ. ಮರ್ಲಿಯ ಪೊಲೆಗಳನ್ನು ಯಾವ ಭಾವನೆಯಿಲ್ಲದೆ ನೋಡುತ್ತಿದ್ದವ. ಇಂದು ಅವರಿಗೆಲ್ಲ 'ಒಡೆಯ'ನಾಗಿದ್ದೇನೆ. ನನ್ನ ಹೇಳಿಕೆ ಕೇಳಿಕೆ ಪೂಜ್ಯ. ಬಿಡಾರದ ಕಡೆ ಹೋದೆನೆಂದರೆ ಭೂಮಿಗಿಳಿದು ಬಂದ ಭಗವಂತನನ್ನು ಕಂಡಂತೆ ಮಾಡುತ್ತಾರೆ. ಅವ ರೆಷ್ಟು ಗಲೀಜಾಗಿ ಕಂಡರೂ ತುಳುಕುವ ಹೃದಯವಂತಿಕೆ ಮನಸ್ಸನ್ನು ನಾಚಿಸುತ್ತದೆ.

ಕಾಲುಗಳು ಸಾಗುತ್ತಿರುವಂತೆ ಹಳ್ಳದ ಸನಿಹ ಬಂದ ಅರಿವು ಆಗಿ ನೆನಪುಗಳನ್ನು ಕರೆಂಟು ಹೋದ ಹಾಗೆ ಕೊಡವಿಕೊಂಡು ಕಣ್ಣುಗಳನ್ನು ಕತ್ತಲೆಗೆ ಹೊಂದಿಸಿಕೊಂಡು ಅಲ್ಲಲ್ಲಿದ್ದ ಪರಿಚಿತ ಕಲ್ಲುಗಳ ಮೇಲೆ ಕಾಲಿಡುತ್ತಾ ನೀರನ್ನು ದಾಟಿದೆ. ಕೆಮ್ಮಣ್ಣಿನ ವಾಸನೆ ಮೂಗಿಗೆ ಬಡಿಯಿತು. ಎದುರು ನಿಂತ ಆಲದ ಮರ ಅಸ್ಪಷ್ಟ ಆಕೃತಿಯಾಗಿ ಹೆದರಿಸ ತೊಡಗಿ ಗಾಳಿ ತಣ್ಣಗಾಗಿ ಹಾವು ನುಸುಳಿದಂತೆ ಮೈಯ್ಯ ಸಂದುಗಳಲ್ಲಿ ತೂರಿ ಕಚಗುಳಿ ಇಟ್ಟಂತಾಯಿತು. ಓಹ್, ಸುಳ್ಳೇ ಹೆದರುತ್ತೇನಲ್ಲ ಎಂದು ಸಮಾಧಾನದ ನಿಟ್ಟು-ಸಿರು ಬಿಟ್ಟು ಜಿರ್ ಜಿರ್ ಹುಳಗಳ ಸದ್ದನ್ನು ಮೀರಿಸಿ ತ್ವರೆಯಿಂದ ನಡೆಯುತ್ತ ಬಿಡಾರಕ್ಕೆ ಹೋಗುವ ಕಾಲುದಾರಿ ತುಳಿದೆ.. ತೊರಿಕೆ ಗಿಡಗಳು ದಟ್ಟವಾಗಿ ಬೆಳೆದು ಇದ್ದ ಕಾಲು ದಾರಿಯೂ ಇಲ್ಲವಾಗಿದೆ. ಕಾಲನ್ನು ಎತ್ತಿ ಎತ್ತಿ ಇಟ್ಟುಕೊಳ್ಳುತ್ತಾ ಸಾಗುತ್ತಿದ್ದಂತೆ ಗಿಡಗಳು ಮುರಿದು ಮುತ್ತಿಡುತ್ತಿದ್ದವು. ಬೇಸಿಗೆಯಲ್ಲಿ ಇಲ್ಲೆಲ್ಲಾ ಬಯಲಾಗಿರುತ್ತೆಂದು ಕೊಳ್ಳುವಾಗಲೇ ಮರ್ಲಿ ಚೆನ್ನನನ್ನು ಕಟ್ಟಿಕೊಂಡು ಹದಿನೈದು ವರ್ಷ ಸಂದರೂ ಮಕ್ಕ ಳಾಗದಿದ್ದುದು, ಮೊನ್ನೆ ಮೊನ್ನೆ ಅಪ್ಪಯ್ಯ ಮರ್ಲಿಗೆ ರಾತ್ರಿಯೆಲ್ಲ ಸ್ವಪ್ನ ಬೀಳುತ್ತದೆ ಯೆಂದು ಭಸ್ಮ ಮಂತ್ರಿಸಿಕೊಟ್ಟದ್ದು, ಅಮ್ಮನಿಂದ ವಾಂತಿಯಾಯಿತೆಂದು ಹೇಳಿ ಮದ್ದು ತೆಗೆದುಕೊಂಡು ಹೋದದ್ದು ಆಶ್ಚರ್ಯವೇ. ಇಷ್ಟು ವರ್ಷದ ಮೇಲೆ ಅವಳಿಗೆ ಸಂತಾನವೆಂದರೆ ನಂಬುವುದು ಕಷ್ಟ. ಈಗ ಆರು ತಿಂಗಳಿಂದ ಕಳವು ಜೋರಾದ್ದರಿಂದ ಚೆನ್ನ ತೆಂಗಿನವನದ ಮಾಳದಲ್ಲೇ ಮಲಗುತ್ತಲಿದ್ದಾನೆ. ಕೆಂಚ ಚೆನ್ನ ಇಬ್ಬರೂ ಕಾಯ ಹತ್ತಿದ್ದಾರೆ. ಎರಡುದಿನದಿಂದ ಕೆಂಚ ಎಲ್ಲಿಗೋ ಹೋಗಿ ಬರುತ್ತೇನೆಂದವನು ಬರಲಿಲ್ಲ. ಒಂದೆರಡು ದಿನಗಳಲ್ಲಿ ಬರಬೇಕಿತ್ತು. ಸಮಸ್ಯೆಗಳಿಗೆ ಉತ್ತರವಾಗಿ ಕತ್ತಲು ಮಾತ್ರ ಕಂಡಿತು.

ತುಸು ದೂರದಲ್ಲಿ ಬಿಡಾರದ ದೀಪ ಮಿನುಗುತ್ತಿತ್ತು. ನಿಧಾನವಾಗಿ ಹೋಗಿ ಬಾಗಿಲನ್ನು ದೂಡಿ 'ಚೆನ್ನ'ಎಂದು ಕರೆದೆ. ಲಾಟೀನು ಎದುರು ಕುಳಿತ ಚೆನ್ನ ಕರೆ ಕೇಳಿ ಗೊಂದಲಿಸಿದ. 'ಒಡೆದಿರಾ, ಇಷ್ಟು ಕತ್ಲೆಯಲ್ಲಿ ಬರೋದೆ" ಎಂದ. ಮಾರುತ್ತರ ಕೊಡದೆ ಅಪ್ಪಯ್ಯ ಕೇಳಿಕೊಂಡು ಬರಲಿಕ್ಕೆ ಹೇಳಿದ್ದನ್ನು ಹೇಳಿದೆ. ಮರ್ಲಿಗೆ ಹುಶಾರಿಲ್ಲದ ಸಂಗತಿ

ಯನ್ನೇ ವಿವರಿಸಿದ. ಕೆಸರು ಬಡಿದ ಚಪ್ಪಲಿಯನ್ನು ತೆಗೆದೆ. ಕೂಡ್ರಲು ಹಾಸಿದ ಕಂಬಳಿಯ ಮೇಲೆ ಕುಳಿತುಕೊಂಡೆ. ಸುತ್ತ ಕತ್ತಲೆ. ಸಗಣಿ ಹಾಕಿ ಸಾರಿಸಿದ ನೆಲ ಹಸಿ ಹಸಿಯಾಗಿತ್ತು. ಸ್ವಲ್ಪ ಬದಿಯಲ್ಲೇ ಒಲೆಯಲ್ಲಿ ನಿಗಿನಿಗಿ ಉರಿಯುವ ಕೆಂಡದ ರಾಶಿಯ ಎದುರು ಮರ್ಲಿ ಕುಳಿತುಕೊಂಡಿದ್ದಳು. ನಾನು ಬಂದದ್ದನ್ನು ಗಮನಕ್ಕೆ ತಂದುಕೊಂಡು 'ಒಡೆದಿರಾ' ಎಂದು ಪಕ್ಕಕ್ಕೆ ತಿರುಗಿಕೊಂಡಳು. ಲಾಟೀನಿನ ಬೆಳಕನ್ನು ಚೆನ್ನ ದೊಡ್ಡದು ಮಾಡಿದ. ಆಕೆ ಸ್ಪಷ್ಟವಾಗಿ ಕಂಡಳು. ಎಲೆ ಅಡಿಕೆ ರಸದಿಂದ ಕೆಂಪಾದ ದಪ್ಪತುಟಿ, ಹಾಕಿದ್ದ ಕುಪ್ಪಸವನ್ನೇ ಸೀಳಿ ಬಿಡುವಂತೆ ಮುಂದೆ ಬಂದ ಎದೆ. 'ಹುಶಾರಿಲ್ಲವಾ' ಎಂದೆ. 'ತುಂಬ ಹೊಟ್ಟೆ ನೋವು'ಎಂದವಳೇ ಎದ್ದು ಹೊರಗೆ ಹೋಗಿ ವಾಂತಿಮಾಡಿಕೊಂಡಳು. ನನಗೆ ಗಾಬರಿಯೆನಿಸಿತು. ಕಾಲ ಸಮೀಪಿಸಿತೆಂದು ಲೆಕ್ಕಹಾಕಿದೆ. ಚೆನ್ನನಿಗೆ ಅವಳನ್ನು ಹಿಡಿದುಕೊಳ್ಳುವಂತೆ ಸೂಚಿಸಿದೆ. ಅವಳು ಹೊಟ್ಟೆ ನೋವಿನಿಂದ ನರಳುತ್ತಿರುವಂತೆ ಅನಿಸಿತು. ಸ್ವಲ್ಪ ಹೊತ್ತಿನ ಮೇಲೆ ಒಳಗೆ ಬಂದು ಒಲೆಯ ಬುಡದಲ್ಲೇ ಕುಳಿತುಕೊಂಡಳು. ಸಂಕಟ, ಹೊಟ್ಟೆಯುರಿ ಹೆಚ್ಚಾಗಿರಬೇಕು. ಮುಖದಲ್ಲೆಲ್ಲ ನೋವು ಹರಡಿತ್ತು. ಎದೆಯೆಲ್ಲ ಚುಚ್ಚಿದವರ ಹಾಗೆ ಚಡಪಡಿಸುತ್ತಾಳೆ. ತಂಪುಗಾಳಿ ಬೀಸುತ್ತಿದ್ದರೂ ಮೈಯೆಲ್ಲ ಬೆವರುತ್ತಿರುವದು ಕಾಣುತ್ತದೆ. ಉಟ್ಟಸೀರೆ ಸಡಿಲು ಮಾಡಿಕೊಳ್ಳುತ್ತಾಳೆ. ಅಡಿಗೆ ಮನೆಯಲ್ಲಿ ಮಡಿಕೆಯಲ್ಲಿ ತುಂಬಿಟ್ಟ ಬಿಸಿ ನೀರನ್ನು ಚೆನ್ನ ತಂದು ಕೊಡುತ್ತಾನೆ. ಸ್ವಲ್ಪ ಸ್ವಲ್ಪವಾಗಿ ಬಾಯಲ್ಲಿ ಸುರಿದುಕೊಂಡು ನುಂಗುತ್ತಾಳೆ. ಸರಿಯಾಗಿ ಕುಡಿಯಲೂ ಆಗುವದಿಲ್ಲ. ಹೊಟ್ಟೆಯ ಏರಿಳಿತ ಕಾಣುತ್ತದೆ. ಹೆಣ್ಣಾಗಿ ಹುಟ್ಟಲೇ ಬಾರದು ಎಂದು ಕೊಳ್ಳುತ್ತಿರುವಂತೆ ಬಾಯಿ ಬಡ ಬಡಿಸುತ್ತಾಳೆ. ನನಗೆ ಅಲ್ಲಿ ಇನ್ನು ಕೂಡ್ರುವದು ಸಹ್ಯವಾಗಲಿಲ್ಲ "ಚೆನ್ನ ನಾಳೆ ಬೆಳಿಗ್ಗೆ ಬರುತ್ತೇನೆ. ಗಾಬರಿಯೆನಿಸಿದರೆ ಬಂದು ಹೋಗು" ಎಂದು ಹೇಳಿ ಮನೆಗೆ ಮರಳುತ್ತೇನೆ. ಮನವೆಲ್ಲ ಮರ್ಲಿಯ ಯಾತನೆಯೊಂದಿಗೇ ದನಿಗೊಟ್ಟಂತೆ ಭಾಸವಾಗುತ್ತದೆ. 'ಪಾಪ' ಎಷ್ಟು ಕಷ್ಟ ಸಹಿಷ್ಣಗಳೆನಿಸುತ್ತದೆ.

ಊಟ ಮುಗಿಸಿದ ಮೇಲೆ ಅಪ್ಪಯ್ಯನೊಡನೆ ಮರ್ಲಿಯ ವಿಷಯ ಹೇಳಿ ಮತು: ಹತ್ತಿದೆ. ಅಮ್ಮ ಮನೆ ಚಾಕರಿ ಮುಗಿಸಿ ಅಪ್ಪಯ್ಯನೊಡನೆ ಹರಟತೊಡಗಿವಳು "ಮರ್ಲಿ. ಅಪೂರ್ಪಕ್ಕೆ ಬಸ್ರು ಆಜು. ಗಂಡೇ ಆಗ್ತಕು"ಎಂದಳು. ಅಪ್ಪಯ್ಯ: "ಚೆನ್ನಂಗೆ ಈ ವಯಸ್ನಲ್ಲಿ ಮಕ್ಕಳಾಗ್ತ್ವೇ ಇಷ್ಟು ದಿವ್ಸ ಇಲ್ಲದ ಸಂತಾನ ಶಕ್ತಿ ಈಗ ಒಮ್ಮಿಂದೊಮ್ಮೆ ಬಂದದ್ದು ಹೇಗೆ? ಎಷ್ಟಂದ್ರೂ ಒಕ್ಕಲು ಮಕ್ಕ ವಿಷ್ಯ. ಅವ್ರೀತಿರಿ ನೀತಿ ಹೇಳದೇ ಬ್ಯಾಡ ನಮ್ಮ ಮನೆಗೆ ಕೆಲ್ಸಕ್ಕೆ ಆಳಂತೂ ಬರ್ತಾ" ಎಂದರು. "ಕೆಂಚ ಎಲ್ಲಿಗೋ ಹೋದವನು ಎಂತಕ್ಕ್ಯೋ ಇವತ್ತು ಬಂಜಿನಿಲ್ಲೆ" ಎಂದು ಅಮ್ಮ ಮತ್ತೊಂದು ಬಡಿಗೆ ಒಗೆದರು "ಅವಂಗೆ ಊರ್ನಲ್ಲಿ ಇನ್ನು ಯಾರು ಗಂಟು ಬಿಜ್ವೋ? ಒಬ್ರಲ್ಲ ಒಬ್ರು ಅವಂಗೆ ಸಾಥಿ ಆಗ್ತಾನೆ ಇರ್ತು" ಎಂದರು. "ಹೌದೌದು. ಆದೇನು ಸುಳ್ಳಲ್ಲ. ಕಳೆದ ಬ್ಯಾಸಿಗೆಲ್ಲಿ ದೊಡ್ಡ ಆಕಳು ಕಳೆದು ಹೋದಾಗ ಚೆನ್ನ ಕೆಂಚ ಕೂಡಿ ಹುಡುಕಲೆ ಹೋಗಿದ್ದ್ವಿ. ಅವ

ತ್ನಿಂದ ಅದಿಬ್ರೂ ಭಾರೀ ಗಳಸ್ಯ ಕಂಠಸ್ಯ ಆಗೋಜ" ಎನ್ನುತ್ತಿದ್ದಂತೆ ಅಪ್ಪಯ್ಯಂಗೆ ಕಟ ಕಟೆ ಎನಿಸಿರಬೇಕು. "ಸಾಕು, ಸಾಕು ಮಹರಾಯ್ತಿ, ಮನಕ್ಯ, ಬೆಳಿಗ್ಗೆ ನಸ್ಕಿಗೆ ಏಳವ್ರು" ಎಂದು ಬಿ ಟರು.

ಮಲಗಿದ್ದಲ್ಲಿಂದಲೇ ಅವರ ಮಾತು ನನಗೆ ಸ್ಪಷ್ಟವಾಯಿತು. ಕೆಂಚನದೇನೋ ಇದರಲ್ಲಿ ಕೀಚಕ ಪಾತ್ರವಿರಬೇಕೆನಿಸಿತು. ಕೆಂಚ ಬೆಲ್ಲಕ್ಕೆ ಮುತ್ತಿಗೆ ಹಾಕುವ ಇರುವೆಗಳಂತೆ ಮೆದುಳನ್ನು ಕಾಡ ತೊಡಗಿದ. 'ಥೂ' ಇವತ್ತು ಯಾಕೋ ತಲೆಯಲ್ಲಿ ಹುಳ ಕೆದರಿದಂತಾ ಗುತ್ತದೆಯೆಂದು ಬಲವಂತವಾಗಿ ಕಣ್ಮುಚ್ಚಿದೆ.

ಮುಂಜಾನೆ ಎದ್ದಾಗ ಅಪ್ಪಯ್ಯ ಇರಲಿಲ್ಲ. ಅಮ್ಮ "ಅವರು ಹೊಸ್ತೋಟಕ್ಕೆ ಹೋದರು. ನೀನು ಚಹಾ ಕುಡಿಯಲು ಬಾ" ಎಂದಳು. ಮುಖ ತೊಳೆದುಕೊಂಡು ಚಹಾ ಕುಡಿದು ಏಳುತ್ತಿರುವಂತೆ "ಮರ್ಲಿಯನ್ನು ನೋಡಿ ಕೊಂಡು ಬಾ. ಹಾಂಗೇ ಈ ಉಪ್ಪಿನ ಕಾಯಿಯನ್ನು ಕೊಟ್ಟು ಬಿಡು" ಎಂದು ಸಣ್ಣ ಭರಣಿಯೊಂದನ್ನು ಕೈಯಲ್ಲಿ ಕೊಟ್ಟಳು. ಮನೆಯವರ ಲೆಕ್ಕಕ್ಕೆ ಚೆನ್ನ–ಮರ್ಲಿ ಸೇರಿಹೋದರೆನಿಸಿ ಏನೇನು ಕತೆ–ಆಯಿತೋ ಎಂದುಕೊಳ್ಳುತ್ತ ಬಿಡಾರಕ್ಕೆ ಹೊರಟೆ. ತೆಂಗಿನ ವನಕ್ಕೆ ಬರುತ್ತಿರುವಂತೆ ದೂರದಿಂದ ಯಾರೋ ಬರುತ್ತಿರುವದು ಕಂಡಿತು. ತಲೆ ಬೋಳಿಸಿಕೊಂಡು ಮೈ ತುಂಬ ಅಡ್ಡವಾಗಿ ತೆಳುವಾದ ಬಟ್ಟೆಹೊದ್ದು ಮೊಣಕಾಲ ವರೆಗೆ ಪಂಚೆ ಉಟ್ಟು ಹತ್ತಿರ ಬರುವ ವ್ಯಕ್ತಿ ಕೆಳಗಿನ ಮನೆ ಯಂಕಪ್ಪ ಎಂದು ತಿಳಿಯಲು ಬಹಳ ಕಾಲ ಹಿಡಿಯಲಿಲ್ಲ. ಮದುವೆ ಸಮಯದಲ್ಲಿ ಕ್ರಾಪು ಬಿಡಿಸಿದ ಈ ಗಿರಾಕಿ, ನಡುವೆ ಜುಟ್ಟಿಗೆ ಬಂದು ಈಗ ಇದ್ದಕ್ಕಿದ್ದಂತೆ ಬೋಳಿಸಿಕೊಂಡು ಪ್ರತ್ಯಕ್ಷನಾಗಿ ಬಿಟ್ಟದ್ದು ಒಂದು ಸೋಜಿಗವೆನಿಸಿತು. ಜೊತೆಗೆ ಮತ್ತಿಬ್ಬರು ಬರುತ್ತಿರುವದನ್ನು ಕಂಡು ಕುತೂಹಲ ಕೆರಳಿತು. ಬಹುಶಃ ಗ್ರಾಮ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ವರ್ಗಣಿಗೆ ಹೊರಟಿರಬೇಕೆಂದು ಊಹಿಸಿದೆ. ಹೌದು, ಹತ್ತಿರ ಬಂದಾಗ ಅದೇ ವಿಚಾರವನ್ನು ಕೇಳಿ ನೆತ್ತಿಯ ಮೇಲೆ ಕುದಿಯುವ ಎಣ್ಣೆ ತಟ್ಟಿದಂತಾಯಿತು. ಜೇಪಾರ್ಸಿಯಂಗೆ ತಲೆ ಬೋಳಿಸಿಕೊಂಡು ಮುಂಡೇರಂಗೆ ತಲೆ ಮೇಲೆ ಸೆರಗು ಹಾಕ್ಕೊಂಡು ಬಂದಿರೋದೂ ಅಲ್ದೆ ಇವರಿಗೆ ದೇವಸ್ಥಾನ ಬೇರೆ ಬೇಕೋ ಎನಿಸಿತು. ತುಟಿಯ ಮೇಲೆ ಬಂದ ಮಾತುಗಳನ್ನು ಹಾಗೆಯೇ ನುಂಗಿಕೊಂಡು ನನ್ನಷ್ಟಕ್ಕೆ ಮುಂದರಿದು ಬಿಟ್ಟೆ. ಅದರೂ ಯಂಕಪ್ಪನ ವ್ಯಕ್ತಿತ್ವ ಬೆನ್ನು ಬಿಡಲಿಲ್ಲ. ಜನವೆಲ್ಲ ನಗುವಂತೆ ಮನೆತನದ ಮರ್ಯಾದೆ ಮೂರು ಕಾಸಿಗೆ ಮಾರಿ ಕೈ ಹಿಡಿದೋಳನ್ನು ಅಪ್ಪನ ಮನೆ ಸೇರೋ ಹಾಗೆ ಮಾಡಿ ಊರಲ್ಲಿರೋ ಒಕ್ಕಲು ಆಳುಗಳ ಹೆಂಡಂದಿರನ್ನು ಬಗ್ಗಿಸಿ ಮೋಹಿಸಿದವನಿಗೆ ದೇವಸ್ಥಾನ ಬೇರೆ ಬೇಕಾಗಿದೆ ಎಂದುಕೊಂಡೆ. ಮರ್ಲಿಯೊಂದಿಗೆ ಮತ್ತೆ ಇವನದೂ ಸಂಬಂಧವಾಗಿದೆಯೇನೋ ಎಂದೂ ಅನುಮಾನಿಸಿದೆ. ಕಳೆದ ಪಿತೃ ಪಕ್ಷದ ಶ್ರಾದ್ಧಕ್ಕೆ ಮರ್ಲಿ ಊಟಕ್ಕೆ ಹೋಗಿ, ಮಾಡಿದ್ದ ಕೇಸರಿ ಬಾತನ್ನು ಕಟ್ಟಿಕೊಂಡು ಬಿಡಾರಕ್ಕೆ ಬಂದು ಎರಡು ದಿನದವರೆಗೆ ತಿಂದಿದ್ದಳೆಂದು ಅಮ್ಮ ಹೇಳಿದ್ದು ನೆನಪಾಯಿತು.

ಆದರೂ ಮರ್ಲಿ ಅಂಥ ಅಧರ್ಮಕ್ಕೆ ಇಳಿಯುವ ಹೆಂಗಸಲ್ಲ. ತನ್ನ ಕೈ ಹಿಡಿದವನ ಸಂತಾನ ವೃದ್ಧಿಸಲಾರದ್ದಕ್ಕೆ ಕೊರಗುತ್ತಿದ್ದಳಾದರೂ ಅಪ್ಯವಹಾರ ಅವಳಿಂದಾಗುವದಿಲ್ಲ. ಧರ್ಮ-ಸ್ಥಳಕ್ಕೋ ತಿರುಪತಿಗೋ ಹರಕೆ ಹೇಳಿಕೊಂಡಾಳೇ ಹೊರತು ಅಕೃತ್ಯ ಕನಸಿನಲ್ಲೂ ಕಾಣಲಾರಳು. ಯೋಚನೆಗಳ ವ್ಯೂಹದಲ್ಲೇ ಬಿಡಾರಕ್ಕೆ ಬಂದೆ.

ಮರ್ಲಿಗೆ ನಿನ್ನೆ ಆರಂಭವಾದ ಪ್ರಸವ ವೇದನೆ ಇನ್ನೂ ನಿಂತಿರಲಿಲ್ಲ. ಎದ್ದು ನಿಲ್ಲಲೂ ತ್ರಾಣವಿಲ್ಲ. ಬಿಡಾರದ ಬದಿಯ ಕೋಣೆಯಲ್ಲಿ ಒಬ್ಬಂಟಿಯಾಗಿ ಮಲಗಿದ್ದಾಳೆ. ಚೆನ್ನ 'ಏಳಬೇಡ, ಅನರ್ಥವಾದೀತು...' ಎಂದು ಬಂದು ದೀಪ ಹಚ್ಚುತ್ತಾನೆ. ಮಂದ ಬೆಳಕಿನಲ್ಲಿ ಹುರಿಮೀಸಿಯೆಡೆಯಿಂದ ಮುಖದಲ್ಲಿ ಮುಗುಳ್ನಗೆ ಚಿಮ್ಮುತ್ತದೆ. ಮತ್ತೆ ಹೊರಗೆ ಬಂದು ಬಚ್ಚಲಿಗೆ ಬೆಂಕಿ ಹಾಕಲು ಕುಂಟೆ ತರುತ್ತೇನೆಂದು ಹೋಗುತ್ತಾನೆ.

ಮರ್ಲಿಗೆ ನಿಮಿಷ ನಿಮಿಷಕ್ಕೆ ವೇದನೆ ಅಧಿಕವಾಗುತ್ತಲೇ ಇದೆ. ಒಂದೆರಡು ಬಾರಿ ಚೆನ್ನನನ್ನು ಕರೆಯುತ್ತಾಳೆ ಆತ ಅಲ್ಲಿಲ್ಲ. ಬಹುಶಃ ನೋವಿನ ಗಡಿ ಮೀರಿರಬೇಕೆನಿಸುತ್ತದೆ. ನರಳುವ ಸದ್ದು ಅಷ್ಟಾಗಿ ಕೇಳುವದಿಲ್ಲ. ಏನಾಯಿತೇನೋ ಅಂದುಕೊಂಡು ನಾನೇ ಒಳನೋಡುತ್ತೇನೆ. ಕಣ್ಣು ಮುಚ್ಚಿಕೊಂಡಿದ್ದವಳು ನಿಧಾನವಾಗಿ ಕಣ್ಣು ಬಿಡುತ್ತಾಳೆ. ಬದಿಯಲ್ಲಿ ಮಗುವಿರುತ್ತದೆ. ಗಂಡೋ ಹೆಣ್ಣೋ ಎಂದು ತಿಳಿಯುವ ತವಕ-ದಿಂದಿರಬೇಕು ಅತ್ತ ಬಾಗುತ್ತಾಳೆ. ಗಂಡು ಮಗುವಾಗಿದೆ! ಆದರೆ ಮಗು ಈ ಲೋಕವನ್ನು ಬಿಟ್ಟು ಹೋಗಿದೆ! ಹುಟ್ಟಿದಾಕ್ಷಣ ಮಗುವನ್ನು ಸಾವು ಸ್ವಾಗತಿಸಿತ್ತು. ಮರ್ಲಿ ಚೆನ್ನನನ್ನು ಕೂಗಿದಳು. ಉತ್ತರವಿಲ್ಲ. ಜೋರಾಗಿ ಕಂಠ ಒಡೆಯುವಂತೆ ನರಳಿ ಅರಚಿದಳು. ಚೆನ್ನ ಎದುರಿಗೆ ಬಂದು ಮೂಕನಾಗಿ ನಿಂತಿದ್ದ. ನನ್ನ ಕಾಲುಗಳು ಮತ್ತೆ ಅಲ್ಲಿ ನಿಲ್ಲಲು ಸಮ್ಮತಿಸಲಿಲ್ಲ. ಹೃದಯ ಅವ್ಯಕ್ತ ಭೀತಿಯಿಂದ ಕಂಪಿಸುತ್ತಿತ್ತು. ತಡಮಾಡದೇ ಓಡಿ ಓಡಿ ಮನೆಗೆ ಬಂದೆ. ಅಪ್ಪಯ್ಯ ಮನೆಯ ಹೊರ ಕಟ್ಟೆಯ ಮೇಲೆ ಕುಳಿತು ಅಂಗವಸ್ತ್ರದಿಂದ ತೊಟ್ಟಿಕ್ಕುವ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದ. ಅಮ್ಮ ಒಳಗಡೆ ಸದ್ದಿಲ್ಲದೇ ಇದ್ದಳು. ಅವರಿಗೆ ಹೇಗೆ ವಿಷಯ ತಿಳಿದಿತ್ತೋ ಏನೋ. ನನಗಂತೂ ಒಂದೂ ಅರ್ಥವಾಗಲಿಲ್ಲ. ಆಶ್ಚರ್ಯವೆಂದರೆ ಅಮ್ಮ ಕೊಟ್ಟು ಕಳುಹಿಸಿದ್ದ ಉಪ್ಪಿನಕಾಯಿ ಭರಣಿಯೂ ನನ್ನ ಕೈಯಲ್ಲೇ ಉಳಿದುಕೊಂಡು ಬಿಟ್ಟಿತ್ತು.

ಎಲೆಗೆ

ಜಯಂತ ಕಾಯ್ಕಿಣಿ

ಎಲೆ ಎಲೆಯೇ
ಬೆಳೆದೆಯಾ ನಿನ್ನ ಹಸಿ ಹಸಿ
–ದ ಹಸಿರು ಮೈಗುಂಟ
ಸರಾಗ ಕೊರೆಯುತ್ತವೆ
ನರಗಳ ದೌರ್ಬಲ್ಯ.
ಹಾದಿಗಳೆಲ್ಲ ಕಾಲುಚಾಚಿ
ಮಲಗಿವೆ. ಅಲ್ಲಲ್ಲಿ ಇತಿಹಾಸ
ಹೆಕ್ಕುತ್ತ ಸಂಚರಿಸುವ
ಬಾಧೆಗಳು ತೊಲಗಿವೆ.
ಹಸಿರುಗಚ್ಚುವ ಕೋಶಗಳೆದುರೂ
ಮೈಕಳಚಿ ಮೆರೆದಿವೆ
ಹತ್ತಾರು
ಕಾಮನಬಿಲ್ಲು–ತಿಳಿದೆಯಾ

ಹುಳಿ ಹಳದಿ ಹಳಸುತ್ತಿರುವ
ಕಂಪನಗಳ ಹೆಸರಲ್ಲಿ
ಪಿಯರ್
ನಿನ್ನ ಮೈ ನೆರಿಗೆಗಟ್ಟುತ್ತಿದೆ
ಕೊನೆಗೊಮ್ಮೆ ನೀ ತಟ್ಟನೆ
ತೊಟ್ಟು ಕಳಚಿ
ತೂರಿ ಬೀಳುವದುಂಟಲ್ಲ–

ಆಗ
ನಿನ್ನ ಮುಗಿದ ಬದುಕಲ್ಲಿ
ಸಾವಲ್ಲಿ ಸಾಯುವ ಬದುಕಲ್ಲಿ
ಅನಿವಾರ್ಯತೆಯಲ್ಲಿ
ಇನ್ನೂ ಇನ್ನೂ ಮೌನ ಉಸಿರಾಡುತ್ತಿರುವ
ಸದ್ದು
ನನಗಿಲ್ಲಿ ಕೂತಲ್ಲಿ ಕೇಳಿಸುತ್ತದೆ.

ತ್ರಿವಿಧಿತ್ರಯ

ಎಂ. ಜಿ. ಬಿರಾದಾರ

ತ್ರಿವಿಧಿತ್ರಯವೆಂದು ನಾನು ಕರೆಯುವ ಎಲ್ಲಾ ಪುರಾತನರ ತ್ರಿವಿಧಿ, ಸಿದ್ಧೇಶ್ವರ ತ್ರಿವಿಧಿ ಮತ್ತು ನೀಲಮ್ಮನ ತ್ರಿವಿಧಿಗಳು ಇಲ್ಲಿಯ ವರೆಗೆ ಅಪ್ರಕಟಿತ. ಯಂಡ್ರಾವಿಯ ವಿರಕ್ತ ಮಠಾಧಿಪತಿಗಳಾದ ಶ್ರೀ ನಿ. ಪ್ರ. ಬಸವರಾಜಸ್ವಾಮಿಗಳವರ ಮಠದಿಂದ ಸಂಗ್ರಹಿಸಿದ ಹಲವಾರು ತಾಳೆಯೋಲೆ ಗ್ರಂಥಗಳಲ್ಲಿಯ ಒಂದು ಚಿಕ್ಕ ಕಟ್ಟಿನಲ್ಲಿ ಈ ತ್ರಿಪದಿಗಳು ಉಪಲಬ್ಧವಾದವು. ನಾಲ್ಕು ಇಂಚು ಉದ್ದ, ಎರಡು ಇಂಚು ಅಗಲವಾದ ಈ ಕಟ್ಟಿನಲ್ಲಿ ಈ ತ್ರಿಪದಿಗಳಲ್ಲದೆ ಇನ್ನೂ ಅನೇಕ ಚಿಕ್ಕ ಕೃತಿಗಳಿವೆ. ಒಂದೆರಡು ಪ್ರಕಟಿತ ಶತಕಗಳೂ ಇವೆ.

ಶ್ರೀ ಅಪ್ಪಾರಾವ ಅಕ್ಕೋಣಿ ಅವರ ಮುಖಾಂತರ ದೊರೆತ ಡೋಂಗರಗಾಂವ ಮಠದ ಕೋರೀ ಕಾಗದದ ಒಂದು ಪ್ರತಿಯಲ್ಲಿ ಸಿದ್ಧರಾಮೇಶ್ವರ ತ್ರಿವಿಧಿಯ ಕೇವಲ ಮೂವತ್ತು ಪದ್ಯಗಳು ಮಾತ್ರ ದೊರೆತವು.

ಪ್ರೊ. ಮಾಣಿಕರಾವ ಧನಶ್ರೀ ಅವರಿಂದ ದೊರೆತ ಆಂಧ್ರದ ಧನಶ್ರೀ ಮಠದ ಶ್ರೀ ರಾಚಯ್ಯ ಸ್ವಾಮಿಗಳ ಒಡೆತನದ ಕೋರೀ ಕಾಗದದ ಹಸ್ತಪ್ರತಿಯಲ್ಲಿ ಎಲ್ಲಾ ಪುರಾತನರ ತ್ರಿವಿಧಿ ಮಾತ್ರ ಸಂಪೂರ್ಣವಾಗಿ ಉಪಲಬ್ಧವಾಯಿತು.

ಈ ಎಲ್ಲ ಹಸ್ತಪ್ರತಿಗಳ ಆಧಾರದಿಂದ ಮುಖ್ಯವಾಗಿ ತಾಳೆಯೋಲೆಯನ್ನೇ ಅನುಸರಿಸಿ ಈ ತ್ರಿಪದಿಗಳನ್ನು ಸಂಪಾದಿಸಲಾಗಿದೆ. ಪ್ರತಿಗಳ ಅಸ್ಪಷ್ಟತೆ ಮತ್ತು ಅಕ್ಷರಗಳ ಅಶುದ್ಧತೆ ಕಾರಣವಾಗಿ ಕೆಲವು ಕಡೆ ಸಂದೇಹಗಳು ಉಳಿಯುವುದು ಅನಿವಾರ್ಯವಾಗಿದೆ. ನೀಲಮ್ಮನ ತ್ರಿವಿಧಿಯಲ್ಲಿ ಬಹಳಷ್ಟು ತ್ರುಟಿತ ಭಾಗಗಳಿವೆ.

ಕವಿ ಮತ್ತು ಕಾಲ

ಈ ತ್ರಿವಿಧಿಗಳು ಒಬ್ಬನೇ ಕವಿಯಿಂದ ರಚಿತವಾದುವು ಎನ್ನುವಲ್ಲಿ ಸಂಶಯವಿಲ್ಲ. ಪ್ರತಿಯೊಂದು ತ್ರಿವಿಧಿಯು ಕೊನೆಯಲ್ಲಿ ದಯವಾಗು, ಶರಣಾಗು, ಕೃಪೆಯಾಗು ಎಂದು ಹೇಳುವ ರೀತಿ ಒಂದೇ ಇದೆ. ಶೈಲಿಯಲ್ಲಿ ವಿಶೇಷ ವ್ಯತ್ಯಾಸವಿಲ್ಲ. ಅಲ್ಲದೆ ಹಸ್ತಪ್ರತಿಯಲ್ಲಿ ಒಂದರ ತರುವಾಯ ಒಂದರಂತೆ ಒಂದೇ ಕಡೆ ಬರೆಯಲ್ಪಟ್ಟಿವೆ. ಪದ್ಯ ಸಂಖ್ಯೆಯನ್ನು ನೋಡಿದರೆ ಎಲ್ಲಾ ಪುರಾತನರ ತ್ರಿವಿಧಿ ಮಾತ್ರ ಪುರಾತನರ ಸಂಖ್ಯೆಗೆ ಮೀಸಲಾಗಿದೆ. ಉಳಿದೆರಡು ತ್ರಿವಿಧಿಗಳ ಸಂಖ್ಯೆ ಐವತ್ತೈದು.

ಎಲ್ಲಾ ಪುರಾತನರ ತ್ರಿವಿಧಿ ಎಂದಾಗ ನಿಜಗುಣ ಶಿವಯೋಗಿ ವಿರಚಿತವೆಂದೇ ಕಲ್ಪನೆ ಇತ್ತು. ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಅಲ್ಲದೆ ಇಲ್ಲಿ ಪ್ರಸ್ತಾಪಿಸಿದ ಪುರಾತನರು ತಮಿಳು ಪುರಾತನರಲ್ಲ. ಕೇವಲ ಕೆಲವರನ್ನುಳಿದು ಬಹಳಷ್ಟು ಪುರಾತನರು ಕರ್ನಾಟಕದ ಶರಣರೇ.

ಇನ್ನು ಕವಿಯ ಹೆಸರು ಯಾವ ತ್ರಿವಿಧಿಯ ಆದಿ ಮತ್ತು ಅಂತ್ಯದಲ್ಲಿಲ್ಲವಾದರೂ ಸಿದ್ದೇಶ್ವರ ತ್ರಿವಿಧಿಯ ೫೪ನೆಯ ಪದ್ಯದಲ್ಲಿ 'ನಂದಿ' ಎಂಬ ಹೆಸರು ಸ್ಪಷ್ಟವಾಗಿದೆ.

> 'ಚಂದ ಗಣನೇಮುವನು ಒಂದನರಿಯದೆ ಮನ
> ಬಂದಂತೆ ನಿಮ್ಮ ಪಾಡಿದ 'ನಂದಿ'ಗೆ
> ಇಂದುಧರಸಿದ್ಧ ದಯವಾಗು

ಈ ತ್ರಿವಿಧಿತ್ರಯ ವೀರಶೈವ ಕೃತಿ ಎನ್ನುವಲ್ಲಿ ಸಂಶಯವಿಲ್ಲ. ವೀರಶೈವರಲ್ಲಿ 'ನಂದಿ' 'ನಂದಪ್ಪ' 'ನಂದಬಸಪ್ಪ' ಎನ್ನುವ ಹೆಸರು ಸರ್ವ ಸಾಮಾನ್ಯ. 'ಮನಬಂದಂತೆ ನಿಮ್ಮ ಪಾಡಿದ ನಂದಿಗೆ ಇಂದುಧರಸಿದ್ಧ ದಯವಾಗು' ಎನ್ನುವಲ್ಲಿ 'ನಂದಿ' ಅಂಕಿತನಾಮ ವಾಗಿ ಕವಿಯ ಹೆಸರಾಗಿದೆ ಎಂಬಲ್ಲಿ ಸಂಶಯ ಉಳಿಯಲಾರದು.

ಕವಿಯ ಕಾಲನಿರ್ಣಯಕ್ಕೆ ಬೇಕಾದ ಆಧಾರಗಳು ಕೃತಿಯಲ್ಲಿಲ್ಲ. ಆದರೆ ತಾಳೆ ಯೋಲೆ, ಕೋರೀ ಕಾಗದದ ಪ್ರತಿಗಳನ್ನು ನೋಡಿದರೆ ೧೮ನೆಯ ಶತಮಾನಕ್ಕೆ ಈಚಿನ ವಲ್ಲ ಎನ್ನುವುದರ ಜೊತೆಗೆ ೧೭ನೆಯ ಶತಮಾನದ ಆಚಿನವೂ ಅಲ್ಲ ಎನಿಸುತ್ತದೆ.

ಭಕ್ತ ಕವಿಯ ಈ ಕೃತಿ ಸಾಮಾನ್ಯ ಕೃತಿಯಾದರೂ ಸಾಹಿತ್ಯದ ದೃಷ್ಟಿಯಿಂದ ನಿರ್ಲಕ್ಷಿಸುವಷ್ಟು ಸಾಮಾನ್ಯವಲ್ಲವೆನ್ನುವುದನ್ನು ಅರಿತರೆ ಸಾಕು.

ಎಲ್ಲಾ ಪುರಾತನರ ತ್ರಿವಿಧಿ

ಜಗದಗಲ ಮುಗಿಲಗಲ ಮಿಗೆಯುಗಲ ನಿಮ್ಮ ಘನ
ಅಘಹರನೆ ನಿಮ್ಮ ಶರಣರ ಸಂಪದವ
ಪೊಗಳಲೆನ್ನಳವೆ ಶಿವ ಬಲ್ಲ ॥ ೧ ॥

ಕೋಟಿ ಶ್ರೀರುದ್ರ ಜಪಕೋಟಿ ಪಂಚಾಕ್ಷರೀಜಪ
ಕೋಟಿ ಮಾತೆಲ್ಲ ಶಿವಮಂತ್ರಕಿಂದಧಿಕ
ನಾಟಿ ಶಿವಶರಣ ಸ್ತುತಿಯೆಂದು ॥ ೨ ॥

ಎರಡೆಂಬತ್ತೇಳು ಕೋಟಿ ಮೃಡನ ಪ್ರಮಥಾವಳಿಯ
ಬಿಡದೆ ಪೊಗಳಲ್ಕೆ ಕಲ್ಪಾಂತಕಳವಲ್ಲ
ಕಡೆಗೆ ಹತ್ತೆಂಟು ಪೊಗಳುವೆ ॥ ೩ ॥

ಮಾರಹರ ಕಿರಮಿಣಿಯ ಭೋರನೆ ಮಾರುತ ಬರಲು
ಕ್ರೂರ ದ್ವಿಜರೆಲ್ಲ ನಿಂದಿಸೆ ಲಿಂಗವ ತೋರಿದ
ಸೂರ ಸಾನಮ್ಮ ಶರಣಾಗು ॥ ೪ ॥

ಹಿರಿಯ ಭಕ್ತರ ಮನೆಯ ಭರದಿ ವಿಭೂತಿವಿಡಿದು
ಇರದೆ ಕುಲಕಂಜಿ ಉಣಲೊಲ್ಲದೆ ಸುಯಿದಾರಿ
ಉರುತರದ ಸುನಿಯಾಗಿ ಜನಿಸಿದ ॥ ೫ ॥

ಕುಂಭಿನಿ ವೇದಾಢ್ಯರು ಶಂಭುವಿನ ಭಕ್ತರು ಕಿರಿದೆನಲು
ಇಂಬಿನ ವೇದಗಳ ಶ್ವಾನನ ಕೈಯಲೋದಿಸಿದ
ಜಂಬೂರ ಮಹಾಕಾಳಯ್ಯ ಶರಣಾಗು ॥ ೬ ॥

ಹೊಲೆಯರ ಮನೆಯಲ್ಲಿ ಉಣಬಹುದೆ ಶೇಷವನು
ಎನಲು ವೇದಗಳ ಕಾಗೆಯ ಕೈಯಲೋದಿಸಿದ
ಬನವಸ ಬ್ರಹ್ಮಯ್ಯ ಶರಣಾಗು ॥ ೭ ॥

ಗುಗ್ಗುಳ ಧೂಪವನು ಒಗ್ಗುತ ತಂದಿರಿಸಿ
ಭರ್ಗ್ಗದೇವನ ಪುರವನೆ ತೋರಿಸಿದ
ಗೊಗ್ಗವ್ವೆ ಪಾದಕ್ಕೆ ಶರಣೆಂಬೆ ॥ ೮ ॥

ಅರಿವೆ ಹೆಂಡತಿಗಷ್ಟು ನೆರೆ ಕಚ್ಚುಟ ತನಗೊಂದು
ಉರುವ ಶಿವ ಬೇಡೆ ಅದಕೊಟ್ಟು ಬತ್ತಲೆ ನಿಂದ
ನಿರ್ಲಜ್ಜ ಶಾಂತಯ್ಯ ಶರಣಾಗು ॥ ೯ ॥

‘ಯೇಕೋದೇವ’ ಘನವೆಂದು ಕಾಕುಬಸ್ದಿಯನೊಡೆದು
ಲೋಕವರಿಯಲ್ಕೆ ಶಿರವರಿದೆಳ್ದಿನ ಮೆರೆದ
ಏಕಾಂತ ರಾಮಯ್ಯ ಶರಣಾಗು ||೧೦||

ಕೊಡೆವಿಡಿಯೆ ಬೆಟ್ಟವನು ಬಿಡದೆ ಬೆರಳಲಿ ತಂದು
ಕಡಿದು ತನ್ನ ಶಿರದಿ ಅಡಿಕೆ ಕೋಟಿಯನೊಡೆದ
ಹಡಪದಪ್ಪಣ್ಣ ಶರಣಾಗು ||೧೧||

ಇಕ್ಕುವ ಪಂಚಾಮೃತವ ಪೊಕ್ಕ ಶರಣರ ಪೊರಡಗೊಡದೆ
ಲೆಕ್ಕವಿಲ್ಲದವರ ತರಿದೊಟ್ಟಿ ಪ್ರಾಣವ ಪಡೆದ
ರಕ್ಕಸ ಬ್ರಹ್ಮಯ್ಯ ಶರಣಾಗು ||೧೨||

ಒಪ್ಪುವ ಸರುಹೊತ್ತಿನಲಿ ತಪ್ಪದೆ ಶಿವನೆಬ್ಬಿಸಿ
ಒಪ್ಪುವ ಜ್ಯೋತಿಯ ಬೆಳಗಿನಲಿ ಉಣಿಸಿದ
ತಿಪ್ಪಿದೇವಯ್ಯ ಶರಣಾಗು ||೧೩||

ಒಂದು ಶಿಸುವೆಂದು ತಾವೊಂದು ಲಿಂಗವ ಕಟ್ಟಿ
ಹಿಂದೊಂದು ಅವಳಿ ಶಿಸು ಜನಿಸಿ ತಿಪ್ಪಿಗೆ ಬಿಸುಟು
ಸಾಂಥರ ನಾಚಯ್ಯ ಶರಣಾಗು ||೧೪||

ಕರಿಕಂಠ ಪರುಷವ ಕೊಡಲು ಜರಿದು ತಿಪ್ಪಿಗೆ ಬಿಸುಟು
ಉರುವ ಶಿವ ಬೇಡೆ ನೆರೆಕಂಕುಳ ಮಣ್ಣಿತ್ತ
ಮರನ ತಿಮ್ಮಯ್ಯ ಶರಣಾಗು ||೧೫||

ಶೂಲ ತಲೆಯಲಿ ಮೂಡೆ ಮೇಲೆ ಮರ ಪಲ್ಲವಿಸಿ
ಲೋಲ ಬಸವೇಶ ಕರಸಲು ಮರಸಹಿತೈದ
ಸೂಲದ ಬ್ರಹ್ಮಯ್ಯ ಶರಣಾಗು ||೧೬||

ಕೊರಡು ಕೊನರಿಸುತಲಿ ಬರಡು ಹಯನಾಗಿಸುತಲಿ
ತಡೆಯದೆ ತಲೆಗಳನು ಕೊಯ್ದು ದೇಗುಲ ತುಂಬಿದ
ಮೃಡ ಬಂಕಣಯ್ಯ ಶರಣಾಗು ||೧೭||

ಭಾವಿಸಿ ಶಿವ ನಿಳಯದಿ ಹೋಹ ತಲೆಗಳ ಕೊಯಿದು
ಜಾವಕೆಪ್ಪತ್ತು ನಾಲ್ಕು ಹೊಸ ತಲೆಗಳ ಪಡೆದ
ಗೋವಿಂದ ಭಟ್ಟಯ್ಯ ಶರಣಾಗು ||೧೮||

ಮೂಸಕ ಬೆಕ್ಕು ನೊಣ ನಾಯಿ ಲೇಸು ಪಶುಗಳಿಗೆಲ್ಲ
ಈಶ್ವರನ ವ್ರತಗಳನು ಕೊಟ್ಟು ಸಂಪದವಿತ್ತ
ಏಲೇಶ್ವರದ ಕೇತಯ್ಯ ಶರಣಾಗು ||೧೯||

ಮುದದಿ ಶರಣರು ಬರೆ ಸದನದೊಳಿರುತಿರೆ
ವಧುವನೊಬ್ಬರಿಗೆ ಕೊಟ್ಟು ಸಂಪದವಿತ್ತ
ವಧುವಿತ್ತ ಮಾರಯ್ಯ ಶರಣಾಗು || ೨೦ ||

ಮುದದಿ ಸತ್ತು ಹೊಳಿರೆ ಒದಗಿ ಎಳ್ದಿನವಾಗಿ
ಕದುಬಿ ಪ್ರಾಣವ ಕೊಟ್ಟು ಸುಖವಿರುತಿಹ
ಕದಿರೆಯ ರೆಮ್ಮಯ್ಯ ಶರಣಾಗು || ೨೧ ||

ಗೊಬ್ಬೂರೊಳು ದ್ವಿಜರೆಲ್ಲ ಕೊಬ್ಬಿ ಶೇಷವ ಜರೆಯೆ
ಉಬ್ಬಿ ನಿಂದಿಸಲು ಪುರಸಹಿತೆಲ್ಲರ ಸುಟ್ಟ
ಬಿಬ್ಬಿ ಬಾಚಯ್ಯ ಶರಣಾಗು || ೨೨ ||

ಇರುಳು ಭವಿಯೊಳುಂಬ ದುರುಳ ಸ್ವಪ್ನವ ಕಂಡು
ಕರುಳ ನೆರೆ ಕೊಯ್ದು ಉದಕದಲಿ ತನುದೊಳೆದ
ಕರುಳ ಕೇತಯ್ಯ ಶರಣಾಗು || ೨೩ ||

ಖುಲ್ಲ ಮಾನವನೊರ್ವ ಬಳ್ಳ ಪೂಜೆಯ ಮಾಡಿ
ಮಲ್ಲಯ್ಯನೆಂದು ನಮಿಸಿ ಆಜ್ಞೆಯನಿತ್ತ
ಬಳ್ಳೇಶ ಮಲ್ಲಯ್ಯ ಶರಣಾಗು || ೨೪ ||

ನಲ್ಲ ಕುರಿಹಿಕ್ಕೆಯೆನು ಅಲ್ಲಿ ಪೂಜೆಯ ಮಾಡಿ
ಉಲ್ಲಂಗಿಸಿ ವದಿಯೆ ಶಿರವರಿದು ನೆರೆ ಮೆರೆದ
ಗೊಲ್ಲಾಳಯ್ಯಗಳಿಗೆ ಶರಣಾಗು || ೨೫ ||

ಮಾಡಿದ ಪೂಜೆಯನೊದೆದು ರೂಢೀಶಗೆ ಮಾಂಸವ ತೋರ್ಪ
ನೋಡಿ ಕಣ್ಣೊಡೆಯೆ ತನ್ನ ಕಂಗಳನಿತ್ತ
ಬೇಡರ ಕಣ್ಣಪ್ಪ ಶರಣಾಗು || ೨೬ ||

ಭಾರಗುತ್ತವನಾಡಿ ವೀರ ಜಂಗಮಕಿಕ್ಕಿ
ಧೀರ ಬಿಜ್ಜಳನ ಕೆಡೆ ಮೆಟ್ಟಿ ಹುಲುಗಿರಿಸಿದ
ಬಾರ ಗುತ್ತಣ್ಣಯ್ಯ ಶರಣಾಗು || ೨೭ ||

ಹಲವು ಹುಲ್ಲನೆ ತಂದು ನುಲಿಯ ಕಾಯಕ ಮಾಡಿ
ಚಲುವ ಜಂಗಮಕೆ ಎಡೆ ಮಾಡಿ ಮುಕ್ತಿಯ ಪಡೆದ
ನುಲಿಯ ಚಂದಯ್ಯ ಶರಣಾಗು || ೨೮ ||

ಅಮರಲೋಕದ ಜವಳಿಯ ಕ್ರಮದಿ ಶರಣರಿಗಿತ್ತು
ವಿಮಲ ಕಚ್ಚುಟಿಕೆ ಸತಿಸುತರ ತೂಗಿಸಿದ
ಅಮರ ನೀತಿಗಳ ಶರಣಾಗು || ೨೯ ||

ಹರನಾಣೆಗಂಜಿ ತಾ ಭರದಿ ತೊಂಬತ್ತೊಂದೊರುಷ
ವರವಧುವ ತೊರೆದು ನಿಲಿಸಿ ಆಜ್ಞೆಯನಿತ್ತ
ತಿರುನೀಲಕಂಠಯ್ಯ ಶರಣಾಗು || ೩೦ ||

ರುದ್ರಗೆ ವಿಷ ಹತ್ತಿತೆಂದು ಭದ್ರ ಜಪವನು ಜಪಿಸಿ
ರುದ್ರನ ತೊಡೆ ಏರಿ ಎರಡಳಿದು ಒಂದಾದ
ರುದ್ರ ಪಶುಪತಿಯೆ ಶರಣಾಗು || ೩೧ ||

ವೇದ ಜಂಗಮವಾಗಿ ದಾಯಾದಿ ಬಂದಿರೆ
ಆದಿ ಪರಶಿವನ ಚರವೆಂದು ನಂಬಿದ
ಶಿದಿರಾಜಯ್ಯ ಶರಣಾಗು || ೩೨ ||

ಪನ್ನಗಧರನ ಮುಂದೆ ಕಿನ್ನರಿ ವೀಣೆಯ ನುಡಿಸಿ
ಹನ್ನೊಂದು ಹಣ ಹಾಗವನು ತಂದು ಜಂಗಮಕಿತ್ತ
ಕಿನ್ನರಿ ಬ್ರಹ್ಮಯ್ಯ ಶರಣಾಗು || ೩೩ ||

ಕನ್ನವಿಕ್ಕಿದ ಮಣ್ಣು ಹೊನ್ನಾಗಿ ಇರುತಿರೆ ಅದನೊಲ್ಲವೆ
ಉನ್ನತ ಜಂಗಮಕ್ಕೆ ಹಾಗದಿಂದುಣಿಸಿದ
ಕನ್ನದ ಬ್ರಹ್ಮಯ್ಯ ಶರಣಾಗು || ೩೪ ||

ಹಾದರ ಕಾಯಕದಿಂದ ಆದುದ ಜಂಗಮಕಿಕ್ಕಿ
ಹೋದ ಪ್ರಾಣವನು ಸತಿಯಿಂದ ನೆರೆ ಪಡೆದ
ಹಾದರದ ಬ್ರಹ್ಮಯ್ಯ ಶರಣಾಗು || ೩೫ ||

ಸುಂಕವ ಕೊಂಬ ದ್ರವ್ಯವನು ಭೋಂಕನೆ ಜಂಗಮಕಿಕ್ಕಿ
ಸಂಕಿಸದೆ ತ್ರಿವಿಧವನು ಕೊಟ್ಟು ಸಲೆ ಮೆರೆಯುತಿಹ
ಸುಂಕದ ಬಂಕಣ್ಣ ಶರಣಾಗು || ೩೬ ||

ಮದೇವಗೆ ಬಿದಿರಡಿಯೆ ಭೇದಿಸಿ ಬೆನ್ನಿಲಿ ಮೂಡಿ
ಹೋದ ಪ್ರಾಣವನು ಮಡಿವಾಳಯ್ಯನಿಂದ ಪಡೆದ
ಮೇದರ ಕೇತಯ್ಯ ಶರಣಾಗು || ೩೭ ||

ಕಟ್ಟುವ ಮನೆ ಸಂತೆಯು ಮನೆ ಕಟ್ಟುವ ಧನ ಕಲ್ಲು ಹರಳು
ಮುಟ್ಟುವ ಸ್ತ್ರೀಯರೆಲ್ಲ ಒತ್ತೆ ಸೂಳೆಯರೆಂಬ
ಗಟ್ಟಿವಾಳಯ್ಯ ಶರಣಾಗು || ೩೮ ||

ಖಂಡಗಕ್ಕಿಯ ತಂದು ಕಂಡ ಜಂಗಮಕಿಕ್ಕಿ
ಖಂಡಿಸಿ ಕರಗಳನು ದಿನಚರಿಯ ಪಡೆಯುತಿಹ
ಹೆಂಡದ ಮಾರಯ್ಯ ಶರಣಾಗು || ೩೯ ||

ಅಗ್ಗಳದೇಳ್ನೂರು ಬಸ್ತಿಯನು ಸುಗ್ಗಿಸಿ ಜಿನರ ಪಡೆಗಳನು
ತಗ್ಗಿಸಿ ಪೊಟ್ಟಿಲ ಕೆರೆಯೊಳಗೆ ಕೊಂದು ಮೆರೆದಾಡುತಿಹ
ಸುಗ್ಗಳೆ ದೇವಮ್ಮ ಶರಣಾಗು || ೪೦ ||

ಚಾರು ಮಾವಿನಹಣ್ಣು ಮಾರಹರಗೆಡೆ ಮಾಡಿ
ಭೋರನೆ ತನ್ನ ಶಿರದಿ ಶಿವಪುರಕೈದಿಸಿದ
ಕಾರಿಕಾಲಮ್ಮ ಶರಣಾಗು || ೪೧ ||

ಕ್ರೂರ ಜೈನರನೊಲ್ಲದೆ ಭೋರನೆ ಅಡವಿಯ ಪೊಕ್ಕು
ಮಾರ ಮರ್ದನನ ಕಂಡು ಧೀರ ಹೆಣ್ಣು ಗಂಡೊಂದಾದ
...ಮುಕ್ತನಾಥ ಶರಣಾಗು || ೪೨ ||

ಸೂಳೆಯಾಗಿರುತಿರೆ ಭಾಳಾಕ್ಷನ ನೆರೆಯುತ ಮೆಚ್ಚಿ
ಏಳು ದಿನ ಶಿವಪುರದ ಬಾಗಿಲ ತೆರೆಸಿದ
ಸೂಳೆ ನಿಂಬೆಕ್ಕ ಶರಣಾಗು || ೪೩ ||

ಕಕ್ಕಸ ದೇಹವ ಜರೆದು ಧಿಕ್ಕರಿಸಿ ಕೌಶಿಕನ
ಮುಕ್ಕಣ್ಣನ ಕರವ ಪಿಡಿದು ಕದಳಿಯ
ಹೊಕ್ಕ ಅಕ್ಕ ಮಹಾದೇವಿ ಶರಣಾಗು || ೪೪ ||

ಇಷ್ಟಲಿಂಗವ ನೋಡಿ ನಿಷ್ಠೆ ನಿಬ್ಬೆರಗಾಗಿ
ಪೊಕ್ಕು ಯುರಡಳಿದು ಎರಡಳಿದೊಂದಾದ
ಅಕ್ಕ ನೀಲಮ್ಮ ಶರಣಾಗು || ೪೫ ||

ಮಂಡೆಗೆ ಮಜ್ಜನ ಮಾಡಿ ದಂಡೇಶಗೆ ನಮೋ ಎಂದು
ಚಂಡವನು ತಡೆದು ನಿಲಿಸಿ ಅಜ್ಞೆಯನಿತ್ತ
ಚಂಡದ ಸೋಮಮ್ಮ ಶರಣಾಗು || ೪೬ ||

ಮಂಚದ ಕಾಲಿನ ಲಿಂಗವನು ವಂಚಿಸಿ ಏತ ಕೊಂಡೊಯ್ದು
ಮುಂಚೆ ಪ್ರಾಣವ ಸತ್ಯಣ್ಣನಿಂ ಪಡಿದ
ಸಂಚದ ಕಮಲಮ್ಮ ಶರಣಾಗು || ೪೭ ||

ಕಾಳುಭವಿಗಳನೊದೆದು ಭಾಳಾಕ್ಷಗೆ ಪಾಲ್ಗುಡಿಸಿ
ಹೇಳದೆ ತನ್ನಸುವ ಬಿಟ್ಟು ಲಿಂಗವ ಪೊಕ್ಕ
ಕೋಳೂರ ಕೊಡಗೂಸ ಶರಣಾಗು || ೪೮ ||

ಒಂಗದೆ ಚಿಟ್ಟಿದಷ್ಟು ಜೋನವನು ನುಂಗುವ ತುತ್ತು ತುತ್ತಿಂಗೆ
ಮುಂಗಳದೇಳು ಸಮುದ್ರವನು ಒಂದು ಉಣಲಿಗೆ ಸಾಲದೆಂಬ
ಅಂಗುಷ್ಟ ಗಣನಾಥ ಶರಣಾಗು || ೪೯ ||

ಒಪ್ಪುವ ಏಳು ಸಮುದ್ರವನು ತಪ್ಪದೆ ಕೈಯೊಳು ಪಾತ್ರೆ
(ಅಪ್ಪ) ಸರ್ಪಮಾತಾಡೆ ಬ್ರಹ್ಮಾಂಡ ಬೆರೆದಿರ್ದ
ದರ್ಪಭೂಷಣನೆ ಶರಣಾಗು || ೫೦ ||

ಶಂಕಗಳು ಕಿವಿಯು ಭೋಂಕನೆ ನಾದಿಸುತಿರಲು
ಬಿಂಕದ ಬ್ರಹ್ಮಾಂಡವಡೆವಂತೆ ನಾದಿಸಿದ
ಶಂಕು ಕರಣಯ್ಯ ಶರಣಾಗು || ೫೧ ||

ನಕ್ಷತ್ರಗಳ ಬಾಚಿ ಅಕ್ಷತೆಯಾಗಿ ಇಡುತಿರಲು
ಕಕ್ಷವಾಹನನ ಹೃದಯದೊಳು ಜನಿಸಿದ
ಕುಕ್ಷಿ ಪಾತಯ್ಯ ಶರಣಾಗು || ೫೨ ||

ಭರದೇಳು ಕರತಾಗಿ ಉರುವ ನಕ್ಷತ್ರಗಳನು
ಹಿರಿಯಗಿರಿಗಳನು ಆಣೆ ಕಲ್ಲಾಡಿದ
ಗಿರಿಕಂಠ ಕಂದಯ್ಯ ಶರಣಾಗು || ೫೩ ||

ಅಂಡಗಳನೆಲ್ಲವ ತುಂಡಿಸಿ ರೋಮದಿ ಕಟ್ಟಿ
ಮಂಡೆ ಪಾದ ತನಕ ಮಾಲೆಯಾಗಿ ಧರಿಸಿದ
ಆಂಡ ಭರಣಯ್ಯ ಶರಣಾಗು || ೫೪ ||

ಬಂದ ದೈತ್ಯರ ತಲೆಯ ತುಂಡಿಸಿ ರೋಮದಿ ಕಟ್ಟಿ
ಮಂಡೆ ಪಾವದ ತನಕ ಮಾಲೆಯಾಗಿ ಧರಿಸಿದ
ರುಂಡಾ ಭರಣಯ್ಯ ಶರಣಾಗು || ೫೫ ||

ಬ್ರಹ್ಮ ಶತಕೋಟಿಗಳನು ಒಮ್ಮೆಗೆ ಚಂಡಿಕೆವಿಡಿದು
ಗಮ್ಮನೆ ಅಲ್ಲಾಡಿ ಮೂಗಿನ ಪವನದಲ್ಲಾಡಿಪ
ಬ್ರಹ್ಮ ಪಿಸಣಯ್ಯ ಶರಣಾಗು || ೫೬ ||

ಬ್ರಹ್ಮರು ಗರ್ವಿಸಲು ಗಮ್ಮನೆಲ್ಲರು ಬಾಚಿ
ಸುಮ್ಮನದಿ ನುಂಗಿ ಆಸನದಿ ಪವಡಿಸಿದ
ಬ್ರಹ್ಮ ಭೂಷಣನೇ ಶರಣಾಗು || ೫೭ ||

ಸಿಡಿಲುಗಳನೆಲ್ಲವನು ಬಿಡದೆ ನಖದಲ್ಲಿ ಖಂಡಿಸಿ
ಸುಡುವ ವಡಬನನು ಫಣೆಯೊಳಗೆ ಧರಿಸಿದ
ವಡಬಾಗ್ನಿ ತಿಲಕಯ್ಯ ಶರಣಾಗು || ೫೮ ||

ಘೋರನೆ ಶೇಷಾಭರಣ ಗುರ್ವಾಜ್ಞೆ ಕಟ್ಟಿಸೂತ್ರ
ಸೂರ್ಯನ ಪಿಡಿದು ಹೊಸೆದು ನೆಲಕ್ಕಪ್ಪಳಿಸಿದ
ಸೂರ್ಯಪಾತಯ್ಯ ಶರಣಾಗು || ೫೯ ||

ಇರದೆ ಮಗಳಿಗಳುಪಿ ಭರವಿ ಮೃಗವಾಗಲ್ಕೆ
ಉರುತರದ ಶಿರವು ಗಗನದೊಳೆಚ್ಚುತೆ ಕೆಡಹಿದ
ಕಿರಾತ ರುದ್ರಯ್ಯ ಶರಣಾಗು || ೬೦ ||

ಅಲ್ಲಿ ಮಾಯೆಯು ಜರೆದು ನಿಲ್ಲದೆ ಮರ್ತ್ಯಕೆ ಬಂದು
ಎಲ್ಲ ಪ್ರಮಥರನು ಸಲಹಿ ಕದಳಿಯ ಪೊಕ್ಕ
ಅಲ್ಲಮ ಪ್ರಭುವೇ ಶರಣಾಗು || ೬೧ ||

ತನ್ನ ಮಗನಿಗೆ ಉಣ್ಣಕ್ಕಿ ಕುನ್ನಿ ಮುಟ್ಟಿತೆಂದು
ಚೆನ್ನಾಗಿ ಕೊಂದು ಹೊಸ ಬೋನ ಸವಿಗೆತ್ತಳು
ಕನ್ನೆ ನಂಬೆಕ್ಕ ಶರಣಾಗು || ೬೨ ||

ಪರ್ವತಗಳನೆಲ್ಲವನು ಊರ್ಧ್ವರೋಮದಿ ಕಟ್ಟಿ
ನೆರೆ ಸಾಲಕ್ಕಿಯುಂ ಪೋಣಿಸಿ ಕೊರಳಲಿ ಧರಿಸಿದ
ಆಂಡಭರಣಯ್ಯ ಶರಣಾಗು || ೬೩ ||

ಎಲ್ಲಾ ಪುರಾತನರ ತ್ರಿವಿಧಿ ಸಮಾಪ್ತಂ

ಸಿದ್ಧೇಶ್ವರ ತ್ರಿವಿಧಿ

ಜಯ ಜಯ ಜಗದೀಶ ಜಯಜಯ ಅಘಹರನೆ
ಜಯಂ ಜಯ ನಿಗಮ ಸಂತತಿಗಳಿಗೆ ದುರ್ಲಭನೆ
ಜಯತು ಸಿದ್ಧೇಶ ದಯವಾಗು || ೧ ||

ಆದಿ ನಿರಂಜನ ಮೇದಿನಿಯೊಳು ಬಂದು
ಬೋಧಿಸಿ ಶರಣ ಸಂತತಿಗೆ ಗುರುವಾದ
ನಾದಮಯ ಸಿದ್ಧ ದಯವಾಗು || ೨ ||

ಬಸವನಾ ಭಕ್ತಿ[೧]ಯು[೧] ಶಶಿಧರನ ಜ್ಞಾನವು
ಅಸಮ ಘನ ಕಂಠದ ವೈರಾಗ್ಯ ಇವು ಮೂರು
ವಶವಾದ ಸಿದ್ಧ ದಯವಾಗು || ೩ ||

ಸತ್ಯ ಚಿತ್ಪಾನಂದ ನಿತ್ಯ ಪರಿಪೂರ್ಣನೆ
ಭಕ್ತ ವತ್ಸಲನೆ ಭವರೋಗ ವೈದ್ಯನೆ
ಕರ್ತ ಸಿದ್ಧೇಶ ದಯವಾಗು || ೪ ||

---

೧ ಯು (ಅ)

ಹತ್ತು ಹನ್ನೊಂದನ್ನು ಮತ್ತೆ ಪ್ರಾಣದೊಳಿರಿಸಿ
[1]ಕಿ[1]ತ್ತು ಪಿಪಾಂಶಿಗಳನಳಿದ ಸಿದ್ಧೇಶ
ನಿತ್ಯ ನೀನೆನಗೆ ದಯವಾಗು || ೫ ||

ಪಾಪದ ಪುಂಜವೆ ರೂಪಾದ ಕಾಯವನು
ಯಾ ಪತ್ತು ನಾನು ಪೊರೆಯಲಾರೆನು ಗುರುವೆ
[2]ಕಾಪಾಲಿ[2] ಸಿದ್ಧ ದಯವಾಗು || ೬ ||

ಭೂತ ಕಾಯವ ನಚ್ಚಿ ಘಾತಕತನದಿಂದ
ಪಾತಕವ ಮಾಡಿ ಪರವನರಿಯದೆ ಕೆಟ್ಟೆ
ಭೂತೇಶ ಸಿದ್ಧ ದಯವಾಗು || ೭ ||

ಕರ್ಮ ಕಾಯವ ನಚ್ಚಿ [3]ವ[3]ರ್ಮವನರಿಯದೆ
ದುರ್ಮುಖನಾಗಿ ದುರಿತಕೀಡಾದೆನು
ನಿರ್ಮಾ[4]ಯ[4] ಸಿದ್ಧ ದಯವಾಗು || ೮ ||

ಮಲಿನ ದೇಹದ ನಚ್ಚಿ ಬಲುಗರ್ವದೊಳು ಹೆಚ್ಚಿ
ಕಲು.ಹೃದಯನಾಗಿ[5] ಹೊಲಬ[5]ನರಿಯದೆ ಕೆಟ್ಟೆ
ಮಲಹರಸಿದ್ಧ ದಯವಾಗು || ೯ ||

ಡಂಭಕದ ಕಾಯ[6]ವಿದು[6] ನಂಬಿ ನಾನಿಮ್ಮಡಿಯ
ಹಂಬಲನೆ ಮರೆದು ಬೆಂಬಿಡದೆ ಭವಭವದಿ
ಶಂಭು ಸಿದ್ಧೇಶ ದಯವಾಗು || ೧೦ ||

ಮನ ಬುದ್ಧಿ ಚಿತ್ತವು ಬಿನಗು ಅಹಂಕಾರವು
ಅನು[7]ದಿನ[7] ನಿಮ್ಮ ನೆನೆಯ[8]ಲೀಯದು[8] ಗುರುವೆ
ಚಿನಮಯ ಸಿದ್ಧದಯವಾಗು || ೧೧ ||

ಏಳು ವೆಸನಗಳೆನ್ನ ಬಾಳಲೀಯವು ಬಲು
ದ[9]ಳಿಯನೆ ಮಾಡಿ[9]ಕೊಳುವಿಡಿದೈದವ್
ಭಾಳಾಕ್ಷ ಸಿದ್ಧ ದಯವಾಗು || ೧೨ ||

ಹತ್ತು ವಾ[10]ಯು[10]ಗಳೆನ್ನ ಮತ್ತೆ ಜೀವನ ಸಿರವ
[11]ಕ[11]ತ್ತರಿಸಲಾಗಿ ಮತ್ತೆ ಭವದೊಳು ಬಾದೆ
ಮೃತ್ಯ[12] ಹರಸಿದ್ಧ[12] ದಯವಾಗು || ೧೩ ||

---

೧ ಕು(ಬ) ೨ ಕೋಪಾತಿ(ಅ) ೩ [ನು] ೪ ಳ (ಬ) ೫ ಹಲವ (ಬ) ೬ ವನು (ಬ) ೭ ಲೋಲ (ಬ) ೮ ಲಾರೆಸು[ವು] (ಬ) ೯ ಗೋಳವಿಡಿದಾದಾವೆ (ಬ) ೧೦ ಯು ಅ ೧೧ ಕ (ಬ) ೧೨ ಜಯಬಂಧು (ಬ)

ಅ[೧]ಱಿ[೧]ವರ್ಗದೊಳು ಸಿಲ್ಕಿ ಬರಿಯಂ ಭ್ರಪೆಂಯೊಳಂ[೨]ಬಿದ್ದು[೨]
ಹರನಿಮ್ಮ[೩]ಪಾ[೩]ದವ ಮರೆದಮಾನವಗೆ
ಉರಗಧರ ಸಿದ್ಧ ದಯಂಪಾಗು || ೧೪ ||

ಪಂಚ ವಿಷಯಗಳೆನ್ನ ಸಂಚ[೪]ಲಿ[೪]ಸಿ ನಾ[೫]ನಿಮ್ಮ[೫]
ಚಿಂತೆಯಂನೆ ಮರೆದು ಹಂಚು [೬]ಹರಿಯಾದೆನು[೬]
ಪಂಚಾಕ್ಷರಿ ಸಿದ್ಧ ದಯುವಾಗು || ೧೫ ||

ಆಸೆಯಾವೇಶದಿಂದ [೭]ಹೂಸಿ ಹುಂಡನವಾಗಿ[೭]
ದೇಶದೊಳು [೮]ಗ್ರಾಸದಾಶೆಗೆ[೮] ತಿರಂಗುವಗೆ
ಈಶ ಗುರುಸಿದ್ಧ ದಯುವಾಗು || ೧೬ ||

ಆಸೆಯಾ ಶೂಲದೊಳಂ [೯]ವೇಷದಾ[೯]ಹೆಣನಾನು
ಹೇಸದೆ ಬಿದ್ದು ಘಾಸಿಯಾದೆನು ಗುರುವೆ
ಶಾಶ್ವತ [೧೦]ಸಿದ್ಧೇಶ[೧೦] ದಯುವಾಗು || ೧೭ ||

ಆಸೆಯಾ ದಾಸನಿಗೆ ವೇಷದಾ ಚೋರನಿಗೆ
ಭಾಷೆ ಹೀನನಿಗೆ ದೋಷಕೇಡಾದವಗೆ
[೧೧]ಗೋ ಶಾಲ[೧೧] ಸಿದ್ಧೇಶ ದಯಂವಾಗು || ೧೮ ||

ಬಡಮನದ ಆಸೆಯನು ಒಡೆತನದ ವೇಷವನು
ಪೊಡವಿಯೊಳು ಬಿಡದೆ ನಡಿಸುವ ಪಾಪಿಗೆ
ವೃಥ ಸಿದ್ಧಲಿಂಗ ದಯುವಾಗು || ೧೯ ||

ಒಂದೊಂದು ಬಯಸುವ ಸಂದೇ[೧೨]ಹಿ[೧೨] ಮಾನವನ
ಮಂದಮತಿಗಳನು ಹಿಂದು[೧೩]ಗಳೆವೆನ್ನ(ಗುರು)[೧೩]
ತಂದೆ ಗುರು[೧೪]ಸಿದ್ಧ[೧೪]ದಯುವಾಗು || ೨೦ ||

ಕರಿಯು ಚೋಹವ ತೊಟ್ಟು ಮರಿ[೧೫]ನಾಯಂತಳುವರೆ[೧೫]
ಗುರುರೂಪಧರಿಸಿ ನರನಂತೆ ನಡೆಸುವನಿಗೆ
ಕರಿಕಂಠ ಸಿದ್ಧ ದಯುವಾಗು || ೨೧ ||

---

೧ ರಿ (ಬ) ೨ ಶಿಲ್ಕಿ (ಬ) ೩ ಪ ಅ ಳ ರಿ (ಬ) ೫ ನಿಂದು (ಅ) ೬ ಅರಿಯಾದೆ ಕೆಟ್ಟೆ (ಬ) ೭ ಹುಸಿಹುಂಡ ನಾನಾದೆ (ಬ) ೮ ಪರದೇಶವ (ಬ) ೯ ಹೇಸದೆ (ಬ) ೧೦ ಸಿದ್ಧ (ಬ) ೧೧ ಪಾ (ಬ) ೧೨ ಹ (ಬ) ೧೩ ಗಳೆದೆನು ಗುರುವೆ (ಬ) ೧೪ ಗುರುಸಿದ್ಧ (ಬ) ೧೫ ನಾಯಂತೆ ಬೊಗಳುವರೆ (ಬ)

[1]ಕೋಟಿ[1] ಗೀತವಹಾಡಿ [2]ಕೋಟಿ[2] ಶಾಸ್ತ್ರವ ಕೇಳಿ
ಪೋಟಿ [3]ಮಾನವ ತನ್ನ[3] ಆಟವನು [4]ಬಿಡದವಗೆ[4] ಶಶಿ
ಜೂಟ ಸಿದ್ಧೇಶ ದಯವಾಗು || ೨೨ ||

ಹಾಲ[5]ನೆರೆ[5]ಹಾವಿಂಗೆ ಮೇಲೆ ವಿಷವರ್ಧನವು
ಲೀಲೆಯಿಂದೆನಗೆ ಬೋಧಿ[6]ಸಲು[6]ಅದರಂತೆ
ಕಾಲಹರಸಿದ್ಧ ದಯವಾಗು || ೨೩ ||

ಸಲೆ ಓದಿ ಗಿಳಿ ತನ್ನ ಮಲವ ಭುಂಜಿಸುವಂತೆ
ಬಲು ಓದಿ ನಾನು ಮಲ ಮೂರ ಬಿಡ[7]ಲಾರೆ[7]
ಚಲುವ ಗುರುಸಿದ್ಧ ದಯವಾಗು || ೨೪ ||

ಹೊರಗೆ ವೇಷದ ಸೊಂಪು ಒಳಗೆ ರೋಷದ ಮೊಟ್ಟೆ
ಬರಿಯ ಮಾತುಗಳ [8]ಬಣಮೆಯ ಬಣಗನಿಗೆ[8]
ಪರಮ ಗುರುಸಿದ್ಧ ದಯವಾಗು || ೨೫ ||

ಹೇಮ ಕಾಮಿನಿ ಭೂಮಿ ನೀ ಮುನ್ನಲಿಕ್ಕಿದ
ತಾಮಸವೆಂದು ಅರಿಯದಜ್ಞಾನಿಗೆ
ಸ್ವಾಮಿ ಸಿದ್ಧೇಶ ದಯವಾಗು || ೨೬ ||

ಹೆಂಗಳಿಂದಾದ ಭಂಗಿ ಹಿಂಗದೆ ತಲೆಹತ್ತಿ
ಲಿಂಗವನೆ ಮರೆದು ಭಂಗ ಬಿಡುತೈದೆನೆ
ಮಂಗಳಮಯ ಸಿದ್ಧ ದಯವಾಗು || ೨೭ ||

ನೀಟ ಜವ್ವನೆಯರ ನೋಟದಾ ಸರಳಂಬು
ನಾಟಿ ನಿಜ[9]ಹೃದಯ[9]ಪಾಟಿ ಗೆಟ್ಟವನಿಗೆ
ತೋಟದ ಸಿದ್ಧೇಶ ದಯವಾಗು || ೨೮ ||

ಖುಲ್ಲ ಸತಿಯರು ಲಲ್ಲೆ ಮಾತಂಗ[10]ಳೆಂಬ[10]
[11]ಬಲ್ಮೋಹದಿಂದೆ[11] ಇರಿದೆನ್ನ ಕೊಲುತಿಹ[12]ರು[12]
ಸಲ್ಲಲಿತ ಸಿದ್ಧ ದಯವಾಗು || ೨೯ ||

ಸತಿಯಾಗಿ ಸುತರಾಗಿ ಹಿತವಪ್ಪ ತಾಯಾಗಿ
ಅತಿ ಮೋಹದಿಂದ ಹತವಾದಂತಿದೆ ಮಾಯೆ
ಸಿತಕಂಠ ಸಿದ್ಧ ದಯವಾಗು || ೩೦ ||

---

೧ ಕೊಟ್ಟೆ (ಅ) ೨ ಕೊಟ್ಟಿ (ಅ) ೩ ಮನ (ಅ) ೪ ಜಡವೆ (ಅ) ೫ ನೆರೆಯಲು (ಅ)
೬ ದವರಿಗೆ (ಬ) ೭ ಲಿಲ್ಲ (ಬ) ೮ ನುಡಿಯುವ ಪಿಸುಣನಿಗೆ (ಬ) ೯ ಹೃದಯದ (ಬ)
೧೦ ಳಿಂದ (ಬ) ೧೧ ಬಲಿಯದಿಂ (ಬ) ೧೨ ರಿ (ಅ)

ಯಾತ ತಲೆ[1]ವಾಗಿದರೆ[1]ಓತು[2]ಗುರು[2]ಭಕ್ತನೆ
ಆತೆರನಂತೆ ಎನ್ನಿರವು ಸಿದ್ಧೇಶ
ನೀತಿ ಹೀನನಿಗೆ ದಯವಾಗು || ೩೧ ||

ಇಕ್ಕಳ ಕೈಮುಗಿ[3]ಯಲದು[3],[4]ತ[4]ಕ್ಕುವುದೆ ಭೃತ್ಯತ್ವ
ತಕ್ಕಮಾನ[5]ವರಿಗೆ[5] ಸಿಕ್ಕುವುದೇ ನಿಜ [6]ಭಕ್ತಿ[6]
ಮುಕ್ಕಣ್ಣ ಸಿದ್ಧ ದಯವಾಗು || ೩೨ ||

ಒಡೆಯ ಬಂದರೆ ಕುನ್ನಿ ಬಡಿದಂತೆ ಬಾಲವನು
ಕೊಡೆದನ್ನ ನುಡಿವ ನುಡಿಯೆಲ್ಲ ಉಪಚಾರ
ಕಿಡಿಗಣ್ಣ ಸಿದ್ಧ ದಯವಾಗು || ೩೩ ||

ಹಾಡುವ ತಂತಿಗೆ ಕೂಡುವುದೆ ನಿಜದಿರದರಿವು
ನಾಡ ಮಾತುಗಳ [ನುಡಿವನು ಪಿತನಿಗೆ] ?
ರೂಢೀಶ ಸಿದ್ಧ ದಯವಾಗು || ೩೪ ||

ನವಿಲಾಡಿ ಫಲವೇನು ಶಿವಭಕ್ತಿಯಿಲ್ಲದೆ
ಅದರಂತೆ ಎನ್ನ ನಡೆನುಡಿಯು ಸಿದ್ಧೇಶ
ರವಿಕೋಟಿತೇಜ ದಯವಾಗು || ೩೫ ||

ಮುಂದಕರಿಗೆ ಸೂಕರನು ಸರಿಯಾಗಲರಿ
ಹರ ಶರಣರಡಿಗೆ ನರದೇಹಿ ನಾ ಸರಿಯೆ
ಗುರು ಸಿದ್ಧಲಿಂಗ ದಯವಾಗು || ೩೬ ||

ರಾಜಿಪ ರತ್ನಕ್ಕೆ ಗಾಜಿನ ಮಣಿ ಸರಿಯೆ
ಮೂಜಗದೊಳಗೆ ಶರಣರಿಗೆ ನಾಸರಿಯೆ
ರಾಜಧರ ಸಿದ್ಧ ದಯವಾಗು || ೩೭ ||

ಸಲೆ ಕಲ್ಪ ತರುವಿಂಗೆ ಎಲುವಾದ ಮಾರಸರಿಯೆ
ಮಲಹರನೆ ನಿಮ್ಮ ಶರಣರಿಗೆ ನಾ ಸರಿಯೆ
ಸುಲಭ ಗುರುಸಿದ್ಧ ದಯವಾಗು || ೩೮ ||

ಉತ್ತಮಾ ಗರತಿಗೆ ತೊತ್ತು ಸರಿಯಾಗುವಳೆ
ಭಕ್ತಿಯುಳ್ಳವರ ಭೃತ್ಯರಿಗೆ ನಾ ಸರಿಯೆ
ಚಿತ್ತಜ ಹರಸಿದ್ಧ ದಯವಾಗು. || ೩೯ ||

---

೧ ಬಾಗಿದಡೆ (ಬ) ೨ ಶಿವ (ಬ) ೩ ಪಡೆ (ಬ) ೪ ದ (ಬ) ೫ ವಗೆ (ಬ)
೬ ಪರವು (ಬ)

ಪರುಷಕ್ಕೆ ಪಾಷಾಣ ಸರಿಯಾಗಲರಿವುದೆ
ಹರ ಶರಣರಡಿಯಂ ಕಿರಹಿಂಗೆ ನಾ ಸರಿಯೆ
ಚರ ಲಿಂಗ ಸಿದ್ಧ ದಯಂವಾಗಂ. || ೪೦ ||

ಗುರುತನದ ಗರ್ವವನು ತೊರೆದು ಹರಶರಣರ
ಚರಣಕ್ಕೆ ನಮಿಸಿ ಮರಣವನು ಗೆಲಿದಿಪ್ಪ
ಪರಿಣತೆಯಂ ಸಿದ್ಧ ದಯವಾಗು. || ೪೧ ||

ಭಕ್ತರಿಗೆ ತೊತ್ತಾಗಿ ಭಕ್ತರ ಸೇವೆಯ ಮಾಡಿ
ಭಕ್ತರುಂಡುಳಿದ ಶೇಷವನು ಕೊಂಬ
ಭಕ್ತಿಯನೇ ಸಿದ್ಧ ದಯ [ಮಾಡು] ವಾಗು || ೪೨ ||

ಏಳೇಳು ಜನ್ಮದೊಳು ಭಾಳಲೋಚನ ನಿಮ್ಮ
ಆಳಿನಾಳಾಗಿ ಬಾಳುವ ಭಕ್ತಿಯದೊಂ
ದೇಳಿಗೆಯಂ ಸಿದ್ಧ ದಯವಾಗು. || ೪೩ ||

ಅಚ್ಚ ಶರಣರ ಮನೆಯ ಬಚ್ಚಲ ಕಲ್ಲಾಗಿ
ನಿಚ್ಚ ಮೆಟ್ಟುವರ ಪಾದುಕೆಯಾಗಿರುವ
ಇಚ್ಛೆಗೆ ಸಿದ್ಧ ದಯವಾಗು. || ೪೪ ||

ದಮ್ಮಯ್ಯ ದಯವಾಗು ನಮ್ಮಯ್ಯ ದಯವಾಗು
ನಿಮ್ಮಡಿಯ ಪಡುಗ ಪಾದುಕೆಯ ಪಿಡಿದಿರುವ
ಪೆರ್ಮೆಯೆಂಗೆ ಸಿದ್ಧ ದಯವಾಗು. || ೪೫ ||

ಯಾರು ಕಾಗೆಯ ಗುಣವನಾರೈದು ನೋಡುವರೆ [ರು]
ಮಾರಾರಿ ಎನ್ನ ಅವಗುಣವ ನೋಡುವರೆ
ಕಾರಣಿಕ ಸಿದ್ಧ ದಯವಾಗು. || ೪೬ ||

ತರುವಂರದ ಗುಣಗಳನು ಶ್ರೀಗಂಧ ನೋಡುವುದೆ
ವರ ಗುರುವೆ ಎನ್ನ ಅವಗುಣವ ನೋಡದೆ
ಕರುಣದಿ ಸಿದ್ಧ ದಯವಾಗು. || ೪೭ ||

ಹ [ಅ] ತ್ತಿಯ ಹಣ್ಣನೊಳು ಉತ್ತಮನರಸುವರೆ
ಮತ್ತೆ ಮಾನವನ ಚಿತ್ತದವಗುಣಗಳನು
ಬಿತ್ತರಿಸದೆ ಸಿದ್ಧ ದಯವಾಗು. || ೪೮ ||

ಪರುಷ ಲೋಹದ ಗುಣವನರಸುವುದೆ ಮುದ್ಗುರುವೆ
ಪರಿಪೂರ್ಣ ಜ್ಞಾನದಿರುವೆ ಎನ್ನ ಅವಗುಣವ
ನರಸದೆ ಸಿದ್ಧ ದಯವಾಗು. || ೪೯ ||

ಅಯ್ಯೋ ಗುರುರಾಯನೆ ಹುಯ್ಲಲಿಪ್ಪೆನು ನಿಮಗೆ
ಓಯೆನ್ನದೊಡನಾಯೆನ್ನಲಾಗದೆ
ಮಾಯಾರಿ ಸಿದ್ಧ ದಯವಾಗು. || ೫೦ ||

ಅರಿಯದಾ ಮುನ್ನವೆ ಅರಿಯದಂತರಸದೆ
ಅಱುಹಿ ನಿಮ್ಮಡಿಯ ಮರೆಸುವರೆ ಮದ್ಗುರುವೆ
ಮೊರೆಯಿಟ್ಟೆ ಸಿದ್ಧ ದಯವಾಗು. || ೫೧ ||

ಹುಟ್ಟು ಗುರುಡಗೆ ಕೋಲ ಕೊಟ್ಟು ಸೆಳಕೊಂಬುವರೆ
ಮುಟ್ಟಿ ಅಭಯವನು ಕೊಟ್ಟು ಕೈಬಿಟ್ಟರೆ ನಾ
ಕೆಟ್ಟೆ ಸಿದ್ಧೇಶ ದಯವಾಗು. || ೫೨ ||

ಮುನ್ನ ಜನ್ಮಂಗಳೊಳು ನಿಮ್ಮನಾ ಬಲ್ಲೆನ
ಎನ್ನ ನೀ ತಂದು ನಿಮ್ಮಂತೆ ಮಾಡಿದೆ
ಇನ್ನೇಕೆ ಸಿದ್ಧ ದಯವಾಗು. || ೫೩ ||

ಛಂದ ಗಣ ನೇಮವನು ಒಂದನರಿಯದೆ ಮನ
ಬಂದಂತೆ ನಿಮ್ಮ ಪಾಡಿದ ನಂದಿಗೆ
ಇಂದುಧರ ಸಿದ್ಧ ದಯವಾಗು. || ೫೪ ||

ಮಗುರು ಸಿದ್ಧೇಶ್ವರನ ಉರುತರದ ಸ್ತೋತ್ರವನು
ಬರೆದೋದಿ ಅರ್ಥವನು ಪೇಳಿ ಕೇಳಿದವರಿಗೆ
ಪರ ಶಿವನೊಳು ಐಕ್ಯವಿದು ಸಿದ್ಧ. || ೫೫ ||

ಸಿದ್ಧೇಶ್ವರನ ತ್ರಿವಿಧಿ ಸಮಸ್ತ ಮಂಗಳಮಃ

ನೀಲಮ್ಮನ ತ್ರಿವಿಧಿ

ಶ್ರೀ ಪರಮೇಶ್ವರನ ಅಪಾರ ಮಹಿಮೆಯನು
ರೂಪಗೊಂಡಂತೆ ನಿಂದ ನೀಲಮ್ಮ ನೀ....
[ಯಾ] ಪೊತ್ತು ಎನಗೆ ಕೃಪೆಯಾಗು || ೧ ||

ಆದಿ ಚಿತ್ಶಕ್ತಿ ನೀನಾದರೆ ರೂಪವತಿ
ಅನಾದಿ ಬಸವೇಶನರ್ಧಾಂಗಿಯಾದ
ಮಹಾದೇವಿ ನೀಲಮ್ಮ ಕೃಪೆಯಾಗು || ೨ ||

ಅಂಗೈಯ್ಯ ಲಿಂಗವೆ ಕಂಗಳ ಪುಣ್ಯವೆ
ಸಂಗನ ಬಸವೇಶನರ್ಧಾಂಗಿ ನೀಲಮ್ಮ
ಹಿಂಗದೆ ಎನಗೆ ಕೃಪೆಯಾಗು || ೩ ||

ಅಪ್ರತಿಮ ಲಿಂಗದೊಳಂ ಸೊಪ್ಪಡಗಿನಿಂದ ಎ
ಮ್ಮಪ್ಪ ಬಸವೇಶನರ್ಧಾಂಗಿ ನೀಲಮ್ಮ
ತಪ್ಪದೆ ಎನಗೆ ಕೃಪೆಯಾಗು || ೪ ||

ಅಪ್ರತಿಮನಾರಾಧಿ ಸಂಪ್ರಸಾದದ ಭೋಗಿ
ಚಿತ್ರಭೆಯ ಬೆಳಗಂ ಒಬ್ಬುಳಿಯಾದ ನೀಲಮ್ಮ
ಸತ್ರಭೆಯ ರೂಪ ಕೃಪೆಯಾಗು || ೫ ||

ಬ್ರಹ್ಮದಿಂದೊದಗಿಸಿ................
................ಮಂದಮತದ ನೀಲಮ್ಮ
ಕೆಮ್ಮನೆ ಕೆಟ್ಟೆ ಕೃಪೆಯಾಗು || ೬ ||

ಅಹಂಕಾರದಿಂದಾವೆ ಭೋಂಕನೆ ಪರವಶಜೀವ
ನಂಕಿತವನೈದಿ ಭವಭವಕೆ ಗುರಿಯಾದ
ಶಂಕರಿ ನೀಲಮ್ಮ ಕೃಪೆಯಾಗು || ೭ ||

ನಾನೆಂಬಹಂಕಾರದಿಂ ಆ ನಿಮ್ಮನರಿಯಂದ–
ಜ್ಞಾನದಿನ್ನಿಂದಂ ಮೈಮರೆದ ನೀಲಮ್ಮ
ಆನಂದರೂಪಿ ಕೃಪೆಯಾಗು || ೮ ||

ಹಲವು ಜನ್ಮಂಗಳೊಳು
ಸತಿ ನಿಮ್ಮನರಿಯದಜ್ಞಾನಿ ಕಾಮಂಖನಿಗೆ
ಸುಲಭೆ ನೀಲಮ್ಮ ಕೃಪೆಯಾಗು || ೯ ||

ಕಂದಿದಗೆ ಕರುಣದಲಿ ಬೆಂದವಗೆ ತಾಪದಲಿ
ಸಂದವಗೆ ಹಲವು ಜನ್ಮದಲಿ ನೀಲಮ್ಮ
ಕಂದಬಾರೆಂದು ತಲೆದಡಹು || ೧೦ ||

ಕರಿಗಿದಗೆ ಕಾಮದಲಿ ಕೊರಗಿದಗೆ ಕ್ರೋಧದಲಿ
ಬರದವಗನೇಕ ಭವದೊಳಗೆ ನೀಲಮ್ಮ
ಪರಿಪೂರ್ಣಭಾವೆ ಕೃಪೆಯಾಗು || ೧೧ ||

ಪಾಪಿಗೆ ಅತ್ಯಂತ ಕೋಪಿಗೆ ತಾಪದ
ಕೂಪದೊಳು ಬಿದ್ದು ಹೊರಳುವಗೆ ನೀಲಮ್ಮ
ನೀಪಾಲಿಸಿ ತೆಗೆವುದು........ || ೧೨ ||

ಹುಟ್ಟಲಾರೆನಂ ಹಲವು ಕಷ್ಟ ಪರಿಭವದೊಳಗೆ
ಕೆಟ್ಟೆನಿನ್ನೇನು ಗತಿಯೆನಗೆ ನೀಲಮ್ಮ
ದಿಟ್ಟಿಸಂ ನೀನೆನ್ನ ಕರುಣದಿ || ೧೩ ||

ಸಾಯಲಾರೆನು ಸತ್ತು ಆಯಾಸಗೊಳಲಾರೆ
ಕಾಯಂಜನ ಸುಟ್ಟು ಕಾಲನ ಕಡೆ ಮುಟ್ಟದ
ತಾಯೆ ನೀಲಮ್ಮ ಕೃಪೆಯಾಗು || ೧೪ ||

ಬೇಡವ್ವ ನೀಲಮ್ಮ ಬೇಡಿಕೊಂಬೆನು ನಿಮ್ಮ
ಕಾಡದೆ ಹಲವು ಭವಭವದಿ ನಿಮ್ಮಡಿಯಂ
ಮಾಡದೋಳೆನ್ನಿಂಬಿಡಂ || ೧೫ ||

ಹೊಲಬುದಪ್ಪಿದ ಮಂಗಂವು ಹಲವ ಹಂಬಲಿಸುತ್ತ
ನೆಲೆಗಾಣದಳಲಿ ಬಳಲ್ವಂಗೆ ನೀಲಮ್ಮ
ಸತಿ ನೊಂದೆ ಭವದಿ ಕೃಪೆಯಾಗು || ೧೬ ||

ಆರದಲಸಿಕೆಯಂಲ್ಲಿ ಗಾರಾಗಿ ಭವಭವದಿ
ಸಾರ್ದೆನು ನಿಮ್ಮ ಚರಣವನು ನೀಲಮ್ಮ
ಪಾರವೆಯ್ದಿಸು ಕರುಣಾರಿ || ೧೭ ||

ಗತಿಯುಡಿಗಿ ಮತಿಗೆಟ್ಟು ಹತಕಳಂಕಿ ಭವಭವದಿ
ಧೃತಿಗುಂದಿ ನಿಮ್ಮ ಮರೆಹೊಕ್ಕೆ ನೀಲಮ್ಮ
ಪ್ರತಿಪಾಲಿಸೆನ್ನ ಕಾಯ್ವುದು || ೧೮ ||

ಹಂಬಲಿಸಿ ಹಲಬೂತ ಕಂಬನಿಗರವೂತ
ಬೆಂಬಿಡದೆ ಭವಕಾ....ದೆ ನೀಲಮ್ಮ
ನಂಬಿದೆನು ನಿಮ್ಮ ಚರಣವನು || ೧೯ ||

ಒಲ್ಲೆ ಸಾಲೋಕ್ಯವ ಒಲ್ಲೆ ಸಾಮೀಪ್ಯವ
ಒಲ್ಲೆ ಸಾರೂಪ್ಯ ಸಾಯುಜ್ಯ ನೀಲಮ್ಮ
ಸಲ್ವು ಓಡಿದೆನ್ನ ಭವಗಳನು || ೨೦ ||

ಎಲುಚರ್ಮ ಮುಸುಕಿರ್ದ ಮಲಮೂತ್ರ ದೇಹವಿದಂ
ಸತಿನೆಲೆಯೆಂದು ನಂಬಿದಜ್ಞಾನಿಗೆ
ಚೆಲುವೆ ನೀಲಮ್ಮ ಕೃಪೆಯಾಗಿ || ೨೧ ||

ಈ ದೇಹ ಸ್ಥಿರವೆಂದು ಆದರಿಸಿ ಸರ್ವರನು
ಬೋಧಿಸಿ ಒಡಲ ಹೊರೆವುದಂ
ನಿರ್ದೇಹಿ ನೀಲಮ್ಮ ಕೃಪೆಯಾಗು || ೨೨ ||

ಶರಣಾಗತ ರಕ್ಷಾಮಣಿ ಬಿರಿದು ನಿಮಗುಂಟೆಂದು
ಮರೆಹೊಕ್ಕೆ ನಿಮ್ಮ ಮೊಲೆ(ರೆ)ಗಳನು ನೀಲಮ್ಮ
ತರಹರಿಸಲಾರೆ ತನುಗುಣದಿ ||೨೩||

ನೊಂದವಗೆ ನೀಲಮ್ಮ ತಂದಬಾರೆಂದೆತ್ತಿ
ಹಿಂದಣ ಭವಪಾಶಗಳ ಪರಿದು ನೀಲಮ್ಮ ಕೃಪೆ
ಯಿಂದೆನ್ನ ನೋಡಿ ಸಲಹುದು ||೨೪||

ಸುಟ್ಟೆನ್ನನೊಳಹೊರಗೆ ನಿಟ್ಟೂರಸಿ ಬಸಿತವನು
ಯಿಟ್ಟು....ಕೊ ನಿಮ್ಮ ಪದದೊಳಗೆ ನೀಲಮ್ಮ
ಕಷ್ಟ ಭವಭಾದೆಗಳಿಗಾರೆ ||೨೫||

ಆರಿಗೆದೂರುವೆನೆನ್ನ ಘೋರ ಭವಬಾಧೆಯನು
ಆರ ಪಾದವ ಹಿಡಿದು ಬದುಕುವೆನು ನೀಲಮ್ಮ
ತೋರು ನೀವಲ್ಲದನ್ಯವ ||೨೬||

ನೀನಲ್ಲದನ್ಯವದೇನುವನರಿಯದೆ
ಮಾನಸದಿಷ್ಟದೊಳಗಿರ್ದ ನೀಲಮ್ಮ
ಜ್ಞಾನಮಯರೂಪಿ ಕೃಪೆಯಾಗು ||೨೭||

ನಿನ್ನ ವಿನೋದಕೆ ಎನ್ನನೇ ಹುಟ್ಟಿಸಿ
ಅನ್ಯ ಭಿನ್ನವ ಮಾಡಿ ಭವಭವದಿ ನೀಲಮ್ಮ
ಬನ್ನ ಬಡಿಸುವದುಚಿತವೆ ||೨೮||

ಕಾಡಕಾಷ್ಟವ ತಂದು ಮಾಡಿದ ಬೊಂಬೆಯನು
ಆಡಿಸುವ ಸೂತ್ರಕದೊಳಗೆನ್ನ ನೀಲಮ್ಮ
ಆಡಿಸಲಾಡುವವನಿಗೆ ||೨೯||

ಕೃಪೆಯಾಗು ನೀಲಮ್ಮ ಕೃಪೆಯಾಗು ನೀಲವ್ವ
ಕೃಪೆಯಾಗು ನೀಲಯೋಚನೆ ಬಸವನ ರಾಣಿ
ಅಪರಾಧವೆನ್ನೊಳರಸಾದೆ ||೩೦||

ಎನ್ನಪರಾಧವ ಬಿನ್ನವ ಮಾಡಲು
ಪನ್ನಗಪತಿಗೆ ಅಸದಳವೆ ನೀಲಮ್ಮ
ನಿಮ್ಮ ಸೈರಣೆಗೆ ಕಡೆಯಿಲ್ಲ ||೩೧||

ಮನವೆಂಬ ಪಾಪಿಯು ಘನಲಿಂಗ ಸೇವೆಯನು
ದಿನ ಮಾಡಲೊಲ್ಲದಿನ್ನತಿ ನೀಲಮ್ಮ
ಜಿನುಗುತಿದೆ ಅನ್ಯ ವಿಷಯಕ್ಕೆ ||೩೨||

ಬಿಡದು ಮಲತ್ರವಯದ ಹಿಡಿಯಂದು ವೈರಾಗ್ಯವ
ತೊಡೆಯದು ದುರಿತ ದುರ್ಗುಣವ ನೀಲಮ್ಮ
ಕಡುನೊಂದೆ ಮನದಿ ಕೃಪೆಯಾಗು || ೩೩ ||

ಮನವು ನಿಮ್ಮಯ ಪಾದ ಬನಜದೊಳಿರುತಿರಲು
ಘನಭೋಗ ಮೋಕ್ಷಗಳನೊಲ್ಲೆ ನೀಲಮ್ಮ
ಕನಸಿನೊಳೊಮ್ಮೆ ನೇನೆಯನು || ೩೪ ||

ನಡೆವಲ್ಲಿ ನುಡಿವಲ್ಲಿ ಕೊಡುವಲ್ಲಿ ಕೊಂಬಲ್ಲಿ
ಹಿಡಿವಲ್ಲಿ ಪ್ರಾಣವ ಬಿಡುವಲ್ಲಿ ನೀಲಮ್ಮ
ಕೊಡು ನಿಮ್ಮ ನೆನಹುನನುದಿನ || ೩೫ ||

ಸಾಲದೆ ನಿಮಗಿನ್ನು ಮೇಲಪ್ಪ ಲೀಲೆಯೀ
ಬಾಲಕರೊಡನೆ ಸರಸವೆ ನೀಲಮ್ಮ
ಕಾಲ ವಿಧ್ವಂಶಿ ಕೃಪೆಯಾಗು || ೩೬ ||

ಕರುಣಿಸು ನೀಲಮ್ಮ ವರವಿಪ್ಪದೊಳ ಭಾವ
ಕರುಣ ಮನಕರೆದಿ ಪರಸ್ವಯುವನರಿಯದೊಂ
ದಿರವೆ ನೀಲಮ್ಮ ಕೃಪೆಯಾಗು || ೩೭ ||

ಅಂಗೈಯ್ಯ ಲಿಂಗದಿ ಕಂಗಳಮನ ಮುಟ್ಟಿ
ಹಿಂಗದಿ ಪ್ರಾಣಪರವಶವಾದ ಪರಮು ಚಿ
ದಂಗನೆ ನೀಲಮ್ಮ ಕೃಪೆಯಾಗು || ೩೮ ||

ಆವಾಗ ನಿಮ್ಮಡಿಯದಾವರೆಯೊಳಗೆನ್ನ
ಭಾವಮನ ನಿಂದಡದು ಸಾಕು ನೀಲಮ್ಮ
ಆವ ಫಲಪದವಿಗಳನೊಲ್ಲೆ || ೩೯ ||

ಎನ್ನ ಹೃತ್ಕಮಲದಿ ನಿಮ್ಮ ಶ್ರೀ ಚರಣದ
ಉನ್ನತ ಮುದ್ರೆಗಳನೊತ್ತು ನೀಲಮ್ಮ
ಯಿನ್ನಾವ ಮೋಕ್ಷಗಳನೊಲ್ಲೆ || ೪೦ ||

ಇಂದೆನ್ನ ಕನಸಿನೊಳು ಬಂದೆನೆಗೆ ನೀಲಮ್ಮ
ಕಂದ ನೀನಂಜದಿರುವೆಂದು ಅಭಯು ಕರ
ದಿಂದೆತ್ತಿ ಸಲಹುವುದು || ೪೧ ||

ಎನ್ನಾತ್ಮಯುನ್ನಸುವೆ ಯುನ್ನ ಚೈತನ್ಯವೆ
ಯುನ್ನಯ ಪ್ರಾಣದುನ್ನತಿಯು ನೀಲಮ್ಮ ಪ್ರ
ಪನ್ನೆ ನೀಯನಿಗೆ ಕೃಪೆಯಾಗು || ೪೨ ||

ಭಾವವುನಕರಣದೊಳು ಶೀವಿ ಲಿಂಗದೊಳೊರಿ
ಸಾವಧಾನದೊಳು ಸಂದು ಸಂಶಯುವಳಿದ
ಭಾವೆ ನೀಲವ್ಮ್ಮ ಕೃಪೆಯಾಗು ॥ ೪೩ ॥

ತನುವ ಗುರುವಿಗೆ ಕೊಟ್ಟು ಮನದ ಲಿಂಗದೊಳಿಟ್ಟು
ಧನವ ಜಂಗವುಂಕೆ ಸವೆದ ಪ್ರಸಾದದ
ಘನವೆ ನೀಲವ್ಮ್ಮ ಕೃಪೆಯಾಗು ॥ ೪೪ ॥

ಲಿಂಗದೊಳು ಸಂಪನ್ನೆ ಜಂಗವುದೊಳು ಅತಿ ಪ್ರೇವಿು
ಲಿಂಗಜಂಗವುದ ಸುಪ್ರಸಾದದ ಭೋಗೆ ಚಿ
ದಂಗನೆ ನೀಲವ್ಮ್ಮ ಕೃಪೆಯಾಗು ॥ ೪೫ ॥

ಭಕ್ತಿಜ್ಞಾನವೆ ಭಾವ ನಿತ್ಯ ಸತ್ಯವೆ ವುನ
ವುತ್ತೆ ವೈರಾಗ್ಯ ಕರಣದೊಳಳವಟ್ಟ
ಕರ್ತೃ ನೀಲವ್ಮ್ಮ ಕೃಪೆಯಾಗು ॥ ೪೬ ॥

ಪರಿಣಾವುದ ಪಾಲ್ಗಡತಿ ಪರಿಪೂರ್ಣ ಬ್ರಹ್ಮವೆ
ಪರವು ನಿಜ ಪದದಲಂಕಾರವೆ ನೀಲವ್ಮ್ಮ
ಶರಣ ಸಂಪನ್ನೆ ಕೃಪೆಯಾಗು ॥ ೪೭ ॥

ಕಡಲೆ ಕಾರುಣ್ಯದ ಒಡಲೆ ಪ್ರರಬ್ರಹ್ಮದ
ಕಡವರವೆ ಶರಣ ಸಂತತಿಗೆ ನೀಲವ್ಮ್ಮ
ಸಡುಸ್ಥಲ ರೂಪಿ ಕೃಪೆಯಾಗು ॥ ೪೮ ॥

ತ್ರಾಹಿ ಜಗನ್ಮಾತೆ ತ್ರಾಹಿ ಜಗದ್ಭರಿತೆ
ತ್ರಾಹಿಯುನ್ನೋತ ಅಧಿದೈವಿ ನೀಲವ್ಮ್ಮ
ತ್ರಾಹಿವೂಂ ಪಾಹಿ ಕೃಪೆಯಾಗು ॥ ೪೯ ॥

ಶರಣು ರಕ್ಷಾವುಣಿಯೆ ಶರಣು ಪರುಷದ ಕಣಿಯೆ
ಶರಣು ಶರಣಾಗ್ರಗಣಿ ತಾಯೆ ನೀಲವ್ಮ್ಮ
ಶರಣು ಶರಣಾರ್ಥಿ ಸಲಹೆನ್ನ ॥ ೫೦ ॥

ಉರಿವುಂಡ ಕರ್ಪುರದ ತೆರನರಿಯುಂದಿಪ್ಪಂತೆ
ಹರಣ ನಿವ್ಮೊಳಗೆ ಬೆರಸಿ ಭೇದವನಳಿದ
ವರವೆ ನೀಲವ್ಮ್ಮ ಕೃಪೆಯಾಗು ॥ ೫೧ ॥

ಚಂಪಕ ಕುಸುವುದ ಸುಗಂಪಿಗೆರಗಿದಳಿ
ತಾಪರವರಿಯುದುಂವದಿಲೆ ನೀಲವ್ಮ್ಮ
ಸೊಂಪಿಸಿಕೊಡು ನಿನ್ನೊಳೈಕ್ಯವ ॥ ೫೨ ॥

ಉಪ್ಪಿನ ಪೊಟ್ಟಣವನು ಅಪ್ಪುವಿನೊಳಿಟ್ಟಂತೆ
ತಪ್ಪದೆ ನಿನ್ನೊಳೈಕ್ಯವನು ನೀಲಮ್ಮ
ಕರ್ಪೂರ ಗಂಧಿ ಕೃಪೆಯಾಗು ‖ ೫೩ ‖

ಕಡಲೊಳಗೆ ವಾರಿ ಶಿಲೆ ಪೊಡವಿಯೊಳಗೆ ಪಾಂಸ
ಸೊಡರೊಳಗೆ ಬೆರೆದ ಹಿಮದಂತೆ ನೀಲಮ್ಮ
ಕೊಡು ನಿಮ್ಮೊಳೆನಗೆ ಐಕ್ಯವ ‖ ೫೪ ‖

ಭೂತ ಸೋಂಕಿದ ಗುಣವಿಲ್ಲ ಆತ್ಮನೇತ ಗುಣವಿಲ್ಲ
ದಾ ತೆರನಂತೆ ನಿಮ್ಮೊಳೈಕ್ಯವ ಜಗ
ನ್ಮಾತೆ ನೀಲಮ್ಮ ಕೃಪೆಯಾಗು ‖ ೫೫ ‖

ನೀಲಮ್ಮನ ಸ್ತೋತ್ರವನು ಲೀಲೆಯಿಂದೋದಿದರ್ಗೆ
ಮೇಲೆ ಅರ್ಥವನು ಪೇಳೆ ಕೇಳಿದವರಿಗೆ
ಶೂಲಿಯೊಳೈಕ್ಯವಿದು ಸಿದ್ಧ ‖ ೫೬ ‖

ನೀಲಮ್ಮನ ತ್ರಿವಿಧಿ ಮಂಗಳ ಮಹಾ ಶ್ರೀ

ಅನ್ಯಭಾಷಾ ಬೋಧನೆ:
೧. ವ್ಯಾಕರಣ-ಭಾಷಾಂತರ ಪದ್ಧತಿ

ವಿಲ್ಯಂ ಮಾಡ್ತಾ

ಅನ್ಯಭಾಷಾ ಬೋಧನೆ ಭಾಷೆಯಷ್ಟು ಹಳೆಯದು, ಆದರೆ ಅದಕ್ಕೆ ರೂಪಿಸಿಕೊಂಡ ಭಾಷಾಬೋಧನ ಪದ್ಧತಿಗಳು ಅಷ್ಟು ಪ್ರಾಚೀನವಾಗಲಾರವು. ಆದರೂ ಈ ಪದ್ಧತಿಗಳಲ್ಲಿ ಅತ್ಯಂತ ಪ್ರಾಚೀನವಾದುದು ವ್ಯಾಕರಣ–ಭಾಷಾಂತರ ಪದ್ಧತಿ (Grammar Translation Method).

ಭಾರತದಲ್ಲಿ ಸಂಸ್ಕೃತ ಭಾಷೆಯನ್ನು ಹೆಚ್ಚು ಕಡಿಮೆ ಇದೇ ಪದ್ಧತಿಯ ಮೂಲಕ ಕಲಿಸುತ್ತಾ ಬಂದಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿಯೂ ಭಾಷಾಬೋಧನ ಕ್ರಮ ಇದೇ ರೀತಿಯದಾಗಿತ್ತು. ಮೊನ್ನೆಮೊನ್ನೆಯವರೆಗೆ ಅಂದರೆ ಸುಮಾರು ೧೮ ನೆಯ ಶತಮಾನದ ವರೆಗೆ ಭಾಷಾ ಬೋಧನ ಪದ್ಧತಿಯೆಂದರೆ ಈ ವ್ಯಾಕರಣ–ಭಾಷಾಂತರ ಪದ್ಧತಿಯೇ.

ಭಾಷೆಯನ್ನು ಕಲಿಸುವಲ್ಲಿ ಆ ಭಾಷೆಯ ವ್ಯಾಕರಣವನ್ನು ಅದರ ಪರಿಸರದಿಂದ ಬೇರ್ಪಡಿಸುವುದು; ರೂಪಕ್ಕಿಂತ ಅರ್ಥಕ್ಕೆ ಪ್ರಾಧಾನ್ಯತೆ ಕೊಡುವುದು; ಬೇರೊಂದು ಭಾಷೆಯ ವ್ಯಾಕರಣದ ಮಾದರಿಯಲ್ಲಿ ಇನ್ನೊಂದು ಭಾಷೆಯ ವ್ಯಾಕರಣವನ್ನು ಕಲ್ಪಿಸುವುದು; ವಿಶಿಷ್ಟತೆ ಕಂಡುಬಂದಲ್ಲಿ ಅವುಗಳನ್ನು ಅಪವಾದಗಳೆಂದು ಪರಿಗಣಿಸುವುದು; ವ್ಯಾಕರಣವನ್ನು ಕಂಠಪಾಠ ಮಾಡಿಸುವುದು; ಶಬ್ದಶಃ ಭಾಷಾಂತರದ ಮೂಲಕ ವಿದ್ಯಾರ್ಥಿಗಳನ್ನು ಭಾಷೆಯಲ್ಲಿ ಪಳಗಿಸುವುದು—ಈ ವೈಶಿಷ್ಟ್ಯಗಳುಳ್ಳ ಭಾಷಾಬೋಧನ ಪದ್ಧತಿಯೇ ವ್ಯಾಕರಣ – ಭಾಷಾಂತರ ಪದ್ಧತಿಯೆಂದು ಸ್ಥೂಲವಾಗಿ ಹೇಳಬಹುದು.

ವ್ಯಾಕರಣ – ಭಾಷಾಂತರ ಪದ್ಧತಿಯಲ್ಲಿ ಹೆಸರೇ ಸೂಚಿಸುವಂತೆ ವ್ಯಾಕರಣಕ್ಕೆ ಹಾಗೂ ಭಾಷಾಂತರಕ್ಕೆ ಹೆಚ್ಚಿನ ಮಹತ್ವ. ಈ ಪದ್ಧತಿ ಭಾಷೆಯ ಮಡಿವಂತಿಕೆಗೆ ವಿಶೇಷ ಗಮನನೀಡುತ್ತದೆ. ಆಡುಮಾತು ನಿಶ್ಚಿತವಲ್ಲದ್ದು; ಬರಹ ನಿಶ್ಚಿತ (Verba volant, scripta manent) ಎಂದು ನಂಬಿಕೊಂಡು ಗ್ರಾಂಥಿಕಭಾಷೆಗೆ ಪ್ರಾಮುಖ್ಯತೆಯನ್ನೀಯುತ್ತದೆ ಈ ಪದ್ಧತಿ.

ಹಳೆಯ ಈ ಪದ್ಧತಿ ಪ್ರಕಾರ ಬರಹ ಶುದ್ಧಿಗೆ ಹೆಚ್ಚಿನ ಗಮನ ಕೊಡಬೇಕಾದುದರಿಂದ ಎಷ್ಟೋಸಲ ಒಂದು ಭಾಷೆಯ ಧ್ವನಿಮಾತ್ಮಕ ಮತ್ತು ವ್ಯಾಕರಣಾತ್ಮಕ ವೈಶಿಷ್ಟ್ಯಗಳಿಗೆ

ಇಲ್ಲಿ ಪ್ರಾಧಾನ್ಯತೆಯನ್ನು ಕೊಡಲಾಗುವುದಿಲ್ಲ. ವ್ಯಾಕರಣದಲ್ಲಿ ವಿದ್ಯಾರ್ಥಿಗಳನ್ನು ಪಳಗಿಸಲು ಇಲ್ಲಿ ಭಾಷಾಂತರವನ್ನು ಬಳಸಲಾಗುತ್ತದೆ.

ಭಾಷಾಂತರದಲ್ಲಿ ಎರಡು ವಿಧ. ಒಂದು, ಅನ್ಯಭಾಷೆಯಿಂದ ಸ್ವಭಾಷೆಗೆ; ಎರಡು, ಸ್ವಭಾಷೆಯಿಂದ ಅನ್ಯಭಾಷೆಗೆ. ಇವುಗಳಿಗೆ ಹಿನ್ನೆಲೆ ಕಲಿತ ವ್ಯಾಕರಣ. ಇದು ಭಾಷೆಯ ವಸ್ತುನಿಷ್ಠ ವಿಶ್ಲೇಷಣೆಯಿಂದ ಪಡೆದುದಲ್ಲ; ಯಾವುದೋ ಒಂದು ಶಿಷ್ಟ ಭಾಷೆಯ ವ್ಯಾಕರಣದ ಅನುಕರಣೆ! ಹೀಗಾಗಿ ಎಷ್ಟೋ ಸಲ ಭಾಷಾಂತರಿಸಬೇಕಾದ ವಾಕ್ಯಗಳಿಗೆ ಸನ್ನಿವೇಶಗಳ ಹಿನ್ನೆಲೆ ಇರುವುದಿಲ್ಲ. ಭಾಷಾಂತರವು ಯಥಾವತ್ತಾಗಿರುತ್ತದೆ. ಭಾಷಾಂತರಿಸುವುದಕ್ಕೆ ವಿಸ್ತಾರವಾದ ಶಬ್ದ ಸಂಪತ್ತು ಅಗತ್ಯ. ಇದಕ್ಕಾಗಿ ವಿದ್ಯಾರ್ಥಿಗಳು ನಿಘಂಟನ್ನು ಕಂಠಪಾಠ ಮಾಡಬೇಕಾಗುತ್ತದೆ!!

ಬರಹದ ಭಾಷೆಯನ್ನು ಮಾತ್ರ ಕಲಿಸುವುದು ಈ ಪದ್ಧತಿಯ ಉದ್ದೇಶವಾದರೆ ಇದು ಸಾಧುವೆಂದು ಹೇಳಬಹುದು. ಆದರೆ ಆಡು ಮಾತನ್ನು ಕಲಿಸುವಲ್ಲಿ ಪ್ರಸ್ತುತ ಪದ್ಧತಿ ನಿಷ್ಪ್ರಯೋಜಕ. ಏಕೆಂದರೆ ಇಲ್ಲಿ ಆಘಾತ (Stress) ಏರಿಳಿತ (Intonation), ವಿರಾಮ (Juncture) ಮೊದಲಾದ ಮೌಖಿಕ ವಿಷಯಗಳ (Oral features) ಕಡೆ ಉದಾಸೀನ ತೋರಿಸಲಾಗುತ್ತದೆ. ಕಾರಣ ಈ ಪದ್ಧತಿಯ ಮೂಲಕ ಅನ್ಯ ಭಾಷೆಯನ್ನು ಕಲಿತವ ಆ ಭಾಷೆಯಲ್ಲಿ ಯಶಸ್ವಿಯಾಗಿ ವ್ಯವಹರಿಸುವುದು ಕಠಿಣ. ವ್ಯಾಕರಣ ಸೂತ್ರಗಳನ್ನು ಕಲಿಸುವ ಭರದಲ್ಲಿ ಸಮಕಾಲೀನ ರೂಪಗಳಿಗೆ ಮಹತ್ವವನ್ನು ಕೊಡದೆ ಪ್ರಾಚೀನ ಮತ್ತು 'ಶಿಷ್ಟ'ವೆಂದು ಪರಿಗಣಿಸಲ್ಪಟ್ಟ ರೂಪಗಳಿಗೆ ಪ್ರಾಧಾನ್ಯತೆಯನ್ನು ಕೊಡುವುದರಿಂದ ಈ ಪದ್ಧತಿಯ ಮೂಲಕ ಕಲಿತ ಅನ್ಯಭಾಷೆ ಕೃತ್ರಿಮ ರೂಪದಲ್ಲಿ ಕೈವಶವಾಗುತ್ತದೆ.

ವ್ಯಾಕರಣ – ಭಾಷಾಂತರ ಪದ್ಧತಿಯಿಂದಾಗಿ ಅನ್ಯ ಭಾಷಾ ವಿದ್ಯಾರ್ಥಿಯಲ್ಲಿ ರಚನಾತ್ಮಕ ಹಾಗೂ ಧ್ವನಿಮಾತ್ಮಕ ಭಾಷಾ ಸಮಸ್ಯಾ ಕ್ಷೇತ್ರದ ಕಂದರ ಸದಾ ಉಳಿಯುತ್ತದೆ. ಯಾಕೆಂದರೆ ಈ ಪದ್ಧತಿಯಲ್ಲಿ ಸ್ವ ಹಾಗೂ ಅನ್ಯ ಭಾಷೆಗಳ ತುಲನಾತ್ಮಕ ಅಭ್ಯಾಸ ನಡೆಯುವುದಿಲ್ಲ. ಉದಾಹರಣೆಗೆ ಇಂಗ್ಲೀಷ್ ಭಾಷೆಯನ್ನು ಕಲಿಸುವಲ್ಲಿ ಅಲ್ಲಿಯ ವಿಶಿಷ್ಟ ಧ್ವನಿಮಾಗಳಾದ / θ /, / ð / ಗಳ ಸ್ಪಷ್ಟ ವಿವರಣೆ, ಉತ್ಪತ್ತಿಯ ವಿಧಾನ ಮುಂತಾದುವುಗಳನ್ನು ತಿಳಿಸಿ ಅವುಗಳಿಗೆ ಸಾಮ್ಯವಾಗಿರುವ ಕನ್ನಡದ / t / ಹಾಗೂ / d / ಗಳನ್ನು ಪರಿಚಯಿಸಬೇಕು. ಅದೇ ರೀತಿ / θ / ಹಾಗೂ / t /, / ð / ಹಾಗೂ / d / ಇವುಗಳೊಳಗಿನ ಸಾಮ್ಯವೈಷಮ್ಯಗಳನ್ನು ತಿಳಿಸದಿದ್ದರೆ ಇಂಗ್ಲೀಷ್ ಉಚ್ಚಾರವನ್ನು ಕನ್ನಡ ವಿದ್ಯಾರ್ಥಿ ಸರಿಯಾಗಿ ಕಲಿಯಲಾರ. ಕನ್ನಡದಲ್ಲಿರುವ / ḍ / ಇಂಗ್ಲೀಷಿನಲ್ಲಿಲ್ಲ; ಅಲ್ಲಿ / d / ಇದೆ. ಈ ವಿಷಯವನ್ನು ತಿಳಿಸದಿದ್ದರೆ ಕನ್ನಡಿಗ ಇಂಗ್ಲೀಷಿನಲ್ಲಿಯೂ dog ಮೊದಲಾದ ಪದಗಳಿಗೆ / ḍ / ವನ್ನೇ ಗ್ರಹಿಸುತ್ತಾನೆ. ಇಂತಹ ಸೂಕ್ಷ್ಮ ಪರಿಶೀಲನೆಗಳಿಗೆ ಈ ಪದ್ಧತಿಯಲ್ಲಿ ಅವಕಾಶವಿಲ್ಲ.

ಕನ್ನಡವಲ್ಲಿ ಕಮಲಜ, ಕರಿಗೊರಲ, ಮುಕ್ಕಣ್ಣ ಇವುಗಳ ಅರ್ಥ ನಾವು ತಿಳಿಯಬಲ್ಲೆವು. ಆದರೆ ಅದನ್ನೇ Lotus-born, Black-throated, Three-eyed ಎಂದು ಭಾಷಾಂತರಿಸಿದರೆ ಪರರಿಗೆ ಅರ್ಥ ತಿಳಿಯದು. ಒಂದು ಭಾಷೆಯ ಆಕೃತಿಮಾ ರಚನೆ ಇನ್ನೊಂದು ಭಾಷೆಗೆ ಒಗ್ಗದು. ಕಾರಣ ಇಂತಹ ರಚನೆಗಳು ಎಲ್ಲ ಭಾಷೆಗಳಲ್ಲಿ ಇರಬೇಕಾಗಿಲ್ಲ. Rama Killed Ravana ಎಂಬ ವಾಕ್ಯದಲ್ಲಿ ಪದ ಸ್ಥಾನದಿಂದ ಕರ್ತೃ, ಕರ್ಮರೂಪಗಳ ಅರಿವಾಗುತ್ತದೆ, ಆದರೆ ಕನ್ನಡದಲ್ಲಿ ಅದು ಪ್ರತ್ಯಯೀಕರಣದಿಂದಾಗಿ ಸೂಚಿಸಲಾಗುತ್ತದೆ. ಇಂತಹ ವ್ಯಾಕರಣ ವೈಶಿಷ್ಟ್ಯಗಳ ಜ್ಞಾನವನ್ನು ಕೊಡದಿದ್ದರೆ ಆಂಗ್ಲ ವಿದ್ಯಾರ್ಥಿಯು ಕನ್ನಡದಲ್ಲಿ 'ರಾಮು ಕೊಂದನು ರಾವಣ' ಎಂಬ ವಾಕ್ಯವನ್ನು ರಚಿಸಿದರೆ ನಾವು ಆಶ್ಚರ್ಯಪಡಬೇಕಾಗಿಲ್ಲ.

ವ್ಯಾಕರಣ – ಭಾಷಾಂತರ ಪದ್ಧತಿಯಿಂದಾಗಿ ಅನ್ಯಭಾಷಾ ಓಟವನ್ನು ವಿದ್ಯಾರ್ಥಿಯು ತೀವ್ರ ಸಾಧಿಸಲಾರ. ಪ್ರಸ್ತುತ ಪದ್ಧತಿಯನ್ನು ಅವಲಂಬಿಸಿ ಹಲವಾರು ವರ್ಷ ಇಂಗ್ಲೀಷನ್ನು ಕಲಿಸಿದರೂ ಅದರ ಓಟದ ರೀತಿ ವಿದ್ಯಾರ್ಥಿಗೆ ಬರುವುದು ಅತಿ ವಿರಳ ವೆಂಬುದು ಸರ್ವವಿದಿತ.

ಸಂಸ್ಕೃತ, ಲ್ಯಾಟಿನ್ ಮೊದಲಾದ ಭಾಷೆಗಳನ್ನು ಮಾದರಿಯನ್ನಾಗಿಟ್ಟುಕೊಂಡು ಇನ್ನೊಂದು ಭಾಷೆಯನ್ನು ಕಲಿಸುವುದರಿಂದ ಒಂದು ಸಮಾಜದ ಅಂಗವಾಗಿ ಹುಟ್ಟಿ ಬೆಳೆಯುವ ಭಾಷೆಯ ಗುಣಧರ್ಮಗಳ ಅರಿವು ಸಾಧ್ಯವಾಗಲಾರದು. ಕನ್ನಡವನ್ನು ಕಲಿಸು ವಲ್ಲಿ ಬೇರೆ ಭಾಷೆಯನ್ನು ಮಾದರಿಯನ್ನಾಗಿಟ್ಟುಕೊಂಡರೆ ಕನ್ನಡಕ್ಕೆ ಸಹಜವಾದ /ɘ,ɔ,ɛ/ ಮೊದಲಾದ ಧ್ವನಿಮಾಗಳ ವಿಚಾರಗಳನ್ನು ತಿಳಿಸಲು ಸಾಧ್ಯವೇ ಇಲ್ಲ. ಕಾರಣ, ಭಾಷೆ ಯನ್ನು ವಸ್ತುನಿಷ್ಠ ದೃಷ್ಟಿಯಿಂದ ಕಲಿಸುವುದು ಇಲ್ಲಿ ದುಸ್ಸಾಧ್ಯವೆಂದೆನಿಸುತ್ತದೆ.

ಈ ಹಳೆಯ ಭಾಷಾ ಅಧ್ಯಾಪನ ಪದ್ಧತಿಯು ಭಾಷಾಘಟಕಗಳ ವ್ಯಾಕರಣ ಕ್ರಿಯೆಯನ್ನು ಗಮನಿಸದೆ ಶಬ್ದಾರ್ಥವನ್ನು ಮಾತ್ರ ಗಮನಿಸುವುದರಿಂದ ವ್ಯಾಕರಣ ಘಟಕಗಳ ವ್ಯಾಖ್ಯೆಯನ್ನು ಕೊಡುವಲ್ಲಿ ಬಹಳ ಅಶಾಸ್ತ್ರೀಯತೆಯನ್ನು ತೋರಿಸುತ್ತವೆ. ಉದಾಹರಣೆಗೆ ಶಬ್ದಮಣಿದರ್ಪಣದಲ್ಲಿ ಕೊಟ್ಟ ಸಮಾಸಗಳ ಆದರಲ್ಲಿಯೂ ಗಮಕ ಸಮಾಸದ ವ್ಯಾಖ್ಯೆಯನ್ನು ಗಮನಿಸಬಹುದು.

ಒಂದು ಭಾಷೆಯಲ್ಲಿ ಪ್ರಭಾವಪೂರ್ಣವಾಗಿ, ಸಂಪೂರ್ಣವಾಗಿ ಸಂಪರ್ಕ ವ್ಯವಹಾರ ಗಳನ್ನು ನಡೆಯಿಸಬೇಕಾದರೆ ಶ್ರವಣ (Listening) ಗ್ರಹಣ (Understanding) ಪಠನ (Reading) ಬರಹ (Writing) — ಈ ಎಲ್ಲ ಕೌಶಲ್ಯಗಳು ಬೆಳೆಯ ಬೇಕು. ಆದರೆ ಪ್ರಸ್ತುತ ಪದ್ಧತಿಯ ಸಹಾಯದಿಂದ ಅಂತಹ ಕೌಶಲ್ಯಗಳಾಗಲೀ ಅನ್ಯಭಾಷೆಯಲ್ಲಿ ಚಿಂತನಮಂಥನ ಮಾಡುವ, ನಿರರ್ಗಳವಾಗಿ ಮಾತಾಡುವ ರೀತಿ ಯಾಗಲೀ ಲಭ್ಯವಾಗದು. ಒಟ್ಟಿನಲ್ಲಿ ವ್ಯಾಕರಣ–ಭಾಷಾಂತರ ಪದ್ಧತಿಯು ಅನ್ಯ ಭಾಷಾಬೋಧನೆಯಲ್ಲಿ ನಿಷ್ಪ್ರಯೋಜಕವೇ ಸರಿ.

(ಮುಂದುವರಿಯುವುದು)

ಒರೆಗಲ್ಲು

೧. ಓವನಿಗೆ

'ಓವನಿಗೆ' ಪ್ರಾಚೀನ ಕರ್ನಾಟಕದ ಒಂದು ಜಾನಪದ ಸಾಹಿತ್ಯ ಪ್ರಕಾರ. ಹಂಪ್ಮಾಚ ಶಾಸನದ

> ಐವೇಟ್ಟುವದೊ ಶಿವಮಾರ ಮ ।
> ಹೀವಳಯಾಧಿಪನ ಸುಭಗ ಕವಿತಾಗುಣಮಂ ।
> ಭೂವಳಯದೊಳ್ ಗಜಾಷ್ಟಕ ।
> ಮೋವನಿಗೆಯುಮೊನಕೆವಾಡುಮಾದುದೆ ಪೇೞ್ಗುಂ ॥೧

ಎಂಬ ಪದ್ಯದಲ್ಲಿ ಒನಕೆವಾಡಿನ ಜೊತೆ ಈ ಪ್ರಕಾರದ ಉಲ್ಲೇಖ ಬರುತ್ತದೆ. ಇದರ ಬಗೆಗೆ ಡಾ. ಮುಗಳಿ, ಶ್ರೀ ಪ್ರ. ಗೋ. ಕುಲಕರ್ಣಿ ಮೊದಲಾದವರು ಅಲ್ಲಲ್ಲಿ ವಿವೇಚನೆ ನೀಡಿದ್ದಾರೆ. ಅದೆಲ್ಲವನ್ನೂ ಹಿನ್ನೆಲೆಯಾಗಿಟ್ಟುಕೊಂಡು "ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ" ಕೃತಿಯಲ್ಲಿ "ತಥಾ ಮಹಾರಾಷ್ಟ್ರೇಷು ಯೋಷಿದ್ಭಿಃ ಓವೀ ಗೇಯಾತಂ ಕಂಡನೇ"೧A ಅಂದರೆ ಮಹಾರಾಷ್ಟ್ರ (ಕರ್ನಾಟಕ ?)ದ ಸ್ತ್ರೀಯರು ಕಂಡನ ಸಮಯದಲ್ಲಿ ಓವಿಯನ್ನು ಹಾಡುತ್ತಾರೆ ಎಂದು ಹೇಳಲಾಗಿದೆ. ಕಂಡನವೆಂದರ ಕುಟ್ಟುವಿಕೆ ಅದಕ್ಕಾಗಿ 'ಓವಿ', 'ಓವನಿಗೆ' ಎಂದರೆ 'ಕುಟ್ಟುವ ಹಾಡು' ಎಂದು ಹೇಳಬೇಕಾಗುತ್ತದೆ. ಆದರೆ 'ಬೀಸುವಾಗ ಓವಿ ನೆನಪಾಗುತ್ತದೆ' ಎಂಬ ಮರಾಠಿ ಗಾದೆಯನ್ನವಲಂಬಿಸಿ ಡಾ. ಮುಗಳಿಯವರು ಓವಿ, ಓವನಿಗೆ ಎಂದರೆ 'ಬೀಸುವ ಹಾಡು' ಎಂದು ಊಹಿಸಿದ್ದಾರೆ.

ಪ್ರ. ಗೋ. ಕುಲಕರ್ಣಿಯವರು 'ಕಂಡನ' ಎಂಬ ಪದಕ್ಕೆ ಕುಟ್ಟು, ಮೊರದಿಂದ ಕೇರು ಎಂದು ಎರಡು ಅರ್ಥಗಳಿವೆ; ಅದಕ್ಕಾಗಿ ಓವಿಯನ್ನು ಕೇರುವಾಗಲೂ ಹಾಡಬಹುದೆನ್ನುತ್ತ ಓವಸೆ>ಒಸೆ ಎಂದಾಗುತ್ತದೆ; 'ಒಸೆ ಶೂರ್ಪಕರಣೀ' ಎಂದು ಕೇಶಿರಾಜನ ಮತ ಎಂಬ ಮಾತುಗಳನ್ನು ಆಧಾರವಾಗಿ ಒಡಿಯುತ್ತಾರೆ.

ಒಟ್ಟಿನಲ್ಲಿ ಓವನಿಗೆ ಎಂದರೆ ಕುಟ್ಟುವ ಹಾಡು, ಬೀಸುವ ಹಾಡು, ಕೇರುವ ಹಾಡು, ಎಂದು ಈವರೆಗ ಅರ್ಥ ಮಾಡಲಾಗಿದೆ. ಓವನಿಗೆಯೆಂಬ ಪದ ಈ ಶಾಸನ ಬಿಟ್ಟರೆ ಯಾವ ಕನ್ನಡ ಕೃತಿಯಲ್ಲಿಯೂ ಕಂಡುಬರುವುದಿಲ್ಲ"೨ ಎಂದು ಹೇಳಿ ನಿಂತಂ ಬಿಡಲಾಗಿತ್ತು. ಆದರೆ ಇತ್ತೀಚೆಗೆ ಆಚಣ್ಣನ ವರ್ಧಮಾನ ಪುರಾಣದಲ್ಲಿ ಈ ಪದಬಳಕೆಯಾದ ವಿಷಯಂ ನನ್ನ ಗಮನಕ್ಕೆ ಬಂದಿತು.

---

೧. E. C. VIII ನಗರ ೩೫. ಹುಮ್ಮಚ

೧A. ಮಾನಸೋಲ್ಲಾಸ ೪-೧೬-೫೫೩

ಜ್ವಲನಜಟಿ ಖೇಚರನ ಮಗಳು ಸ್ವಯಂಪ್ರಭೆ ಪ್ರಜಾಪತಿ ಮಹಾರಾಜನ ಮಗ ತ್ರಿಪೃಷ್ಟನ ವಿರಹದಲ್ಲಿ ಕೊರಗುವ ಸಂದರ್ಭ; ಆಗ ಗೆಳತಿಯರೆಲ್ಲ ತ್ರಿಪೃಷ್ಟನ ಗುಣ ವರ್ಣನೆ ಮಾಡುತ್ತ,

> ಆಡುವ ಮುಗ್ಧಬಾಳಕಿಯರುಂ ನುಡಿಜಾಣೆಯರಾದರೀಗಳಿಂ ।
> ಪೋಡದ ನಿನ್ನ ಮಾತುಗಳನಾಡಿಯೆ; ಕೇಳಿಸಲಾವ ಮುಯ್ಯೊಳಂ ।
> ಹಾಡುವರಾದಗೋ[=ರೋ]ವನಿಗೆವಾಡುವರುಂ ನೃಪ ನಿನ್ನ ಗೀತಮುಂ ।
> ಹಾಡಿಯೆ; ಖೇಚರಾತ್ಮಜೆಗೆ ಭಾವಿಪೊಡಿಂತುಟೆ ಮುಯ್ಮೆ ಬೇಟದಾ ॥[೩]
>
> [ಚೌಕ ಕಂಸಿನೊಳಗಿನ ಪಾಠ ನಾನಂ ಊಹಿಸಿದುದಂ]

ನಿನ್ನ ವಿಷಯವಾಗಿ ಮಾತನಾಡಿ ಮಾತನಾಡಿ ಮುಗ್ಧಬಾಲಕಿಯರು 'ನುಡಿಜಾಣೆ' ಯರಾದರು; ನಿನ್ನನ್ನು ಕುರಿತ ಗೀತವನ್ನು ಹಾಡಿ ಹಾಡಿ ಓವನಿಗೆ ಹಾಡುವವರೂ ಸುಪ್ರಸಿದ್ಧ ಗಾಯಕಿಯರಾದರು. ಖೇಚರಾತ್ಮಜೆಯಾದ ಸ್ವಯಂಪ್ರಭೆಗೆ ಆದ ಬೇಟದ ಆಧಿಕ್ಯ ಎಂತಹದೋ!– ಎಂದು ಈ ಪದ್ಯದ ಅರ್ಥ. ಇದರಿಂದ 'ಓವನಿಗೆ' ಯ ಬಗ್ಗೆ ಕೆಳಗಿನ ಸಂಗತಿಗಳು ಸ್ಪಷ್ಟವಾಗುತ್ತವೆ.

(೧) ಓವನಿಗೆ ಹೆಣ್ಣುಮಕ್ಕಳ ಹಾಡು
(೨) ಓವನಿಗೆ ಪ್ರೌಢವಲ್ಲದ ಸಾಮಾನ್ಯ ಹಾಡು
(೩) ಓವನಿಗೆ ಹಾಡುವವರು ಸಾಮಾನ್ಯರು.[೪]

—ಎಂ. ಎಂ. ಕಲಬುರ್ಗಿ

ಭಾರತ ಸಂಗ್ರಹ ಪದ್ಯಗಳು

ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಪ್ರಕಟಿಸಿದ 'Descriptive Catalogue of Manuscripts in The Kannada Research Institute' Dharwar, Vol. V. (Ed; ಬಿ. ಎಸ್. ಕುಲಕರ್ಣಿ ಮತ್ತು ಎಸ್. ಬಿ. ಪುರೋಹಿತ್, 1964) ಕ್ರಮಾಂಕ ೫೧ ರಲ್ಲಿ (ಪುಟ 95-7) 'ಭಾರತ ಸಂಗ್ರಹ ಪದ್ಯಗಳು' ಎಂಬ ಕೃತಿಯ ಪರಿಚಯವಿದ್ದು ಅದನ್ನು ಜಕ್ಕಭೂಪಾಲ ರಚಿಸಿರುವನೆಂದು ಹೇಳಿದ್ದಾರೆ.

---

೨. ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ ಪು. ೧೭೦.

೩. ವರ್ಧಮಾನ ಪುರಾಣಂ. ೪–೩೬

೪. ಹೆಚ್ಚಿನ ವಿಷಯಕ್ಕಾಗಿ ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ ಗ್ರಂಥದ ಪುಟ ೧೭೦. ಅಡಿಟಿಪ್ಪಣಿ ೫೧ ನೋಡಿರಿ.

'ಕರ್ಣಾಟಕ ಕವಿಚರಿತೆ'ಯ ದ್ವಿತೀಯ ಸಂಪುಟ, ಪುಟ ೩೬೧ ರಲ್ಲಿ ಜಕ್ಕ ಭೂಪಾಲನ 'ಭಾರತ ಕಥಾಸಂಗ್ರಹ'ದ ಪರಿಚಯುವನ್ನು ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರು ಮಾಡಿಕೊಟ್ಟದ್ದು ಕೃತಿ ಗದ್ಯದಲ್ಲಿರುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಮೇಲ್ಕಂಡ ಸೂಚಿಯಲ್ಲಿ ತಿಳಿಸಿರುವ ಭಾಮಿನಿ ಷಟ್ಪದಿಗಳನ್ನುಳ್ಳ ಕೃತಿ ಛಂದೋರೂಪ ರಚನೆಯ ವ್ಯತ್ಯಾಸದ ಕಾರಣ ಜಕ್ಕಭೂಪಾಲನದಾಗಲು ಸಾಧ್ಯವಿಲ್ಲ.

ಶ್ರೀ ಎನ್. ಕೆ. ಹೆಗಡೆ ಅವರು ಮುದ್ಗಲನಾಥ ವಿರಚಿತ 'ಶ್ರೀಶೈಲಮಹಾತ್ಮೆ' ಎಂಬ ಭಾಮಿನಿ ಷಟ್ಪದಿಯ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.[೧] ಅದರಲ್ಲಿ ೫ ಸಂಧಿಗಳಿದ್ದು ೨೧೨ ಷಟ್ಪದಿಗಳಿವೆ. ಪ್ರಸ್ತುತ ಸೂಚಿಯಲ್ಲಿ ಉಕ್ತವಾದ ಪದ್ಯಗಳೆಲ್ಲ 'ಶ್ರೀಶೈಲಮಹಾತ್ಮೆ'ಯಲ್ಲಿವೆ. ಇಲ್ಲಿನ ಆರಂಭದ ಪದ್ಯಗಳು ಸಂಧಿ ೪ ರಲ್ಲಿನ ಸೂಚನೆ ಹಾಗು ಒಂದು ಮತ್ತು ಎರಡನೆಯ ಪದ್ಯಗಳಾಗಿವೆ. ಮುಕ್ತಾಯದಲ್ಲಿ ಕೊಟ್ಟಿರುವ ಪದ್ಯ ೫ ನೆಯ ಸಂಧಿಯ ಮೂವತ್ತೊಂದನೆಯ ಪದ್ಯವಾಗಿದೆ.

ಹೀಗಾಗಿ ಸೂಚಿಯ ಕ್ರಮಾಂಕ ೩೧ ರ ಶೀರ್ಷಿಕೆಯನ್ನು 'ಭಾರತ ಸಂಗ್ರಹ ಪದ್ಯಗಳು' ಎಂಬುದಕ್ಕೆ ಬದಲಾಗಿ 'ಶ್ರೀಶೈಲಮಹಾತ್ಮೆ' ಎಂದು ಕರ್ತೃವಿನ ಹೆಸರನ್ನು ಜಕ್ಕಭೂಪಾಲನಿಗೆ ಪ್ರತಿಯಾಗಿ ಮುದ್ಗಲನಾಥನೆಂದು ತಿದ್ದುಪಡಿ ಮಾಡಬೇಕಾಗಿದೆ.

೩. ಧಾರಾಪುರದ ತಿಮ್ಮಪ್ಪದಾಸನ ಲಾಕ್ಷಾಗೃಹದಹನ ಮತ್ತು ಬಕಾಸುರವಧೆಗಳು ಬೇರೆ ಬೇರೆ ಕೃತಿಗಳೇ ?

'ಕರ್ಣಾಟಕ ಕವಿಚರಿತೆ'ಯ ತೃತೀಯ ಸಂಪುಟ, ಪು. ೨೭೫ (೧೯೨೯)ರಲ್ಲಿ ಶ್ರೀ ಆರ್. ನರಸಿಂಹಾಚಾರ್ಯರು ಧಾರಾಪುರದ ತಿಮ್ಮಪ್ಪದಾಸನ ಕೃತಿಗಳನ್ನು ಹೆಸರಿಸುವಲ್ಲಿ ಆತ 'ಲಾಕ್ಷಾಗೃಹ ದಹನ', 'ಬಕಾಸುರ ವಧೆ', 'ಗಾಲವ ಚರಿತ್ರೆ' ಮೊದಲಾದ ಯಕ್ಷಗಾನಗಳನ್ನು ರಚಿಸಿರುವುದಾಗಿ ತಿಳಿಸಿದ್ದಾರೆ.

ಬೆಂಗಳೂರಿನ ನಾಗೇಶ್ವರಿ ಮುದ್ರಾಕ್ಷರ ಶಾಲೆಯಲ್ಲಿ ಕ್ರಿ. ಶ. ೧೮೯೪ ರಲ್ಲಿ ಹಿರಿಯ ಧಾರಾಪುರದ ತಿಮ್ಮಪ್ಪದಾಸನ 'ಲಾಕ್ಷಗೃಹ ದಹನ ಬಕಾಸುರನ ವಧೆಯೆಂಬೀ ಯಕ್ಷಗಾನ ಪ್ರಬಂಧವು' ಎಂಬ ಕೃತಿ ಅಚ್ಚಾಗಿದೆ. ಈ ಕೃತಿಯನ್ನು ಪರಿಶೀಲಿಸಿದಾಗ ಕವಿಚರಿತೆಕಾರರು ತಿಳಿಸುವ ಲಾಕ್ಷಾಗೃಹ ದಹನ ಮತ್ತು ಬಕಾಸುರ ವಧೆಗಳು ಅವರು ಭಾವಿಸಿರುವಂತೆ ಪ್ರತ್ಯೇಕ ಕೃತಿಗಳಾಗಿರದೆ ಅದು ಏಕೈಕ ಕೃತಿಯೆಂಬ ಅಂಶ ವ್ಯಕ್ತವಾಗುತ್ತದೆ. ಆ ಕಾರಣ ಲಾಕ್ಷಗೃಹದಹನ ಮತ್ತು ಬಕಾಸುರ ವಧೆಗಳು ಒಂದೇ ಕೃತಿ ಎನ್ನುವ ಬಗೆಗೆ ಸಂಶಯವಿಲ್ಲ.

—ಎಸ್. ಶಿವಣ್ಣ

---

೧. ಸಂ. ಎನ್. ಕೆ. ಹೆಗಡೆ, ಜನತಾ ವಿದ್ಯಾಲಯ, ಶಿರಾಲಿ [ಉ. ಕ.] 1970.

ಗ್ರಂಥಾವಲೋಕನ

ಹಾಡುಂಟೆ ನನ್ನ ಮಡಿಲಲ್ಲಿ: ಸಂಗ್ರಾಹಕರು: ಡಾ॥ ಎಲ್. ಆರ್. ಹೆಗಡೆ; ಪ್ರಕಾಶಕರು: ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು - 1. ಬೆಲೆ: ೩-೦೦: ಪುಟಗಳು XIX + 80.

ಜಾನಪದವು ಅನೇಕ ಶಾಸ್ತ್ರ, ಹಾಗೂ ಕಲೆಗಳಿಗೆ ಶಕ್ತಿವರ್ಧಕವೆಂಬುದನ್ನು ಮನಗಂಡ ಅನೇಕ ವಿದ್ವಾಂಸರು, ಜಾನಪದ ಅಧ್ಯಯನದ ಕಡೆಗೆ ಇತ್ತೀಚೆ ವಿಶೇಷ ಗಮನಹರಿಸುತ್ತಿದ್ದಾರೆ. ಪ್ರಪಂಚದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಜಾನಪದವನ್ನು ಒಂದು ಅಧ್ಯಯನ ವಿಷಯವಾಗಿ ಸ್ವೀಕರಿಸಿದ್ದಾರೆ. ಭಾರತದಲ್ಲಿಯೂ ಅನೇಕ ವಿಶ್ವವಿದ್ಯಾಲಯಗಳು ಜಾನಪದವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಲು ಉಪಕ್ರಮಿಸಿವೆ. ಕರ್ನಾಟಕದಲ್ಲಿ, ಮೈಸೂರು, ಕರ್ನಾಟಕ, ಬೆಂಗಳೂರು ವಿಶ್ವವಿದ್ಯಾಲಯಗಳು ಜಾನಪದ ಸಂಗ್ರಹ, ಪ್ರಕಾಶನ, ಅಧ್ಯಯನಗಳಿಗೆ, ಅವಕಾಶವನ್ನಿತ್ತು, ಬತ್ತಿ ಹೋಗುವ ಈ ಪುಣ್ಯವಾಹಿನಿಯ ಶಕ್ತಿಜಲವನ್ನು ಕಾಪಾಡಿಕೊಳ್ಳಲು ಹೆಣಗುತ್ತಿರುವುದು ಶ್ಲಾಘನೀಯ.

ಉತ್ತರ ಕನ್ನಡ ಜಿಲ್ಲೆಯು ಜಾನಪದದ ಅಮೂಲ್ಯ ಖನಿ. ಎಲೆಮರೆಯ ಹೂಗಳಂತಿರುವ ಇಲ್ಲಿಯ ಜಾನಪದ ಗೀತ ಕುಸುಮಗಳನ್ನು ಒಂದೊಂದಾಗಿ ಆಯ್ದು, ಮಾಲೆ ಕಟ್ಟಿ ಕನ್ನಡತಾಯಿಗೆ ಅರ್ಪಿಸಿದ ಮೊದಲಿಗರೆಂದರೆ, ವಿ. ವಿ. ತೊರ್ಕೆಯವರು. ಆ ನಂತರ ಈ ದಿಶೆಯಲ್ಲಿ ಹತ್ತಾರು ವ್ಯಕ್ತಿಗಳು ಜಾನಪದವನ್ನು ಸಂಗ್ರಹಿಸಿ ಅಭ್ಯಸಿಸಲು ಅಮಿತೋತ್ಸಾಹದಿಂದ ಹೆಣಗುತ್ತಿದ್ದಾರೆ. ಈ ಜಿಲ್ಲೆಯ ಸಂಗ್ರಹಿತ ಜಾನಪದ ಸಾಮಗ್ರಿಯಲ್ಲಿಯ ಹತ್ತರಲ್ಲಿ ಒಂದು ಪಾಲು ಕೂಡ, ಇನ್ನೂ ಬೆಳಕು ಕಂಡಿಲ್ಲ. ಉತ್ತರ ಕನ್ನಡ ಜಾನಪದ ಸಾಮಗ್ರಿಯೆಡೆಗೆ, ವಿದ್ವಾಂಸರ ಗಮನ ಹೋಗುವ ಹಾಗೆ, ಹೆಚ್ಚಿನ ಪ್ರಮಾಣದಲ್ಲಿ ಜಾನಪದ ಪ್ರಕಟನೆ ಮಾಡಿ, ಅದರ ಪರಿಚಯ ಮಾಡಿ ಕೊಟ್ಟವರು ಡಾ॥ ಎಲ್. ಆರ್. ಹೆಗಡೆಯವರು. ಉತ್ತರ ಕನ್ನಡ ಜಿಲ್ಲೆಯ ವಿಭಿನ್ನ ಜಾತಿ ಪಂಗಡಗಳಿಗೆ ಸೇರಿದ ಜನರ ಜಾನಪದ ಸಾಮಗ್ರಿಯನ್ನು, ಆಡುನುಡಿಯ ಸತ್ವ ಕೆಡದ ಹಾಗೆ ಸಂಗ್ರಹಿಸಿ, ಅವುಗಳನ್ನು ಸಕ್ರಮವಾಗಿ ಹೊಂದಿಸಿ, ಜಾನಪದ ಪ್ರೇಮಿಗಳ ಮುಂದಿಡುವ ಕಾರ್ಯದಲ್ಲಿ ಡಾ॥ ಹೆಗಡೆಯವರು ತುಂಬಾ ಯಶಸ್ವಿಯಾಗಿದ್ದಾರೆ.

ನಾಡಿನ ಅನೇಕ ಪತ್ರಿಕೆಗಳಲ್ಲಿ ಹೆಗಡೆಯವರ ಜಾನಪದ ಕಥೆ, ಗೀತ, ಒಗಟು, ಜಾನಪದಕ್ಕೆ ಸಂಬಂಧಿಸಿದ ವಿಮರ್ಶಾತ್ಮಕ ಲೇಖನಗಳು ಮೇಲಿಂದ ಮೇಲೆ ಪ್ರಕಟವಾಗುತ್ತಿರುತ್ತವೆ. ಇವರ "ತಿಮ್ಮಕ್ಕನ ಪದಗಳು" ಎನ್ನುವ ಕಥನ ಕವನಗಳ ಸಂಗ್ರಹವನ್ನು ಮೈಸೂರು ವಿಶ್ವವಿದ್ಯಾನಿಲಯದವರು, ಅವರ ಜಾನಪದ ಮಾಲೆಯ ಪ್ರಥಮ ಕುಸುಮವಾಗಿ ಆಯ್ದುಕೊಂಡು ಪ್ರಕಟಿಸಿದ್ದಾರೆ. "ಪರಮೇಶ್ವರಿ ಪದಗಳು" ಎನ್ನುವ ಗೀತ ಸಂಕಲನ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟನಗೊಂಡಿದೆ. ಸಮಾಲೋಚನೆಗಾಗಿ ಎತ್ತಿಕೊಂಡ ಹೆಗಡೆಯವರ "ಹಾಡುಂಟೇ ನನ್ನ ಮಡಿಲಲ್ಲಿ" ಎನ್ನುವ ಸಂಕಲನವು, ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗದಿಂದ ಪ್ರಕಾಶನಗೊಂಡಿದೆ. ಉತ್ತರ ಕನ್ನಡ ಜಾನಪದ ಗೀತಗಳನ್ನು ಬಹು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿ, ವಿಶ್ವವಿದ್ಯಾಲಯ ಮಟ್ಟದಲ್ಲಿ ಅದು ಪ್ರಕಾಶನಗೊಳ್ಳುವಂತೆ ಅವಕಾಶ ಕಲ್ಪಿಸಿಕೊಟ್ಟ ಹೆಗಡೆಯವರಿಗೆ ಉತ್ತರ ಕನ್ನಡ ಜನತೆ ಅಭಿನಂದನೆ ಸಲ್ಲಿಸಲೇಬೇಕು.

"ಹಾಡುಂಟೇ ನನ್ನ ಮಡಿಲಲ್ಲಿ" ಸಂಕಲನದಲ್ಲಿಯ ಹೆಚ್ಚಿನ ಸಂಖ್ಯೆಯ ಹಾಡುಗಳು, ಬತ್ತ ಕುಟ್ಟುವಾಗಿನ ಹಾಡುಗಳು, ಜೋಗುಳದ ಹಾಡುಗಳೂ ಕೆಲವಿವೆ. ನಮ್ಮ ಹೆಂಗಳೆಯರು ಜೀವನದಲ್ಲಿ ಪಟ್ಟ ಪಾಡೆಲ್ಲವೂ ಹಾಡಾಗಿ ಹುಟ್ಟಿ ಹರಿದುದನ್ನು ಇಲ್ಲಿ ನಾವು ಅವಲೋಕಿಸಬಹುದು. ಗೀತಗಳ ಆಯ್ಕೆಯಲ್ಲಿ ಸಂಗ್ರಾಹಕರು ಸಾಕಷ್ಟು ಜಾಣ್ಮೆವಹಿಸಿ ಸತ್ವಯುತವಾದ ಹಾಡುಗಳನ್ನೇ ಹೆಚ್ಚಾಗಿ ಸ್ವೀಕರಿಸಿ, ಅವುಗಳನ್ನು ಬತ್ತ ಮೆರಿಯುವ ಹಾಡು, ತೊಟ್ಟಿಲ ಹಾಡು, ಮಕ್ಕಳು, ತವರು, ತಾಯಿ – ಮಗಳು, ಅಣ್ಣ – ತಮ್ಮ, ತಮ್ಮಯ್ಯ, ಅತ್ತಿಗೆ, ಮೈದುನ, ಅತ್ತೆ – ಸೊಸೆ, ನಲ್ಲ – ನಲ್ಲೆ, ರಸಿಕ, ಹೆಣ್ಣು, ಚದುರೆ, ಜಾರೆ, ಸೂಳೆ, ದೇವರು, ಕೋಳಿ, ಹಾಸ್ಯ, ಚೆನ್ನಮ್ಮ, ನೀತಿ, ಸಂಕೀರ್ಣ ಗೀತೆಗಳು ಎಂದು ಮುಂತಾಗಿ ವಿಭಜಿಸಿ ಕಾವ್ಯ ಪ್ರ್ಯಾಸಂಗಿಗಳ ಮುಂದಿಟ್ಟಿದ್ದಾರೆ

ಈ ಸಂಗ್ರಹವು ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುವ ಹವ್ಯಕರು ಹಾಲಕ್ಕಿ ಒಕ್ಕಲಿಗರು, ಗಾಮೊಕ್ಕಲರು, ನಾಮಧಾರಿಗಳು ಮುಂತಾದ ಜಾತಿಯ ಜನರಲ್ಲಿ ಪ್ರಚಲಿತವಿರುವ ಹಾಡುಗಳ ಕಲಸುಮೇಲೋಗರವಾಗಿದೆ. ವಿವಿಧ ಜಾತಿ ಪಂಗಡಗಳಿಗೆ ಸೇರಿದ ಉತ್ತರ ಕನ್ನಡ ಜನರ ಆಡು ನುಡಿಯಲ್ಲಿ ಅಭಿವ್ಯಕ್ತವಾದ ಜಾನಪದ ಗೀತಗಳ ಭಾಷಾ ಶೈಲಿಯಲ್ಲಿ ವೈವಿಧ್ಯತೆಯಿದೆ. ಈ ಸಂಗ್ರಹದಲ್ಲಿ ಬೇರೆ ಬೇರೆ ಜನಾಂಗಗಳ ಹಾಡುಗಳು ಒಂದು ಚೌಕಟ್ಟಿನಲ್ಲಿ ಮಿಳಿತವಾಗಿರುವುದರಿಂದ ಭಾಷಾ ಶೈಲಿಯಲ್ಲಿ ಪುಟ ಪುಟಕ್ಕೂ ವ್ಯತ್ಯಾಸ ಕಂಡು ಬರುವುದು

ಉದಾ : ಬಸ್ರೆ ಸೊಪ್ನ ಮೇಗ್ರsss ಬಟ್ಟೆ ತುಂಬ ಗsssಂಜಿss
ಉಣ್ಣಂದ್ರೆ ಸೊಸೆಗೆsss ನಗೆಬಂsತುss
ಒಂದು ಖಡ್ಗ ಬತ್ತವ ವಳ್ಳಲ್ಲಿ ಹಾಯ್ಕಂಡಿ
ಮೆರಿ ಅಂದ್ರೆ ಸೊಸೆಗೆ ಜರ ಬಂsssತುss ೧೨೬

ಲತ್ತೆ ಸಾಯಲೋಃಽಽಽಽ ಲತ್ಯೆಮ್ಮೆ ಕರ್ಸಲೋಃಽಽಽ
ಹಿತ್ತಽಲಲ್ ಜೋಃಲಽಽಽಽಽಽ ಜೆಲ್ಯಲೋಃ ಮಾವಾನೇಃಽಽಽ ೧೨೭
ಕೆರ್ಯೆಽಽಽ ಯೇಃರಿಮೇಃನೇಃಽಽಽ ಯರುಗುಃಽಽ ಪೌಽಜ ನೇಃಟ್ಟಿಽಽ
ಅರಿಯನೇಃಲತ್ತೇಃಽಽಽಽಽಽ ಕೆಲಶವಽಽಽ ॥ ನನು ತೌರಿಗೇಃಽಽ
ಶರುಮುಽತ್ತಿಸಂತೇಃಽಽಽಽ ಶಲಿಗೀಃರುಃಽಽಽಽ ೧೨೮

ಭಾಷಾ ಶೈಲಿಯ ಏರುಪೇರಿನಿಂದಾಗಿ, ಸಹೃದಯರಿಗೆ ರಸಾಸ್ವಾದನೆಗೆ ಸ್ವಲ್ಪ ತೊಂದರೆಯಾಗುವುದು. ಈ ತೊಂದರೆಯನ್ನು ನಿವಾರಿಸಲು ಡಾ॥ ಹೆಗಡೆಯವರು ಅಭ್ಯಾಸಪೂರ್ಣವಾದ ಪೀಠಿಕೆ ಹಾಗೂ ಟಿಪ್ಪಣಿಗಳನ್ನು ಕೊಟ್ಟು ಉಪಕಾರ ಮಾಡಿದ್ದಾರೆ. ಕೆಲವೆಡೆಯಲ್ಲಿ ಇವರು ಕೊಟ್ಟ ಅರ್ಥ ವಿವರಣೆಯಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಯಿದೆ. ಒಂದೆರಡನ್ನು ಇಲ್ಲಿ ಉದಾಹರಿಸಬಹುದು.

ನೀರಿಗುಲ್ಹೋಗುಬೇಃಕುಽಽಽಽಽ ಯೇಃಲಽ ಸಂದ್ರುದಾಽಚೇಃಽಽಽ
ತಡವಾಯ್ತುಲಂದತ್ತೆಽಽಽಽ ಜರೆವಲೋಃಽಽ
ತಡವಾಯ್ತುಲಂದತ್ತೇಃಽಽಽಽ ಯೇಃನಂದಿ ಜರೆವಽಽಲುಽ ?
"ಯಾರ್ ಬಂಽದಿ ಕಯ್ಯ್ಯಽಽಽಽ ಹಿಡಿದೀಃರೇಃಽಽಽಽ ? ೧೨೯
"ಮಲ್ಲಽವಽ ಅತ್ತೇಃಽಽಽ ಶುಲ್ಲು ಮಾತಾಡ್ ಬೇಃಡಽಽಽ
ಯಾರು ಬಂದ್ ಕಯ್ಯ್ಯಽಽಽಽ ಹಿಡಿಲಿಲ್ಲಽಽಽ
ಯಾರು ಬಂದ್ ಕಯ್ಯ್ಯಽಽಽಽ ಹಿಡಿಲಿಲ್ಲಲತ್ತೀಃಯೇಃಽ
ಗಾಡೂಗಽ ಮಿಂದುಃಽಽಽಽ ಯಮುಗ್ಯೆಽಽಡುಃಽಽಽಽ" ೧೩೦

ಮೇಲಿನ ಪದ್ಯಗಳ ಅರ್ಥವಿವರಣೆಯನ್ನು ಕೊಡುತ್ತ ಹೆಗಡೆಯವರು, "ನೀರಿಗೆ ಹೋದ ಸೊಸೆ ತಡವಾಗಿ ಬಂದಿದ್ದನ್ನು ಕಂಡ ಅತ್ತೆ 'ಯಾರು ಬಂದು ಕೈಹಿಡಿದರು?' ಎಂದು ಕೇಳಿದಾಗ, ಸೊಸೆಯು 'ಯಾರೂ ಕೈ ಹಿಡಿಯಲಿಲ್ಲ. ಮಾಟಗಾರನು (ಗಾಡುಗ) ಬಂದು ಕೆರೆಯಲ್ಲಿ ಮುಳುಗಿ ನೀರನ್ನು ಕದಡಿದ್ದನು. ನೀರು ಹಣಿದ ಮೇಲೆ ಅದನ್ನು ತರಲು ತಡವಾಯಿತು' ಎನ್ನುತ್ತಾಳೆ. ಇಲ್ಲಿ ಕೆರೆ ಅಥವಾ ಬಾವಿಯಲ್ಲಿ ಮಿಂದ ಪ್ರೇಮ ಸೂಚಕವಾಗಿದೆ."[೧] ಪೀಠಿಕೆಯಲ್ಲಿ ಇದರ ಸೂಚ್ಯಾರ್ಥವನ್ನು ಕುರಿತು, "ಇಲ್ಲಿ ಗಾಡಿಗ ಮಿಂದು ನೀರು ಕದಡಿದುದು ಅವಳ ಶೀಲದ ಮಲಿನತೆಯನ್ನೇ ಸೂಚಿಸುತ್ತದೆ."[೨] ಎಂದು ಅವಧಾರಣೆ ಕೊಟ್ಟು ಹೇಳಿದ್ದು ಸಮಂಜಸವಾಗಿ ಕಾಣುವುದಿಲ್ಲ. ಪದ್ಯದ ಕೊನೆಯ ಸಾಲಿಗೆ ಡಾ॥ ಹೆಗಡೆಯವರು ಕೊಟ್ಟ, "ಗರುಡಮಿಂದು, ನೀರು ಗರುಡಿತು" ಎಂಬ ಪಾಠಾಂತರದಲ್ಲಿಯಾಗಲಿ, ನನ್ನ 'ಜೀಂಗೊಡ'ದಲ್ಲಿ ಬರುವ "ಗಿಣಿ ಮಿಂದು ನೀರು ಕಣಕಿತ್ತೇ" ಎಂಬ ಪಾಠದಲ್ಲಾಗಲಿ, ನನ್ನ ಅಪ್ರಕಟಿತ ಸಂಗ್ರಹದಲ್ಲಿ ಇದ್ದ "ಪಾಂಡರ ಬಂದಿದ್ರು ಜಳಕಕೆ" ಪಾಠದಲ್ಲಾಗಲಿ, ಉತ್ತರ ದೇವಿಯ ಹಾಡಿನ ಆರಂಭವೊಂದರಲ್ಲಿ

೧. ಟಿಪ್ಪಣಿ ಪು. 67.
೨. ಪೀಠಿಕೆ ಪು. X.

ಬರುವ ಇದೇ ಹಾಡಿನ ಪಾಠ, "ಮೂಡಣ ಗಿಣಿ ಬಂದಿ ಕೋಣೂಕವೇ" ಎಂಬಲ್ಲಿಯಾಗಲಿ, ಎಲ್ಲಿ ನೋಡಿದರೂ ಸೊಸೆಯ ಶೀಲಮಲಿನತೆಯ ಧ್ವನಿ ಗೋಚರಿಸದು. ಅಲ್ಲದೇ ಸೊಸೆ ತಾನು ಸ್ವತಃ ಸಂಶಯ ಪಿಶಾಚಗ್ರಸ್ಥ ಅತ್ತೆಗೆ ಕೊಡುವ ಉತ್ತರದಲ್ಲಿ, ತನ್ನ ಶೀಲಮಲಿನತೆಯ ರಹಸ್ಯವನ್ನು ಸೂಚ್ಯವಾಗಿಯಾದರೂ ಹೊರಗೆಡುವ ಉದ್ದೇಶವನ್ನಿಟ್ಟುಕೊಂಡಿರಲಾರಳು. ಈ ಪದ್ಯವು ಅತ್ತೆಯ ದೃಷ್ಟಿಯ ಮಾಲಿನತೆಯನ್ನು ಸೂಚಿಸುತ್ತದಲ್ಲದೆ, ಸೊಸೆಯ ಶೀಲ ಮಲಿನತೆಯನ್ನಲ್ಲ. ಈ ಹಾಡನ್ನು ಕೊಡ ಜರಿದು ಹೋಯಿತೆಂದು ಅಳುವ ಹಾಡಿನ ಜೊತೆಯಲ್ಲಿ ಹೋಲಿಸಿದ್ದೂ ಸಮಂಜಸವಾಗಿ ಕಾಣುವುದಿಲ್ಲ.

> ಹೆಣುಮಕ್ಕsssಳಿಲ್ಲssದೇssss ಹೆಣ್ಣ್ ಸುಂಗಾssರಿಲ್ಲವೇssss
> ಬಣ್ಣsssssದ ನೆರ್ಯssss ಸೊಸದೀರುsssss॥ ಇಲ್ಲದುರೇssss
> ಕಣ್ಣsನsss ಕಾಡುಗಿಯೇsssss ಅಳಿಯsssವೇsss ೧೭೭

ಮೇಲಿನ ಪದ್ಯದ ಅರ್ಥವಿವರಣೆಯನ್ನು ಹೀಗೆ ಕೊಡುತ್ತಾರೆ. "ಹೆಣ್ಣು ಮಕ್ಕಳಿಲ್ಲದಿದ್ದರೆ ತಾಯಿಂದಿರೆ ತುಂಬ ಬೇಸರ. ಕಣ್ಣಿಗೆ ಕಾಡಿಗೆಯನ್ನು ಹಚ್ಚಿಕೊಂಡು, ಬಣ್ಣದ ಬಾಚಣಿಕೆಯಿಂದ ಕೂದಲು ಬಾಚಿಕೊಂಡು ಮಲ್ಲಿಗೆ ದಂಡೆಯಿಂದ ಸಿರಿಮುಡಿಯನ್ನಲಂಕರಿಸಿಕೊಂಡು, ಓರೆಗಣ್ಣಿನಿಂದ ಹೆರಳಿನ ಅಲಂಕಾರವನ್ನು ನೋಡಿಕೊಂಡು ಸರಿಪಡಿಸಿಕೊಳ್ಳುವವರು ಯಾರು? ಹೆಣ್ಣುಮಕ್ಕಳಿಲ್ಲದ ಕೊರತೆಯನ್ನು ಬಣ್ಣದ (ಸೀರೆ) ನೆರಿಗೆಯನ್ನು ಸರಿಪಡಿಸಿಕೊಳ್ಳುವ ಸೊಸೆಯಂದಿರು ತುಂಬುತ್ತಾರೆ. ಅವರೂ ಇಲ್ಲದಿದ್ದರೆ ಕಣ್ಣಿಗೆ ಹಚ್ಚಿಕೊಳ್ಳುವ ಕಾಡಿಗೆಯ ಅವಶ್ಯಕತೆಯೇ ಇರದು. ಕರಡಿಗೆಯ ಕಾಡಿಗೆ ಹಾಗೆಯೇ ಉಳಿಯುತ್ತದೆ."[೩] ಈ ಅರ್ಥವಿವರಣೆ ಅಷ್ಟು ತೃಪ್ತಿಕರವಾಗಿಲ್ಲ. ಇದಕ್ಕೆ ಕಾರಣ ಇವರು ಆಯ್ಕೆ ಮಾಡಿದ ಪದ್ಯ ಪಾಠವೇ ಸರಿಯಾಗಿಲ್ಲದಿರುವುದು. ಇದೇ ಪದ್ಯದ ಪಾಠಾಂತರವೊಂದು ಹೀಗಿದೆ.

> ಹೆಣ್ಮಕ್ಕಳಿದ್ದೊರ್ತರ್ಲ ಹೆಣಸುಂಗಾರಿಲ್ಲವೇ
> ಬಣ್ಣದ ನೆರಿಯ ಸೊಸದೀರು। ಇದ್ದರೆ
> ಕಣ್ಣನ ಕಾಡಿಗೆಯ ಅಳಿಯರೆ।[೪]

ನಾವು ಸತ್ತಾಗ, ನಮ್ಮ ವಿಷಯದಲ್ಲಿ ಪ್ರೀತಿ ವಾತ್ಸಲ್ಯವಿರುವವರು ಮಾತ್ರ ಅಳುತ್ತಾರೆ. ನಾಲ್ಕು ಮಂದಿ ನಮ್ಮ ಹಿರಿಮೆಯನ್ನು ನೆನೆದು ಅತ್ತಾಗ ಮಾತ್ರ ನಮ್ಮದು ಸಾರ್ಥಕ ಬದುಕೆಂದು ಪ್ರಪಂಚ ಬಗೆಯುತ್ತದೆ. ಸತ್ತಾಗ ಯಾರೂ ಅತ್ತಿಲ್ಲವೆಂದರೆ ಅದೊಂದು ಯಾರಿಗೂ ಬೇಡಾದ ಪ್ರಾಣಿ ಎಂದು ಲೋಕ ಪರಿಗಣಿಸುವುದು. ಪ್ರಿಯ ಜನರ ಕಣ್ಣೀರ ತರ್ಪಣವೇ ಸತ್ತ ಹೆಣಕ್ಕೆ ಸಂಗಾರ. ಮಂಗಳಿಗೆ ತಾಯಿಯಲ್ಲಿ ಇರುವಷ್ಟು

---

೩. ಟಿಪ್ಪಣಿ ಪು. 70–71.
೪. ಜೇಂಗೊಡ ಪು. 16.

ಮುಮಂತೆ ಇನ್ನಾರಿಗೂ ಇರುವುದಿಲ್ಲ. ತಾಯಿ ಸತ್ತಾಗ ಮಗಳ ಕರುಳು ಹಿಚುಕಿದಂತಾಗಿ ಅವಳು ತಾಯ ಪ್ರೀತಿ, ವಾತ್ಸಲ್ಯಗಳನ್ನು ನೆನೆದು ಗೋಳಿಡುತ್ತಾಳೆ. ಆದರೆ ಬಣ್ಣದ ನರಿಯ (ವೈಯ್ಯಾರಿಯರಾದ) ಸೊಸೆಯಂದಿರಿದ್ದರೆ, ಅವರ ಕಣ್ಣಿನಲ್ಲಿ ಅವರ ಕಣ್ಣಿನ ಕಾಡಿಗೆಯನ್ನು ಅಳಿಸುವಷ್ಟು ಕಣ್ಣೀರು ಸಹ ಬರುವುದಿಲ್ಲ. ತಾಯಿಗೆ ತನ್ನ ಮರಣಾನಂತರ ತನ್ನ ಹಿರಿಮೆಯನ್ನು ಸಾರಿ ಹೇಳುವ, ಹೆಣ್ಣು ಮಗಳು ಬೇಕು. ಹೆಣ್ಣು ಮಕ್ಕಳು ಗೋಳಿಡುವಾಗ ಅವಳ ಹೆಣದ ಸ್ಮಶಾನಯಾತ್ರೆಯಾಗಬೇಕು ಎಂದು ತಾಯಿಯ ಹಂಬಲ. ಇಲ್ಲಿ ಹೆಣ್ಣು ಮಕ್ಕಳಿಗೆ ತಾಯಿಯ ವಿಷಯದಲ್ಲಿ ಇರುವ ಪ್ರೀತಿ, ಸೊಸೆಯಂದಿರಿಗೆ ಇರುವ ವೈರ ಅನಾದರವನ್ನು ಗರತಿ ಸುಂದರವಾಗಿ ಬಣ್ಣಿಸಿದ್ದಾಳೆ. ಹೀಗೆ ಒಂದೆರಡು ಅಭಿಪ್ರಾಯ ಭೇದಗಳಿದ್ದರೂ, ಸುಂದರವಾದ ಮುಖಪುಟದಿಂದ ಅಲಂಕೃತವಾದ, ಬದುಕಿನ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಡುವ ೨೫೩ ಗೀತಗಳ ವಿವರ ವ್ಯಾಖ್ಯಾನವನ್ನೊಳಗೊಂಡ ಈ ಕೃತಿ ಒಂದು ಸ್ವಾಗತಾರ್ಹ ಕೃತಿ.

— ಎನ್. ಆರ್. ನಾಯಕ

ಬಸವಾದಿ ಗಣಚರಿತ್ರೆ ಮತ್ತು ಗಣವಚನ ಮಂಜರಿ : ಲೇಖಕರು : ಡಾ. ಎಸ್. ಎಮ್. ಹುಣಶ್ಯಾಳ. ಪ್ರಕಾಶಕರು : ವಿಜಯ ಪ್ರಕಾಶನ, ರಾಯಚೂರು. ಬೆಲೆ ; ರೂ. ೩-೦೦.

ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳಂತಹ ವೈವಿಧ್ಯಮಯ ವಿಷಯಗಳನ್ನು ಆಯ್ದುಕೊಂಡು ಬರೆಯುತ್ತಿರುವ ಡಾ. ಹುಣಶ್ಯಾಳರು ಓದುಗರ ಕೈಗಿತ್ತಿರುವ 'ಬಸವಾದಿ ಗಣಚರಿತ್ರೆ ಮತ್ತು ಗಣವಚನ ಮಂಜರಿ' ಅನೇಕ ಕೊರತೆಗಳನ್ನು ಒಳಗೊಂಡು ಲೇಖಕರು ತುಂಬ ಅವಸರಿಸಿದ್ದಾರೆ ಎಂಬುದನ್ನು ಎತ್ತಿಹೇಳುತ್ತಿದೆ.

ಪೀಠಿಕೆಯಲ್ಲಿ ಲೇಖಕರು ಹೇಳುವ ವಚನಶಾಸ್ತ್ರದ ಇತಿಹಾಸವಾಗಲೀ ಅವರ ಸಂಶೋಧನಾ ದೃಷ್ಟಿಕೋನವಾಗಲೀ ಪುಸ್ತಕ ಪೂರ್ತಿ ತಿರುವಿ ಹಾಕಿದ ಮೇಲೆ ಓದುಗನಿಗೆ 'ಎಂಥ ಆಭಾಸ' ಎಂದು ಉದ್ಗಾರ ತೆಗೆಯುವಂತಾದರೆ ಏನೂ ಆಶ್ಚರ್ಯವಿಲ್ಲ. ಲಿಂಗೈಕ್ಯ ಡಾ. ಫ. ಗು. ಹಳಕಟ್ಟಿಯವರು ಬರೆದ ಶರಣರ ಚರಿತ್ರೆಗಳನ್ನು ಹೆಚ್ಚು ಕಡಿಮೆ ಇದ್ದಕ್ಕಿದ್ದಂತೆ ಎತ್ತಿ ಇಲ್ಲಿಟ್ಟಿರುವದರಲ್ಲಿ ಔಚಿತ್ಯವೇನೋ ? ಹಳಕಟ್ಟಿಯವರಿಂದ ಈಚೆಗೆ ಹೊರಬಂದ ವಚನಶಾಸ್ತ್ರ ಇತಿಹಾಸ, ಶರಣ ಚರಿತ್ರೆಗಳ ಮೇಲೆ ಚೆಲ್ಲಿದ ಹೊಸ ಬೆಳಕು ಲೇಖಕರ ಪ್ರಾಮಾಣಿಕ ಪ್ರಯತ್ನದ ಕೊರತೆಯನ್ನು ಎತ್ತಿ ತೋರಿಸುತ್ತದೆ.

ನೂರಹದಿನೈದು ಶರಣರ ಚುಟುಕು ಚರಿತ್ರೆಯಾಗಲಿ ಉದ್ಧೃತವಾಗಿರುವ ಒಂದೆರಡು ವಚನಗಳಾಗಲೀ ಓದುಗನನ್ನು ತಣಿಸಲಾರವು.

ಮುದ್ರಣ ದೋಷಗಳೋ ಕೆಲವಂತೂ ಅಕ್ಷಮ್ಯ ಅಪರಾಧಗಳೆನ್ನುವ ರೀತಿಯಲ್ಲಿ ಹಣಿಕಿಕ್ಕಿವೆ. ಹೆಸರಿಸಲು ಗ್ರಂಥದುದ್ದಕ್ಕೂ ಅವೇ ಅನುಪಮವಾಗಿರುವುದರಿಂದ ಇಲ್ಲಿ ಅಪ್ರಸ್ತುತ.

ಹೋಗಲಿ ಬಳಸಿಕೊಂಡಿರುವ ಭಾಷೆಯಲ್ಲಾದರೂ ಹೊಸತನವಿದೆಯೆಂದು ಹೇಳೋಣವೇ ಅದೂ ಸೊನ್ನೆ. ಇಂಥ ಸಂಕಲನಗಳು ಕನ್ನಡ ಸಾರಸ್ವತ ಪ್ರಪಂಚದ ಆರೋಗ್ಯಕ್ಕೆ ಮಾರಕವಾಗಿವೆಯೇ ಹೊರತು ಸಹ್ಯವಾಗಿಲ್ಲ.

ಡಾ. ಹುಣಶ್ಯಾಳರಂತಹ ಬಹುಶ್ರುತರಿಂದ ಇಂಥ ಕೃತಿಯೊಂದು ಹೊರಬಂದಿದೆ ಯೆಂದರೆ ನಂಬುವುದು ಕಷ್ಟ. ನಾಡಿನ ಸಾರಸ್ವತ ಸಂಪತ್ತಿಗೆ ಅನೇಕ ಬೆಲೆಯುಳ್ಳ ಕೃತಿಗಳನ್ನು ಇತ್ತಿರುವ ಹಿರಿಯರಾದ ಡಾ. ಹುಣಶ್ಯಾಳರಿಂದ ಕನ್ನಡ ಓದುಗರು ಇದಕ್ಕೂ ಒಳ್ಳೆಯದನ್ನು ಅಪೇಕ್ಷಿಸುತ್ತಾರೆ. ಆಗೊಮ್ಮೆ, ಈಗೊಮ್ಮೆಯಾದರೂ ಚಿಂತೆಯಿಲ್ಲ. ಅವರು ಅಮೂಲ್ಯವಾದುದನ್ನೇ ಕೊಡಲಿ. ಇಂಥ ಗ್ರಂಥಗಳು ಅವರ ಕೃತಿಗಳ ಸಂಖ್ಯೆಯನ್ನು ಹೆಚ್ಚಿಸಬಲ್ಲವೇ ಹೊರತು ಕೃತಕೃತ್ಯತೆಯನ್ನು ತಂದುಕೊಡ ಲಾರವು ಎಂದು ನಮ್ರವಾಗಿ ಸೂಚಿಸಿ ವಿರಮಿಸುತ್ತೇನೆ.

— 'ಹೇಮ'

ಸಾದರ ಸ್ವೀಕಾರ

೧. **ತುಡುಗಿ** [ಕವನ ಸಂಕಲನ]:

ಲೇ: ಎಚ್. ಎಸ್. ಭೀಮನಗೌಡರ; ಪ್ರ: ಅಕ್ಷರ ಪ್ರಕಾಶನ, ಸಾಗರ; ಪುಟ: ೬೮; ಬೆಲೆ: ನಾಲ್ಕು ರೂಪಾಯಿ; ೧೯೭೩.

೨. **ಜಗದ ತೊಟ್ಟಿಲು** [ಕವನ ಸಂಕಲನ]:

ಲೇ: ಜ. ಹೊ. ನಾರಾಯಣಸ್ವಾಮಿ; ಪ್ರ: ಜ್ಞಾನ ಭಂಡಾರ, ಬಿ. ಇ. ಎಂ. ಎಲ್. ನಗರ, ಕೆ.ಜಿ.ಎಫ್; ಪುಟ: ೫೬; ಬೆಲೆ: ಎರಡು ರೂಪಾಯಿ; ೧೯೭೩.

೩. **ಪರಿಪೂರ್ಣ** [ಕಾದಂಬರಿ]:

ಲೇ: ಸರಿತಾ ಜ್ಞಾನಾನಂದ; ಪ್ರ: ಜ್ಞಾನ ಭಂಡಾರ, ಬಿ. ಇ. ಎಂ. ಎಲ್. ನಗರ, ಕೆ.ಜಿ.ಎಫ್; ಪುಟ: ೧೩೬; ಬೆಲೆ: ಮೂರು ರೂಪಾಯಿ; ೧೯೭೩.

೪. **ನಾಯಿಕೊಡೆ** [ನವ್ಯ ನಾಟಕ]:

ಲೇ: ಸರಿತಾ ಜ್ಞಾನಾನಂದ; ಪ್ರ: ಜ್ಞಾನ ಭಂಡಾರ, ಬಿ. ಇ. ಎಂ. ಎಲ್. ನಗರ, ಕೆ. ಜಿ. ಎಫ್; ಪುಟ: ೨೮: ಬೆಲೆ: ಒಂದು ರೂಪಾಯಿ ಇಪ್ಪತ್ತೈದು ಪೈಸೆ; ೧೯೭೩.

೫. **ಹೆಣ್ಣೇ ಹೆಚ್ಚು** [ನಗೆ ನಾಟಕ]:

ಲೇ: ಸರಿತಾ ಜ್ಞಾನಾನಂದ; ಪ್ರ: ಜ್ಞಾನ ಭಂಡಾರ, ಬಿ. ಇ. ಎಂ. ಎಲ್. ನಗರ, ಕೆ.ಜಿ.ಎಫ್; ಪುಟ: ೪೪; ಬೆಲೆ: ಒಂದು ರೂಪಾಯಿ ಇಪ್ಪತ್ತೈದು ಪೈಸೆ; ೧೯೭೩.

೬. **ನಾ ಕಂಡ ಜರ್ಮನಿ** [ಪ್ರವಾಸ ಸಾಹಿತ್ಯ]: [ದ್ವಿತೀಯ ಮುದ್ರಣ]

ಲೇ: ಹೊ. ಶ್ರೀನಿವಾಸಯ್ಯ; ಪ್ರ: ಗಾಂಧೀ ಸಾಹಿತ್ಯ ಸಂಘ, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೨೮೦+XX; ಬೆಲೆ: ಆರು ರೂಪಾಯಿ; ಗ್ರಂಥಾಲಯ ಪ್ರತಿ: ಎಂಟು ರೂಪಾಯಿ: ೧೯೭೩.

೭. **ಶ್ರೀ ಶರಣ ಬಸವೇಶ್ವರ ಸ್ತುತಿ ಕುಸುಮಾಂಜಲಿ:**

ಲೇ: ಬಿ. ಜಿ. ಕೊಟ್ರೇಶ; ಪ್ರ: ಶರಣ ಬಸವೇಶ್ವರ ಭಕ್ತ ಮಂಡಳಿ; ಸೋಮಪುರ ತಾ. ಯಲಬುರ್ಗ; ಜಿ: ರಾಯಚೂರ; ಪುಟ: ೧೧; ಬೆಲೆ: ಐವತ್ತು ಪೈಸೆ: ೧೯೭೩.

೮. **ನೀತಿಸಾರ:**

ಪ್ರ: ವಿಶ್ವಶಾಂತಿ ಪ್ರಕಾಶನ, ಬಿಳಿಗಿರಿರಂಗನಬೆಟ್ಟ, ಮೈಸೂರು; ಜಿ; ಪುಟ; ೭೨+೧೭; ಬೆಲೆ: ಇಪ್ಪತ್ತೈದು ಪೈಸೆ; ೧೯೭೩.

೯. **ನಮ್ಮ ಗುರುಕುಮಾರ ಶಿವಯೋಗಿಗಳು:**

ಲೇ: ಪಂ. ಪುಟ್ಟರಾಜಕವಿ ಗವಾಯಿಗಳು; ಪ್ರ: ವೀರಶೈವ ಪ್ರಗತಿಶೀಲ ಯುವಕ ಸಂಘ, ಗದಗ-ಬೆಟಗೇರಿ; ಪುಟ: ೭೨; ಬೆಲೆ: ಇಪ್ಪತ್ತೈದು ಪೈಸೆ; ೧೯೭೩.

೧೦. ಕಪ್ಪತ್ತ ದರ್ಶನ :

ಲೇ : ಬಿ. ಎಸ್. ಹಣಜಿ ; ಪ್ರ : ಸಾಹಿತ್ಯ ಸೇವಾ ಪ್ರಕಾಶನ, ಕಡಕೋಳ ; ಪುಟ : ೫೮+೮ ; ಬೆಲೆ : ಒಂದು ರೂಪಾಯಿ ಇಪ್ಪತ್ತೈದು ಪೈಸೆ ; ೧೯೭೩.

೧೧. ಶ್ರೀ ಚಂದ್ರಲಾ ದರ್ಶನ :

ಲೇ : ಆರ್. ಎಚ್. ಕುಲಕರ್ಣಿ ; ಪ್ರ : ಆರ್. ಎಚ್. ಕುಲಕರ್ಣಿ, ಸಾಹಿತ್ಯ ಸದನ, ಎಂ. ಎಸ್. ಕೆ. ಮಿಲ್‌ರೋಡ, ಗುಲಬರ್ಗಾ ; ಪುಟ : ೪೬+iv ಬೆಲೆ : ಒಂದು ರೂಪಾಯಿ ಇಪ್ಪತ್ತೈದು ಪೈಸೆ, ೧೯೭೩.

೧೨. ಅಷ್ಟಕಗಳು (ಸಂ. ೧) :

ಸಂ : ಛೋಜರಾಜ ಪಾಟೀಲ : ಪ್ರ : ಶಿವಬಸವ ಪ್ರಕಾಶನ, ಹಾವೇರಿ, ಪುಟ : ೫೫ ; ಬೆಲೆ : ಒಂದು ರೂಪಾಯಿ ಐವತ್ತು ಪೈಸೆ ; ೧೯೭೩.

೧೩. ದೇವೀ ಮಹಾತ್ಮೆ :

ಸಂ : ಎಸ್. ಕೆ. ಹೆಗಡೆ ; ಪ್ರ : ಕನ್ನಡ ಕರಾವಳಿ ಗ್ರಂಥ ಪ್ರಕಾಶನ, ಹೆಗಡೆ (ಉ. ಕನ್ನಡ) ; ಪುಟ : lxviii+೧೬೨ ; ಬೆಲೆ : ಐದು ರೂಪಾಯಿ, ೧೯೭೩.

೧೪. ಕರಿಬಸವಯೋಗಿ ಲೀಲೆ :

ಲೇ : ಕರವೀರಪ್ಪ ಬಸಪ್ಪ ಅಂಗಡಿ ; ಪ್ರ : ಅಣ್ಣಿಗೇರಿ ಚಿಂದೋಡಿ ಬಂಧುಗಳು, ಸಿ. ವಿ. ಬಂಗಾರೇಶ ಮತ್ತು ಸಿ. ಎಲ್. ಚಂದ್ರಧರ, ಹಳೇಪೇಟ, ದಾವಣಗೆರೆ ; ಪುಟ : ೨೧೦+೨೦ ; ಬೆಲೆ : ಆರು ರೂಪಾಯಿ ; ೧೯೭೩.

೧೫. ಶಹಾಜಿರಾಜೆ ಭೋಸಲೆ :

ಲೇ : ಶ್ರೀಧರ ತೇಲಕರ : ಅನು : ಮ. ಶೆ. ಕೇದನೂರ [ಸಂಳಗೆ] ಪಾಟೀಲ ; ಪ್ರ : ತೇಲಕರ್ಸ ಫೀಚರ್ಸ ಸರ್ವಿಸ, ೧೭೧, ಬಿ. ಸಿ. ಕ್ಯಾಂಪ, ಬೆಳಗಾವಿ ; ಪುಟ : xiii+೧೫೬ : ಬೆಲೆ : ಹತ್ತು ರೂಪಾಯಿ ; ೧೯೭೩.

೧೬. ಶ್ರೀ ಅರವಿಂದಾವಲೋಕನ :

ಸಂ : ಎಸ್. ರಾಜಗೋಪಾಲರಾವ್ : ಪ್ರ : ಯೋಜನಾ ವೇದಿಕೆ, ಎ. ವಿ. ಬಾಳಿಗಾ ಕಾಮರ್ಸ್ ಕಾಲೇಜ್, ಕುಮಟಾ (ಉ. ಕ.) ; ಪುಟ : ೨೦ : ಬೆಲೆ : ಒಂದು ರೂಪಾಯಿ ಇಪ್ಪತ್ತೈದು ಪೈಸೆ ; ೧೯೭೩.

೧೭. ಪೂರ್ಣಾನಂದ (ವಾರ್ಷಿಕ ಪತ್ರಿಕೆ) :

ಪ್ರ : ಪೂರ್ಣಾನಂದ ಶಿಕ್ಷಣ ಸಂಸ್ಥೆ, ಗೋವಿಂದರಾಜ ನಗರ, ಬೆಂಗಳೂರು-೪೦ ; ಪುಟ : ೭೨ : ೧೯೭೩.

ಸಂಪಾದಕೀಯ

ಕರ್ನಾಟಕ ಭಾರತಿ ಈ ಸಂಚಿಕೆಯೊಂದಿಗೆ ಆರನೆಯ ವರ್ಷದಲ್ಲಿ ಕಾಲಿಡುತ್ತಲಿದೆ. ಈ ಸಂದರ್ಭದಲ್ಲಿ, 'ಭಾರತಿ' ತನ್ನೆಲ್ಲ ಓದುಗರಿಗೆ, ಲೇಖಕ ಬಳಗದವರಿಗೆ ಕೃತಜ್ಞತೆಗಳನ್ನರ್ಪಿಸುತ್ತ, ಇನ್ನು ಮುಂದೆಯೂ ಅಭಿಮಾನಿಗಳು, ವಿದ್ವಾಂಸರು ಇದೇ ರೀತಿಯ ಪ್ರೋತ್ಸಾಹ ನೀಡಿ, ಉತ್ತರೋತ್ತರ ಅಭಿವೃದ್ಧಿಗೆ ಕಾರಣರಾಗಲಿ ಎಂದು ಬಯಸುತ್ತದೆ.

ಕನ್ನಡ ಅಧ್ಯಯನಪೀಠ ಕಟ್ಟಡದ ಅಡಿಗಲ್ಲು

ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಮತ್ತು ಪ್ರತಿಷ್ಠಿತ ವಿಭಾಗ ಕನ್ನಡ ಅಧ್ಯಯನ ಪೀಠ. ದಿನದಿಂದ ದಿನಕ್ಕೆ ಬೆಳೆಯುತ್ತಲಿರುವ ಈ ಅಧ್ಯಯನ ಪೀಠಕ್ಕೆ ಒಂದು ಸ್ವತಂತ್ರವಾದ ಕಟ್ಟಡದ ಆವಶ್ಯಕತೆ. ಬಹುದಿನಗಳಿಂದಲೂ ಇತ್ತು. ಇದನ್ನು ಪೂರೈಸುವ ಔದಾರ್ಯವನ್ನು ತೋರಿದವರು ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಸಿಂಡಿಕೇಟ್ ಸದಸ್ಯರು. ಇದರ ಫಲವಾಗಿ ಯೋಜಿಸಲ್ಪಟ್ಟ ಅಧ್ಯಯನ ಪೀಠದ ನೂತನ ಕಟ್ಟಡದ ಅಡಿಗಲ್ಲು ಸಮಾರಂಭವನ್ನು ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸ ಅವರು ಕಳೆದ ಜೂನ ೨೦ ರಂದು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶಿಕ್ಷಣ ಮಂತ್ರಿ ಶ್ರೀ ಬದರೀನಾರಾಯಣ ಅಯ್ಯಂಗಾರ್ ಅವರು ವಹಿಸಿದ್ದರು. ಮುಖ್ಯ ಮಂತ್ರಿಗಳು, ಶಿಕ್ಷಣ ಸಚಿವರು ಈ ಕಟ್ಟಡ ಆದಷ್ಟು ತೀವ್ರ ಪೂರ್ಣಗೊಳ್ಳುವಂತೆ ನೋಡಿಕೊಳ್ಳಲಾಗುವದೆಂದು ಭರವಸೆ ನೀಡಿ, ಡಾ. ಹಿರೇಮಠ ಅವರ ನೇತೃತ್ವದಲ್ಲಿ ಕನ್ನಡದ ಕಾರ್ಯ ಸಾವಿರ ಮುಖಗಳಲ್ಲಿ ಮುಂದುವರಿಯಲಿ ಎಂದು ಹಾರೈಸಿದರು. ಈ ಹಾರೈಕೆಗೆ 'ಭಾರತಿ' ಬೆಂಬಲವನ್ನು ವ್ಯಕ್ತಪಡಿಸುತ್ತದೆ.

'ಜ್ಞಾನಗಂಗಾ' ಉದ್ಘಾಟನೆ

ಕರ್ನಾಟಕ ವಿಶ್ವವಿದ್ಯಾಲಯದ ಅಂಗವಾಗಿರುವ ಕಲಬುರ್ಗಿಯ ಸ್ನಾತಕೋತ್ತರ ಶಿಕ್ಷಣ ಕೇಂದ್ರವು ಪ್ರಾರಂಭವಾಗಿ ಮೂರು ವರುಷಗಳು ಸಂದವು. ಇಲ್ಲಿಯ ವರೆಗೆ ಅದಕ್ಕೆ ತನ್ನದೇ ಆದ ಸ್ವತಂತ್ರ ಕಟ್ಟಡವಿರಲಿಲ್ಲ. ಈ ವರ್ಷದ ಅಗಸ್ಟ ತಿಂಗಳು ೮ ರಂದು ಅದರ ಕನಸು ನನಸಾಯಿತು. ಸೇಡಂ ಮಾರ್ಗದ ಹತ್ತಿರವಿರುವ ವಿಶಾಲ ಪ್ರದೇಶದಲ್ಲಿ ಭಾಗಶಃ ಕಟ್ಟಲ್ಪಟ್ಟ ತನ್ನ ಆವರಣಕ್ಕೆ ಅದು ಪ್ರವೇಶ ಮಾಡಿತು. ಈ ಸಮಾರಂಭದ ಉದ್ಘಾಟನೆ ರಾಜ್ಯ ಶಿಕ್ಷಣ ಮಂತ್ರಿಗಳಾದ ಶ್ರೀ ಬದರೀನಾರಾಯಣ ಅಯ್ಯಂಗಾರ್ ಅವರಿಂದ ನೆರವೇರಿತು.

ಮೈಸೂರು ರಾಜ್ಯದಲ್ಲಿ ತಲೆಯೆತ್ತಲಿರುವ ಮೂರು ನೂತನ ವಿಶ್ವವಿದ್ಯಾಲಯಂಗಳಲ್ಲಿ ಒಂದಾದ ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರ, ಬೇಗನೆ ಸ್ವತಂತ್ರವಾದ ಮತ್ತು ಸುಸಜ್ಜಿತ ವಿಶ್ವವಿದ್ಯಾಲಯವಾಗಿ ಬೆಳೆಯಲಿ, ಬೆಳಗಲಿ ಎಂದು 'ಭಾರತಿ' ಹೃತ್ಪೂರ್ವಕವಾಗಿ ಹಾರೈಸುತ್ತದೆ.

ದ್ರಾವಿಡಭಾಷಾ ಶಾಸ್ತ್ರ ಸಮ್ಮೇಲನ

ಅಖಿಲಭಾರತ ಮೂರನೆಯ ದ್ರಾವಿಡಭಾಷಾ ಶಾಸ್ತ್ರ ಸಮ್ಮೇಲನ ಕರ್ನಾಟಕ ವಿಶ್ವ-ವಿದ್ಯಾಲಯದ ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ ಕಳೆದ ಜೂನ ೨೦, ೨೧ ರಂದು ನಡೆಯಿತು. ಸಮ್ಮೇಲನವನ್ನು ಉದ್ಘಾಟಿಸಿದವರು ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸು ಅವರು. ದೇಶದ ಖ್ಯಾತ ಭಾಷಾಶಾಸ್ತ್ರಜ್ಞರು ಪಾಲುಗೊಂಡು ಈ ಸಮಾರಂಭ ಮತ್ತು ಇದರ ಅಂಗವಾಗಿ ಜರುಗಿದ ಎರಡು ದಿನಗಳ ವಿಚಾರ ಸಂಕಿರಣಗಳು ಯಶಸ್ವಿನಿಂದ ನಡೆಯಲು ಕಾರಣರಾದರು; ಈ ಸಮ್ಮೇಲನದ ಸಮಸ್ತ ಯಶಸ್ಸಿಗೆ ಕಾರಣರಾದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಸೂತ್ರಧಾರರಾದ ಡಾ. ಆರ್. ಸಿ. ಹಿರೇಮಠ ಅವರಿಗೆ ಅಭಿನಂದನೆ ಸಲ್ಲಿಸಿದರು. ಈ ಅಭಿನಂದನೆಯಲ್ಲಿ 'ಭಾರತಿ' ಸಂತೋಷದಿಂದ ಭಾಗವಹಿಸುತ್ತದೆ.

ಲೇಖಕರ ಪರಿಚಯು

೧. **ಶ್ರೀ ಹೊ. ಮ. ಪಂಡಿತಾರಾಧ್ಯ :**

C/o. ಡಾ. ಎಚ್. ಎಂ. ರೇವಣಾರಾಧ್ಯ, ಕರ್ನಾಟಕ ಕೆಮಿಕಲ್ ಲ್ಯಾಬೋರೇಟರಿ ಕೊಟ್ಟೂರ (ಬಳ್ಳಾರಿ ಜಿ.)

೨. **ಪ್ರೊ. ಎ. ಎಸ್. ವೇಣುಗೋಪಾಲರಾವ್ :**

ಕನ್ನಡ ಅಧ್ಯಾಪಕರು, ನ್ಯಾಶನಲ್ ಕಾಮರ್ಸ ಕಾಲೇಜ, ಶಿವಮೊಗ್ಗ.

೩. **ಪ್ರೊ. ಬಿ. ಕೆ. ತಿಮ್ಮಪ್ಪ :**

ಕನ್ನಡ ಅಧ್ಯಾಪಕರು, ಸರಕಾರೀ ಕಾಲೇಜು, ಕಾಸರಗೋಡು.

೪. **ಪ್ರೊ. ಭುಜೇಂದ್ರ ಮಹಿಷವಾಡಿ :**

ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೫. **ಡಾ. ವ್ಹಿ. ಶಿವಾನಂದ :**

ಕನ್ನಡ ಅಧ್ಯಾಪಕರು, ಜೆ. ಟಿ. ಕಾಲೇಜ, ಗದಗ.

೬. **ಶ್ರೀ ದೇಶಪಾಂಡೆ ಸುಬ್ಬರಾಯ :**

೩೬೦, ಪಟೂಡಿಯಾ ಚಾಳ್, ಕೇಶವಾಪುರ, ಹುಬ್ಬಳ್ಳಿ.

೭. **ಶ್ರೀ ವೀರಣ್ಣ ರಾಜೂರ :**

ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ.

೮. **ಪ್ರೊ. ಎಸ್. ಎಸ್. ಕೋತೀನ :**

ಕನ್ನಡ ಅಧ್ಯಾಪಕರು, ಶ್ರೀ ಬಸವಪ್ರಭು ಕೋರೆ ಆರ್ಟ್ಸ ಮತ್ತು ಸಾಯನ್ಸ ಕಾಲೇಜು, ಚಿಕ್ಕೋಡಿ (ಬೆಳಗಾವಿ ಜಿ.)

೯. **ಪ್ರೊ. ಸುಧಾಕರ :**

ಕನ್ನಡ ಅಧ್ಯಾಪಕರು, ಮಾನಸಗಂಗೋತ್ರಿ, ಮೈಸೂರು.

೧೦. **ಪ್ರೊ. ಕೆ. ಜಿ. ಜೋಶಿ :**

ಎಲ್.ವ್ಹಿ.ಡಿ. ಕಾಲೇಜು, ರಾಯಚೂರು.

೧೧. **ಕು. ಪ್ರೇಮಾ ತಾಶೀಲದಾರ :**

C/o ಎಚ್. ಕೆ. ತಾಶೀಲದಾರ, ೪೩೮೧ ಚವಾಟಗಲ್ಲಿ, ಬೆಳಗಾವಿ.

೧೨. **ಡಾ. ಅ. ಸುಂದರ :**

ಕ್ಯುರೇಟರ್ ಇನ್-ಚಾರ್ಜ್, ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ., ಧಾರವಾಡ.

೧೩. **ಶ್ರೀ ಎಂ. ವ್ಹಿ. ಶರ್ಮಾ ತದ್ದಲಸ :**

ಪೊ : ಹುಣಸೆಕೊಪ್ಪ, ಶಿರಸಿ (ಉ.ಕ.)

೧೪. **ಶ್ರೀ ಜಯಂತ ಕಾಯ್ಕಿಣಿ :**

ಎಂ.ಎ. (ರಸಾಯನಶಾಸ್ತ್ರ) ವಿದ್ಯಾರ್ಥಿ, ಕ.ವಿ.ವಿ., ಧಾರವಾಡ.

೧೫. **ಡಾ. ಎಂ. ಜಿ. ಬಿರಾದಾರ**

ಕನ್ನಡ ಅಧ್ಯಾಪಕರು ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೧೬. **ಪ್ರೊ. ವಿಲಿಯಂ ಮಾಡ್ತಾ :**

ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ.

೧೭. **ಡಾ. ಎಂ. ಎಂ. ಕಲಬುರ್ಗಿ :**

ರೀಡರ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ.

೧೮. **ಶ್ರೀ ಎಸ್. ಶಿವಣ್ಣ :**

ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಕೇಂದ್ರ, ಬೆಂಗಳೂರ ವಿಶ್ವವಿದ್ಯಾಲಯ, ಬೆಂಗಳೂರು.

೧೯. **ಪ್ರೊ. ನಾಯಕ ಎನ್. ಆರ್. :**

ಪ್ರಿನ್ಸಿಪಾಲ್, ಆರ್ಟ್ಸ್ ಮತ್ತು ಸಾಯಿನ್ಸ್ ಕಾಲೇಜ, ಹೊನ್ನಾವರ (ಉ. ಕ.).

೨೦. **ಶ್ರೀ 'ಹೇಮ' :**

ಶ್ರೀ ಸಿ. ಪಿ. ಹೇಮಗಿರಿಮಠ, ಕನ್ನಡ ಅಧ್ಯಾಪಕರು, ನೆಹರೂ ಕಾಲೇಜು, ಹುಬ್ಬಳ್ಳಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ: ಪ್ರತಿಯೊಂದರ ಬೆಲೆ ೨೫ ಪೈಸೆ

ಎಡೆದೊರೆನಾಡಿನ ಅನುಭಾವಿ ಕವಿಗಳು —ಶಾಂತರಸ

ಹೊಸ ನಕ್ಷತ್ರಗಳು —ಡಿ. ಆರ್. ಬಳೂರಗಿ

ಗಾಂಧೀ ತತ್ವಗಳು ಹಾಗು ಇಂದಿನ ಭಾರತ —ಎಸ್. ವಾಯ್. ಗುಬ್ಬಣ್ಣವರ

ಶೃಂಗೇರಿಯ ಇತಿಹಾಸ —ಏ. ಕೆ. ಶಾಸ್ತ್ರೀ, ಟೊಣ್ಣೇಮನೆ

ಸಂಲಭ ಚಿಕಿತ್ಸೆಗಳು —ಧನ್ಯಕುಮಾರ ಇಜಾರಿ

ಧರ್ಮ ಹಾಗು ಅವತಾರ —ಆಯ್. ಆಯ್. ಕಳಕಣ್ಣವರ

ಮಾನಸಿಕ ಆರೋಗ್ಯ —ಎ. ಎಸ್. ಧರಣೇಂದ್ರಯ್ಯ

ಅಪೊಲೋ ಯಾತ್ರೆಗಳು —ಎಸ್. ಆರ್. ದೇಸಾಯಿ

ಬೆಲೆ ಏರಿಕೆಯ ಸಮಸ್ಯೆ —ಆರ್. ವ್ಹಿ. ದಾಡೀಭಾವಿ

ವಿದ್ಯಾವಂತ ಯುವಕರಿಗೆ ಉದ್ಯೋಗದ ಅವಕಾಶಗಳು —ಆರ್. ಬಿ. ವನಹಳ್ಳಿ

ಗಾಳಿಗಳು —ಸಂಗಮೇಶ ನರೇಗಲ್ಲ

ಜನಪದ ಸಾಹಿತ್ಯಮಾಲೆ:

ಕನ್ನಡ ಬಯಲಾಟಗಳು: ಅಲ್ಲಮ ಪ್ರಭು ೪–೦೦

—ಸಂ: ಎಂ. ಎಸ್. ಸುಂಕಾಪುರ

ವಿಶೇಷ ಉಪನ್ಯಾಸ ಗ್ರಂಥಮಾಲೆ:

ಸೌಂದರ್ಯ ಮೀಮಾಂಸೆ ೩–೦೦

—ವಿ. ಕೃ. ಗೋಕಾಕ

ಕನ್ನಡ ಕಾವ್ಯಮಾಲೆ :

ದೀಕ್ಷಾಬೋಧೆ ೬-೦೦

—ಸಂ: ಬಿ. ಬಿ. ಹೆಂಡಿ

ಲೋಭದತ್ತ ಚರಿತೆ ೪-೦೦

—ಸಂ: ಬಿ. ಎಸ್. ಕುಲಕರ್ಣಿ

ಹರಿಹರದೇವಕೃತ ಪುರಾತನರ ರಗಳೆಗಳು ೨೦-೦೦

—ಸಂ: ಆರ್. ಸಿ. ಹಿರೇಮಠ

ಕಮೀಶನ್ನಿನ ವಿವರ :

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :

೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :

೧೦೦ ಕ್ಕೆ ೧೫ ರಂತೆ

ರೂ. ೨೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ ಕ್ಕೆ ೨೦ ರಂತೆ

ಇತರ ಎಲ್ಲ ಪ್ರಕಟನೆಗಳು (ಪಠ್ಯಪುಸ್ತಕ ನಿರ್ದೇಶನಾಲಯದ ಪ್ರಕಟನೆಗಳು ಹಾಗು ನಿಯತಕಾಲಿಕೆಗಳನ್ನು ಒಳಗೊಂಡು) :

೧೦೦ ರೂ.ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ

೧೦೦ ಕ್ಕೆ ೨೫ ರಂತೆ

೫,೦೦೦ ರೂ.ಗಳಿಗೆ ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ಕ್ಕೆ ೩೩ ⅓ ರಂತೆ

* * * * *

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ — ರೂ. ೨-೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳು ೧೦೦ ರೂ. ಕಳಿಸಿ
ವಿಶ್ವವಿದ್ಯಾಲಯು ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ"
ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು.
ಪತ್ರಿಕೆ ಪ್ರಕಟವಾದಂತೆಲ್ಲಾ ಅವರಿಗೆ ಪ್ರತಿ-
ಗಳನ್ನು ಕಳುಹಿಸುವ ವ್ಯವಸ್ಥೆ
ಮಾಡಲಾಗಂವದು.

(ಹಣವನ್ನು ಮನಿಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯು, ಧಾರವಾಡ
ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯು,
ಧಾರವಾಡ-೩